ಬುಧವಾರ, ನವೆಂಬರ್ 24, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 325 | ಪುಟ 14

• www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಭಾರತದ ಇತರ ಭಾಷೆಗಳ ಪುಸ್ತಕಗಳನ್ನು ತನ್ನಲ್ಲಿ ಅಡಕಗೊಳಿಸಲು ಸರಿಯಾದ ಸಾಫ್ಟ್‌ವೇರ್ ಬೆಳಸಿದ ಅಮೆಜಾನ್ ಕಿಂಡಲ್ ಅದೇಕೋ ಕನ್ನಡದ ಬಗ್ಗೆ ಇನ್ನೂ ಒಲವು ತೋರಿಲ್ಲ.

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,664 ▲	17,503 ▲	₹49,350 (ಬೆಂಗಳೂರು)	₹65,600 (ಬೆಂಗಳೂರು)	74.43 ▼

ಕೃಷಿ ಬೆಲೆ ಆಯೋಗದಿಂದ ಮುಖ್ಯಮಂತ್ರಿಗೆ ವರದಿ ಸಲ್ಲಿಕೆ

ಹೊಲಕ್ಕೊಂದು ಕೆರೆ, ಕನಿಷ್ಠ ಬೆಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಲಕ್ಕೊಂದು ಕೆರೆ ನಿರ್ಮಾಣ, ತೋಟಗಾರಿಕಾ ಮಾರಾಟ ಮಹಾಮಂಡಳ ರಚನೆ, ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ (ಪಡಿತರ) ವಿತರಿಸಲು ಅಗತ್ಯ ಆಹಾರ ಧಾನ್ಯಗಳನ್ನು ರಾಜ್ಯದಿಂದಲೇ ಕೇಂದ್ರ ಸರ್ಕಾರ ಸಂಗ್ರಹಿಸುವುದೂ ಸೇರಿ ವಿವಿಧ ಶಿಫಾರಸುಗಳನ್ನು ಒಳಗೊಂಡ ವಿಸ್ತೃತ ವರದಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕೃಷಿ ಬೆಲೆ ಆಯೋಗ ಮಂಗಳವಾರ ಸಲ್ಲಿಸಿದೆ.

ಆಯೋಗ ಸಿದ್ಧಪಡಿಸಿದ ಈ ವರದಿ 10 ಅಧ್ಯಾಯಗಳನ್ನು ಒಳಗೊಂಡಿದೆ. ಕೃಷಿ ಹಾಗೂ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ, ಇಳುವರಿ, ಉತ್ಪಾದನೆ, ಸಾಗುವಳಿ ವೆಚ್ಚ ಮತ್ತು ಮಾರುಕಟ್ಟೆ ಬೆಲೆಗಳ ವಸ್ತುಸ್ಥಿತಿ ಕುರಿತ ವಿಶ್ಲೇಷಣೆ ವರದಿಯಲ್ಲಿದೆ.

ರಾಜ್ಯದ ಐದು ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯಗಳಲ್ಲಿ ಸ್ಥಾಪಿಸಿರುವ 'ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಮಾಹಿತಿ ಘಟಕ'ಗಳ ಸಹಯೋಗದಲ್ಲಿ 27 ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಸಾಗುವಳಿ ವೆಚ್ಚದ ಲೆಕ್ಕಾಚಾರದ ಆಧಾರದಲ್ಲಿ ಆಯೋಗ ಈ ವರದಿ ಸಿದ್ಧಪಡಿಸಿದೆ. ವರದಿ ಸಿದ್ಧಪಡಿಸಲು 383 ಅತಿ ಸಣ್ಣ ರೈತರು, 575 ಸಣ್ಣ ರೈತರು, 589 ಅರೆ ಮಧ್ಯಮ ರೈತರು, 358 ಮಧ್ಯಮ ರೈತರು ಮತ್ತು 90 ದೊಡ್ಡ ರೈತರು ಸೇರಿ ಒಟ್ಟು 1,995 ರೈತರಿಂದ ಮಾಹಿತಿ ಸಂಗ್ರಹಿಸಲಾಗಿದೆ.

ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ (ಎಪಿಎಂಸಿ) ಮಾರುಕಟ್ಟೆ ಶುಲ್ಕದ ಸಂಗ್ರಹ 2019–20 ರಲ್ಲಿ ₹ 618 ಕೋಟಿ ಆಗಿದ್ದರೆ, 2020–21ರಲ್ಲಿ ₹ 294 ಕೋಟಿಗೆ ಇಳಿಕೆಯಾಗಿದೆ. ಶೇ 48ರಷ್ಟು ಕಡಿಮೆ ಆಗಿದ್ದರಿಂದ ಎಪಿಎಂಸಿಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ ಎಂದು ವರದಿ ಹೇಳಿದೆ.

4ನೇ ಪುಟ ನೋಡಿ

ಪ್ರಮುಖ ಶಿಫಾರಸುಗಳು

- ಕೃಷಿ ಉತ್ಪನ್ನಗಳು ಕನಿಷ್ಠ ಬೆಂಬಲ ಬೆಲೆಗಿಂತಲೂ ಕಡಿಮೆ ಬೆಲೆಗೆ ಮಾರಾಟ ಆಗದ ರೀತಿಯಲ್ಲಿ 'ಶಾಸನಬದ್ಧ ಕನಿಷ್ಠ ಬೆಲೆ' ಕಾಯ್ದೆ ಜಾರಿಗೊಳಿಸಲು ಕೇಂದ್ರಕ್ಕೆ ಶಿಫಾರಸು ಮಾಡಬೇಕು
- ಕೃಷಿ ಯಂತ್ರಗಳ ಖರೀದಿಗೆ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಶೇ 90, ಮಧ್ಯಮ ರೈತರಿಗೆ ಶೇ 75, ದೊಡ್ಡ ರೈತರಿಗೆ ಶೇ 50ರಷ್ಟು ರಿಯಾಯಿತಿ ನೀಡಬೇಕು
- ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಮಾರ್ಗಸೂಚಿ ಬದಲಿಸಿ, ಪ್ರತಿ ಹೆಕ್ಟೇರ್ ಕೃಷಿ ಮತ್ತು ವಾಣಿಜ್ಯ ಬೆಳೆಗಳಿಗೆ ₹ 50 ಸಾವಿರ, ಬಹುವಾರ್ಷಿಕ ಬೆಳೆಗಳಿಗೆ ₹ 1 ಲಕ್ಷ ಪರಿಹಾರ ಧನ ನೀಡುವಂತೆ ಕೇಂದ್ರಕ್ಕೆ ಶಿಫಾರಸು ಮಾಡಬೇಕು
- ಬೆಳೆ ವಿಮೆಯಲ್ಲಿ ರೈತರು ನೋಂದಣಿ ಕಡ್ಡಾಯಗೊಳಿಸಬೇಕು. ಕಿಸಾನ್ ಸಮ್ಮಾನ್ ಹಣದಲ್ಲಿ ವಿಮಾ ಕಂತು ಭರಿಸಬಹುದು
- ಕೃಷಿ ಯಂತ್ರಗಳು ದೊರಕುವಂತೆ ಮಾಡಲು ಓಲಾ, ಉಬರ್ ಮಾದರಿ ವ್ಯವಸ್ಥೆ ಅಭಿವೃದ್ಧಿಪಡಿಸಬೇಕು
- ರೈತ ಸಂಶೋಧಕರಿಗೆ ಪ್ರೋತ್ಸಾಹ ನೀಡಲು 'ರೈತ ಆವಿಷ್ಕಾರ ನಿಧಿ' ಸ್ಥಾಪಿಸಬೇಕು
- ಎಪಿಎಂಸಿಗಳನ್ನು ಸದೃಢಗೊಳಿಸಲು ಮಾರುಕಟ್ಟೆ ಶುಲ್ಕವನ್ನು ಶೇ 0.60ರಿಂದ ಶೇ 1ಕ್ಕೆ ಹೆಚ್ಚಿಸಬೇಕು

ಏನಿದು ಹೊಲಕ್ಕೊಂದು ಕೆರೆ ನಿರ್ಮಾಣ?

ರೈತರೇ ತಮ್ಮ ಹೊಲಗಳಲ್ಲಿ ಹಿಡುವಳಿಯ ಶೇ 10 ರಷ್ಟನ್ನು, ಅಂದರೆ 4 ಎಕರೆ ಜಮೀನು ಇರುವ ಹಿಡುವಳಿದಾರ ಕನಿಷ್ಠ ನಾಲ್ಕರಲ್ಲಿ ಒಂದಂಶದಲ್ಲಿ ಕೆರೆ ನಿರ್ಮಿಸಿಕೊಳ್ಳಬೇಕು. 100 ಅಡಿ ಉದ್ದ, 100 ಅಡಿ ಅಗಲ 20 ಅಡಿ ಆಳದ ಕೆರೆ ನಿರ್ಮಿಸಿದರೆ ಸುಮಾರು 2 ಲಕ್ಷ ಘನ ಅಡಿ ನೀರು ಶೇಖರಿಸಬಹುದು. ಒಂದು ಎಕರೆಯಲ್ಲಿ ಕೆರೆ ನಿರ್ಮಿಸಲು 2 ಲಕ್ಷ ಘನ ಅಡಿ ಮಣ್ಣು ತೆಗೆದು ಸಾಗಿಸಲು ₹ 3 ಲಕ್ಷ ಖರ್ಚು ಆಗಬಹುದು. ಕೆರೆ ನಿರ್ಮಾಣಕ್ಕೆ ತಗಲುವ ವೆಚ್ಚದಲ್ಲಿ ಸಣ್ಣ, ಅತಿ ಸಣ್ಣ, ಎಸ್‌ಸಿ, ಎಸ್‌ಟಿ ಸಮುದಾಯದ ರೈತರಿಗೆ ಶೇ 50, ಇತರರಿಗೆ ಶೇ 25ರಷ್ಟು ರಿಯಾಯಿತಿ ನೀಡಬೇಕು ಎಂದು ವರದಿಯಲ್ಲಿ ಆಯೋಗ ಹೇಳಿದೆ.

ಮಳೆ: ದಶಕಗಳ ವೈಜ್ಞಾನಿಕ ಸಂಶೋಧನೆ ನೀರುಪಾಲು!

ಜಕ್ಕೂರಿನ ಜೆಎನ್‌ಸಿಎಎಸ್‌ಆರ್ ಪ್ರಯೋಗಾಲಯ ಜಲಾವೃತ

• ಪ್ರವೀಣ್ ಕುಮಾರ್ ಪಿ.ವಿ

ಬೆಂಗಳೂರು: ಭಾರಿ ಮಳೆಯಿಂದಾಗಿ ಜಕ್ಕೂರಿನ ಜವಾಹರ ಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರದ (ಜೆಎನ್‌ಸಿಎಎಸ್‌ಆರ್) ನೆಲಮಹಡಿಯ ಪ್ರಯೋಗಾಲಯಗಳಿಗೆ ನೀರು ನುಗ್ಗಿದ್ದು, ಸಂಶೋಧನೆಗೆ ಬಳಸುತ್ತಿದ್ದ ಜೀವಕೋಶಗಳು, ಆಕರ ಕೋಶಗಳು, ವೈರಾಣುಗಳ ಮಾದರಿಗಳು ಹಾನಿಗೊಳಗಾಗಿವೆ. ಇದರಿಂದಾಗಿ ದಶಕಗಳಿಂದ ಇಲ್ಲಿ ನಡೆಯುತ್ತಿರುವ ಸಂಶೋಧನೆಗೆ ಧಕ್ಕೆಯಾಗಿದೆ.

ಅಣು ಜೀವವಿಜ್ಞಾನ ಮತ್ತು ವಂಶವಾಹಿ ವಿಜ್ಞಾನದ ಪ್ರಯೋಗಾಲಯವು ಸೇರಿ ಅನೇಕ ಪ್ರಯೋಗಾಲಯಗಳು ಸಂಸ್ಥೆಯ ನೆಲ ಮಹಡಿಯಲ್ಲಿವೆ. ಭಾನುವಾರ ರಾತ್ರಿ ಪ್ರಯೋಗಾಲಯದೊಳಗೆ ನಾಲ್ಕೈದು ಅಡಿಗಳಷ್ಟು ನೀರು ತುಂಬಿತ್ತು. ಇದರಿಂದಾಗಿ ಅತ್ಯಾಧುನಿಕ ಸೂಕ್ಷ್ಮದರ್ಶಕಗಳು, ಮೈನಸ್ 80 ಸೆಂಟಿಗ್ರೇಡ್‌ವರೆಗೂ ಉಷ್ಣಾಂಶ ಕಾಯ್ದುಕೊಳ್ಳುವ ಶೀತಲೀಕರಣ ಯಂತ್ರಗಳು ಸೇರಿ ಅನೇಕ ಉಪಕರಣಗಳು ಕೆಟ್ಟುಹೋಗಿವೆ.

'ಹಲವಾರು ವೈಜ್ಞಾನಿಕ ಉಪಕರಣಗಳು ಹಾನಿಗೊಳಗಾಗಿವೆ. ಸಂಶೋಧನಾ ಚಟುವಟಿಕೆಗಳಿಗೆ ಊಹಿಸಲಾಗದಷ್ಟು ನಷ್ಟ ಉಂಟಾಗಿದೆ. 20 ವರ್ಷ ಹಿಂದಿನಿಂದಲೂ ಸಂಗ್ರಹಿಸಿದ್ದ ಜೀವಕೋಶಗಳ ಮಾದರಿಗಳನ್ನು ಕಳೆದುಕೊಂಡಿದ್ದೇವೆ. ನಷ್ಟದ ಪ್ರಮಾಣವನ್ನು ಇನ್ನಷ್ಟೇ ಲೆಕ್ಕ ಹಾಕಬೇಕಿದೆ'' ಎಂದು ಜೆಎನ್‌ಸಿಎಎಸ್‌ಆರ್ ಅಧ್ಯಕ್ಷ ಪ್ರೊ.ಗಿರಿಧರ ಯು.ಕುಲಕರ್ಣಿ 'ಪ್ರಜಾವಾಣಿ'ಗೆ ತಿಳಿಸಿದರು.

4ನೇ ಪುಟ ನೋಡಿ

ಮುಖ್ಯಮಂತ್ರಿ ಭೇಟಿ– ನೆರವಿನ ಭರವಸೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜೆಎನ್‌ಸಿಎಎಸ್‌ಆರ್ ಪ್ರಾಂಗಣಕ್ಕೆ ಮಂಗಳವಾರ ಭೇಟಿ ನೀಡಿ, ಪ್ರವಾಹದಿಂದ ಆಗಿರುವ ಹಾನಿಯನ್ನು ಪರಿಶೀಲಿಸಿದರು. ಸಂಸ್ಥೆಯ ಗೌರವಾಧ್ಯಕ್ಷ ಸಿ.ಎನ್.ಆರ್.ರಾವ್ ಜೊತೆಗೂ ಸಮಾಲೋಚನೆ ನಡೆಸಿದರು.

'ಭವಿಷ್ಯದಲ್ಲಿ ಇಲ್ಲಿ ಪ್ರವಾಹ ತಡೆಯಲು ರಾಜಕಾಲುವೆ ವಿಸ್ತರಿಸಬೇಕು ಅಥವಾ ಪ್ರಾಂಗಣದೊಳಗೆ ನೀರು ನುಗ್ಗದಂತೆ ತಡೆಯಲು ಪರ್ಯಾಯ ಕಾಲುವೆ ರಚಿಸಬೇಕು' ಎಂದು ಪ್ರೊ.ಗಿರಿಧರ ಕುಲಕರ್ಣಿ ಅವರು ಮುಖ್ಯಮಂತ್ರಿಯವರನ್ನು ಕೋರಿದರು.

ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಯವರು ಅಧಿಕಾರಿಗಳಿಗೆ ಸೂಚಿಸಿದರು. 'ಇದು ದೇಶದ ಪ್ರಮುಖ ಸಂಶೋಧನಾ ಕೇಂದ್ರ. ಈ ಸಂಸ್ಥೆಯ ರಕ್ಷಣೆ ನಮ್ಮ ಕರ್ತವ್ಯ. ಇಲ್ಲಿನ ಸಂಶೋಧನಾ ಚಟುವಟಿಕೆಗೆ ಭವಿಷ್ಯದಲ್ಲಿ ತೊಂದರೆಯಾಗದಂತೆ ಕಾಳಜಿ ವಹಿಸುತ್ತೇವೆ' ಎಂದು ಬೊಮ್ಮಾಯಿ ಭರವಸೆ ನೀಡಿದರು.

'ತಳವಾರ ವಿರುದ್ಧ ಕ್ರಮ ಕೈಗೊಳ್ಳಿ'

ಬೆಂಗಳೂರು: 'ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕ ಎಚ್.ಯು.ತಳವಾರ ವಿರುದ್ಧ ಇರುವ ಭ್ರಷ್ಟಾಚಾರ ಮತ್ತು ಕರ್ತವ್ಯ ನಿರ್ಲಕ್ಷ್ಯ ಆರೋಪದ ಕುರಿತಂತೆ ಲೋಕಾಯುಕ್ತ, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ಬಿ.ವಿ.ಕೃಷ್ಣರಾವ್ ಮತ್ತು ಐಎಎಸ್ ಅಧಿಕಾರಿ ವಿಕಾಸ್ ಕಿಶೋರ್ ಸುರಳ್ಕರ್ ನೀಡಿರುವ ಮೂರೂ ತನಿಖಾ ವರದಿಗಳನ್ನು ಆಧರಿಸಿ ಕ್ರಮ ಕೈಗೊಳ್ಳಬಹುದು' ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಮಂಗಳವಾರ ಸೂಚಿಸಿದೆ.

4ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕೋವಿಡ್ 3ನೇ ಅಲೆ ಸಾಧ್ಯತೆ ಕ್ಷೀಣ?

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ಎರಡನೇ ಅಲೆಯು ತೀವ್ರತೆ ಕಳೆದುಕೊಂಡ ಹೊತ್ತಿಗೆ ಬಹುತೇಕ ಮಂದಿಯಲ್ಲಿ ಕೋವಿಡ್ ನಿರೋಧಕ ಶಕ್ತಿ ಸೃಷ್ಟಿಯಾಗಿದೆ. ಇದೇ ವೇಳೆ 77 ಕೋಟಿಗೂ ಹೆಚ್ಚು ಜನರಿಗೆ ಕೋವಿಡ್ ಲಸಿಕೆಯ ಒಂದು ಡೋಸನ್ನಾದರೂ ನೀಡಲಾಗಿದೆ. ಇದರಿಂದ ದೇಶದ ಜನರಲ್ಲಿ 'ಹೈಬ್ರಿಡ್' ರೋಗನಿರೋಧಕ ಶಕ್ತಿ ಸೃಷ್ಟಿಯಾಗಿದೆ ಎಂದು ದೇಶದ ಪ್ರಮುಖ ವೈದ್ಯಕೀಯ ಸಂಶೋಧನಾ ಸಂಸ್ಥೆಗಳ ವಿಜ್ಞಾನಿಗಳು ಹೇಳಿದ್ದಾರೆ.

ಈ ಮೊದಲು ದೇಶದಲ್ಲಿ ಕೋವಿಡ್‌ನ ಮೂರನೇ ಅಲೆ ನವೆಂಬರ್ ವೇಳೆಗೆ ಆರಂಭವಾಗಲಿದೆ ಎಂದು ಅಂದಾಜಿಸಲಾಗಿತ್ತು. ಆದರೆ ಈಗ ಹೈಬ್ರಿಡ್ ರೋಗ ನಿರೋಧಕ ಶಕ್ತಿ ಇರುವ ಕಾರಣ, ಮೂರನೇ ಅಲೆ ಕಾಣಿಸಿಕೊಳ್ಳುವ ಸಾಧ್ಯತೆ ಕಡಿಮೆ ಎಂದು ಹೇಳಿದ್ದಾರೆ.

ಆಳ–ಅಗಲ
ಹಿಮ್ಮೆಟ್ಟಿತೇ ಕೋವಿಡ್ 3ನೇ ಅಲೆ?

ಬಿಜೆಪಿ ಕಚೇರಿಯಲ್ಲಿ ಕಸಾಪ ಪ್ರಚಾರ ನಡೆಸಿದ್ದ ಮಹೇಶ್ ಜೋಶಿ

ಜೋಶಿ ಪರ ಕೆಲಸ ಮಾಡದ ಬಿಜೆಪಿ ಮುಖಂಡ ಮಹೇಂದ್ರಗೌಡ ವಿರುದ್ಧ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಮುನ್ನಡೆ ಸಾಧಿಸಿರುವ ಮಹೇಶ್ ಜೋಶಿ ಅವರನ್ನು ಬೆಂಬಲಿಸದ ಕಾರಣಕ್ಕೆ ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕದ ಕಾರ್ಯಕಾರಿಣಿ ಸದಸ್ಯ ಸ್ಥಾನದಿಂದಲೇ ಎಂ.ಮಹೇಂದ್ರಗೌಡ ಅವರನ್ನು ವಜಾಗೊಳಿಸಲಾಗಿದೆ.

ಅಲ್ಲದೆ, ಚುನಾವಣೆಗೂ ಮುನ್ನ ಜೋಶಿ ಬಿಜೆಪಿ ಕಚೇರಿಗಳಲ್ಲೇ ಚುನಾವಣೆ ಪ್ರಚಾರದ ಸಭೆಗಳನ್ನು ನಡೆಸಿರುವ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಟೀಕೆ ವ್ಯಕ್ತವಾಗಿದೆ.

ಎಂ.ಮಹೇಂದ್ರಗೌಡ ಅವರನ್ನು ಜವಾಬ್ದಾರಿಯಿಂದ ಮುಕ್ತಗೊಳಿಸಿರುವ ಕುರಿತು ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್.ಆರ್. ರಮೇಶ್ ಅವರು ಪತ್ರದ ಮೂಲಕ ಮಾಹಿತಿ ರವಾನಿಸಿದ್ದಾರೆ.

'ಮಹೇಶ್ ಜೋಶಿ ಅವರಿಗೆ ಪಕ್ಷ ಅಧಿಕೃತವಾಗಿ ಬೆಂಬಲ ನೀಡಿದೆ. ಅದಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತಿರುವುದಲ್ಲದೇ, ಬೇರೊಬ್ಬ ಅಭ್ಯರ್ಥಿ ಪರವಾಗಿ ಬೆಂಬಲ ಘೋಷಿಸಿ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಸಂದೇಶ ಹಾಕಿದ್ದೀರಿ' ಎಂದು ತಿಳಿಸಿದ್ದಾರೆ.

4ನೇ ಪುಟ ನೋಡಿ

ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯಲ್ಲಿ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯಲ್ಲಿ ಬದಲಾವಣೆ ಮಾಡಿ ಮಂಗಳವಾರ ಆದೇಶ ಹೊರಡಿಸಿರುವ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯಾ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಬದಲಿಗೆ ಮಂಜೂರಾದ ಹುದ್ದೆಗಳ ಆಧಾರದಲ್ಲಿ ಶೇಕಡವಾರು ಮಿತಿಯನ್ನು ಲೆಕ್ಕಾಚಾರ ಮಾಡುವಂತೆ ಸೂಚಿಸಿದೆ.

ಆಯಾ ತಾಲ್ಲೂಕನ್ನು ಒಂದು ಘಟಕವಾಗಿ ಪರಿಗಣಿಸಿ, ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಆಧಾರದಲ್ಲಿ ಶೇಕಡವಾರು ಮಿತಿ ನಿಗದಿಪಡಿಸುವಂತೆ 2020ರ ನವೆಂಬರ್ 12ರಂದು ಆದೇಶ ಹೊರಡಿಸಲಾಗಿತ್ತು. ಇದರಿಂದಾಗಿ ಅತ್ಯಧಿಕ ಸಂಖ್ಯೆಯ ಖಾಲಿ ಹುದ್ದೆಗಳಿರುವ 40 ಕ್ಕೂ ಹೆಚ್ಚು ತಾಲ್ಲೂಕುಗಳ ಶಿಕ್ಷಕರು ವರ್ಗಾವಣೆ ಪ್ರಕ್ರಿಯೆಯಿಂದ ಹೊರಗುಳಿದಿದ್ದರು.

4ನೇ ಪುಟ ನೋಡಿ

ಬುಧವಾರದ ಉಷ್ಣಾಂಶ 27° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ ನಗರದಲ್ಲಿ ಮೋಡ ಕವಿದ ವಾತಾವರಣ. ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಅಲ್ಲಲ್ಲಿ ಮಳೆ ಸಾಧ್ಯತೆ.

ಹವಾಮಾನ	ಗುರುವಾರ	ಶುಕ್ರವಾರ	ಶನಿವಾರ
	27° 20°	27° 18°	27° 19°

ಪ್ರಾರಂಭಿಕ ಹಂತದಲ್ಲಿ ಕಾಯಿಲೆ ಪತ್ತೆಗೆ ಕಿದ್ವಾಯಿ ಆಸ್ಪತ್ರೆ ಕ್ರಮ • ಭಯ, ಮುಜುಗರದಿಂದ ಪರೀಕ್ಷೆಗೆ ಹಿಂದೇಟು

ಕ್ಯಾನ್ಸರ್: ಸಂಚಾರ ಶಿಬಿರಕ್ಕೆ ಬಾರದ ಜನರು

• ವರುಣ ಹೆಗಡೆ

ಬೆಂಗಳೂರು: ಪ್ರಾರಂಭಿಕ ಹಂತದಲ್ಲಿಯೇ ಕ್ಯಾನ್ಸರ್ ಪತ್ತೆ ಮಾಡಿ ಚಿಕಿತ್ಸೆ ಒದಗಿಸುವ ಉದ್ದೇಶದಿಂದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಕೈಗೊಳ್ಳುತ್ತಿರುವ ಸಂಚಾರ ಶಿಬಿರಕ್ಕೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಈ ವರ್ಷ ನಡೆದ 16 ಶಿಬಿರಗಳಲ್ಲಿ 449 ಮಂದಿ ಮಾತ್ರ ತಪಾಸಣೆಗೆ ಒಳಪಟ್ಟಿದ್ದಾರೆ.

ಸಂಸ್ಥೆಯ ದಾಖಲಾತಿ ಪ್ರಕಾರ, ಶೇ 50 ರಷ್ಟು ರೋಗಿಗಳು ಕ್ಯಾನ್ಸರ್ ಚಿಕಿತ್ಸೆಗೆ ಮೂರು ಹಾಗೂ ನಾಲ್ಕನೇ ಹಂತದಲ್ಲಿ ಬರುತ್ತಿದ್ದಾರೆ. ಶೇ 14.3 ರಷ್ಟು ಮಂದಿಗೆ ಮಾತ್ರ ಮೊದಲ ಹಾಗೂ ಎರಡನೇ ಹಂತದಲ್ಲಿ ಕ್ಯಾನ್ಸರ್ ಪತ್ತೆಯಾಗುತ್ತಿದೆ. ಅಂತಹವರಿಗೆ ಹೆಚ್ಚಿನ ಚಿಕಿತ್ಸೆ ಇಲ್ಲದೆಯೇ ಕಾಯಿಲೆ ವಾಸಿ ಮಾಡಲಾಗುತ್ತಿದೆ. ಹೀಗಾಗಿ, ಸಂಸ್ಥೆಯು ಪ್ರಾರಂಭಿಕ ಹಂತದಲ್ಲಿಯೇ ಕ್ಯಾನ್ಸರ್ ಪತ್ತೆಗೆ ಎರಡು ಸಂಚಾರಿ ವಾಹನಗಳ ಮೂಲಕ ಶಿಬಿರಗಳನ್ನು ನಡೆಸುತ್ತಿದೆ. ಭಯ, ಮುಜುಗರ ಸೇರಿದಂತೆ ವಿವಿಧ ಕಾರಣಗಳಿಂದ ತಪಾಸಣೆಗೆ ಬರುವವರ ಸಂಖ್ಯೆ ಇಳಿಕೆಯಾಗುತ್ತಿದೆ.

ಕೋವಿಡ್ ಪೂರ್ವದಲ್ಲಿ ಪ್ರತಿ ತಿಂಗಳು 5ರಿಂದ 10 ಶಿಬಿರಗಳನ್ನು ನಡೆಸಲಾಗುತ್ತಿತ್ತು. ಬಾಯಿಯ ಕ್ಯಾನ್ಸರ್, ಸ್ತನ ಕ್ಯಾನ್ಸರ್ ಹಾಗೂ ಗರ್ಭಕಂಠ ಕ್ಯಾನ್ಸರ್ ಪ್ರಕರಣಗಳನ್ನು ತಪಾಸಣೆ ಮೂಲಕ ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಬಹುದು. ಸಂಸ್ಥೆಯ ದಾಖಲಾತಿ ಪ್ರಕಾರ, 2019ರಲ್ಲಿ 19 ಸಾವಿರಕ್ಕೂ ಅಧಿಕ ಹೊಸ ಕ್ಯಾನ್ಸರ್ ಪ್ರಕರಣಗಳು ನೋಂದಣಿಯಾಗಿವೆ. ಪುರುಷರಲ್ಲಿ ಬಾಯಿ ಕ್ಯಾನ್ಸರ್ (ಶೇ 16.4) ಹಾಗೂ ಮಹಿಳೆಯರಲ್ಲಿ ಗರ್ಭಕಂಠ ಕ್ಯಾನ್ಸರ್ (ಶೇ 22.6) ಪ್ರಕರಣಗಳು ಹೆಚ್ಚಿನ ಪ್ರಮಾಣದಲ್ಲಿ ವರದಿಯಾಗಿವೆ.



ಕ್ಯಾನ್ಸರ್ ಉಲ್ಬಣಗೊಂಡ ಬಳಿಕ ಚಿಕಿತ್ಸೆಗಾಗಿ ಬರುತ್ತಾರೆ. ಪ್ರಾರಂಭಿಕ ಹಂತದಲ್ಲಿಯೇ ಪತ್ತೆ ಮಾಡಿದಲ್ಲಿ ಹೆಚ್ಚಿನ ಚಿಕಿತ್ಸೆ ಇಲ್ಲದೆಯೇ ಕಾಯಿಲೆ ವಾಸಿ ಮಾಡಬಹುದು

ಡಾ.ಸಿ. ರಾಮಚಂದ್ರ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ಕ್ಯಾನ್ಸರ್ ಪತ್ತೆ ಪ್ರಮಾಣ ಏರಿಕೆ

ಸಂಸ್ಥೆಗೆ ಅಮೆರಿಕ ಕನ್ನಡ ಕೂಟಗಳ ಒಕ್ಕೂಟ ಹಾಗೂ ಭಾರತ್ ಎಲೆಕ್ಟ್ರಾನಿಕ್ ಲಿಮಿಟೆಡ್ (ಬಿಇಎಲ್) ತಲಾ ಒಂದು ಬಸ್ ಅನ್ನು ಕ್ಯಾನ್ಸರ್ ತಪಾಸಣೆಗೆ ಕೊಡುಗೆ ನೀಡಿವೆ. ಅಲ್ಟ್ರಾ ಸೌಂಡ್, ಎಕ್ಸ್–ರೇ, ರಕ್ತದ ಪರೀಕ್ಷೆ, ಇಸಿಜಿ ಸೇರಿದಂತೆ ವಿವಿಧ ಪರೀಕ್ಷೆಗಳ ವ್ಯವಸ್ಥೆಯಿದೆ. ಒಂದು ಬಸ್‌ನಲ್ಲಿ ಮ್ಯಾಮೋಗ್ರಾಮ್ ಕೂಡ ಇದೆ. ಈ ಬಸ್‌ಗಳ ಮೂಲಕ ನಡೆಸಲಾಗುವ ತಪಾಸಣೆಯಲ್ಲಿ ಪಾಲ್ಗೊಳ್ಳುವ ಜನರ ಸಂಖ್ಯೆ ಇಳಿಮುಖವಾಗಿದ್ದರೂ ಕ್ಯಾನ್ಸರ್ ಪತ್ತೆ ಪ್ರಮಾಣ ಶೇ 2ಕ್ಕೆ ಏರಿಕೆಯಾಗಿದೆ. ಈ ಪ್ರಮಾಣ 2019ರಲ್ಲಿ ಶೇ 1.3ರಷ್ಟಿತ್ತು.

ಸಂಸ್ಥೆ ಕೈಗೊಂಡ ತಪಾಸಣಾ ಶಿಬಿರಗಳು

ವರ್ಷ	ಶಿಬಿರಗಳು	ತಪಾಸಣೆಗೆ ಒಳಗಾದವರು	ಪತ್ತೆಯಾದ ಪ್ರಕರಣ	ಶೇ
2018	34	1,001	19	1.9
2019	70	2,468	33	1.3
2020	23	764	15	2.0
2021	16	449	09	2.0

ತಡವಾಗಿ ಆಸ್ಪತ್ರೆಗೆ: 'ಕ್ಯಾನ್ಸರ್ ಕಾಯಿಲೆ ಹಾಗೂ ಚಿಕಿತ್ಸೆ ಬಗ್ಗೆ ಜನರಲ್ಲಿ ಜಾಗೃತಿ ಮೂಡುತ್ತಿದೆ. ಆದರೂ ರೋಗಿಗಳು ತಡವಾಗಿ ಆಸ್ಪತ್ರೆಗೆ ಬರುತ್ತಿದ್ದಾರೆ. ಜೀವಕ್ಕೆ ಅಪಾಯವಾಗುವುದನ್ನು ತಪ್ಪಿಸಲು ತಪಾಸಣಾ ಶಿಬಿರಗಳನ್ನು ನಡೆಸಲಾಗುತ್ತಿದೆ. ಜನರು ತಪಾಸಣೆಗೆ ಒಳಪಡುವ ಮೂಲಕ ಇದರ ಪ್ರಯೋಜನ ಪಡೆದುಕೊಳ್ಳಬೇಕು. ತಂತ್ರಜ್ಞಾನವು ಸಾಕಷ್ಟು ಮುಂದುವರಿದಿದ್ದು, ಮ್ಯಾಮೋಗ್ರಾಮ್‌ನಿಂದ ಯಾವುದೇ ತೊಂದರೆ ಇಲ್ಲ' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ. ರಾಮಚಂದ್ರ ತಿಳಿಸಿದರು.

'ತಪಾಸಣಾ ಶಿಬಿರಗಳಿಗೆ ಜ್ವರ, ಬೆನ್ನುನೋವು, ತಲೆನೋವಿನಂತಹ ಸಾಮಾನ್ಯ ಸಮಸ್ಯೆಗಳಿಗೆ ಬರುವವರೇ ಜಾಸ್ತಿಯಾಗಿದ್ದಾರೆ. 300 ಜನರು ಬಂದಲ್ಲಿ 3 ಕ್ಯಾನ್ಸರ್ ಪ್ರಕರಣಗಳು ಮಾತ್ರ ಪತ್ತೆಯಾಗುತ್ತಿವೆ. ಇದರಿಂದ ನಮ್ಮ ಮೂಲ ಉದ್ದೇಶ ಸಾಕಾರವಾಗುತ್ತಿಲ್ಲ. ಪಾಶ್ಚಾತ್ಯ ಆಹಾರ ಪದ್ಧತಿ ಹಾಗೂ ಜೀವನ ವಿಧಾನ, ಧೂಮಪಾನದಂತಹ ವ್ಯಸನ, ಕೆಲಸದ ಒತ್ತಡ ಸೇರಿದಂತೆ ವಿವಿಧ ಕಾರಣಗಳಿಂದ ಎಲ್ಲ ಮಾದರಿಯ ಕ್ಯಾನ್ಸರ್ ಪ್ರಕರಣ ಹೆಚ್ಚಳವಾಗುತ್ತಿವೆ' ಎಂದು ಕಳವಳ ವ್ಯಕ್ತಪಡಿಸಿದರು.

ನೊರೊ ವೈರಸ್: ಮುನ್ನೆಚ್ಚರಿಕೆ

ಬೆಂಗಳೂರು: ಕೇರಳದ ವಯನಾಡ್ ಜಿಲ್ಲೆಯಲ್ಲಿ ಸಾಂಕ್ರಾಮಿಕ ನೊರೊ ವೈರಸ್ ಪ್ರಕರಣಗಳು ದೃಢಪಟ್ಟಿರುವುದರಿಂದ ಗಡಿ ಜಿಲ್ಲೆಗಳಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸೂಚಿಸಿದೆ.

'ವಯನಾಡ್ ಜಿಲ್ಲೆಯ ಪೂಕೋಡ್ ಪಶುವೈದ್ಯಕೀಯ ಕಾಲೇಜಿನ 13 ವಿದ್ಯಾರ್ಥಿಗಳಲ್ಲಿ ವೈರಾಣು ದೃಢಪಟ್ಟಿದೆ. ಹೀಗಾಗಿ, ದಕ್ಷಿಣ ಕನ್ನಡ ಹಾಗೂ ಕೊಡಗಿನಲ್ಲಿ ಈ ಬಗ್ಗೆ ಎಚ್ಚರವಹಿಸಬೇಕು. ಸಾಮಾನ್ಯವಾಗಿ ಕಲುಷಿತ ನೀರು ಹಾಗೂ ಆಹಾರದಿಂದ ಈ ವೈರಾಣು ಹರಡುತ್ತದೆ. ವಾಂತಿ, ಅತಿಸಾರ ಮತ್ತು ಹೊಟ್ಟೆನೋವು ಸೋಂಕಿನ ಪ್ರಮುಖ ಲಕ್ಷಣಗಳಾಗಿವೆ. ಈ ಲಕ್ಷಣಗಳು ಕಾಣಿಸಿಕೊಂಡಲ್ಲಿ ತಕ್ಷಣ ಆಸ್ಪತ್ರೆಗೆ ತೆರಳಿ, ಚಿಕಿತ್ಸೆ ಪಡೆದುಕೊಳ್ಳಬೇಕು. ಇಲ್ಲವಾದಲ್ಲಿ ಮಾರಣಾಂತಿಕವಾಗಲಿದೆ. ರೋಗ ಲಕ್ಷಣಗಳನ್ನು ಆಧರಿಸಿ ಈ ರೋಗಕ್ಕೆ ಚಿಕಿತ್ಸೆ ನೀಡಬಹುದಾಗಿದೆ' ಎಂದು ಇಲಾಖೆಯ ಸಹ ನಿರ್ದೇಶಕರು ತಿಳಿಸಿದ್ದಾರೆ.

'ಕುಡಿಯುವ ನೀರಿನ ಮೂಲಗಳ ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಣೆ ಮಾಡಬೇಕು. ಸೋಂಕು ಹರಡದಂತೆ ತಡೆಯುವ ನಿಟ್ಟಿನಲ್ಲಿ, ಕ್ಲೋರಿನೇಷನ್ ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳಬೇಕು. ಜನ ಸಮೂಹ ಇರುವ ಪ್ರದೇಶಗಳಲ್ಲಿರುವ ಹೋಟೆಲ್ ಹಾಗೂ ಕ್ಯಾಂಟೀನ್‌ಗಳಲ್ಲಿ ಬಿಸಿ ನೀರು ಸರಬರಾಜು ಮಾಡಲು ಹೋಟೆಲ್ ಮಾಲೀಕರಿಗೆ ಕಟ್ಟುನಿಟ್ಟಾದ ಸೂಚನೆ ನೀಡಬೇಕು' ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದ್ದಾರೆ.



ಮೈಸೂರು ರಸ್ತೆಯ ಬ್ಯಾಟರಾಯನಪುರದ ಗಾಳಿ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ನೂತನ ಏಕಶಿಲಾ ಆಂಜನೇಯ ವಿಗ್ರಹದ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಶಾಸಕ ಎಂ.ಕೃಷ್ಣಪ್ಪ ಭಾಗವಹಿಸಿದ್ದರು. ಧರ್ಮದರ್ಶಿ ಮಂಡಳಿಯ ಉಪಾಧ್ಯಕ್ಷ ಬಿ.ಎಂ.ಪಟೇಲ್ ಪಾಂಡು, ಆಗಮಿಕ ರಾಮಾನುಜಾಚಾರ್ಯ ಹಾಗೂ ಮಂಡಳಿಯ ಸದಸ್ಯರು ಇದ್ದರು.

ಇಂದಿನಿಂದ ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ನ.24ರಿಂದ 30ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯ ಸ್ಥಳಗಳು: 24ರಂದು ಜಯನಗರ 5ನೇ ಹಂತ, ಆರ್‌ಬಿಐ ಬಡಾವಣೆ, ಶಿವಶಕ್ತಿ ನಗರ, ಚುಂಚಘಟ್ಟ, ಭವಾನಿ ನಗರ, ಕೆ.ಆರ್.ರಸ್ತೆ, ಉತ್ತರಹಳ್ಳಿ ಮುಖ್ಯರಸ್ತೆ, ಪಂಚಶೀಲ ನಗರ, ಅಂದ್ರಹಳ್ಳಿ ಮುಖ್ಯರಸ್ತೆ, ವಿಜಯನಗರ, ಮಾರೇನಹಳ್ಳಿ, ಗೋವಿಂದರಾಜ ನಗರ, ಕಾಮಾಕ್ಷಿಪಾಳ್ಯ, ಹೆಗ್ಗನಹಳ್ಳಿ, ಸುಂಕದಕಟ್ಟೆ, ಮೂಡಲಪಾಳ್ಯ, ಅಮರಜ್ಯೋತಿ ನಗರ, ದುಬಾಸಿಪಾಳ್ಯ, ಚಂದ್ರಾಬಡಾವಣೆ, ವಿದ್ಯಾಪೀಠ ರಸ್ತೆ, 25ರಂದು ಇಸ್ರೊ ಬಡಾವಣೆ, ಕುಮಾರಸ್ವಾಮಿ ಬಡಾವಣೆ, ಪೈಪ್‌ಲೈನ್ ರಸ್ತೆ, ಬನಶಂಕರಿ 2ನೇ ಹಂತ, ಚನ್ನಮ್ಮನ ಅಚ್ಚುಕಟ್ಟು, ಕತ್ರಿಗುಪ್ಪೆ, 26ರಂದು ಸಿದ್ದಾಪುರ, ಪುಟ್ಟೇನಹಳ್ಳಿ ಮುಖ್ಯರಸ್ತೆ, ಗಣಪತಿಪುರ, ತ್ಯಾಗರಾಜ ನಗರ ಹಾಗೂ ಪದ್ಮನಾಭ ನಗರದ ಕೆಲವು ಭಾಗಗಳು, 27ರಂದು ಭವಾನಿ ನಗರ, ಅಂಬೇಡ್ಕರ್ ನಗರ, 29ರಂದು ಜಯನಗರ 8ನೇ ಬ್ಲಾಕ್, ಕುಮಾರಸ್ವಾಮಿ ಬಡಾವಣೆ, ಉದಯ ನಗರ, 30ರಂದು ವಿನಾಯಕ ನಗರ, ನಂಜಪ್ಪ ವೃತ್ತ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಮೂರನೇ ಹಂತದ ಮೆಟ್ರೊ ಕಾಮಗಾರಿ

ಬಿಎಂಆರ್‌ಸಿಎಲ್: ಸಂಚಾರ ದಟ್ಟಣೆ ವಿಶ್ಲೇಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಮೂರನೇ ಹಂತದ ವಿಸ್ತರಣೆ ಸಂದರ್ಭದಲ್ಲಿ ಹೆಬ್ಬಾಳದ ಕೆಂಪಾಪುರದಿಂದ ಜೆ.ಪಿ.ನಗರ 4ನೇ ಹಂತದವರೆಗೆ 32.16 ಕಿ.ಮೀ. ಹಾಗೂ ಹೊಸಹಳ್ಳಿ ನಿಲ್ದಾಣದ ಟೋಲ್ ಗೇಟ್‌ನಿಂದ ಕಡಬಗೆರೆವರೆಗೆ 12.82 ಕಿ.ಮೀ ಉದ್ದದ ರೈಲು ಮಾರ್ಗಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆ.

ಇದಕ್ಕಾಗಿ ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ಈ ಮಾರ್ಗಗಳಲ್ಲಿ ಸಂಚಾರ ದಟ್ಟಣೆಯ ವಿಶ್ಲೇಷಣೆ ಪುನರಾರಂಭಿಸಿದೆ.

ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಕೋವಿಡ್ ಅಡ್ಡಿಯಾಗಿತ್ತು. ಈಗ ನಗರದಲ್ಲಿ ಕೋವಿಡ್ ಪ್ರಕರಣಗಳು ಕಡಿಮೆಯಾಗಿರುವುದರಿಂದ ಡಿಪಿಆರ್ ತಯಾರಿಕಾ ಕಾರ್ಯ ಮತ್ತೆ ಚುರುಕು ಪಡೆದುಕೊಂಡಿದೆ.

'ಭೂ ತಾಂತ್ರಿಕ ಮತ್ತು ಸ್ಥಳಾಕೃತಿಯ ಸರ್ವೆ ಕಾರ್ಯಗಳು ಬಹುತೇಕ ಪೂರ್ಣಗೊಂಡಿವೆ. ಮುಂದಿನ ಎರಡು ತಿಂಗಳಲ್ಲಿ ಈ ಮಾರ್ಗಗಳಲ್ಲಿನ ಸಂಚಾರ ದಟ್ಟಣೆ ವಿಶ್ಲೇಷಣೆ ಕಾರ್ಯವೂ ಮುಕ್ತಾಯಗೊಳ್ಳಲಿದೆ' ಎಂದು ಬಿಎಂಆರ್‌ಸಿಎಲ್ ಮೂಲಗಳು ತಿಳಿಸಿವೆ.

'ಮೆಟ್ರೊ ಮೂರನೇ ಹಂತದ ಪೂರ್ವ ಕಾರ್ಯಸಾಧ್ಯತಾ ವರದಿಗಳನ್ನು ಈಗಾಗಲೇ ಸಿದ್ಧಪಡಿಸಲಾಗಿದೆ. ಈಗಾಗಲೇ ತಯಾರಿಸಲಾಗಿರುವ ಡಿಪಿಆರ್ ಅನ್ನೇ ಅಂತಿಮಗೊಳಿಸುವ ಸಾಧ್ಯತೆ ಇದೆ. ಅದನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ. ಬಳಿಕ ಆ ಡಿಪಿಆರ್‌ಗೆ ಕೇಂದ್ರ ಸರ್ಕಾರದ ಅನುಮೋದನೆ ಸಿಗಬೇಕಾಗುತ್ತದೆ' ಎಂದೂ ಹೇಳಿವೆ.

'ಮೂರನೇ ಹಂತದಲ್ಲಿ ಹೊಸಕೆರೆಹಳ್ಳಿಯಿಂದ ಮಾರತ್ತಹಳ್ಳಿ ಹಾಗೂ ಸರ್ಜಾಪುರ ರಸ್ತೆಯಿಂದ ಯಲಹಂಕದವರೆಗೆ ಮೆಟ್ರೊ ರೈಲು ಮಾರ್ಗಗಳನ್ನು ನಿರ್ಮಿಸಲೂ ಉದ್ದೇಶಿಸಲಾಗಿತ್ತು. ಈ ಯೋಜನೆಯನ್ನು ಬಿಎಂಆರ್‌ಸಿಎಲ್ ಕೈಬಿಡುವ ಸಾಧ್ಯತೆ ಇದೆ' ಎಂದೂ ಹೇಳಲಾಗಿದೆ.

ಬೆಟಗೇರಿ ನಗರಸಭೆ ಕಾರಿಡಾರ್‌ನಲ್ಲಿ ಮೂತ್ರ ವಿಸರ್ಜಿಸಿ ಆಕ್ರೋಶ

ಶ್ರೀರಾಮ ಸೇನೆ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಗದಗ: ಅವಳಿ ನಗರದಲ್ಲಿರುವ ಸಾರ್ವಜನಿಕ ಮೂತ್ರಾಲಯಗಳನ್ನು ಸರಿಪಡಿಸುವಂತೆ ಆಗ್ರಹಿಸಿ ಶ್ರೀರಾಮ ಸೇನೆ ಕಾರ್ಯಕರ್ತರು ಮಂಗಳವಾರ ಗದಗ–ಬೆಟಗೇರಿ ನಗರಸಭೆ ಕಾರಿಡಾರ್ ಹಾಗೂ ಆವರಣದಲ್ಲಿ ಮೂತ್ರ ವಿಸರ್ಜನೆ ಮಾಡಿ ಹೊಸ ರೀತಿಯಲ್ಲಿ ಪ್ರತಿಭಟಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಸಿ.ಸಿ. ಪಾಟೀಲ ಹಾಗೂ ಗದಗ ಶಾಸಕ ಎಚ್.ಕೆ.ಪಾಟೀಲ ಸಾರ್ವಜನಿಕರಿಗೆ ಕನಿಷ್ಠ ಸೌಲಭ್ಯಗಳನ್ನು ಒದಗಿಸುವಲ್ಲಿ ವಿಫಲರಾಗಿದ್ದಾರೆ ಎಂದು ಅವರ ವಿರುದ್ಧ ಘೋಷಣೆ ಕೂಗಿದರು.

'ಅವಳಿ ನಗರದಲ್ಲಿ ಸಾರ್ವಜನಿಕ ಮೂತ್ರಾಲಯಗಳ ಸ್ಥಿತಿ ತೀರಾ ಕೆಟ್ಟದಾಗಿದೆ. ನಗರದ ಕೆಲವೆಡೆ ಇದ್ದ ಮೂತ್ರಾಲಯಗಳನ್ನು ಕೆಡವಲಾಗಿದೆ. ಸಮಸ್ಯೆ ಬಗೆಹರಿಸದಿದ್ದರೆ ನಗರಸಭೆ ಆವರಣದಲ್ಲಿ ಮೂತ್ರವಿಸರ್ಜನೆ ಮಾಡಿ ಪ್ರತಿಭಟಿಸಲಾಗುವುದು ಎಂದು ಅಧಿಕಾರಿಗಳಿಗೆ ವಾರದ ಹಿಂದೆಯೇ ಎಚ್ಚರಿಸಲಾಗಿತ್ತು. ಅಧಿಕಾರಿಗಳು ಸ್ಪಂದಿಸದ ಕಾರಣ ಪ್ರತಿಭಟನೆ ಅನಿವಾರ್ಯವಾಯಿತು' ಎಂದು ಶ್ರೀರಾಮ ಸೇನೆ ಧಾರವಾಡ ವಿಭಾಗೀಯ ಸಂಚಾಲಕ ರಾಜು ಖಾನಪ್ಪನವರ ಹೇಳಿದರು.

ಪ್ರತಿಭಟನೆ ವೇಳೆ ಸ್ಥಳದಲ್ಲಿ ಸಾಕಷ್ಟು ಮಂದಿ ಪೊಲೀಸರು ಇದ್ದರೂ ಪ್ರತಿಭಟನಕಾರರು ನಗರಸಭೆ ಆವರಣದ ವಿವಿಧೆಡೆ ಮೂತ್ರವಿಸರ್ಜನೆ ಮಾಡಿದರು.

ದಲಿತ ಸಂಘಟನೆಗಳ ಒಕ್ಕೂಟ ಖಂಡನೆ: ಶ್ರೀರಾಮ ಸೇನೆ ನಡೆಸಿದ ಈ ಪ್ರತಿಭಟನೆಯನ್ನು ಜಿಲ್ಲಾ ದಲಿತ ಸಂಘಟನೆಗಳ ಒಕ್ಕೂಟ ತೀವ್ರವಾಗಿ ಖಂಡಿಸಿದೆ.

'ಶ್ರೀರಾಮ ಸೇನೆಯವರು ಮೂತ್ರ ವಿಸರ್ಜಿಸಿ ಪ್ರತಿಭಟಿಸಿ ಪೌರಕಾರ್ಮಿಕರನ್ನು, ಅಸಭ್ಯ ವರ್ತನೆ ತೋರಿ ದಲಿತರನ್ನು ಅವಮಾನಿಸಿದ್ದಾರೆ. ಹುಯ್ದು ಹೋಗಿರುವ ಮೂತ್ರವನ್ನು ಸ್ವಚ್ಛಗೊಳಿಸುವುದು ಇಲ್ಲಿನ ಪೌರಕಾರ್ಮಿಕರೇ ಹೊರತು; ಅಧಿಕಾರಿ ವರ್ಗ ಅಲ್ಲ. ಈ ರೀತಿಯ ಉದ್ಧಟತನ ತೋರಿದ ಸಂಘಟನೆಯ ಎಲ್ಲ ಮುಖಂಡರು ಮತ್ತು ಕಾರ್ಯಕರ್ತರನ್ನು ಬಂಧಿಸಿ, ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಮುಖಂಡರಾದ ಶರೀಫ ಬಿಳೇಯಲಿ, ಮುತ್ತು ಬಿಳೇಯಲಿ ಒತ್ತಾಯಿಸಿದ್ದಾರೆ.

'ಪ್ರತಿಭಟನಕಾರರ ವಿರುದ್ಧ ಕ್ರಮ ಕೈಗೊಳ್ಳುವಂತೆ ದಲಿತ ಸಂಘಟನೆ ಒಕ್ಕೂಟ ಮನವಿ ನೀಡಿದೆ. ಆದರೆ, ಪ್ರಕರಣ ದಾಖಲಿಸಿಲ್ಲ. ಪ್ರಕರಣ ದಾಖಲಿಸಿದರೆ ಕ್ರಮಕೈಗೊಳ್ಳಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಪ್ರಕಾಶ್ ದೇವರಾಜು ತಿಳಿಸಿದರು.

ಒಕ್ಕಲಿಗರ ಸಂಘ: 312 ನಾಮಪತ್ರ ಸಲ್ಲಿಕೆ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿಯ ಆಯ್ಕೆಗೆ ಡಿ. 12 ರಂದು ಚುನಾವಣೆ ನಡೆಯಲಿದ್ದು, ಒಟ್ಟು 312 ನಾಮಪತ್ರಗಳು ಸಲ್ಲಿಕೆ ಆಗಿವೆ.

ನಾಮಪತ್ರಗಳ ಪರಿಶೀಲನೆ ಬುಧವಾರ ನಡೆಯಲಿದ್ದು, ಬಳಿಕ ಕ್ರಮಬದ್ಧವಾದ ನಾಮಪತ್ರಗಳ ಪಟ್ಟಿ ಪ್ರಕಟಿಸಲಾಗುತ್ತದೆ. ನಾಮಪತ್ರ ಹಿಂತೆಗೆದುಕೊಳ್ಳಲು ಗುರುವಾರ (ನ. 25) ಕೊನೆಯ ದಿನ.

ಸಂಘದ 35 ಕಾರ್ಯಕಾರಿ ಸಮಿತಿ ಸದಸ್ಯರ ಆಯ್ಕೆಗೆ ಚುನಾವಣೆ ನಡೆಯುತ್ತಿದ್ದು, ನಾಮಪತ್ರ ಸಲ್ಲಿಕೆಗೆ ಕೊನೆ ದಿನವಾದ ಮಂಗಳವಾರ ಹಲವು ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿದರು.

ನ. 26 ರಂದು ಅಭ್ಯರ್ಥಿಗಳಿಗೆ ಚಿಹ್ನೆ ಹಂಚಿಕೆ ಮಾಡಲಾಗುತ್ತದೆ. ಡಿ. 12ರಂದು ಬೆಳಿಗ್ಗೆ 7 ರಿಂದ ಸಂಜೆ 5ಗಂಟೆವರೆಗೆ ಮತದಾನ ನಡೆಯಲಿದೆ.

ನಗರದಲ್ಲಿ ಇಂದು

'ರತ್ನದ ಉದ್ದಿಮೆಯ ಆಯಾಮದಲ್ಲಿ ಸವಾಲುಗಳು ಮತ್ತು ಅವಕಾಶಗಳು' ಕುರಿತು ವಿಚಾರ ಸಂಕಿರಣ: ಆಯೋಜನೆ–ಫೆಡರೇಷನ್ ಆಫ್ ಇಂಡಿಯನ್ ಗ್ರಾನೈಟ್ ಆ್ಯಂಡ್ ಸ್ಟೋನ್ ಇಂಡಸ್ಟ್ರೀಸ್, ಸ್ಥಳ–ಹೋಟೆಲ್ ಐಟಿಸಿ ವಿಂಡ್ಸರ್, ವಿಂಡ್ಸರ್ ಸ್ಕ್ವೇರ್, ಗಾಲ್ಫ್ ಕೋರ್ಸ್ ರಸ್ತೆ, ಬೆಳಿಗ್ಗೆ 10

ಹಂಪನಾ ಅವರ 'ಚಾರು ವಸಂತ'ದ ಇಂಗ್ಲಿಷ್ ಅನುವಾದಿತ ಪುಸ್ತಕ ಬಿಡುಗಡೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ–ಗೃಹ ಸಚಿವ ಆರಗ ಜ್ಞಾನೇಂದ್ರ, ಅನುವಾದಕರು–ಪಿ.ಪಿ.ಗಿರಿಧರ, ಅತಿಥಿಗಳು–ಪ್ರೊ.ರಾಜೇಂದ್ರ ಚೆನ್ನಿ, ವಿದ್ವಾಂಸ ಮಲ್ಲೇಪುರಂ ಜಿ.ವೆಂಕಟೇಶ, ನಿತಿನ್ ಶಾ, ಆಯೋಜನೆ–ಸಪ್ನ ಬುಕ್ ಹೌಸ್, ಸ್ಥಳ–ಕೃಷ್ಣಾ, ಮುಖ್ಯಮಂತ್ರಿಗಳ ಗೃಹ ಕಚೇರಿ, ಬೆಳಿಗ್ಗೆ 11.30

'ಮೊಮೆಂಟಮ್'–ಎಚ್.ಸಿ.ಅನಿತಾ ಅವರ ಚಿತ್ರಕಲಾ ಪ್ರದರ್ಶನ: ಉದ್ಘಾಟನೆ–ಲಲಿತಕಲಾ ಅಕಾಡೆಮಿ ಅಧ್ಯಕ್ಷ ಡಿ.ಮಹೇಂದ್ರ, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 11ರಿಂದ ಸಂಜೆ 7.30 (ನ.28ರವರೆಗೆ ಪ್ರದರ್ಶನ ಇರಲಿದೆ)

ದಿ ಹ್ಯಾಂಡ್‌ಮೇಡ್ ಕಲೆಕ್ಟಿವ್-ಕರಕುಶಲ ವಸ್ತುಗಳ ಮಾರಾಟ ಮತ್ತು ಪ್ರದರ್ಶನ: ಆಯೋಜನೆ–ಎ ಹಂಡ್ರೆಡ್ ಹ್ಯಾಂಡ್ಸ್, ಎಂಟಿಆರ್, ಸ್ಥಳ–ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ದೊಮ್ಮಲೂರು, ಬೆಳಿಗ್ಗೆ 10.30ರಿಂದ ರಾತ್ರಿ 8.30ರವರೆಗೆ (ನ.28ರವರೆಗೆ ಇರಲಿದೆ)

ಶ್ರೀನಿವಾಸ ಕಲ್ಯಾಣೋತ್ಸವ ಹಾಗೂ ವೇದರತ್ನ, ಸಮಾಜರತ್ನ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ–ವಿದ್ಯಾಭವನ ವಿದ್ಯಾರಣ್ಯ ಭಾರತೀತೀರ್ಥ ಸ್ವಾಮೀಜಿ, ಯದುಗಿರಿ ಯತಿರಾಜ ರಾಮಾನುಜ ಜೀಯರ್, ಸುಜಯನಿಧಿ ತೀರ್ಥರು, ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿ.ಎಸ್.ಯಡಿಯೂರಪ್ಪ, ಆಯೋಜನೆ–ಅಖಿಲ ಕರ್ನಾಟಕ ಬ್ರಾಹ್ಮಣ ಯುವಕರ ಸಂಘ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 4

ರಾಜಧಾನಿ ಮಗ್ಗುಲಲ್ಲಿರುವ ನೆಲಮಂಗಲ ತಾಲ್ಲೂಕಿನ ಜನಜೀವನ ಅಸ್ತವ್ಯಸ್ತ

ನೆಲಮಂಗಲ: ನವೆಂಬರ್‌ನಲ್ಲಿ ಅಧಿಕ ಮಳೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ವಾಯುಭಾರ ಕುಸಿತದ ಪರಿಣಾಮದಿಂದ ಸುರಿಯುತ್ತಿರುವ ಮಳೆಗೆ ರಾಜಧಾನಿ ಮಗ್ಗುಲಲ್ಲಿರುವ ನೆಲಮಂಗಲ ತಾಲ್ಲೂಕಿನ ಜನಜೀವನ ಅಸ್ತವ್ಯಸ್ತವಾಗಿದೆ. ವಾಡಿಕೆಗಿಂತ ಮೀರಿ ಮಳೆ ಸುರಿದಿದೆ. ನವೆಂಬರ್ ಒಂದೇ ತಿಂಗಳಲ್ಲಿ 132.17 ಮಿ.ಮೀ ಮಳೆ ಬಂದಿದೆ.

ನೆಲಮಂಗಲ ತಾಲ್ಲೂಕಿನಲ್ಲಿ ಜನವರಿ 1ರಿಂದ ನವೆಂಬರ್ 22ರವರೆಗೆ ಹವಾಮಾನ ಅಂಕಿ-ಅಂಶದ ಪ್ರಕಾರ 930 ಮಿ.ಮೀ. ಮಳೆಯಾಗಬೇಕಿತ್ತು. ಆದರೆ, 1,191 ಮಿ. ಮೀ. ಮಳೆಯಾಗುವ ಮೂಲಕ ಶೇಕಡ 28 ರಷ್ಟು ಹೆಚ್ಚುವರಿ ಮಳೆಯಾಗಿದೆ.

ಕಳೆದ ಸಾಲಿನಲ್ಲಿ ಜನವರಿ 1ರಿಂದ ನವೆಂಬರ್ ವರೆಗೆ 1,007.62 ಮಿ.ಮೀ. ಮಳೆಯಾಗಿತ್ತು. ಅದರಲ್ಲಿ ನವೆಂಬರ್ ತಿಂಗಳು ಒಂದರಲ್ಲಿ 22 ಮಿ.ಮೀ. ಮಳೆಯಾಗಿತ್ತು. ಈ ವರ್ಷ ನವೆಂಬರ್ ತಿಂಗಳು ಒಂದರಲ್ಲೇ (22ರವರೆಗೆ) 132.17 ಮಿ.ಮೀ. ಮಳೆ ಆಗಿದೆ. ಕಳೆದ ಬಾರಿಗಿಂತ 110 ಮಿ.ಮೀ. ಅಧಿಕ ಮಳೆಯಾಗಿದೆ.



ಮಳೆಯಿಂದ ತೆನೆಯಲ್ಲಿ ರಾಗಿ ಮೊಳಕೆ ಬಂದಿರುವುದು



ಗೋ ಕಟ್ಟೆ ತುಂಬಿರುವುದು

ಮನೆ ಹಾನಿ: ನೆಲಮಂಗಲ ತಾಲ್ಲೂಕಿನ ಕಸಬಾ, ಸೋಂಪುರ ಹಾಗೂ ತ್ಯಾಮಗೊಂಡ್ಲು ಗ್ರಾಮಗಳ ವ್ಯಾಪ್ತಿಯ ಹಲವು ಹಳ್ಳಿಗಳಲ್ಲಿ ಜಂತೆ ಮನೆಗಳು, ಶೀಟಿನ ಮನೆಗಳು ಹೆಚ್ಚಿನ ಪ್ರಮಾಣದಲ್ಲಿವೆ. ಬಿಡದೆ ಸುರಿದ ಮಳೆಯಿಂದ ಗೋಡೆಗಳು ನೆನೆದು ಸಾಕಷ್ಟು ಮನೆಗಳು ಕುಸಿದಿವೆ. ಆರ್‌ಸಿಸಿ ಕಟ್ಟಡಗಳೇ ಸೋರುತ್ತಿವೆ. ಇನ್ನೂ ಕೆಲ ತಗ್ಗುಪ್ರದೇಶದ ಮನೆಗಳು ಜಲಾವೃತವಾಗಿವೆ. ತಗ್ಗು ಪ್ರದೇಶಗಳ ಕೃಷಿ ಭೂಮಿಯಲ್ಲಿ ನೀರು ನಿಂತು ಜಲಾನಯನ ಪ್ರದೇಶಗಳ ಮಾದರಿ ಗೋಚರಿಸುತ್ತಿದೆ. ಇಟ್ಟಿದ್ದ ಬೆಳೆಗಳು ನೀರು ಪಾಲಾಗಿವೆ.

ತುಂಬಿ ಹರಿದ ಕೆರೆ ಕಟ್ಟೆಗಳು: ಕೋಡಿ ಭಾಗ್ಯವನ್ನೇ ಕಾಣದ, ದಶಕದಿಂದ ಖಾಲಿಯಾಗಿ ಬಿದ್ದಿದ್ದ, ತಾಲ್ಲೂಕಿನ ಸಾಕಷ್ಟು ಕೆರೆಗಳು ಹೆಚ್ಚಿನ ಮಳೆಯಿಂದ ಕೋಡಿ ಆಗಿವೆ. ಅವುಗಳ ಜೊತೆಗೆ ಕಲ್ಯಾಣಿ, ಗೋಕಟ್ಟೆಗಳು ತುಂಬಿ ತುಳುಕುತ್ತಿವೆ.

ಮೇವಿಗೆ ತಾತ್ವಾರ: ರೈತರು ಸಂಗ್ರಹಿಸಿದ್ದ ಹುಲ್ಲಿನ ಮೆದೆಗಳು ಟಾರ್ಪಾಲ್ ಹಾಕಿ ಮುಚ್ಚಿಕೊಂಡರೂ ಶೀತ ಗಾಳಿ ರಭಸಕ್ಕೆ ಮೆತ್ತಗಾಗಿ ಜಾನುವಾರುಗಳ ಮೇವಿಗೂ ಅಡಚಣೆಯುಂಟಾಗುತ್ತಿದೆ. ಅಕಾಲಿಕ ಮಳೆ ಪರಿಣಾಮ ತಾಲ್ಲೂಕಿನ ಶೇ 80ಕ್ಕೂ ಅಧಿಕ ರಾಗಿ ಬೆಳೆ ನೆಲ ಕಚ್ಚಿದೆ. ಒಂದಷ್ಟು ಹಾಳಾಗಿದೆ. ಹುಲ್ಲು ಕೊಳೆತು ಹೆಚ್ಚಿನ ಹುಲ್ಲು ಸಂಗ್ರಹ ಆಗಿಲ್ಲ. ಇದರಿಂದ ಹೈನುಗಾರಿಕೆಗೆ ಹೊಡೆತ ಬೀಳಲಿದೆ.

ಟೊಮೆಟೋ, ಹುರುಳಿಕಾಯಿ, ತೊಗರಿ, ಅಲಸಂಡೆ, ಹುರುಳಿ, ಅವರೆ ಮುಂತಾದ ಬೆಳೆ ನೆಲಕಚ್ಚಿದ್ದು, ತರಕಾರಿ ಬೆಳೆಗಾರರಿಗೂ ಹೊಡೆತ ಬಿದ್ದಿದೆ. ಇದರಿಂದ ಬೆಲೆ ಏರಿಕೆಯ ಹೆಚ್ಚಾಗಿ, ಗ್ರಾಹಕರ ತರಕಾರಿ ಕೊಳ್ಳುವಿಕೆಗೂ ಕಷ್ಟವಾಗಿದೆ.

ಸುದ್ದಿ 2 ನಿಮಿಷ

16 ವಿವಿಗಳಿಗೆ ನ್ಯಾಕ್ ಮಾನ್ಯತೆ ಇಲ್ಲ

ಬೆಂಗಳೂರು: ರಾಜ್ಯದ 28 ವಿಶ್ವವಿದ್ಯಾಲಯಗಳ ಪೈಕಿ, 16 ವಿಶ್ವವಿದ್ಯಾಲಯಗಳು ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಪರಿಷತ್ (ನ್ಯಾಕ್) ಮಾನ್ಯತೆ ಪಡೆದಿಲ್ಲ.

1980ರ ನಂತರ ಸ್ಥಾಪನೆಯಾದ ಕೆಲವು ವಿಶ್ವವಿದ್ಯಾಲಯಗಳು ಇನ್ನೂ ಮಾನ್ಯತೆ ಪಡೆದಿಲ್ಲ. 2010ರ ನಂತರ ಆರಂಭವಾದ ಕೆಲವು ವಿಶ್ವವಿದ್ಯಾಲಯಗಳು ನ್ಯಾಕ್ ಮಾನ್ಯತೆ ಪಡೆಯಲು ಅಗತ್ಯವಾದ ಅರ್ಹತೆಯನ್ನೇ ಪಡೆದಿಲ್ಲ.

ದೇಶದಾದ್ಯಂತ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು 2013ರ ನಂತರ ನ್ಯಾಕ್ ಮಾನ್ಯತೆ ಪಡೆಯುವುದು ಕಡ್ಡಾಯವಾಗಿದೆ. ಆದರೂ, ಕೆಲವು ವಿದ್ಯಾಲಯಗಳು ಇನ್ನೂ ಮಾನ್ಯತೆಗೆ ಅರ್ಜಿಯನ್ನೇ ಸಲ್ಲಿಸಿಲ್ಲ.

ರಾಜ್ಯದ ಸರ್ಕಾರಿ ಸಂಸ್ಥೆಗಳಲ್ಲಿ ಶಿಕ್ಷಣ ಗುಣಮಟ್ಟ ಸುಧಾರಿಸಲು ನ್ಯಾಕ್ ಮಾನ್ಯತೆ ಸ್ಥಿತಿ ಮತ್ತು ಶಿಫಾರಸುಗಳ ಕುರಿತು ವಿಮರ್ಶೆ ಮಾಡಿದ ವರದಿಯಲ್ಲಿ ಈ ಅಂಶ ಬಹಿರಂಗವಾಗಿದೆ.

'16 ವಿದ್ಯಾಲಯಗಳಲ್ಲಿ ಕೆಲವು ಮಾನ್ಯತೆಗಾಗಿ ಈಗಾಗಲೇ ಅರ್ಜಿ ಸಲ್ಲಿಸಿವೆ' ಎಂದು ಉನ್ನತ ಶಿಕ್ಷಣ ಇಲಾಖೆ ಮೂಲಗಳು ತಿಳಿಸಿವೆ.

'ಮಾನ್ಯತೆಗಾಗಿ ಅರ್ಜಿ ಸಲ್ಲಿಸುವಂತೆ ನಾವು ಈಗಾಗಲೇ ಎಲ್ಲ ವಿಶ್ವವಿದ್ಯಾಲಯಗಳಿಗೆ ಸೂಚನೆ ನೀಡಿದ್ದೇವೆ. ಕೆಲವು ವಿಶ್ವವಿದ್ಯಾಲಯಗಳು ಇತ್ತೀಚೆಗೆ ಆರಂಭವಾಗಿವೆ. ಅರ್ಜಿ ಸಲ್ಲಿಸಲು 5 ವರ್ಷ ತುಂಬಬೇಕಿದೆ' ಎಂದು ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ. ಬಿ. ತಿಮ್ಮೇಗೌಡ ತಿಳಿಸಿದರು.

ಇಂಡಿಯನ್ ಅಕಾಡೆಮಿ: ವಿದ್ಯಾರ್ಥಿಗಳಿಗೆ ಪದವಿ ಪ್ರದಾನ



ಬೆಂಗಳೂರು: ಇಂಡಿಯನ್ ಅಕಾಡೆಮಿ ಪದವಿ ಕಾಲೇಜು (ಐಎಡಿಸಿ) ಹೆಣ್ಣೂರಿನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 2021ನೇ ಸಾಲಿನಲ್ಲಿ ತೇರ್ಗಡೆಯಾದ 599 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ವಿವಿಧ ವಿಷಯಗಳಲ್ಲಿ ಅಗ್ರಶ್ರೇಯಾಂಕ ಪಡೆದಿದ್ದ 16 ಮಂದಿ ಹಾಗೂ ಒಟ್ಟಾರೆಯಾಗಿ ರ‍್ಯಾಂಕ್ ಪಡೆದಿದ್ದ ಇಬ್ಬರಿಗೆ ಪದವಿ ಫಲಕ ನೀಡಲಾಯಿತು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) ವಿಶ್ರಾಂತ ಕುಲಪತಿ ಎಚ್.ಪಿ.ಖಿಂಚಾ ಅವರು ಪದವಿ ಪ್ರದಾನ ಮಾಡಿದರು.

'ಐಎಡಿಸಿ ಈಗ ಬೃಹದಾಕಾರವಾಗಿ ಬೆಳೆದಿದೆ. ಆರು ವಿದ್ಯಾರ್ಥಿಗಳೊಂದಿಗೆ ಆರಂಭವಾದ ಸಂಸ್ಥೆ 4 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳ ಜ್ಞಾನಾರ್ಜನೆಯ ತಾಣವಾಗಿ ಮಾರ್ಪಟ್ಟಿದೆ. ಅನೇಕ ವಿದ್ಯಾರ್ಥಿಗಳು ಪದವಿ ಮುಗಿಸಿದ ಕೂಡಲೇ ವಿವಿಧ ಕಂಪನಿಗಳಲ್ಲಿ ಉದ್ಯೋಗ ಪಡೆದಿದ್ದಾರೆ' ಎಂದು ಐಎಡಿಸಿ ಸಮೂಹ ಸಂಸ್ಥೆಗಳ ಮುಖ್ಯಸ್ಥ ಟಿ.ಸೋಮಶೇಖರ್ ತಿಳಿಸಿದರು. ಐಎಡಿಸಿ ಸಮೂಹ ಸಂಸ್ಥೆಗಳ ಕಾರ್ಯದರ್ಶಿ ಟಿ.ಭಾರತಿ, ಕಾಲೇಜಿನ ಪ್ರಾಂಶುಪಾಲ ಶ್ರೀನಿಧಿ ಕೆ.ಪಾರ್ಥಸಾರಥಿ ಇದ್ದರು.

ಅಂಬರೀಷ್ ಪ್ರಶಸ್ತಿಯನ್ನು ಬಯಸಿದವರಲ್ಲ: ಸುಮಲತಾ

ಬೆಂಗಳೂರು: ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರಿಗೆ ರಾಜ್ಯ ಸರ್ಕಾರವು ಮರಣೋತ್ತರ 'ಕರ್ನಾಟಕ ರತ್ನ' ಪ್ರಶಸ್ತಿ ನೀಡಿದ ಬೆನ್ನಲ್ಲೇ, ನಟ ದಿವಂಗತ ಅಂಬರೀಷ್ ಅವರಿಗೂ ಈ ರೀತಿ ಗೌರವ ಸಿಗಬೇಕು ಎನ್ನುವ ಅಭಿಮಾನಿಗಳ ಬೇಡಿಕೆ ಸಾಮಾಜಿಕ ಜಾಲತಾಣಗಳಲ್ಲಿ ಕೇಳಿ ಬರುತ್ತಿದೆ. ಈ ಕುರಿತು ನಟಿ, ಸಂಸದೆ ಸುಮಲತಾ ಅಂಬರೀಷ್ ಪ್ರತಿಕ್ರಿಯೆ ನೀಡಿದ್ದು, 'ಅಂಬರೀಷ್ ಯಾವ ಪ್ರಶಸ್ತಿಯನ್ನೂ ಬಯಸಿದವರಲ್ಲ' ಎಂದಿದ್ದಾರೆ.

ಅಂಬರೀಷ್ ಅವರ ಮೂರನೇ ವರ್ಷದ ಪುಣ್ಯಸ್ಮರಣೆ ಸಮಯದಲ್ಲೇ ಅಭಿಮಾನಿಗಳು ಇಟ್ಟಿರುವ ಈ ಬೇಡಿಕೆ ಕುರಿತು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಸುದೀರ್ಘವಾದ ಪತ್ರ ಬರೆದಿರುವ ಸುಮಲತಾ, 'ಅಂಬರೀಷ್ ಅವರ ಅಭಿಮಾನಿ ಸಂಘಗಳು ಅಂಬರೀಷ್ ಅವರ ಸ್ಮಾರಕ ಅಭಿವೃದ್ಧಿಗೊಳಿಸುವುದು, ರಸ್ತೆಗಳಿಗೆ ನಾಮಕರಣ ಮಾಡುವುದು ಮತ್ತು ಇನ್ನಿತರ ಬೇಡಿಕೆಗಳನ್ನು ಒತ್ತಾಯಿಸಿ ಹೋರಾಟ ಮಾಡುವುದಾಗಿ ಹೇಳಿರುವುದು ಸಾಮಾಜಿಕ ಜಾಲತಾಣಗಳ ಮೂಲಕ ನನ್ನ ಗಮನಕ್ಕೆ ಬಂದಿದೆ. ನಮ್ಮ ಮನೆ ಮಗನಂತಿದ್ದ ಪುನೀತ್ ರಾಜಕುಮಾರ್ ಅವರನ್ನು ಕಳೆದುಕೊಂಡಿರುವ ಆಘಾತಕಾರಿ ಘಟನೆಯಿಂದ ನನಗಾಗಿರುವ ನೋವನ್ನು ಮಾತಿನಲ್ಲಿ ಹೇಳಲು ಸಾಧ್ಯವಿಲ್ಲ. ಆದ್ದರಿಂದ, ಈ ಸಮಯದಲ್ಲಿ ಈ ವಿಷಯ ಪ್ರಸ್ತಾಪಿಸುವುದು ಸಮಂಜಸವಲ್ಲ' ಎಂದಿದ್ದಾರೆ.



ಸುಮಲತಾ



ಅಂಬರೀಷ್

ನಾಳೆಯಿಂದ ರಾಷ್ಟ್ರೀಯ ಬೌದ್ಧ ಧಮ್ಮಾಧಿವೇಶನ

ಬೆಂಗಳೂರು: 'ಸಂವಿಧಾನ ದಿನದ ಅಂಗವಾಗಿ ವಿಶ್ವ ಬುದ್ಧ ಧಮ್ಮ ಸಂಘ ಹಾಗೂ ನಾಗಸೇನಾ ಬುದ್ಧ ವಿಹಾರದ ವತಿಯಿಂದ ರಾಷ್ಟ್ರೀಯ ಬೌದ್ಧ ಧಮ್ಮಾಧಿವೇಶನವನ್ನು ನ.25 ಮತ್ತು 26ರಂದು ಸದಾಶಿವನಗರದ ನಾಗಸೇನಾ ವಿದ್ಯಾಲಯದ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ' ಎಂದು ವಿಶ್ವ ಬುದ್ಧ ಧಮ್ಮ ಸಂಘದ ಅಧ್ಯಕ್ಷ ಎಂ.ವೆಂಕಟಸ್ವಾಮಿ ತಿಳಿಸಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '25ರಂದು ಬೆಳಿಗ್ಗೆ 11.30ಕ್ಕೆ ಸಮಾವೇಶವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ. ಅತಿಥಿಯಾಗಿ ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಭಾಗವಹಿಸಲಿದ್ದಾರೆ. ಬುದ್ಧವಿಹಾರದ ಧಮ್ಮಾಚಾರಿ ಎಚ್.ಆರ್.ಸುರೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ' ಎಂದರು.

'26ರಂದು ನಡೆಯಲಿರುವ ಸಂವಿಧಾನ ಪ್ರಸ್ತಾವನೆ ಪಠಣ ಮತ್ತು ಸಾಮೂಹಿಕ ಧಮ್ಮ ದೀಕ್ಷಾ ಸಮಾರಂಭದಲ್ಲಿ ದೆಹಲಿಯ ಸಮಾಜ ಕಲ್ಯಾಣ ಸಚಿವ ರಾಜೇಂದ್ರ ಪಾಲ್ ಗೌತಮ್, ಶಾಸಕರಾದ ಜಿ.ಪರಮೇಶ್ವರ, ಪ್ರಿಯಾಂಕ್ ಖರ್ಗೆ, ಎನ್.ಮಹೇಶ್, ಬಿಜೆಪಿ ಮುಖಂಡ ಛಲವಾದಿ ನಾರಾಯಣಸ್ವಾಮಿ ಭಾಗವಹಿಸಲಿದ್ದಾರೆ' ಎಂದು ಹೇಳಿದರು.

ನಿಧನ ವಾರ್ತೆ

ಟಿ. ವೆಂಕಟೇಶ ಮೂರ್ತಿ



ಬೆಂಗಳೂರು: 'ಸಮುದಾಯ' ಸಂಘಟನೆ ಮುಖಂಡರೂ ಆಗಿದ್ದ ನಿವೃತ್ತ ಉಪನ್ಯಾಸಕ ಟಿ. ವೆಂಕಟೇಶ ಮೂರ್ತಿ (70) ಅವರು ಮಂಗಳವಾರ ನಿಧನರಾದರು.

ಆಚಾರ್ಯ ಪಾಠ ಶಾಲಾ (ಎಪಿಎಸ್) ಕಾಲೇಜಿನಲ್ಲಿ ಉಪನ್ಯಾಸಕರಾಗಿ ವೃತ್ತಿ ಆರಂಭಿಸಿದ್ದ ಅವರು, ಅದೇ ಕಾಲೇಜಿನ ಪ್ರಾಂಶುಪಾಲರಾಗಿ ಕೆಲಸ ಮಾಡಿ ನಿವೃತ್ತರಾಗಿದ್ದರು.

ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿ ಹಾಗೂ ಅಧ್ಯಾಪಕರ ಸಂಘ ನಾಯಕರಾಗಿ ಹಲವು ಹೋರಾಟಗಳಲ್ಲಿ ಪಾಲ್ಗೊಂಡಿದ್ದರು. ಉಪನ್ಯಾಸಕ ವೃತ್ತಿ ಜೊತೆಯಲ್ಲೇ ಸಮುದಾಯ ಸಂಘಟನೆ ಸೇರಿದ್ದ ಅವರು, ಬೆಂಗಳೂರು ಹಾಗೂ ರಾಜ್ಯ ಘಟಕದ ಮುಖಂಡರಾಗಿ ಗುರುತಿಸಿಕೊಂಡಿದ್ದರು.

'ವೆಂಕಟೇಶ ಮೂರ್ತಿ ಆಸೆಯಂತೆ ಕಣ್ಣು ಹಾಗೂ ದೇಹವನ್ನು ಕಿಮ್ಸ್ ಆಸ್ಪತ್ರೆಗೆ ದಾನ ಮಾಡಲಾಗಿದೆ' ಎಂದು ಕುಟುಂಬದವರು ತಿಳಿಸಿದರು.

ಕಟ್ಟಡದಿಂದ ಜಿಗಿದು ವಿದ್ಯಾರ್ಥಿನಿ ಆತ್ಮಹತ್ಯೆ

ಬೆಂಗಳೂರು: ಕಾಟನ್‌ಪೇಟೆ ಠಾಣೆ ವ್ಯಾಪ್ತಿಯ ಬಹುಮಹಡಿ ಕಟ್ಟಡವೊಂದರ ಮೂರನೇ ಮಹಡಿಯಿಂದ ಜಿಗಿದು ಡಿಂಬಲ್‌ಕುಮಾರಿ (16) ಎಂಬಾಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

'ರಾಜಸ್ಥಾನದ ದೂದ್ ರಾಮ್ ಎಂಬುವವರ ಮಗಳಾಗಿದ್ದ ಡಿಂಬಲ್‌ಕುಮಾರಿ, ಎಸ್ಸೆಸ್ಸೆಲ್ಸಿ ಓದುತ್ತಿದ್ದಳು. ದೂದ್ ರಾಮ್ ಕಾಟನ್‌ಪೇಟೆಯಲ್ಲಿ ಎಲೆಕ್ಟ್ರಿಕ್ ಮಳಿಗೆ ಇಟ್ಟುಕೊಂಡಿದ್ದರು. ಪತ್ನಿ ಹಾಗೂ ಮಕ್ಕಳ ಜೊತೆ ಅಕ್ಕಿಪೇಟೆಯ ಬಹುಮಹಡಿ ಕಟ್ಟಡವೊಂದರ ಮೂರನೇ ಮಹಡಿಯ ಮನೆಯಲ್ಲಿ ವಾಸವಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಬಾಲಕಿಯು ಯುವಕನೊಬ್ಬನ ಜೊತೆ ಹೆಚ್ಚು ಮಾತನಾಡುತ್ತಿದ್ದ ಮಾಹಿತಿ ಇದೆ. ಈ ಸಂಗತಿಯನ್ನು ತಂದೆಯೇ ದೂರಿನಲ್ಲಿ ತಿಳಿಸಿದ್ದಾರೆ. ಯುವಕನನ್ನು ವಿಚಾರಣೆಗೆ ಒಳಪಡಿಸಿ, ಅವರಿಬ್ಬರ ನಡುವಿನ ಸಂಬಂಧವೇನು ಎಂಬುದನ್ನು ಪತ್ತೆ ಮಾಡಬೇಕಿದೆ' ಎಂದೂ ಹೇಳಿವೆ.

ದೂದ್ ರಾಮ್ ಸೋಮವಾರ ರಾತ್ರಿ 10.30ರ ಸುಮಾರಿಗೆ ಮನೆಗೆ ಬಂದಿದ್ದರು. ಅವರ ಜೊತೆ ಚೆನ್ನಾಗಿಯೇ ಮಾತನಾಡಿದ್ದ ಬಾಲಕಿ, ಊಟ ಸಹ ನೀಡಿದ್ದಳು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆರೋಪ ಸಾಬೀತಿಗೆ ದಾಖಲೆ ಸಲ್ಲಿಸದ ಸಿಸಿಬಿ

• ಅಕ್ರಂ ಮೊಹಮ್ಮದ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಪೋಕರ್ ಗೇಮಿಂಗ್ ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡಿದ್ದ ಆರೋಪದ ಮೇಲೆ ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ವಿರುದ್ಧ ಸ್ವಯಂಪ್ರೇರಿತವಾಗಿ ದಾಖಲಿಸಿದ್ದ ಪ್ರಕರಣದಲ್ಲಿ ಸಿಸಿಬಿ ಪೊಲೀಸರು, ಆರೋಪ ಸಾಬೀತುಪಡಿಸುವಂತಹ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರಲಿಲ್ಲ!

ಕಾಟನ್‌ಪೇಟೆ ಠಾಣೆಯಲ್ಲಿ ದಾಖಲಾಗಿದ್ದ ಅಪರಾಧ ಸಂಖ್ಯೆ 153/2020ರಲ್ಲಿ ಬಂಧಿತನಾಗಿದ್ದ ಶ್ರೀಕಿಗೆ ಜಾಮೀನು ಮಂಜೂರು ಒಂದನೇ ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಮಾಡಿ 2021ರ ಮಾರ್ಚ್ 9ರಂದು ಹೊರಡಿಸಿದ್ದ ಆದೇಶದಲ್ಲಿ ಈ ಅಂಶವನ್ನು ಉಲ್ಲೇಖಿಸಿದ್ದಾರೆ. 'ತಮ್ಮ ವೆಬ್‌ಸೈಟ್‌ಗಳನ್ನು ಆರೋಪಿಯು ಹ್ಯಾಕ್ ಮಾಡಿದ್ದಾನೆ ಎಂದು ಯಾವುದೇ ವ್ಯಕ್ತಿ ಅಥವಾ ಕಂಪನಿ ದೂರು ಸಲ್ಲಿಸಿರಲಿಲ್ಲ. ಶ್ರೀಕೃಷ್ಣ ಹ್ಯಾಕ್ ಮಾಡಿದ್ದಾನೆ ಎನ್ನಲಾದ ವೆಬ್‌ಸೈಟ್‌ಗಳ ವಿವರವನ್ನು ಪೊಲೀಸರೂ ಒದಗಿಸಿಲ್ಲ' ಎಂದು ನ್ಯಾಯಾಧೀಶರು ಹೇಳಿದ್ದಾರೆ.

ಪೋಕರ್ ದಂಗಲ್, ಸ್ಪರ್ಟನ್ ಪೋಕರ್ ಮತ್ತು ಪೋಕರ್ ಸೇಂಟ್ ಎಂಬ ಪೋಕರ್ ಗೇಮಿಂಗ್ ವೆಬ್‌ಸೈಟ್‌ಗಳನ್ನು, ಯೂನಿಕಾಯಿನ್ ಎಂಬ ಕ್ರಿಪ್ಟೋಕರೆನ್ಸಿ ಎಕ್ಸ್‌ಚೇಂಜ್ ಹಾಗೂ ಇತರ ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡಿದ್ದ ಎಂಬ ಆರೋಪ ಶ್ರೀಕಿ ಮೇಲಿದೆ. ವೆಬ್‌ಸೈಟ್ ಮತ್ತು ಸರ್ವರ್‌ಗಳನ್ನು ಹ್ಯಾಕ್ ಮಾಡಿ, ಸುಲಿಗೆ ಮಾಡಿರುವ ದೂರುಗಳೂ ಇವೆ.

ಸಿಸಿಬಿಯ ಸೈಬರ್ ವಿಭಾಗದ ಪೊಲೀಸರು ಶ್ರೀಕಿ ವಿರುದ್ಧದ ಪ್ರಕರಣದಲ್ಲಿ 2021 ರ ಫೆಬ್ರುವರಿ 22ರಂದು ನ್ಯಾಯಾಲಯಕ್ಕೆ ಆರೋಪಪಟ್ಟಿಗಳನ್ನು ಸಲ್ಲಿಸಿದ್ದರು. ಅದರಲ್ಲಿ ಪೆಸಿಫಿಕ್ ಗೇಮಿಂಗ್ ಲಿಮಿಟೆಡ್ ಕಂಪನಿಗೆ ಸೇರಿದ ಪೋಕರ್ ವೆಬ್‌ಸೈಟ್‌ಗಳ ಹ್ಯಾಕಿಂಗ್ ಆರೋಪಕ್ಕೆ ಸಂಬಂಧಿಸಿದ ಪ್ರಕರಣವೂ ಒಂದಾಗಿತ್ತು. ಈ ಪ್ರಕರಣದಲ್ಲಿ ಶ್ರೀಕಿ ಮತ್ತು ಆತನ ನಿಕಟವರ್ತಿ ರಾಬಿನ್ ಖಂಡೇಲ್‌ವಾಲಾ ಎಂಬಾತನ ಕಂಪ್ಯೂಟರ್, ಇತರ ಸಾಧನಗಳನ್ನು ವಿಧಿವಿಜ್ಞಾನ ತಜ್ಞರು ವಿಶ್ಲೇಷಣೆ ನಡೆಸಿದ್ದರು. ಅವುಗಳಲ್ಲಿ 10 ಕ್ಕೂ ಹೆಚ್ಚು ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡಿ ಸಂಗ್ರಹಿಸಿದ್ದ ಮಾಹಿತಿ ಪತ್ತೆಯಾಗಿತ್ತು ಎಂಬ ಅಂಶ ಆರೋಪಪಟ್ಟಿಯಲ್ಲಿತ್ತು.

ಈ ಪ್ರಕರಣದಲ್ಲಿ ಮಾರ್ಚ್ 9ರಂದು ಶ್ರೀಕಿಗೆ ನ್ಯಾಯಾಲಯ ಜಾಮೀನು ಮಂಜೂರು ಮಾಡಿತ್ತು. ಏಪ್ರಿಲ್ 7ರಂದು ಎಲ್ಲ ಪ್ರಕರಣಗಳಲ್ಲೂ ಆತನಿಗೆ ಜಾಮೀನು ದೊರಕಿತ್ತು. ಏ.17ರಂದು ಜೈಲಿನಿಂದ ಬಿಡುಗಡೆಯಾಗಿದ್ದ.

ಕಾರಿನ ಮೇಲೆ ಮೂತ್ರ ಮಾಡಿದ ಶ್ವಾನ; ಮಾಲೀಕನ ಮೇಲೆ ಹಲ್ಲೆ

ಬೆಂಗಳೂರು: ಕಾರಿನ ಮೇಲೆ ಶ್ವಾನ ಮೂತ್ರ ಮಾಡಿತೆಂಬ ಕಾರಣಕ್ಕೆ ಅದರ ಮಾಲೀಕನ ಮೇಲೆ ಕಲ್ಲಿನಿಂದ ಹಲ್ಲೆ ಮಾಡಲಾಗಿದ್ದು, ಈ ಸಂಬಂಧ ಬಾಣಸವಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಭಾನುವಾರ ರಾತ್ರಿ ನಡೆದಿರುವ ಘಟನೆ ಬಗ್ಗೆ ಗಾಯಾಳು ಗೇರಿ ರೊಜಾರಿಯೊ ಎಂಬುವವರು ದೂರು ನೀಡಿದ್ದಾರೆ. ಕಾರಿನ ಮಾಲೀಕ ಚಾರ್ಲ್ಸ್ ಎಂಬುವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಎಚ್‌ಎಎಲ್ ನಿವೃತ್ತ ಉದ್ಯೋಗಿ ಗೇರಿ, ತಮ್ಮ ಶ್ವಾನದ ಜೊತೆ ವಾಯುವಿಹಾರ ಮಾಡುತ್ತಿದ್ದರು. ರಸ್ತೆ ಪಕ್ಕದಲ್ಲಿ ನಿಲ್ಲಿಸಿದ್ದ ಕಾರಿನ ಮೇಲೆ ಶ್ವಾನ ಮೂತ್ರ ವಿಸರ್ಜನೆ ಮಾಡಿತ್ತು. ಅದನ್ನು ನೋಡಿದ್ದ ಕಾರಿನ ಮಾಲೀಕ ಚಾರ್ಲ್ಸ್, ಈ ಬಗ್ಗೆ ಪ್ರಶ್ನಿಸಿದ್ದರು. ಗೇರಿ ಅವರನ್ನೂ ತರಾಟೆಗೆ ತೆಗೆದುಕೊಂಡಿದ್ದರು. ಅದೇ ವಿಚಾರವಾಗಿ ಮಾತಿನ ಚಕಮಕಿ ನಡೆದು, ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು.'

'ಕೋಪಗೊಂಡಿದ್ದ ಚಾರ್ಲ್ಸ್, ಗೇರಿ ಅವರಿಗೆ ಕಲ್ಲಿನಿಂದ ಹೊಡೆದಿದ್ದರು. ತೀವ್ರ ಗಾಯಗೊಂಡ ಗೇರಿ, ಸ್ಥಳದಲ್ಲೇ ಕುಸಿದು ಬಿದ್ದಿದ್ದರು. ನಂತರ ಸ್ಥಳೀಯರ ನೆರವಿನಿಂದ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಆರೋಪಿ ತಲೆಮರೆಸಿಕೊಂಡಿದ್ದಾರೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.



ಕನಿಷ್ಠ ವೇತನ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಭಾರತೀಯ ಔಷಧ ಮತ್ತು ಮಾರಾಟ ಪ್ರತಿನಿಧಿಗಳ ಸಂಘಗಳ ಒಕ್ಕೂಟದ (ಎಫ್‌ಎಂಆರ್‌ಎಐ) ಸದಸ್ಯರು ಜಯನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು–ಪ್ರಜಾವಾಣಿ ಚಿತ್ರ

ಪೋಷಕರ ವಿರುದ್ಧ ಏಕ ವಚನ ನಿಂದನೆ: ಡಿ.ಸಿ ವಿರುದ್ಧ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐ ಯಾಮ್ ಡೆಪ್ಯುಟಿ ಕಮಿಷನರ್ ಸ್ಪೀಕಿಂಗ್, ನಿಂಗೆ ಫೀಸ್ ಕಟ್ಟೋಕೆ ಆಗಲ್ವಾ, ಸರ್ಕಾರಿ ಸ್ಕೂಲ್ ಆಪ್ಷನ್ ಇತ್ತಲ್ಲ, ಸೇರಿಸಬೇಕಾಗಿತ್ತು, ಸುಮ್ನೆ ಬಂದು ನಮ್ ಟೈಮ್ ವೇಸ್ಟ್ ಮಾಡ್ತೀರಾ...'

ಹೀಗೆಂದು ಪೋಷಕರ ವಿರುದ್ಧ ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಹರಿಹಾಯ್ದಿದ್ದಾರೆ ಎಂದು ಆರೋಪಿಸಿ ಪೋಷಕರು ಮುಖ್ಯಮಂತ್ರಿಗೆ ದೂರು ಸಲ್ಲಿಸಿದ್ದಾರೆ.

ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿ ವಿರುದ್ಧ ಶಿಸ್ತು ಕ್ರಮಕ್ಕೆ ಆಗ್ರಹಿಸಿ ಕರ್ನಾಟಕ ರಾಜ್ಯ ಖಾಸಗಿ ಶಾಲಾ ಪೋಷಕರ ಸಂಘಟನೆಗಳ ಸಮನ್ವಯ ವೇದಿಕೆಯು ದೂರು ನೀಡಿದೆ.

'ಹೆಚ್ಚುವರಿ ಶುಲ್ಕ ಪಡೆಯುತ್ತಿರುವ ಬಗ್ಗೆ ದಾಖಲಾಗಿದ್ದ ದೂರುಗಳನ್ನು ಪರಿಶೀಲಿಸಲು ಆ.5ರಂದು ಜಿಲ್ಲಾಧಿಕಾರಿ ಸಭೆ ನಡೆಸಿದ್ದರು. ದೂರು ಸಲ್ಲಿಸಿದ್ದ ಪೋಷಕರ ವಿರುದ್ಧ ಜಿಲ್ಲಾಕಾರಿ ಧಮಕಿ ಹಾಕಿದ್ದಾರೆ. ಯಾವ ಡಿಪಾರ್ಟ್‌ಮೆಂಟ್ ನಿಂದು, ನಿಂಗೆ ಬಿಟ್ಟಿ ಎಜುಕೇಷನ್ ಬೇಕಾ, ಫೀಸ್ ಕಟ್ಟೋಕೆ ಆಗಲ್ವಾ, ನಿಂಗೆ ಸಂಬಳ ಕೊಡೋದು ಯಾಕೆ, ಸಂಬಳ ಕಟ್ ಮಾಡಿಸ್ತೀನಿ, ಡಾಕ್ಟರ್ ಅಂತೀಯ ಎಷ್ಟು ಸಂಬಳ, ನಿನ್ನ ಮೇಲೆ ಯಾಕೆ ಕ್ರಮ ತೆಗೆದುಕೊಳ್ಳಬಾರದು ಎಂದೆಲ್ಲಾ ಏಕ ವಚನದಲ್ಲೇ ನಿಂದಿಸಿದ್ದಾರೆ' ಎಂದು ವೇದಿಕೆ ದೂರಿನಲ್ಲಿ ಉಲ್ಲೇಖಿಸಿದೆ.

'ಸಿಸಿಟಿವಿ ಕ್ಯಾಮರಾದಲ್ಲಿ ಎಲ್ಲವೂ ಸೆರೆಯಾಗಿದ್ದು, ಪರಿಶೀಲನೆ ನಡೆಸಿ ಪೋಷಕರನ್ನು ನಿಂದಿಸಿ ಬೆದರಿಕೆ ಹಾಕಿರುವ ಜಿಲ್ಲಾಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಸಂಘಟನೆ ಒತ್ತಾಯಿಸಿದೆ. ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೂ ಪೋಷಕರು ದೂರು ಸಲ್ಲಿಸಿದ್ದಾರೆ.

'ಪ್ರತಿನಿತ್ಯ ನೂರಾರು ಜನ ಸಂಪರ್ಕ ಮಾಡುತ್ತಾರೆ. ಯಾವ ಹಂತದಲ್ಲೂ ಯಾರಿಗೂ ಅವಮಾನವಾಗುವಂತೆ ವರ್ತಿಸಿಲ್ಲ. ಶಾಲೆಗಳಲ್ಲಿ ಶುಲ್ಕ ಹೆಚ್ಚಳ ಆಗಿದ್ದರೆ ಪರಿಶೀಲಿಸುತ್ತೇವೆ. ಎರಡು ವರ್ಷದಿಂದ ಶುಲ್ಕವನ್ನೇ ಪಾವತಿಸದ ಪೋಷಕರಿಗೆ ಬಾಕಿ ಶುಲ್ಕ ಪಾವತಿಸಿ ಬನ್ನಿ ಎಂದಷ್ಟೇ ಹೇಳಿದ್ದೇನೆ. ಯಾವ ಪೋಷಕರನ್ನೂ ನಿಂದಿಸಿಲ್ಲ' ಎಂದು ಜಿಲ್ಲಾಧಿಕಾರಿ ಜೆ. ಮಂಜುನಾಥ್ ಪ್ರತಿಕ್ರಿಯಿಸಿದರು.

ಕೇಂದ್ರ ಕಚೇರಿ ಸೇರಿ ಐದು ಕಡೆ ಎಸಿಬಿ ಅಧಿಕಾರಿಗಳಿಂದ ಶೋಧ

ಬಿಡಿಎ: ಮತ್ತಷ್ಟು ಅಕ್ರಮಗಳು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಕೇಂದ್ರ ಕಚೇರಿ ಮತ್ತು ನಾಲ್ಕು ವಿಭಾಗ ಕಚೇರಿಗಳಲ್ಲಿ ಮೂರನೇ ದಿನವೂ ಶೋಧ ನಡೆಸಿದ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಅಧಿಕಾರಿಗಳು, ಮತ್ತಷ್ಟು ಅಕ್ರಮಗಳನ್ನು ಪತ್ತೆ ಮಾಡಿದ್ದಾರೆ.

ಶುಕ್ರವಾರ ಮತ್ತು ಶನಿವಾರ ಬಿಡಿಎ ಕೇಂದ್ರ ಕಚೇರಿಯಲ್ಲಿ ಎಸಿಬಿ ಅಧಿಕಾರಿಗಳು ಶೋಧ ನಡೆಸಿದ್ದರು. ಮಂಗಳವಾರ ಬೆಳಿಗ್ಗೆ ಪುನಃ ಬಿಡಿಎ ಕೇಂದ್ರ ಕಚೇರಿ ಮತ್ತು ಆರ್‌.ಟಿ.ನಗರ, ವಿಜಯನಗರ, ಎಚ್‌.ಎಸ್‌.ಆರ್‌. ಬಡಾವಣೆ ಹಾಗೂ ಬನಶಂಕರಿಯಲ್ಲಿರುವ ಪ್ರಾಧಿಕಾರದ ವಿಭಾಗ ಕಚೇರಿ ಮೇಲೆ ದಾಳಿಮಾಡಿ, ಶೋಧ ನಡೆಸಿದರು.

ನಕಲಿ ದಾಖಲೆಗಳನ್ನು ಸೃಷ್ಟಿಸಿ ಅನರ್ಹ ವ್ಯಕ್ತಿಗಳಿಗೆ ಪರಿಹಾರ ಪಾವತಿಸಿರುವುದು, ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯಲ್ಲಿ ಭಾರತ್ ಗೃಹ ನಿರ್ಮಾಣ ಸಹಕಾರ ಸಂಘದ ಬಡಾವಣೆಯಲ್ಲಿ ನಾಗರಿಕ ಮೂಲಸೌಕರ್ಯಕ್ಕೆ ಮೀಸಲಾದ (ಸಿ.ಎ) ನಿವೇಶನಗಳ ದುರ್ಬಳಕೆಗೆ ಅವಕಾಶ ನೀಡಿರುವುದು, ಎಚ್‌.ಎಸ್‌.ಆರ್‌. ಬಡಾವಣೆ ಮೂರನೇ ಸೆಕ್ಟರ್, ಮಹಾಲಕ್ಷ್ಮಿ ಬಡಾವಣೆಗಳಲ್ಲಿ ಸಿ.ಎ ನಿವೇಶನಗಳ ಬಳಕೆಯಲ್ಲಿ ಷರತ್ತು ಉಲ್ಲಂಘನೆಯಾಗಿದ್ದರೂ ಕ್ರಮ ಕೈಗೊಳ್ಳದಿರುವುದು ಪತ್ತೆಯಾಗಿದೆ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಕೆಲವು ಫಲಾನುಭವಿಗಳಿಗೆ ಹಂಚಿಕೆಯಾದ ಬಡಾವಣೆಯಲ್ಲಿ ನಿವೇಶನ ವಿತರಿಸದೇ ಇರುವುದು, ಹಳೆಯ ಬಡಾವಣೆಗಳಲ್ಲಿ ದೊಡ್ಡ ನಿವೇಶನಗಳಲ್ಲಿ ಹಂಚಿಕೆ ಮಾಡದೇ ಖಾಲಿ ಉಳಿಸಿಕೊಂಡಿದ್ದು, ಅಕ್ರಮವಾಗಿ ಶೆಡ್‌ಗಳ ನಿರ್ಮಾಣಕ್ಕೆ ಅವಕಾಶ ನೀಡಿರುವುದು ಕಂಡುಬಂದಿದೆ. ಮೂಲೆ ನಿವೇಶನಗಳನ್ನು ಹರಾಜಿನ ಮೂಲಕ ವಿಲೇವಾರಿ ಮಾಡದೆ ಅಕ್ರಮ ಎಸಗಿರುವುದಕ್ಕೆ ಸಂಬಂಧಿಸಿದ ಕಡತಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಎಸಿಬಿ ಮಾಹಿತಿ ನೀಡಿದೆ.

ಬಡಾವಣೆಗಳ ನಿರ್ಮಾಣಕ್ಕೆ ಜಮೀನು ನೀಡದ ವ್ಯಕ್ತಿಗಳಿಗೆ ರೈತರ ಹೆಸರಿನಲ್ಲಿ ಪರಿಹಾರ ಪಾವತಿಸಿರುವುದು, ಜಮೀನುಗಳ ಮಾಲೀಕರ ಹೆಸರಿನಲ್ಲಿ ಅನ್ಯ ವ್ಯಕ್ತಿಗಳಿಗೆ ಪರಿಹಾರ ರೂಪದಲ್ಲಿ ನಿವೇಶನ ಹಂಚಿಕೆ ಮಾಡಿರುವುದನ್ನು ತನಿಖಾ ತಂಡ ಪತ್ತೆಮಾಡಿದೆ. ಪ್ರಾಧಿಕಾರದ ವಿಭಾಗ ಕಚೇರಿಗಳಲ್ಲಿ ಕಡತಗಳ ಸಂಖ್ಯೆಯ ಆಧಾರದಲ್ಲಿ ಖಚಿತ ಅಳತೆಯ ದಾಖಲೆಯನ್ನು ನಿರ್ವಹಣೆ ಮಾಡದಿರುವುದನ್ನೂ ಗುರುತಿಸಲಾಗಿದೆ. ಈ ಸಂಬಂಧ ತನಿಖೆ ಮುಂದುವರಿದಿದೆ ಎಂದು ತನಿಖಾಧಿಕಾರಿಗಳು ಹೇಳಿದ್ದಾರೆ.

ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕೆ ನಡೆದ ಭೂಸ್ವಾಧೀನ ಪ್ರಕ್ರಿಯೆಯಲ್ಲೂ ಅಕ್ರಮ ಎಸಗಿರುವುದನ್ನು ತನಿಖಾ ತಂಡ ಪತ್ತೆ ಮಾಡಿದೆ. ಜಮೀನು ನೀಡಿದ ವ್ಯಕ್ತಿಯ ಬದಲಿಗೆ ಮೂರನೇ ವ್ಯಕ್ತಿಗೆ ಪರಿಹಾರದ ಮೊತ್ತವನ್ನು ಪಾವತಿಸಿರುವ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ.

ದೂರುಗಳ ಸುರಿಮಳೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿನ ಅಕ್ರಮ, ದುರಾಡಳಿತ, ಭ್ರಷ್ಟಾಚಾರದ ಕುರಿತು ಭ್ರಷ್ಟಾಚಾರ ನಿಗ್ರಹ ದಳದ ಕಚೇರಿಗೆ ಮೂರು ದಿನಗಳಲ್ಲಿ 40ಕ್ಕೂ ಹೆಚ್ಚು ದೂರುಗಳು ಬಂದಿವೆ. ಸಾರ್ವಜನಿಕರ ದೂರುಗಳನ್ನು ಆಧರಿಸಿ ಕಾರ್ಯಾಚರಣೆ ಮುಂದುವರಿದಿದೆ ಎಂದು ಎಸಿಬಿ ಮೂಲಗಳು ತಿಳಿಸಿವೆ.

ಆನ್‌ಲೈನ್ ಜೂಜು ನಿಷೇಧ: ಸರ್ಕಾರದ ನಿಲುವು ಸಮರ್ಥನೆ

ಬೆಂಗಳೂರು: 'ಆನ್‌ಲೈನ್ ಆಟಗಳ ಜೂಜಿನಿಂದ ಎಷ್ಟೋ ಕುಟುಂಬಗಳ ನೆಮ್ಮದಿ ಹಾಳಾಗುತ್ತಿದೆ ಎಂಬ ಕಾರಣಕ್ಕಾಗಿಯೇ ರಾಜ್ಯ ಸರ್ಕಾರ ಆನ್‌ಲೈನ್ ಆಟಗಳನ್ನು ನಿಷೇಧಿಸುವ ನಿರ್ಧಾರ ಕೈಗೊಂಡಿದೆ' ಎಂದು ಅಡ್ವೊಕೇಟ್ ಜನರಲ್ ಅವರು ಹೈಕೋರ್ಟ್‌ಗೆ ತಿಳಿಸಿದರು.

ಸರ್ಕಾರದ ನಿರ್ಧಾರ ಪ್ರಶ್ನಿಸಿ, 'ಆಲ್ ಇಂಡಿಯಾ ಗೇಮಿಂಗ್ ಫೆಡರೇಷನ್' ಮತ್ತಿತರ ಕಂಪನಿಗಳು ಸಲ್ಲಿಸಿರುವ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಸುದೀರ್ಘ ವಾದ ಮಂಡನೆಯಲ್ಲಿ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ ಅವರು, 'ಆನ್‌ಲೈನ್ ಆಟಗಳನ್ನು ನಿರ್ಬಂಧಿಸುವುದೇ ಕರ್ನಾಟಕ ಪೊಲೀಸ್ ಕಾಯಿದೆ ತಿದ್ದುಪಡಿಯ ಉದ್ದೇಶವಾಗಿದೆ' ಎಂದು ಸರ್ಕಾರದ ನಿಲುವನ್ನು ಸಮರ್ಥಿಸಿಕೊಂಡರು.

ಭಾರತ ಮತ್ತು ಪಾಕಿಸ್ತಾನ ನಡುವಿನ ಕ್ರಿಕೆಟ್ ಪಂದ್ಯದ ಉದಾಹರಣೆ ನೀಡಿದ ಅವರು, 'ಇದು ಕೌಶಲದ ಕ್ರೀಡೆ. ಆದರೆ, ಗೊತ್ತಿಲ್ಲದ ಫಲಿತಾಂಶಕ್ಕೆ ನಾವು ಬೇರೆಯವರಿಂದ ಹಣ ಸಂಗ್ರಹ ಮಾಡಿದರೆ ಅಥವಾ ಬೆಟ್ ಕಟ್ಟಿಸಿಕೊಂಡರೆ ಅದು ಅಪರಾಧವಾಗುತ್ತದೆ. ಆನ್‌ಲೈನ್ ಆಟಗಳ ಮೂಲಕ ಬೆಟ್ಟಿಂಗ್ ನಡೆಸಿದರೆ ಅದು ಶಿಕ್ಷಾರ್ಹವಾಗುತ್ತದೆ' ಎಂದು ವಿವರಿಸಿದರು. ವಿಚಾರಣೆಯನ್ನು ಇದೇ 30ಕ್ಕೆ ಮುಂದೂಡಲಾಗಿದೆ.

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	25.86 ಕೋಟಿ ▲	3.45 ಕೋಟಿ
ಸಕ್ರಿಯ ಪ್ರಕರಣ	1.94 ಕೋಟಿ ▼	1.13 ಲಕ್ಷ ▼
ಗುಣಮುಖ	23.41 ಕೋಟಿ ▲	3.39 ಕೋಟಿ
ಸಾವು	51.79 ಲಕ್ಷ ▲	4.66 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.67 ಲಕ್ಷ ▲	7,579 ▲
ಗುಣಮುಖ	4.37 ಲಕ್ಷ ▲	12,202 ▲
ಸಾವು	5,887 ▲	236 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 74,156 ▲ ಅಮೆರಿಕ; 44,917 ▲ ಬ್ರಿಟನ್; 40,489 ▲ ಜರ್ಮನಿ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 99.40 ▲ ಅಮೆರಿಕ; 10.47 ▲ ರಷ್ಯಾ; 9.94 ▲ ಬ್ರಿಟನ್

ಎಲ್ಲಿ ಹೆಚ್ಚು ಸಾವು (ಒಟ್ಟು): 1.40 ಲಕ್ಷ ಮಹಾರಾಷ್ಟ್ರ; 36,388 ▲ ತಮಿಳುನಾಡು; 37,675 ▲ ಕೇರಳ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 66.30 ಮಹಾರಾಷ್ಟ್ರ ▲; 51.04 ಕೇರಳ ▲; 27.21 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯದ ಕೋವಿಡ್ ಅಂಕಿ–ಅಂಶ

29,94,001 ಒಟ್ಟು ಪ್ರಕರಣಗಳು ▲ (29,93,777 ನಿನ್ನೆಯ ವಿವರ)

6,707 ಸಕ್ರಿಯ ಪ್ರಕರಣಗಳು ▼

29,49,083 ಗುಣಮುಖರಾದವರು ▲

38,182 ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	224	▼
ಗುಣಮುಖ	379	▲
ಸಾವು	05	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,55,288 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
5,430 ▼	12,33,532 ▲	16,325 ▲

ದಿನದ ಏರಿಕೆ

ಹೊಸ ಪ್ರಕರಣ	122 ▼
ಗುಣಮುಖ	300 ▲
ಸಾವು	01

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಪರಸ್ಪರ ಅಂತರ ಕಾಯ್ದುಕೊಳ್ಳಿ

ಅಪರಾಧ ಸುದ್ದಿ

ನಕಲಿ ಛಾಪಾ ಕಾಗದ ಖರೀದಿ: ಐವರು ವಶಕ್ಕೆ

ಬೆಂಗಳೂರು: ನಗರದಲ್ಲಿ ಸಕ್ರಿಯವಾಗಿದ್ದ ನಕಲಿ ಛಾಪಾ ಕಾಗದ ಮಾರಾಟ ಜಾಲವನ್ನು ಇತ್ತೀಚೆಗಷ್ಟೇ ಭೇದಿಸಿದ್ದ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು, ಕಾಗದ ಖರೀದಿಸಿದ್ದ ವಿಧಾನಸೌಧದ ಸಿಬ್ಬಂದಿ ಸೇರಿ ಐವರನ್ನು ಮಂಗಳವಾರ ವಶಕ್ಕೆ ಪಡೆದಿದ್ದಾರೆ.

ನಕಲಿ ಛಾಪಾ ಕಾಗದ ಹಾಗೂ ಫ್ರಾಂಕಿಂಗ್ ಮಾಡದಿರುವ ಛಾಪಾ ಕಾಗದಗಳನ್ನು ನಗರದ ಹಲವೆಡೆ ಮಾರಲಾಗುತ್ತಿತ್ತು. ಅದೇ ಕಾಗದಗಳನ್ನು ಖರೀದಿಸುತ್ತಿದ್ದ ಹಲವರು, ಆಸ್ತಿ ಕಬಳಿಸಲು ಉಪಯೋಗಿಸುತ್ತಿದ್ದರು. ಅರ್ಜಿಯೊಂದರ ವಿಚಾರಣೆ ವೇಳೆ ಅಕ್ರಮ ಪತ್ತೆ ಹಚ್ಚಿದ್ದ ಹೈಕೋರ್ಟ್, ಪ್ರಕರಣ ದಾಖಲಿಸಿಕೊಂಡು ಜಾಲ ಭೇದಿಸಲು ಪೊಲೀಸರಿಗೆ ಆದೇಶಿಸಿತ್ತು.

ಸ್ನೇಹಿತನ ಕೊಂದು, ಹಳಿ ಮೇಲೆ ಮೃತದೇಹ ಎಸೆದರು

ಬೆಂಗಳೂರು: ಸ್ನೇಹಿತನನ್ನೇ ಕೊಂದು, ಮೃತದೇಹವನ್ನು ರೈಲು ಹಳಿ ಮೇಲೆ ಎಸೆದು ಆತ್ಮಹತ್ಯೆ ಎಂಬುದಾಗಿ ಬಿಂಬಿಸಿ ಪರಾರಿಯಾಗಿದ್ದ ಬಾಲಕರು ಸೇರಿ ನಾಲ್ವರನ್ನು ಬೈಯಪ್ಪನಹಳ್ಳಿ ರೈಲ್ವೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಮೊಹಮ್ಮದ್ ಸಾದಿಕ್ (21) ಬಂಧಿತ. ಉಳಿದ ಮೂವರು ಬಾಲಕರಾಗಿದ್ದು, ಅವರನ್ನು ಬಾಲನ್ಯಾಯ ಮಂಡಳಿ ಸುಪರ್ದಿಗೆ ನೀಡಲಾಗಿದೆ. ಇವರೆಲ್ಲರೂ ಸೇರಿಕೊಂಡು, ಕೆ.ಜಿ. ಹಳ್ಳಿ ನಿವಾಸಿ ಸುನೀಲ್ (26) ಎಂಬುವರನ್ನು ಕೊಲೆ ಮಾಡಿದ್ದರು' ಎಂದು ರೈಲ್ವೆ ಪೊಲೀಸ್ ಮೂಲಗಳು ಹೇಳಿವೆ.

ಜಾಮೀನಿನ ಮೇಲೆ ಹೊರಬಂದು ಕಳ್ಳತನ

ಬೆಂಗಳೂರು: ಅಪರಾಧ ಪ್ರಕರಣವೊಂದರಲ್ಲಿ ಜೈಲಿಗೆ ಹೋಗಿ ಜಾಮೀನು ಮೇಲೆ ಹೊರಬಂದು ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಆರೋಪದಡಿ ಸೈಯದ್ ಅಹಮ್ಮದ್ (38) ಎಂಬಾತನನ್ನು ಜ್ಞಾನಭಾರತಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ನಿವಾಸಿ ಸೈಯದ್, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ. ಆತನಿಂದ ಸದ್ಯ ₹ 20 ಲಕ್ಷ ಮೌಲ್ಯದ 407 ಗ್ರಾಂ ತೂಕದ ಚಿನ್ನಾಭರಣ ಹಾಗೂ 2 ಕೆ.ಜಿ 500 ಗ್ರಾಂ ಬೆಳ್ಳಿ ಸಾಮಗ್ರಿಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಜ್ಞಾನಭಾರತಿ ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರ ಮನೆಯಿಂದ ಕಳವು ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಿದ ವೇಳೆ ಈ ಮಾಹಿತಿ ಬಹಿರಂಗವಾಗಿದೆ.

ದ್ವಿಚಕ್ರ ವಾಹನ ಕದ್ದು, ವ್ಹೀಲಿಂಗ್

ಬೆಂಗಳೂರು: ದ್ವಿಚಕ್ರ ವಾಹನಗಳನ್ನು ಕದ್ದು ಕೆಲದಿನ ವ್ಹೀಲಿಂಗ್ ಮಾಡಿ, ಅವುಗಳ ರೂಪ ಬದಲಿಸಿ ಮಾರುತ್ತಿದ್ದ ಆರೋಪದಡಿ ಇಬ್ಬರನ್ನು ಚಂದ್ರಾಲೇಔಟ್ ಪೊಲೀಸರು ಬಂಧಿಸಿದ್ದಾರೆ.

'ನವಾಜ್ ಪಾಷಾ ಹಾಗೂ ರಿಜ್ವಾನ್ ಪಾಷಾ ಬಂಧಿತರು. ಅವರಿಂದ ₹ 5.69 ಲಕ್ಷ ಮೌಲ್ಯದ 9 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರ ದ್ವಿಚಕ್ರ ವಾಹನ ಮೇ 5ರಂದು ಕಳ್ಳತನವಾಗಿತ್ತು. ಈ ಬಗ್ಗೆ ಪ್ರಕರಣ ಸಹ ದಾಖಲಾಗಿತ್ತು.

ಅರ್ಜಿ ವಜಾಗೊಳಿಸಿದ ಬೆಂಗಳೂರು ಗ್ರಾಹಕರ ನ್ಯಾಯಾಲಯ

'ಅಪಘಾತ ವಿಮಾ ಪರಿಹಾರ ಸಾಧ್ಯವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೆಕೆಂಡ್ ಹ್ಯಾಂಡ್ ಬೈಕ್ ಖರೀದಿಸಿದ್ದ ವ್ಯಕ್ತಿ ವಿಮೆ ವರ್ಗಾವಣೆ ಆಗುವ ಮುನ್ನವೇ ರಸ್ತೆ ಅಪಘಾತದಲ್ಲಿ ಮೃತಪಟ್ಟ ಪ್ರಕರಣವೊಂದರಲ್ಲಿ ಮೃತನ ಕುಟುಂಬದ ಸದಸ್ಯರಿಗೆ ವಿಮಾ ಪರಿಹಾರ ನೀಡಲು ಸಾಧ್ಯವಿಲ್ಲ' ಎಂದು ಬೆಂಗಳೂರಿನ ಗ್ರಾಹಕರ ನ್ಯಾಯಾಲಯ ಹೇಳಿದೆ.

ಈ ಕುರಿತಂತೆ ಮೃತ ಬೈಕ್ ಮಾಲಿಕನ ಪತ್ನಿ ಹಾಗೂ ಪುತ್ರ ವಿಮಾ ಸಂಸ್ಥೆಯ ವಿರುದ್ಧ ದಾಖಲಿಸಿದ್ದ ಅರ್ಜಿಯನ್ನು ಬೆಂಗಳೂರು ನಗರ 2ನೇ ಹೆಚ್ಚುವರಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ನ್ಯಾಯಾಲಯ ವಜಾಗೊಳಿಸಿದೆ.

'ಮೃತ ವ್ಯಕ್ತಿ ಅರುಣ್ ಮತ್ತು ನ್ಯಾಷನಲ್ ಇನ್ಶ್ಯೂರೆನ್ಸ್ ಕಂಪನಿ ನಡುವೆ ಯಾವುದೇ ಒಪ್ಪಂದವಿರಲಿಲ್ಲ. ಮೇಲಾಗಿ, ಸಂತ್ರಸ್ತರು ಸಂಸ್ಥೆಗೆ ಯಾವುದೇ ಪ್ರೀಮಿಯಂ ಪಾವತಿಸಿರಲಿಲ್ಲ. ಆದ್ದರಿಂದ, ಅರ್ಜಿದಾರರನ್ನು ಇಲ್ಲಿ ಗ್ರಾಹಕರು ಎಂದು ಪರಿಗಣಿಸಲು ಬರುವುದಿಲ್ಲ' ಎಂದು 2021ರ ಅಕ್ಟೋಬರ್ 21 ರಂದು ನೀಡಲಾಗಿರುವ ತೀರ್ಪಿನಲ್ಲಿ ತಿಳಿಸಲಾಗಿದೆ.

'ಅಪಘಾತ ನಡೆದ ಸಮಯದಲ್ಲಿ ವಾಹನದ ವಿಮೆ ಮಾಲೀಕನ ಹೆಸರಲ್ಲಿ ಇರಲಿಲ್ಲ. ಬದಲಿಗೆ ಮೂಲ ಮಾಲೀಕರ ಹೆಸರಿನಲ್ಲಿತ್ತು. ಹೀಗಾಗಿ ಮೃತನ ಕುಟುಂಬಸ್ಥರು ಗ್ರಾಹಕ ಸಂರಕ್ಷಣಾ ಕಾಯ್ದೆ ಅಡಿಯಲ್ಲಿ ಪರಿಹಾರ ಕೋರಲು ಸಾಧ್ಯವಿಲ್ಲ. ಬೇಕಾದರೆ, ಸಂತ್ರಸ್ತ ಕುಟುಂಬವು ಮೋಟಾರು ಅಪಘಾತಗಳ ಪರಿಹಾರ ನ್ಯಾಯಮಂಡಳಿ ಎದುರು ಅರ್ಜಿ ಸಲ್ಲಿಸಬಹುದು' ಎಂದು ತೀರ್ಪಿನಲ್ಲಿ ವಿವರಿಸಲಾಗಿದೆ.

ಬೈಕ್ ಖರೀದಿಸಿದ ಏಳೇ ದಿನದಲ್ಲಿ ಅಪಘಾತ–ಸಾವು

ಬೆಂಗಳೂರಿನ ಬನಶಂಕರಿ 2ನೇ ಹಂತದ ನಿವಾಸಿ ಅರುಣ್ ಎಂ. ಶೆಣೈ 2018ರ ನವೆಂಬರ್ 23ರಂದು ಮೊಹಮ್ಮದ್ ಹರ್ಷದ್ ಎಂಬುವರಿಂದ ಯಮಹಾ ಆರ್‌ಎಕ್ಸ್-100 ಬೈಕ್ ಅನ್ನು ಖರೀದಿಸಿ ವಾಹನದ ಮಾಲೀಕತ್ವವನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಂಡಿದ್ದರು. ಆದರೆ, ವಿಮಾ ಪಾಲಿಸಿ ವರ್ಗಾಯಿಸಿಕೊಳ್ಳಲು 14 ದಿನಗಳ ಕಾಲಾವಕಾಶ ಇದ್ದ ಕಾರಣ ತಕ್ಷಣವೇ ವರ್ಗಾಯಿಸಿಕೊಂಡಿರಲಿಲ್ಲ. ಏತನ್ಮಧ್ಯೆ, 2018ರ ನವೆಂಬರ್ 30ರಂದು ಅವರು ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದರು.

ಬೈಕ್ ವಿಮೆ ಸಕ್ರಿಯವಾಗಿದ್ದ ಕಾರಣ ಅರುಣ್ ಪತ್ನಿ ರೇಖಾ ಶೆಣೈ ವಿಮೆ ಕ್ಲೇಮು ಪರಿಹಾರ ಕೋರಿ ನ್ಯಾಷನಲ್ ಇನ್ಶ್ಯೂರೆನ್ಸ್ ಕಂಪನಿಗೆ ಅರ್ಜಿ ಸಲ್ಲಿಸಿದ್ದರು. ಆದರೆ, ವಿಮಾ ಸಂಸ್ಥೆ 2019ರ ನವೆಂಬರ್ 11ರಂದು ಪರಿಹಾರ ನೀಡಲು ನಿರಾಕರಿಸಿತ್ತು.

ಕಾಂಗ್ರೆಸ್ ಅಭ್ಯರ್ಥಿ ಯೂಸುಫ್ ಷರೀಫ್ ನಾಮಪತ್ರ ಸಲ್ಲಿಕೆ

ಬೆಂಗಳೂರು: ವಿಧಾನ ಪರಿಷತ್ ಚುನಾವಣೆಗೆ ಬೆಂಗಳೂರು ನಗರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಯೂಸುಫ್ ಷರೀಫ್ (ಕೆಜಿಎಫ್ ಬಾಬು) ಮಂಗಳವಾರ ನಾಮಪತ್ರ ಸಲ್ಲಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಸಮ್ಮುಖದಲ್ಲಿ ಚುನಾವಣಾಧಿಕಾರಿಯೂ ಆಗಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಅವರಿಗೆ ನಾಮಪತ್ರ ಸಲ್ಲಿಸಿದರು.

ಬಳಿಕ ಮಾತನಾಡಿದ ಯೂಸುಫ್ ಷರೀಫ್, 'ನಮ್ಮ ಪಕ್ಷದ ಎಲ್ಲ ನಾಯಕರ ಆಶೀರ್ವಾದ ನನಗಿದೆ. ನಾನು ಈ ಕ್ಷೇತ್ರದಲ್ಲಿ ಗೆಲವು ಸಾಧಿಸುತ್ತೇನೆ. ಕೋಲಾರದಲ್ಲಿ ಜನ ಸೇವೆ ಮಾಡುತ್ತಿದ್ದೆ. ಇನ್ನು ಬೆಂಗಳೂರಿನಲ್ಲಿಯೂ ಸೇವೆ ಮಾಡುವ ಅವಕಾಶ ಮಾಡಿಕೊಡುತ್ತಾರೆ ಎಂಬ ವಿಶ್ವಾಸವಿದೆ' ಎಂದರು.

ಸುದ್ದಿಗಾರರ ಜೊತೆ ಮಾತನಾಡಿದ ರಾಮಲಿಂಗಾ ರೆಡ್ಡಿ, 'ಯೂಸುಫ್ ಷರೀಫ್ ಅವರದ್ದು ಕೆಜಿಎಫ್ ಬಾಬು ಹೆಸರಷ್ಟೇ. ಅವರು ಬೆಂಗಳೂರಿಗರೇ. ಬೆಂಗಳೂರು ನಗರದಲ್ಲಿ ಅಭ್ಯರ್ಥಿ ಇಲ್ಲವೆಂದು ಕೋಲಾರದಿಂದ ಕರೆದುಕೊಂಡು ಬಂದು ಕಣಕ್ಕೆ ಇಳಿಸಿಲ್ಲ. ಅವರು ಬೆಂಗಳೂರಿಗೆ ಬಂದು 30 ವರ್ಷ ಆಯಿತು' ಎಂದರು.



ನಾಮಪತ್ರ ಸಲ್ಲಿಸುವುದಕ್ಕೂ ಮೊದಲು ಯೂಸುಫ್ ಷರೀಫ್ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ನಮಸ್ಕರಿಸಿದರು. ರಾಮಲಿಂಗಾರೆಡ್ಡಿ ಇದ್ದರು

ಬಿಜೆಪಿ ಅಭ್ಯರ್ಥಿ ಎಚ್‌.ಎಸ್‌. ಗೋಪಿನಾಥ್ ಬಳಿ ₹ 47.84 ಕೋಟಿ ಆಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನ ಬೆಂಗಳೂರು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ಎಚ್‌.ಎಸ್‌. ಗೋಪಿನಾಥ್ ₹ 47.84 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದಾರೆ.

ಜಿಲ್ಲಾ ಚುನಾವಣಾಧಿಕಾರಿಗೆ ಮಂಗಳವಾರ ನಾಮಪತ್ರದೊಂದಿಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಅವರು ತಮ್ಮ ಆಸ್ತಿ ವಿವರಗಳನ್ನು ಬಹಿರಂಗಪಡಿಸಿದ್ದು, ₹ 42.40 ಕೋಟಿ ಮೌಲ್ಯದ ಸ್ಥಿರಾಸ್ತಿ ಮತ್ತು ₹ 5.44 ಕೋಟಿ ಮೌಲ್ಯದ ಚರಾಸ್ತಿಗಳನ್ನು ಹೊಂದಿರುವುದಾಗಿ ಘೋಷಿಸಿದ್ದಾರೆ.

ಈ ಪೈಕಿ ಪೂರ್ಣ ಪ್ರಮಾಣದ ಸ್ಥಿರಾಸ್ತಿ ಗೋಪಿನಾಥ್ ಅವರ ಹೆಸರಿನಲ್ಲೇ ಇದೆ. ಅವರ ಪತ್ನಿ ₹ 2.11 ಕೋಟಿ ಮೌಲ್ಯದ ಚರಾಸ್ತಿ ಹೊಂದಿದ್ದರೆ, ₹ 1.38 ಕೋಟಿ ಮೌಲ್ಯದ ಚರಾಸ್ತಿ ಒಟ್ಟು ಕುಟುಂಬದ ಹೆಸರಿನಲ್ಲಿದೆ.

ಸಿವಿಲ್ ಎಂಜಿನಿಯರಿಂಗ್ ಪದವೀಧರರಾಗಿರುವ ಗೋಪಿನಾಥ್ ಅವರು, ₹ 3.75 ಕೋಟಿ ಸಾಲ ಹೊಂದಿದ್ದಾರೆ.



ಬೆಂಗಳೂರು ನಗರ ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ನಡೆಯುವ ಚುನಾವಣೆಗೆ ಬಿಜೆಪಿ ಅಭ್ಯರ್ಥಿ ಎಚ್‌.ಎಸ್‌.ಗೋಪಿನಾಥ ರೆಡ್ಡಿ ಅವರು ಚುನಾವಣಾಧಿಕಾರಿ ಜೆ.ಮಂಜುನಾಥ್ ಅವರಿಗೆ ನಾಮಪತ್ರ ಸಲ್ಲಿಸಿದರು. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್‌. ಅಶ್ವತ್ಥನಾರಾಯಣ, ಶಾಸಕ ಅರವಿಂದ ಲಿಂಬಾವಳಿ, ಸಂಸದ ಡಿ.ವಿ.ಸದಾನಂದಗೌಡ, ಗಾಯತ್ರಿ ಗೋಪಿನಾಥ್ ರೆಡ್ಡಿ ಇದ್ದರು.

ಅಂಬೇಡ್ಕರ್ ಸ್ಕೂಲ್: ಪರಿಶೀಲನೆ

ಬೆಂಗಳೂರು: ಜ್ಞಾನಭಾರತಿ ಆವರಣದ 'ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್' ಅನ್ನು ಪ್ರಧಾನಿ ನರೇಂದ್ರ ಮೋದಿ ಅವರು ಡಿಸೆಂಬರ್ 6ರಂದು ಉದ್ಘಾಟಿಸುವ ಸಾಧ್ಯತೆ ಇದೆ. ಕಾಮಗಾರಿಯನ್ನು ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಹಾಗೂ ವಸತಿ ಸಚಿವ ವಿ.ಸೋಮಣ್ಣ ಮಂಗಳವಾರ ಪರಿಶೀಲಿಸಿದರು.

ಬಳಿಕ ಮಾತನಾಡಿದ ಸಿ.ಎನ್.ಅಶ್ವತ್ಥನಾರಾಯಣ, 'ಕಟ್ಟಡದ ಬಹುತೇಕ ಕೆಲಸಗಳು ಪೂರ್ಣಗೊಂಡಿವೆ. ಬಾಕಿ ಇರುವ ಸಣ್ಣಪುಟ್ಟ ಕೆಲಸಗಳನ್ನು ಆದ್ಯತೆಯ ಮೇಲೆ ತ್ವರಿತವಾಗಿ ಮುಗಿಸಲಾಗುವುದು. ಅಂಬೇಡ್ಕರ್ ಅವರ ಆಶಯದಂತೆ ಈ ಉನ್ನತ ಸಂಸ್ಥೆಯಲ್ಲಿ ಪರಿಶಿಷ್ಟ ವರ್ಗ ಹಾಗೂ ಬುಡಕಟ್ಟು ಸಮುದಾಯಗಳ ವಿದ್ಯಾರ್ಥಿಗಳಿಗೆ ಅವಕಾಶಗಳನ್ನು ನೀಡಲಾಗುವುದು' ಎಂದರು.

'ಅಂಬೇಡ್ಕರ್ ಹೆಸರಿನ ಈ ಸಂಸ್ಥೆಯಲ್ಲಿ ಜಾಗತಿಕ ಮಟ್ಟದ ಬೋಧನೆ ಮತ್ತು ಸಂಶೋಧನೆಗೆ ಆದ್ಯತೆ ನೀಡಲಾಗುವುದು. ಈ ಮೂಲಕ ಸಮಾಜದಲ್ಲಿ ಶೋಷಿತರ ಸಬಲೀಕರಣಕ್ಕೆ ಹೊಸ ಕಾರ್ಯಕ್ರಮಗಳನ್ನು ರೂಪಿಸಲು ಸಾಧ್ಯವಾಗಲಿದೆ' ಎಂದೂ ಹೇಳಿದರು.

26ಕ್ಕೆ ರಾಷ್ಟ್ರೀಯ ಹೆದ್ದಾರಿ ತಡೆ: ಬಡಗಲಪುರ

ಮೈಸೂರು: 'ಕೇಂದ್ರ ಸರ್ಕಾರದ ರೈತ-ಕಾರ್ಮಿಕ ವಿರೋಧಿ ಕಾಯ್ದೆಗಳು ಹಾಗೂ ಜನ ವಿರೋಧಿ ನೀತಿಯನ್ನು ಖಂಡಿಸಿ ನವದೆಹಲಿಯಲ್ಲಿ ರೈತರು ನಡೆಸುತ್ತಿರುವ ಹೋರಾಟ ನ.26ಕ್ಕೆ ಒಂದು ವರ್ಷ ಪೂರ್ಣಗೊಳಿಸಲಿದ್ದು, ಸಂಯುಕ್ತ ಹೋರಾಟ ಸಮಿತಿಯಿಂದ ರಾಜ್ಯದ 17 ಕಡೆ ರಾಷ್ಟ್ರೀಯ ಹೆದ್ದಾರಿ ತಡೆ ಚಳವಳಿ ನಡೆಸಲಾಗುವುದು' ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಂಗಳವಾರ ಇಲ್ಲಿ ತಿಳಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Walk-in

SILICON CITY COLLEGE
(Institution of MJ Education Trust)
Accredited By NAAC with 'A' Grade
Recognised under Section 2(f) & 12(B) by UGC, Affiliated by Bengaluru North University
Empowerment Through Knowledge

Walk in Interview
Applications are invited for the following positions in Commerce, Management, Computer Science and English with requisite qualifications
Assistant Professor: M.Com, MBA, MCA/M.Sc/M.Tech, MA
Associate Professor: M.Com, MBA, MCA/M.Sc/M.Tech, MA with NET/SLET/ Ph.D.
Professor: M.Com, MBA, MCA/M.Sc/M.Tech, MA with Ph.D.
Experience: Candidates must have minimum 3 years of teaching experience in the respective disciplines.
System Admin with Minimum of 2 years' experience in Educational Institutions, good communication skills, expertise in Hardware and Networking
Front Office Executive with good communication skills, computer knowledge, Tally and typing proficiency in English & Kannada.
Candidates fulfilling the above requirements may attend the interview followed by demo along with their original testimonials on Saturday 27th November, 2021 at 10 am.
Address: Silicon City College, #26/2 Ravindra Layout, Near Police Quarters, Basavanapura Main Road, K R Puram, Bengaluru - 560 036.
PH: 8147093466, 8147093467, 7411072259,
email id: chairman@siliconcitycollege.ac.in, www.siliconcitycollege.ac.in

WANTED 5 years Experienced CIVIL ENGINEER. Contact number - 7975542615

HERE'S AN exciting opportunities for youngsters. Leading Fasteners company needs 10 MARKETING EXECUTIVES, 2 OFFICE ADMINISTRATOR at it's Peenya, Bannergatta Road and City Market Branches. Training provided. Attractive Salaries and Incentives. Call: 9880455356

ADMIN STAFF FOR A SCHOOL IN JP.NAGAR WITH MINIMUM OF 2 YEARS EXPERIENCE. 8951179418

KAUNDS EMPLOYMENT EXCHANGE/ PROPERTY MART Wanted immediately Communication Skilled MANAGER, SALES ADVISORS, TELECALLERS: Good Salary. Walk-in/ Location Call: 99000-54468

IATA TRAVEL Agency urgently required International & Domestic Air Ticketing counter staff and VISA consultant with minimum experience of 4 to 5-yrs. Send resume to E-mail: unextravels@gmail.com

WANTED PUC Qualified Office Assistant Male with knowledge of Kannada and English typing @ Sheshadripuram, Bangalore. Contact: 9701785702, 9901902500

JOB OPPORTUNITY for Retired, Men, House wife & Graduates in Reputed Company. Age 40 to 75, Bangalorians only. Earn up to 40,000/- Contact: 9741401834

Accounts & Finance

ACCOUNTS EXECUTIVE with over 5 yrs. Exp. In handling accounts, with excellent communication skills & working knowledge of Tally. ISME, Sarjapur Road, 28019800. jobs@isme.in

REQUIRED ACCOUNTANT / ADMIN for CONSTRUCTION PROJECTS, 5- Years Experience Qualification: B.Com./M.Com. Graduate with minimum knowledge of Tally @ LCEPL, Language- Kannada, Hindi, English. Contact: 7975715965.

Drivers

WANTED EXPERIENCED Car DRIVER Near HSR for Doctor. Timings 9.00am- 8.00pm. Contact- 7847810010 /9886037111

Engg/ Production Technical

CALIBRE UPS, Inverters & Batteries near Yeshwanthpur requires Male SSLC/ PUC Assistances, ITI/ Diploma Electrical/ Electronics Technicians, Office Assistants/ Accountants with any degree. Contact- 9845034531.

ENGINEERS FOR Production and Quality- B.E./ Diploma (Mechanical). Experience: 3-5 years. Age below 35 years. STORE ASSISTANT: B.A.,/B.Com. 'VINUMAC' 205A, Peenya 3rd phase, Bangalore-58 Phone: 080-28391959 admin@vinumac.com

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Ltd Company in around Rajajinagar Contact: 9108458798/ 23384085

General

WANTED EXPERIENCED Female/ Male Office Assistant with Computer knowledge Vijayanagar Bangalore. Contact: 9742482989/ 9886133750

WANTED EXPERIENCED Accountant and Salesman/ Sales girls for reputed clothing business firm at Chickpet Bangalore . Contact: 9448121073

FRONT OFFICE assistants, receptionists, accounts assistants, knowledge of Computer, Tally etc., essential. Contact 9844005311

REQUIRED: APARTMENT MANAGER in Sadashivanagar- 5 Years Experience. Call: 98864-44596 and mail resume to: turnkeyce.jobs@gmail.com

Hospital & Medical Jobs

NABH & NABL Accredited P.D. Hinduja Sindhi Multispeciality Hospital, Bangalore requires
- Assistant Director (Medical), Doctor with MBA with experience, Ex- Defense Doctor preferred
- Dermatologist / ENT Surgeon
- Junior Specialists in Medicine, Surgery and OBG
- Emergency Medical Officers MBBS
- HR Assistant / Dietician / Psychologist/ Medical Records Technician
- Marketing Assistant

Mail Resume to sandhya@hindujasindhihospital.com
Ph: 7411017190 / 49030307

HRD & Admin

ADMISSIONS COUNSELLORS with over 5 yrs. Exp. In Counselling for admissions, having excellent communication skills. ISME,Sarjapur Road, 28019804. jobs@isme.in

Manager

MANAGER PLACEMENTS with 10+ yrs. Exp, with excellent communication skills,work Exp. with HR consultancy or Placements desired. ISME, Sarjapur Road, 28019800. jobs@isme.in

Marketing & Sales

WE ARE hiring an Outdoor SALES EXECUTIVE for selling of Clay Bricks and Tiles. Candidate must have Sales Experience. Candidate must possess a Driver's License and Two Wheeler. Email Resumes: rohit.shanmugam@standardbricks.com Call: 8971781677

REQUIRED OUTDOOR and INDOOR SALES EXECUTIVE Located Near to Majestic. Two Wheeler Must, Experienced- 1+ Years. Call: 8904855523/ 9164623335/ 41221840.

REQUIRED SALES Executive for Reynold's Inc, Musical Instruments Showrooms, Bangalore. Email Resume to: info@reynoldonline.com

WANTED SALES EXECUTIVES For Cement, Contact: 9916449766/ 9986696546 Email: acecemex@gmail.com

WANTED SALES Executives for 2 Wheeler Showroom relevant experience in K'mgala & JP Nagar, Sal 12K-15K +Inc. Call: 9945083900, 9731028676.

Multiple Vacancy

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/7676760399

Office Boys/ Peon

REQUIRED: OFFICE BOY with Two Wheeler License. Loading Unloading Material, Hindi English Kannada Speaking: 9380768982

Teachers/ Professors

SRI.RAMAKRISHNA EDUCATION Society, Halasuru (English Medium) Requires Experienced Lady TEACHERS BSc/MSc, BEd Science, Maths & BA/MA, BEd for English, Social Studies. 8861248642/ 9845048824 Mail: srkes1963@gmail.com

HIGH SCHOOL PRIMARY all subjects B.P.Ed, yoga, music, dance for two schools Yeshwantapura/ Madanyakanahalli. Whatsapp resume 8088201545

SHRI KRISHNA POLYTECHNIC, Chikkabanavara Bengaluru-560090 Requires LECTURERS. Walk-in/ Contact immediately. PRINCIPAL 6362422750.

WANTED
Female Teacher for
SCIENCE, SOCIAL & MATHS
ESI, PF and Accommodation Facility available
Swamy Vivekananda English Medium High School
Krishnayanapalya, Near Byyappanahalli Railway & Metro station, Old Madras Road. Bangalore-38
M-8951406438, 7619612115
msmani46@gmail.com

ENGLISH & Hindi Language Teachers needed for Chitrakoota CBSE School in Nagarbhavi, Kengeri Ring Road, with high salary. Immediately or for the academic year. Call: 7829647333

SRI AHAM AATHMA VIDYALAYA- [ICSE], Gruhalakshmi layout, Nagasandra post, Peenya, Dasarahalli, Bangalore-73 Invites applications for the following posts with good English vocabulary for the academic year 2021-22/ 2022-23 (1) Computer science- BCA/ MCA/ Geography (2) TEACHERS to teach all the subjects for Nursery/ Primary/ Middle/ High- school. (3) Office Staff/ Clerk / Date-Entry with Tally (4) Lab Assistant/ Librarian. Offers Attractive Salary. "Transportation provided" Call: 9880200172, 9663778869 Email: sriaavapplic@gmail.com

A PUBLIC RELATION Officer for a leading DIPLOMA/ DEGREE/PU College Experience in School Administration with Computer knowledge may apply Panchasheela Welfare Association (R) #10, 21st Cross, BHEL Layout, Rajarajeshwarinaga, Bangalore-78 within 15 days. Contact. 9448669359, 9845655761

MAX MULLER PUBLIC SCHOOLMahalakshmi Layout, Bangalore-96 Requires 1) Office Assistant- Excellent Communication Skill. 2)DTP Operator- Minimum 3 years of Experience. 3)P.E Instructor- Trained Graduate. 4)Security- Preferably Ex-servicemen. Interested candidates can mail their resume to maxmullerpublicschool.mlayout@gmail.com /submit to school office on or before 30-11-2021

MOTHER MARY English School, Thippasandra requires Pre-Primary and Primary Teachers for all subjects with experience. Call: 080-25281661

Wanted

WANTED FEMALE Office Assistant Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

JOBS FOR WOMEN (Reliance Malleswaram) Age above 30yrs (Degree) Fixed Salary 18k to 23k: 9343349670

WANTED TELECALLER Languages: Kannada Telugu, Tamil, English & Hindi. Location: Rajajinagar, Contact: 7021024849.

OFFICE BOY needed for Chitrakoota CBSE School in Nagarbhavi, Kengeri Ring Road, immediately. Salary: 9,000/- to 13,000/- Call: 7829015333 WALK-IN Welcome.

Placement Bureaus/Consultants

JOB PLACEMENTS/ Assistance Available, contact ANZ Consultants, 23443555, 8183046799, anzconsultants@yahoo.co.in

Part-Time Jobs

WORK FROM HOME Age 25- 65, PUC, Above Those who are Interested Malleshwarm: 7019215243/ 9886641282

PUBLIC NOTICE

IN THE COURT OF XII ADDL, CITY CIVIL JUDGE AT BANGALORE
O.S.No : 515 /2020 Hg. Date-04.12.2021
M/S Union Bank Of India No.24, Keshav Nivas, Kavi Kalidasa Road, Gandhinagar, Bengaluru - 560 009 Represented by Authorized Signatory . ...Plaintiff
V/S
M/S Rajeswari Light House, Represented By Its Proprietrix Smt. Lajuvanthi.J And Others.
SUMMONS TO DEFENDANT NO. I AND II UNDER ORDER V RULE 20 'A' READ WITH SECTION 151 OF THE CODE OF CIVIL PROCEDURE
1) M/S Rajeswari Light House, Represented By Its Proprietrix Smt.Lajuvanthi.J No.3, SRS Complex, T.C.Palya Main Road, Akshayanagara, Ramamurthynagara, Bangalore-560 016. 2) Smt. Lajuvanthi. J, w/o Sri.Babu.N Residing At No.3, SRS Complex, T.C.Palya Main Road, Akshayanagara, Ramamurthy nagara, Bangalore-560016.
Defendants
Whereas the Plaintiff Bank above named has filed the above suit against the Defendants for recovery of Rs.4,55,510.36 (Rupees Four Lakhs Fifty Five Thousand Five Hundred Ten and Paise Thirty Six only) with current and future interest at 12.00% (Base Rate + 1.75%) plus penal interest compounded monthly from the date of the plaint till the date of realization of the amount in full and for other reliefs.
Take Notice that you are hereby directed to appear before this Hon'ble Court in person or through an Advocate/Pleader duly authorized by you, in this behalf, to defend in the above suit on 04.12.2021 at 11.00 A.M. in the fore-noon. In spite of this summons, if you fail to appear on that day, the above suit will be heard and decided ex-parte.
Given under my hand and seal of this Court, On 17.11.2021
BY ORDER OF COURT
Sd/- Asst Registrar, City Civil Court, Bangalore-560 009
Advocate for Plaintiff
Girish. H.T. Advocate, No.2, 5th Floor, Mourya Mansion, 1st Main, 1st Cross, Gandhinagar, Bangalore - 560 009

PUBLIC NOTICE

I am the sole and absolute owner of the Property which is more fully described in the Schedule hereto. I being the absolute owner, has lost the Original Sale Deed dated 14.02.1968 (Document No.5287/67-68, Book I, Volume 685, Pages 8 to 11, in the Office of the Sub-Registrar, Bangalore). I have also informed the concerned police station of the aforesaid loss of the said original document and has requested the jurisdictional police to return the documents in the event of the same being either traced or someone delivered.
Any person/s finding the aforesaid document or having the original document with regard to the schedule property under any agreement or arrangement, may return the original or may write to the undersigned if they have any claim on the original document in any manner whatsoever.
SCHEDULE
All that Property bearing Plot No.11, formed in Survey No.1, situated at Bikasipura Village, Uttarahalli Hobli, Bengaluru South Taluk, measuring East to West: 60 Feet and North to South: 40 Feet and and bounded as follows:-
ON THE EAST 30 Feet Road; WEST Plot No.20; NORTH Plot No.12; SOUTH 30 Feet Road;
Sd/-
(JONATHAN PREM KUMAR)
Flat No.104. "Brindavan Residency", 4th Cross, 5th Main, Kammanahalli, Bengaluru - 560 084
Ph.No. 98452 87958
Bengaluru

REAL ESTATE SELLING

Residential/ Commercial

Shanthi Nagar

6000 Sq.ft Prime Residential Property for Sale in Richmond Town. Buyers Call 7348985836

Sites

Hosur Road

30X80 SITE Sale, 4000/- Psft Singasandra AECS Layout C Block Near Manipal County on the Way to Electronic City: 9731210544

REAL ESTATE BUYING

Sites

Banashankari

WANTED BDA SITES, BANASHANKARI 6TH STAGE, ANJANAPURA, VISHWESHWARAIAH LAYOUT,JPNAGAR 8TH/ 9TH PHASE,ANY BLOCK,IMMEDIATE SETTLEMENT: 9845444588

MATRIMONIAL

Grooms Wanted

Hindu

ವರ ಬೇಕಾಗಿದೆ
ಬೆಂಗಳೂರು ರಹವಾಸಿ ಯುಕೆ ದೇಶದಲ್ಲಿ ಉದ್ಯೋಗ ಮಾಡುತ್ತಿರುವ ಸುಮಾರು 33 ವರ್ಷ ವಯಸ್ಸಿನ ಸ್ನಾತಕೋತ್ತರ ವೈದ್ಯ ಪದವೀಧರ ವಧುವಿಗೆ ಭಾರತೀಯ ವರ ಬೇಕಾಗಿದೆ.
ವರ ಸುಮಾರು 32 ರಿಂದ 35 ವರ್ಷದವನಾಗಿರಬೇಕು ಮತ್ತು ಸ್ನಾತಕೋತ್ತರ ಪದವೀಧರ (ಮೆಡಿಸಿನ್/ಇಂಜಿನಿಯರಿಂಗ್/ಐಐಎಂ, ಐಐಎಸ್ಸಿ, ಐಐಟಿ – ಎಂಬಿಎ/ಸಿಎ/ಐಸಿಡಬ್ಲ್ಯುಎ/ಸಿಎಫ್‌ಎ/ಎಸಿಎಸ್) ಆಗಿರಬೇಕು ಅಥವಾ ಯುಕೆ ದೇಶದಲ್ಲಿ ಉದ್ಯೋಗಿಯಾಗಿರಬೇಕು ಅಥವಾ ಇಲ್ಲಿಯೆ ನೆಲೆಸಿ ಕನಿಷ್ಠ 3 ವರ್ಷ ಕಾಲ ಕೆಲಸ ಮಾಡಲು ಸಿದ್ಧವಾಗಿರಬೇಕು. ಜಾತಿ ಅಭ್ಯಂತರವಿಲ್ಲ, ಆದರೆ ಹಿಂದೂ ಆಗಿರಬೇಕು. ವಿಚ್ಛೇದಿತರಿಗೆ ಅವಕಾಶವಿಲ್ಲ.
ಆಸಕ್ತಿಯುಳ್ಳವರು ಸಂಪರ್ಕಿಸಿ 9900422872/ 9845154344
ಅಥವಾ ಇ–ಮೇಲ್: annapurneshwari6161@yahoo.com

BUSINESS

Business to Business

Others

PETROL PUMP Dealership Know complete process to Open a New Petrol Pump in India Contact us 9163283658

Business Offers

Finance

LOANS AVAILABLE against Properties (mortgage, purchase, personal loans) Preferred direct owners. Interested Please contact 8296092609.

NRI'S INVESTMENT And Finance Available On Low Interest Against Properties, Land & Building, Sites, Flats, Converted & Agriculture Lands Call: 7411265189


ADMISSION CORNER

Did you know???
NEET qualified students from 2019, 2020 or 2021 can take admissions for
MBBS Abroad
- Fees starting from Rs.92,000 per semester.
- Bank loan Assistance.
- FREE Counselling.
- Visa Assistance



Ceeco International
Opp Duggalamma Temple, Peenya 3rd Phase, Bangalore -560 058
Contact : 7892664764, 7483188450
Email: bangalore@ceecointl.com

NARGUND COLLEGE OF PHYSIOTHERAPY
ADMISSIONS OPEN
CONTACT US
+91 7019425622
+91 8026720604
www.nargund.edu.in/ncofp
ncpt@nargund.edu.in
JOIN OUR BACHELOR OF PHYSIOTHERAPY
JOIN NOW FOR 2021-2022 INTAKE



EDUCATIONAL

Admission

B.ED ADMISSIONS_OPEN!! FRANK COLLEGE OF EDUCATION #6th Phase J.P. Nagar Bangalore-78 Details Contact: 9880393009

ONE SITTING: LL.B (3&5 Years, Can Practice, Limited Seats) Also B.Tech/ Diploma/ MBA/ MCA/ BBA/ BCA/ B.Sc/ B.Com/ PU/ SSLC. Asha Institute: Bangalore. Ph: 9448460103/ 7093438248

PERSONAL

Change of Name

6491954P HAV Ravindra Nath Yadav 1ATC, daughter's name Service Record KUMARI RIYA instead of RIYA YADAV, Notary K.V. Mani, Bangalore.

6491954P HAV 1ATC, my name Service Record RAVINDRA NATH YADVA instead of RAVINDRA NATH YADAV, Notary K.V. Mani, Bangalore.

I, KUTTUB BUDDIN Z NACEEM, residing at No. 1, 3 B cross, 4th main, Domlur, II Stage, Bangalore- 560071, have changed my name to KUTUBUDDIN ZAKIUDDIN NASEEM, vide affidavit dated 23.11.2021, before Notary L. Gopalakrishna, Bangalore. Henceforth I shall be called KUTUBUDDIN ZAKIUDDIN NASEEM.

I, SHALENA D/o Army No.JC-438572, Rank: Ex.Subedar, Name: Late J Soloman have changed my name to SHALINA S affidavit dated 17.11.2021 notary Bisappa Gowda, Kolar.

6491954P HAV Ravindra Nath Yadav 1ATC, mother's name Service Record SHANIEHARY YADAW instead of SHANICHARI DEVI, Notary K.V. Mani, Bangalore.

6491954P HAV Ravindra Nath Yadav 1ATC, daughter's name Service Record RANJANA instead of RANJANA YADAV, Notary K.V. Mani, Bangalore.

I, KISHORE Kumar S/o. G.K. Jaya Shivakumar residing at No. B-62, Dodda Angadi Beedi, 11th ward, Chamarajanagara Town. Has mentioned my name as JAYA KISHORE KUMAR in my SSLC Marks sheet & Passport. Hereby declaring that my actual & correct name is KISHORE KUMAR, vide affidavit dated 23/11/2021 before notary Naganna, Chamarajanagar. Henceforth I shall be called as KISHORE KUMAR only.

SOCIAL SERVICES

Old Age Home

"AGRASEN OLDAGE HOME" Provides Luxurious Facilities like Furnished Rooms, Vegetarian Food, Laundry, Nursing, Yoga, Games, Library. Contact:- 9513362681/ 9886037111/ 9620304864

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement



ಮಳೆ ನಿಂತ ಮೇಲೆ...

ಕಣಿವೆಗಳು, ಪರಿಸರ ಸೂಕ್ಷ್ಮ ವಲಯಗಳಲ್ಲಿ ಬಡಾವಣೆ ನಿರ್ಮಾಣ • ಒಂದೆರಡು ತಾಸು ಮಳೆ ಬಂದರೂ ಮನೆಯೊಳಗೆ ನುಗ್ಗುತ್ತಿದೆ ನೀರು

‘ಎಲ್ಲಿ ಹೋಯಿತು ಕಾಲುವೆಗೆ ಸುರಿದ ಕೋಟಿ ಕೋಟಿ ಹಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗೆ ಅಂಜಿದಡೆಂತಯ್ಯಾ’ ಎಂಬ ಅಕ್ಕಮಹಾದೇವಿಯ ಸಾಲುಗಳಂತೆ ‘ರಾಜಕಾಲುವೆ, ಕೆರೆಗಳ ಒಡಲಿನಲ್ಲೇ ಮನೆಗಳನ್ನು ಕಟ್ಟಿ ಪ್ರವಾಹಕ್ಕೆ ಅಂಜಿದಡೆಂತಯ್ಯಾ’ ಎಂಬಂತಾಗಿದೆ ಬೆಂಗಳೂರಿನ ಕೆಲ ಬಡಾವಣೆಗಳ ಜನರ ಸ್ಥಿತಿ...’

ಮಳೆ ನೀರು ಸರಾಗವಾಗಿ ಹರಿದು ಹೋಗುವುದಕ್ಕೆ ರೂಪಿಸಿರುವ ನಾಲೆಗಳೇ ರಾಜಕಾಲುವೆಗಳು. ಇವುಗಳನ್ನು ಅಭಿವೃದ್ಧಿಪಡಿಸಲು ಹಾಗೂ ನಿರ್ವಹಣೆ ಮಾಡಲು ಬಿಬಿಎಂಪಿ ಪ್ರತಿವರ್ಷ ನೂರಾರು ಕೋಟಿ ಹಣವನ್ನು ವ್ಯಯಿಸುತ್ತಿದೆ. ಆದರೂ, ಮಳೆ ನೀರು ಮನೆಗಳಿಗೆ ನುಗ್ಗುವುದು ತಪ್ಪಿಲ್ಲ.

ಕಣಿವೆಗಳು ಮತ್ತು ಪರಿಸರ ಸೂಕ್ಷ್ಮ ವಲಯಗಳನ್ನು ಬಡಾವಣೆಗಳನ್ನಾಗಿ ಪರಿವರ್ತಿಸಲಾಗಿದೆ. ಪರಿಣಾಮವಾಗಿ ಪ್ರತಿವರ್ಷ ಮಳೆಯಾದಾಗಲೂ ಜನ ತೊಂದರೆ ಅನುಭವಿಸುತ್ತಿದ್ದಾರೆ ಎಂದು ವಿಶ್ಲೇಷಿಸುತ್ತಾರೆ ಜಲತಜ್ಞರು. ಮಳೆ ನೀರು ಹರಿವು ವ್ಯವಸ್ಥೆಯ ಬಗ್ಗೆ ಜಲತಜ್ಞರು ಮತ್ತು ಸಾರ್ವಜನಿಕರು ‘ಪ್ರಜಾವಾಣಿ’ ಜತೆ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ನಿರ್ವಹಣೆ: ವಿಜಯಕುಮಾರ್ ಎಸ್.ಕೆ.



ಕೋಗಿಲು ಕ್ರಾಸ್ ಬಳಿಯ ಕೇಂದ್ರೀಯ ವಿಹಾರದ ಅಪಾರ್ಟ್‌ಮೆಂಟ್‌ನಲ್ಲಿ ಮಳೆ ನೀರು ನುಗ್ಗಿರುವುದು —ಪ್ರಜಾವಾಣಿ ಚಿತ್ರ

ರಾಜಧಾನಿ ಒಡಲದನಿ

‘ಕಾನೂನು ಬಾಹಿರ ಬಡಾವಣೆಗಳೇ ಸಮಸ್ಯೆಯ ಮೂಲ’



ಹಲವೆಡೆ ಪರಿಸರ ಸೂಕ್ಷ್ಮ ವಲಯ ಮತ್ತು ಕಣಿವೆ ಪ್ರದೇಶಗಳನ್ನು ವಸತಿ ಪ್ರದೇಶವಾಗಿ ಪರಿವರ್ತಿಸಲಾಗಿದೆ. ಯಲಹಂಕ ವಲಯದಲ್ಲೇ ನೂರಾರು ಕಾನೂನು ಬಾಹಿರ ಬಡಾವಣೆಗಳಿವೆ. ಬಡಾವಣೆ ನಿರ್ಮಿಸುವಾಗ ರಾಜಕಾಲುವೆ ಮತ್ತು ಅದಕ್ಕೆ ಸಂಬಂಧಿಸಿದ ಚಿಕ್ಕ ಕಾಲುವೆಗಳ ಬಗ್ಗೆ ಗಮನವನ್ನೇ ಹರಿಸಿಲ್ಲ. ಬಡಾವಣೆ ನಿರ್ಮಾಣಕ್ಕೆ ಅನುಮತಿ ನೀಡಿದವರೇ ಈ ಅನಾಹುತಗಳಿಗೆ ಹೊಣೆಗಾರರು. ಹೆಬ್ಬಾಳ, ವೃಷಭಾವತಿ ಮತ್ತು ಕೋರಮಂಗಲ– ಚಲ್ಲಘಟ್ಟ ಕಣಿವೆಗಳಲ್ಲೇ ಈ ಸಮಸ್ಯೆ ಎದುರಾಗುತ್ತಿದೆ. ಕಣಿವೆ ಪ್ರದೇಶದಲ್ಲಿ ಬೆಟ್ಟದ ತುದಿಯಲ್ಲಿ ಯಾವತ್ತೂ ಪ್ರವಾಹ ಬರುವುದಿಲ್ಲ. ಆದರೆ, ಯಲಹಂಕದಂತಹ ಎತ್ತರದ ಪ್ರದೇಶದಲ್ಲೂ ಪ್ರವಾಹ ಉಂಟಾಗಿದೆ ಎಂದರೆ ಹೆಬ್ಬಾಳ ಕಣಿವೆಯನ್ನು ಎಷ್ಟು ಹಾಳು ಮಾಡಿದ್ದೇವೆ ಎಂಬುದು ಅರ್ಥವಾಗುತ್ತದೆ. ಕೆರೆಗಳ ನಿರ್ವಹಣೆಯೂ ಅವೈಜ್ಞಾನಿಕವಾಗಿದೆ. ನೀರಾವರಿಗಷ್ಟೇ ಅಲ್ಲ, ಪ್ರವಾಹ ಪರಿಸ್ಥಿತಿ ನಿಯಂತ್ರಿಸಲು ತೂಬುಗಳು ನೆರವಾಗುತ್ತಿದ್ದವು ಎಂಬ ಅರಿವೇ ಎಂಜಿನಿಯರ್‌ಗಳಿಗೆ ಇಲ್ಲ. ಕೆರೆಯಲ್ಲಿ ನೀರು ಸಂಗ್ರಹ ಸಾಮರ್ಥ್ಯವನ್ನೂ ದಿನದಿಂದ ದಿನಕ್ಕೆ ಕಡಿಮೆ ಮಾಡಲಾಗಿದೆ. ಸಾಮರ್ಥ್ಯ ಹೆಚ್ಚಿಸುವ ಬದಲು ಅಂದಗೊಳಿಸುವ ಕಾರ್ಯಕ್ಕೆ ಆದ್ಯತೆ ನೀಡಲಾಗುತ್ತಿದೆ.

ರಾಮ್‌ಪ್ರಸಾದ್, ಫ್ರೆಂಡ್ಸ್ ಆಫ್ ಲೇಕ್ ಸಂಘಟನೆಯ ಸಹ ಸಂಸ್ಥಾಪಕ

‘ಜಲ ವಿಜ್ಞಾನಕ್ಕೆ ವಿರುದ್ಧವಾಗಿ ಕಾಂಕ್ರೀಟ್ ರಾಜಕಾಲುವೆ’



ಆಯಾ ಪ್ರದೇಶದಲ್ಲಿ ಬೀಳುವ ಮಳೆಯಿಂದ ಎಷ್ಟು ನೀರು ಹರಿದು ಬರುತ್ತದೆ ಎಂಬುದನ್ನು ಆಧರಿಸಿ ರಾಜಕಾಲುವೆ ವಿನ್ಯಾಸ ಮಾಡಲಾಗುತ್ತದೆ. ಒಂದು ಕೆರೆಯಿಂದ ಮತ್ತೊಂದು ಕೆರೆಗೆ ನೀರನ್ನು ಸರಾಗವಾಗಿ ಹರಿಸಲು 100 ವರ್ಷಗಳ ಹಿಂದೆಯೇ ನಮ್ಮ ಹಿರಿಯರು ಈ ಕಾಲುವೆಗಳನ್ನು ವಿನ್ಯಾಸ ಮಾಡಿದ್ದಾರೆ. ಈಗ ರಾಜಕಾಲುವೆ ಪುನರ್ ನಿರ್ಮಾಣದ ಸಂದರ್ಭದಲ್ಲಿ 80 ಮೀಟರ್ ಅಗಲದ ಕಾಲುವೆಗಳನ್ನು 20 ಮೀಟರ್‌ಗೆ ಇಳಿಸಿರುವ ಉದಾಹರಣೆಗಳಿವೆ. ಜಲವಿಜ್ಞಾನದ ಪ್ರಕಾರ ಯಾವುದೇ ರಾಜಕಾಲುವೆಯಲ್ಲೂ ನೀರು ಇಳೆಗೆ ಇಂಗಲು ಅವಕಾಶ ಇರಬೇಕು. ಆದರೆ, 1 ಕಿ.ಮೀ.ಗೆ ತಲಾ ₹8 ಕೋಟಿಯಷ್ಟು ಖರ್ಚು ಮಾಡಿ ಕಾಂಕ್ರೀಟ್ ಹಾಕಲಾಗಿದೆ. ಇದರಿಂದ ಯಾವುದೇ ಪ್ರಯೋಜನ ಇಲ್ಲ. ಹಣ ಲೂಟಿ ಮಾಡುವವರಿಗೆ ದಾರಿ ಇದು ಅಷ್ಟೇ. ಈ ಬಗ್ಗೆ ಬಿಬಿಎಂಪಿಯ ಈ ಹಿಂದಿನ ಮುಖ್ಯ ಆಯುಕ್ತರಿಗೂ ಪತ್ರ ಬರೆದಿದ್ದೆ. ಮಂಜುನಾಥ ಪ್ರಸಾದ್ ಅವರು ನನ್ನ ಕಚೇರಿಗೆ ಬಂದು ಚರ್ಚಿಸಿ ಹೋಗಿದ್ದರು. ಆದರೆ, ಲೂಟಿ ತಡೆಯಲು ಯಾರಿಂದಲೂ ಆಗಿಲ್ಲ. ಹವಾಮಾನದಲ್ಲಿ ವ್ಯತ್ಯಾಸ ಆಗುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಇನ್ನಷ್ಟು ತೊಂದರೆ ಆಗುವ ಸಾಧ್ಯತೆ ಇದೆ.

ಟಿ.ವಿ. ರಾಮಚಂದ್ರ, ಐಐಎಸ್‌ಸಿ ವಿಜ್ಞಾನಿ

ಪ್ರತಿವರ್ಷವೂ ಪ್ರವಾಹ



ಹೆಣ್ಣೂರು–ಬಾಗಲೂರು ರಸ್ತೆಯಲ್ಲಿರುವ ರಾಜಕಾಲುವೆ ವಿಶಾಲವಾಗಿದೆ. ಮುಂದಕ್ಕೆ ಹೋದಂತೆ ರೈಲ್ವೆ ಸೇತುವೆ ಬಳಿ ಕಿರಿದಾಗಿದೆ. 8 ಅಡಿ ಅಗಲದ ಸೇತುವೆಯಲ್ಲಿ ಅಷ್ಟೊಂದು ನೀರು ಹರಿದು ಹೋಗಲು ಸಾಧ್ಯವಾಗುವುದಿಲ್ಲ. ಪಕ್ಕದಲ್ಲೇ ಇರುವ ಹೊರಮಾವು– ವಡ್ಡರಪಾಳ್ಯಕ್ಕೆ ಪ್ರತಿವರ್ಷ ಪ್ರವಾಹ ಎದುರಾಗುತ್ತಿದೆ. ಕೋಟ್ಯಂತರ ರೂಪಾಯಿ ಖರ್ಚು ಮಾಡಿ ರಾಜಕಾಲುವೆ ನಿರ್ಮಿಸಿದರೂ ಸಮಸ್ಯೆ ನಿವಾರಣೆಯಾಗಿಲ್ಲ. ಜೋರು ಮಳೆ ಬಂದಾಗಲೆಲ್ಲಾ ತೊಂದರೆ ಅನುಭವಿಸುವುದು ತಪ್ಪಿಲ್ಲ.

ಜಾನ್, ವಡ್ಡರಪಾಳ್ಯ ನಿವಾಸಿ



ಮೈಸೂರು ರಸ್ತೆಯಲ್ಲಿ ಬಿದ್ದಿದ್ದ ಗುಂಡಿಗಳನ್ನು ಕಾರ್ಮಿಕರಿಂದ ಮಂಗಳವಾರ ಮುಚ್ಚಿಸಿದ ಸಂಚಾರ ಪೊಲೀಸರು, ಕೊನೆಯಲ್ಲಿ ಗುಂಡಿಗೆ ತೇಪೆ ಹಾಕಿದರು

ಗುಂಡಿ ಮುಚ್ಚಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಿರಂತರವಾಗಿ ಸುರಿದ ಮಳೆಯಿಂದಾಗಿ ಬಹುತೇಕ ರಸ್ತೆಗಳು ಹಾಳಾಗಿ ಗುಂಡಿಗಳು ಬಿದ್ದಿದ್ದು, ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟಾಗುತ್ತಿದೆ. ದಟ್ಟಣೆ ಕಿರಿಕಿರಿ ತಪ್ಪಿಸುವುದಕ್ಕಾಗಿ ಸಂಚಾರ ಪೊಲೀಸರೇ, ಕಾರ್ಮಿಕರ ಸಹಾಯದಿಂದ ಗುಂಡಿಗಳನ್ನು ಮುಚ್ಚಿಸಿದರು.

ಮೈಸೂರು ರಸ್ತೆಯ ಬಹುತೇಕ ಕಡೆ ದೊಡ್ಡದಾದ ಗುಂಡಿಗಳು ಬಿದ್ದಿದ್ದವು. ರಾಜಾಜಿನಗರ, ಯಶವಂತಪುರ, ಆಡುಗೋಡಿ, ದೇವನಹಳ್ಳಿ, ಎಚ್‌ಎಸ್‌ಆರ್ ಲೇಔಟ್ ಹಾಗೂ ಸುತ್ತಮುತ್ತಲ ಠಾಣೆ ವ್ಯಾಪ್ತಿಯ ರಸ್ತೆಗಳೂ ಹಾಳಾಗಿದ್ದವು. ಎಲ್ಲ ರಸ್ತೆಯಲ್ಲೂ ಗುಂಡಿಗಳಿಗೆ ಕಲ್ಲು ಹಾಗೂ ಕಾಂಕ್ರಿಟ್ ಹಾಕಿ ಪೊಲೀಸರು ಮುಚ್ಚಿಸಿದರು. ಕೆಲ ಸಿಬ್ಬಂದಿ ಖುದ್ದಾಗಿ ಗುಂಡಿಗಳನ್ನು ಮುಚ್ಚಿ, ಕೊನೆಯಲ್ಲಿ ತೇಪೆ ಹಾಕಿದರು.

ಸುಗಮ ಸಂಚಾರ ಕರ್ತವ್ಯದ ಜೊತೆಯಲ್ಲೇ ಗುಂಡಿ ಮುಚ್ಚಿಸಿದ ಪೊಲೀಸರ ಕೆಲಸಕ್ಕೆ ಜನರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಫೋಟೊಗಳನ್ನು ಹಂಚಿಕೊಂಡಿರುವ ಕೆಲವರು, ಬಿಬಿಬಿಎಂಪಿ ಅಧಿಕಾರಿಗಳಿಗೆ ಹಿಡಿಶಾಪ ಹಾಕಿದ್ದಾರೆ. ‘ಜನರಿಂದ ತೆರಿಗೆ ಸಂಗ್ರಹಿಸುವ ಬಿಬಿಎಂಪಿ ಅಧಿಕಾರಿಗಳಿಗೆ ನಾಚಿಕೆ ಆಗಬೇಕು. ಎಷ್ಟು ಬೈದರೂ ಅಧಿಕಾರಿಗಳಿಗೆ ಬುದ್ಧಿ ಬರುತ್ತಿಲ್ಲ. ಸಂಚಾರ ಪೊಲೀಸರನ್ನು ನೋಡಿ ಅಧಿಕಾರಿಗಳು ಕಲಿಯಬೇಕು’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಿಬಿಎಂಪಿ ಆಡಳಿತಾಧಿಕಾರಿ ಸೂಚನೆ

ಮಳೆ ಹಾನಿ: ಸನ್ನದ್ಧವಾಗಿರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾರಿ ಮಳೆಯಿಂದ ಪ್ರವಾಹ ಸ್ಥಿತಿ ಉಂಟಾಗುವುದನ್ನು ತಡೆಯಲು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಪ್ರವಾಹದಂತಹ ವಿಷಮ ಸ್ಥಿತಿ ಎದುರಾದರೂ ಅದನ್ನು ಸಮರ್ಥವಾಗಿ ನಿಭಾಯಿಸಲು ಎಲ್ಲ ಅಧಿಕಾರಿಗಳು ಸನ್ನದ್ಧವಾಗಿರಬೇಕು ಎಂದು ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪ್ರವಾಹ ನಿರ್ವಹಣೆಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಲು ಅವರು ಅಧಿಕಾರಿಗಳ ಜೊತೆ ಮಂಗಳವಾರ ಸಭೆ ನಡೆಸಿದರು.

‘ರಾಜಕಾಲುವೆ, ರಸ್ತೆ ಬದಿಯ ಚರಂಡಿಗಳಲ್ಲಿ ತುಂಬಿರುವ ಹೂಳನ್ನು ಮಳೆಗಾಲಕ್ಕೆ ಮೊದಲೇ ತೆರವುಗೊಳಿಸಿ ನೀರು ಸರಾಗವಾಗಿ ಹರಿದುಹೋಗುವಂತೆ ವ್ಯವಸ್ಥೆ ಮಾಡಬೇಕು. ಅಗೆದು ರಸ್ತೆ ಪಕ್ಕದಲ್ಲಿ ಬಿಟ್ಟಿರುವ ಮಣ್ಣು ನೀರುಗಾಲುವೆಗಳಿಗೆ ಸೇರದಂತೆ ತಡೆಯಬೇಕು’ ಎಂದರು.

ಬೆಸ್ಕಾಂ, ಜಲಮಂಡಳಿಯವರು ಕಾಮಗಾರಿಗಾಗಿ ರಸ್ತೆ ಕತ್ತರಿಸುವ ಮುನ್ನ ಕಡ್ಡಾಯವಾಗಿ ಬಿಬಿಎಂಪಿಯಿಂದ ಅನುಮತಿ ಪಡೆಯಬೇಕು ಹಾಗೂ ರಸ್ತೆ ಕತ್ತರಿಸಿದ ಭಾಗವನ್ನು ಆಯಾ ಇಲಾಖೆಗಳೇ ದುರಸ್ತಿ ಮಾಡಬೇಕು. ಇದನ್ನು ಬಿಬಿಎಂಪಿ ಅಧಿಕಾರಿಗಳು ಪ್ರಮಾಣೀಕರಿಸಬೇಕು ಎಂದು ನಿರ್ದೇಶನ ನೀಡಿದರು.

ಮುಖ್ಯ ಆಯುಕ್ತ ಗೌರವ್ ಗುಪ್ತ, ‘ಮಳೆಗಾಲದಲ್ಲಿ ಪ್ರವಾಹ ಸ್ಥಿತಿ ಎದುರಾದಾಗ ಎಲ್ಲಾ ಅಧಿಕಾರಿಗಳು ತ್ವರಿತವಾಗಿ ಸ್ಪಂದಿಸಬೇಕು’ ಎಂದರು.

ಆಯಾ ವಾರ್ಡ್ ವ್ಯಾಪ್ತಿಯ ರಸ್ತೆಗಳು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುವುದು ಸಹಾಯಕ ಎಂಜಿನಿಯರ್‌ಗಳ ಜವಾಬ್ದಾರಿ ಎಂದು ನೆನಪಿಸಿದರು.

ಕಲ್ಕೆರೆ ಕೆರೆ ಕೋಡಿ 2 ಅಡಿ ತಗ್ಗಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರಮಾವು ವಾರ್ಡ್ ವ್ಯಾಪ್ತಿಯ ಬಡಾವಣೆಗಳು ಹಾಗೂ ಸುತ್ತಮುತ್ತಲಿನ ವಸತಿ ಪ್ರದೇಶಗಳು ಜೋರು ಮಳೆ ಬಂದಾಗ ಜಲಾವೃತವಾಗುವುದನ್ನು ತಡೆಯಲು ಕಲ್ಕೆರೆ ಕೆರೆ ಕೋಡಿಯನ್ನು ಎರಡು ಅಡಿ ತಗ್ಗಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಹೊರಮಾವು ವಾರ್ಡ್ ವ್ಯಾಪ್ತಿಯಲ್ಲಿ ಜಲಾವೃತವಾದ ಸ್ಥಳಗಳನ್ನು ಅವರು ಸಚಿವ ಭೈರತಿ ಬಸವರಾಜು ಅವರ ಜೊತೆ ಮಂಗಳವಾರ ಪರಿಶೀಲನೆ ನಡೆಸಿದರು.

ಕಲ್ಕೆರೆ ಪಕ್ಕದಲ್ಲಿ ಬಾಲಾಜಿ ಲೇಔಟ್, ಕಾವೇರಿ ನಗರ, ಸಾಯಿ ಲೇಔಟ್ ಸೇರಿದಂತೆ ವಿವಿಧ ಬಡಾವಣೆಗಳು ಹಾಗೂ ವಸತಿ ಪ್ರದೇಶಗಳು ತಗ್ಗು ಪ್ರದೇಶದಲ್ಲಿವೆ. ಜೋರು ಮಳೆಯಾದಾಗ ಹೆಬ್ಬಾಳ ಕಣಿವೆಯ ನೀರು ಹರಿದುಬರುವ ರಾಜಕಾಲುವೆ ತುಂಬಿ ವಡ್ಡರಪಾಳ್ಯ, ಸಾಯಿಬಾಬಾ ಬಡಾವಣೆ, ಅನುಗ್ರಹ ಬಡಾವಣೆಗಳೂ ಜಲಾವೃತಗೊಳ್ಳುತ್ತವೆ. ಹೆಬ್ಬಾಳ ಕಣಿವೆಯ ರಾಜಕಾಲುವೆಗೆ ಈಗಾಗಲೇ ಕೆಲವೆಡೆ ಕಾಂಕ್ರೀಟ್ ತಡೆಗೋಡೆ ನಿರ್ಮಿಸಲಾಗಿದೆ. ಕಚ್ಚಾ ರಾಜಕಾಲುವೆ ಇರುವಲ್ಲಿಯೂ ತಡೆಗೋಡೆ ನಿರ್ಮಿಸಲು ಕ್ರಮಕೈಗೊಳ್ಳುವಂತೆ ಅಧಿಕಾರಿಗಳಿಗೆ ಮುಖ್ಯ ಆಯುಕ್ತರು ಸೂಚನೆ ನೀಡಿದರು.

‘ಹೆಬ್ಬಾಳ ಕಣಿವೆಯ ರಾಜಕಾಲುವೆ ಹಾದುಹೋಗುವ ಪ್ರದೇಶದಲ್ಲಿ ರೈಲು ಹಳಿ ಬಳಿ 5 ಮೀ ಅಗಲದ ಎರಡು ತೂಬುಗಳಿವೆ. ಅಗಲ ಕಿರಿದಾಗಿರುವ ತೂಬುಗಳ ಗಾತ್ರ ಹಿಗ್ಗಿಸಬೇಕು. ರೈಲ್ವೆ ಇಲಾಖೆಯ ಅಧಿಕಾರಿಗಳ ಜೊತೆ ಮಾತನಾಡಿ ಕ್ರಮ ಕೈಗೊಳ್ಳಬೇಕು’ ಎಂದು ನಿರ್ದೇಶನ ನೀಡಿದರು. ಮಹದೇವಪುರ ವಲಯ ಆಯುಕ್ತ ಡಾ.ಕೆ.ವಿ.ತ್ರಿಲೋಕಚಂದ್ರ, ಜಂಟಿ ಆಯುಕ್ತ ವೆಂಕಟಾಚಲಪತಿ, ಮುಖ್ಯ ಎಂಜಿನಿಯರ್‌ಗಳಾದ ಪರಮೇಶ್ವರ್, ಸುಗುಣಾ ಜೊತೆಯಲ್ಲಿದ್ದರು.

ಮಳೆ ನಿಂತು ಎರಡು ದಿನ ಆದರೂ ಇಳಿದು ಹೋಗಿಲ್ಲ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ ನಿಂತು ಎರಡು ದಿನಗಳು ಉರುಳಿದ ಬಳಿಕವೂ ಯಲಹಂಕ ಪ್ರದೇಶದ ಕೆಲವೆಡೆ ನೀರು ಸಂಪೂರ್ಣ ಇಳಿದು ಹೋಗಿಲ್ಲ. ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್ ಸಮುಚ್ಚಯವೂ ಸೇರಿದಂತೆ ರಾಜಕಾಲುವೆ ಆಸುಪಾಸಿನ ಅನೇಕ ಅಪಾರ್ಟ್‌ಮೆಂಟ್ ಸಮುಚ್ಚಯಗಳ ಪ್ರಾಂಗಣಗಳಲ್ಲಿ ಮಂಗಳವಾರವೂ ಒಂದು ಅಡಿಗೂ ಹೆಚ್ಚು ನೀರು ನಿಂತಿತ್ತು.

ಕೆಂಪೇಗೌಡ ವಾರ್ಡ್‌ನ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್ ಸಮುಚ್ಚಯಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭೇಟಿ ನೀಡಿದಾಗಲೂ ಪ್ರಾಂಗಣ ಜಲಾವೃತವಾಗಿತ್ತು. ಮುಖ್ಯಮಂತ್ರಿ ಹಾಗೂ ಅಧಿಕಾರಿಗಳು ತೆರೆದ ಜೀಪಿನಲ್ಲೇ ಅಪಾರ್ಟ್‌ಮೆಂಟ್ ಸಮುಚ್ಚಯವನ್ನು ತಲುಪಿ, ನಿವಾಸಿಗಳ ಸಂಕಷ್ಟ ಆಲಿಸಿದರು. ಮಳೆ ನೀರು ಸರಾಗವಾಗಿ ಹರಿದು ಹೋಗುವುದಕ್ಕೆ ಕ್ರಮ ಕೈಗೊಳ್ಳುವಂತೆ ಬೊಮ್ಮಾಯಿ ಅವರು ಬಿಬಿಎಂಪಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಸೋಮವಾರ ನಾಲ್ಕು ಅಡಿಗಳಷ್ಟು ನೀರು ನಿಂತಿತ್ತು. ಮಂಗಳವಾರ ಒಂದು ಭಾಗದಲ್ಲಿ ಆವರಣ ಗೋಡೆಯನ್ನು ಒಡೆದು ನೀರು ಹೊರಹೋಗಲು ಅವಕಾಶ ಕಲ್ಪಿಸಲಾಗಿದೆ. ಹಾಗಾಗಿ ನೀರಿನ ಮಟ್ಟ 1 ಅಡಿಗೆ ಇಳಿದಿದೆ. ನಿವಾಸಿಗಳು ಮನೆಯಿಂದ ಹೊರಗೆ ಹೋಗಲು ಟ್ರ್ಯಾಕ್ಟರ್ ಅಥವಾ ಜೀಪನ್ನು ಬಳಸುತ್ತಿದ್ದಾರೆ. ಕಟ್ಟಡದ ಮೆಟ್ಟಿಲಿನವರೆಗೆ ವಾಹನವನ್ನು ಕೊಂಡೊಯ್ದು ನಿವಾಸಿಗಳನ್ನು ಹತ್ತಿಸಿಕೊಳ್ಳುತ್ತಿದ್ದುದು ಕಂಡು ಬಂತು.

ಈ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ವಿವಿಧ ಭಾಷಿಕರು ನೆಲೆಸಿದ್ದಾರೆ.





ಯಲಹಂಕದ ಕೋಗಿಲು ಕ್ರಾಸ್ ಬಳಿಯ ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್ ಸಮುಚ್ಚಯ ಜಲಾವೃತವಾಗಿದ್ದು, ವೃದ್ಧೆಯೊಬ್ಬರನ್ನು ಮಂಗಳವಾರ ಜೀಪಿನಲ್ಲಿ ಕರೆದೊಯ್ಯಲಾಯಿತು(ಎಡಚಿತ್ರ) ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಮಳೆನೀರು ನಿಂತಿರುವುದು —ಪ್ರಜಾವಾಣಿ ಚಿತ್ರಗಳು/ಎಂ.ಎಸ್.ಮಂಜುನಾಥ್

ಈಗ ಶೇ 30ರಷ್ಟು ಜನರನ್ನು ಮಾತ್ರ ಬೇರೆಡೆಗೆ ಸ್ಥಳಾಂತರಿಸಲಾಗಿದೆ. ಇನ್ನೂ ಶೇ 70ರಷ್ಟು ಜನರು ಇಲ್ಲಿಯೇ ಉಳಿದಿದ್ದಾರೆ. ಮೂರು ದಿನಗಳಿಂದ ವಿದ್ಯುತ್, ಜನರೇಟರ್ ಮತ್ತು ಲಿಫ್ಟ್ ಮೊದಲಾದ ಮೂಲಸೌಕರ್ಯಗಳಿಲ್ಲದೆ ತೊಂದರೆಯಾಗಿದೆ. ನೀರು ಮತ್ತು ಆಹಾರ ಸಾಮಗ್ರಿ ಪೂರೈಕೆಯೂ ದುಸ್ತರವಾಗಿದೆ.

‘ಸ್ವಯಂಸೇವಕರು ಸೋಮವಾರದಿಂದ ಹಾಲು, ಬ್ರೆಡ್, ಬಿಸ್ಕೆಟ್, ಉಪಾಹಾರ ಹಾಗೂ ಊಟ ನೀಡುತ್ತಿದ್ದಾರೆ’ ಎಂದು ಅಪಾರ್ಟ್‌ಮೆಂಟ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ ಬಿ.ಆರ್.ಕೃಷ್ಣ ‘ಪ್ರಜಾವಾಣಿ’ಗೆ ತಿಳಿಸಿದರು. ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್‌ನ ತಳ ಮಹಡಿಯಲ್ಲಿ ನಿಲ್ಲಿಸಿದ ದ್ವಿಚಕ್ರವಾಹನಗಳು ನೀರಿನಲ್ಲಿ ತೇಲುತ್ತಿವೆ. ಇಲ್ಲಿ ನಿಲ್ಲಿಸಿದ್ದ ಅನೇಕ ಕಾರುಗಳ ಎಂಜಿನ್ ಒಳಗೆ ನೀರು ನುಗ್ಗಿದ್ದು, ಹಾನಿಗೊಳಗಾಗಿವೆ. ಕೆಲವರು ದುರಸ್ತಿ ಮಾಡಿಸಲು ದ್ವಿಚಕ್ರವಾಹನಗಳನ್ನು ನೀರಿನಲ್ಲೇ ತಳ್ಳಿಕೊಂಡು ಗ್ಯಾರೇಜ್‌ಗೆ ಸಾಗಿಸುತ್ತಿದ್ದರು.

ನೀರು ನುಗ್ಗಿದ್ದ ಮನೆಗಳನ್ನು ಸ್ವಚ್ಛಗೊಳಿಸುವ ಕಾರ್ಯ ಮಂಗಳವಾರವೂ ಮುಂದುವರಿದಿದೆ. ನೀರು ನುಗ್ಗಿ ರೆಫ್ರಿಜರೇಟರ್, ಟಿ.ವಿ. ಮತ್ತಿತರ ಉಪಕರಣಗಳು ಹಾನಿಗೊಳಗಾಗಿವೆ. ಅವುಗಳನ್ನು ದುರಸ್ತಿಗೆ ಕೊಂಡೊಯ್ಯಲು ಸಾಧ್ಯವಾಗದೇ ಚಡಪಡಿಸಿದರು. ಮನೆಗಳಿಗೆ ನುಗ್ಗಿದ ನೀರನ್ನು ತೆರವುಗೊಳಿಸಿದ ಬಳಿಕವೂ ಕೆಸರಿನ ವಾಸನೆ ಹಾಗೆಯೇ ಉಳಿದಿದೆ.

ಜಕ್ಕೂರಿನ ಜವಾಹರ ಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರದ (ಜೆಎನ್‌ಸಿಎಎಸ್‌ಆರ್) ಪ್ರಾಂಗಣದಲ್ಲೂ ಮಂಗಳವಾರವೂ ಸುಮಾರು ಒಂದು ಅಡಿಯಷ್ಟು ನೀರು ನಿಂತಿತ್ತು. ನೀರಿನಲ್ಲಿ ಮುಳುಗಿ ಹಾನಿಗೊಳಗಾದ ಉಪಕರಣಗಳನ್ನು ಇಲ್ಲಿನ ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಸ್ವಚ್ಛಗೊಳಿಸುತ್ತಿದ್ದುದು ಕಂಡು ಬಂತು. ಮಾನ್ಯತಾ ಟೆಕ್‌ಪಾರ್ಕ್‌ನಲ್ಲೂ ನೀರು ಸಂಪೂರ್ಣ ಇಳಿದುಹೋಗಿಲ್ಲ.

‘175 ಮನೆಗಳಿಗೆ ಹಾನಿ’

‘ನೀರು ನುಗ್ಗಿ 175 ಮನೆಗಳಿಗೆ ಹಾನಿ ಉಂಟಾಗಿದೆ ಎಂದು ಪ್ರಾಥಮಿಕ ಸಮೀಕ್ಷೆಯಿಂದ ತಿಳಿದುಬಂದಿದೆ. ಯಾವ ಮನೆಗೆ ಎಷ್ಟು ಪ್ರಮಾಣದಲ್ಲಿ ಹಾನಿಯಾಗಿದೆ ಎಂಬುದನ್ನು ನಮ್ಮ ಕಂದಾಯ ವಿಭಾಗದ ಅಧಿಕಾರಿಗಳು ಹಾಗೂ ಸಹಾಯಕ ಎಂಜಿನಿಯರ್‌ಗಳು ಪರಿಶೀಲಿಸುತ್ತಿದ್ದಾರೆ. ಸಂತ್ರಸ್ತರಿಗೆ ಜಿಲ್ಲಾಡಳಿತದಿಂದ ಪರಿಹಾರದ ಮೊತ್ತ ಪಾವತಿ ಆಗಿಲ್ಲ ಎಂಬುದನ್ನು ಖಾತರಿಪಡಿಸಿಕೊಂಡು ಆದಷ್ಟು ಬೇಗ ಪರಿಹಾರದ ಮೊತ್ತವನ್ನು ಅವರ ಬ್ಯಾಂಕ್ ಖಾತೆಗೆ ಹಾಕುತ್ತೇವೆ’ ಎಂದು ಬಿಬಿಎಂಪಿ ಯಲಹಂಕ ವಲಯದ ಜಂಟಿ ಆಯುಕ್ತರಾದ ಪೂರ್ಣಿಮಾ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಯಲಹಂಕದ ಸುರಭಿ ಬಡಾವಣೆಯಲ್ಲಿ 40 ಮಂದಿ ಕಾರ್ಮಿಕರು ಧವಸ ಧಾನ್ಯವಿಲ್ಲದೇ ಸಮಸ್ಯೆಗೆ ಸಿಲುಕಿದ್ದರು. ಅವರಿಗೆ ಬಿಬಿಎಂಪಿಯಿಂದ ಆಹಾರ ಧಾನ್ಯಗಳನ್ನು ಪೂರೈಸಿದ್ದೇವೆ’ ಎಂದರು.

‘ಒತ್ತುವರಿ ತೆರವುಗೊಳಿಸಿ’

ಜಲಾವೃತವಾಗಿರುವ ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್ ಸಮುಚ್ಚಯಕ್ಕೆ ಕಾಂಗ್ರೆಸ್ ಮುಖಂಡ ಎಂ.ವೀರಪ್ಪ ಮೊಯಿಲಿ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದರು.

‘ಯಲಹಂಕ ಪ್ರದೇಶದ ನಿವಾಸಿಗಳು ರಾಜಕಾಲುವೆಗಳನ್ನು ಆಕ್ರಮಿಸಿಕೊಂಡಿದ್ದಾರೆ. ಕೆಲವರು ಕಾಲುವೆಗಳನ್ನೇ ಮುಚ್ಚಿ ಅದರ ಮೇಲೆಯೇ ಮನೆ ಮತ್ತು ಅಪಾರ್ಟ್‌ಮೆಂಟ್ ಸಮುಚ್ಚಯ ನಿರ್ಮಿಸಿಕೊಂಡಿದ್ದಾರೆ. ಅದರ ಪರಿಣಾಮ, ನೀರು ಸರಾಗವಾಗಿ ಹರಿಯಲು ಜಾಗವಿಲ್ಲದೆ ಈ ಸಮಸ್ಯೆ ಉಲ್ಬಣಿಸಿದೆ. ಭಾರಿ ಮಳೆಯಾದಾಗ ನಿವಾಸಿಗಳು ತೊಂದರೆ ಅನುಭವಿಸಬೇಕಾಗಿದೆ’ ಎಂದರು.

‘ಈಗ ಸಂಗ್ರಹವಾಗಿರುವ ನೀರನ್ನು ಹೊರಹಾಕಿದರೆ ಸಾಲದು, ರಾಜಕಾಲುವೆ ಒತ್ತುವರಿ ತೆರವುಗೊಳಿಸಬೇಕು’ ಎಂದು ಅವರು ಒತ್ತಾಯಿಸಿದರು. ಕಾಂಗ್ರೆಸ್ ಮುಖಂಡರಾದ ಎಂ.ಎನ್.ಗೋಪಾಲಕೃಷ್ಣ, ವೈ.ಆರ್.ಶ್ರೀಧರ್, ಎ.ಎನ್.ಸಂತೋಷ್ ಕುಮಾರ್, ಪದ್ಮಾವತಿ ಅಮರನಾಥ್, ಲಾವಣ್ಯ ನರಸಿಂಹಮೂರ್ತಿ ಇದ್ದರು.

ಮುಖ್ಯ ರಾಜಕಾಲುವೆ ಸಮಗ್ರ ಅಭಿವೃದ್ಧಿಗೆ ಕ್ರಿಯಾಯೋಜನೆ ಸಿದ್ಧಪಡಿಸಲು ಸಲಹೆ

ರಾಜಕಾಲುವೆ ಒತ್ತುವರಿ ತೆರವು– ಸಿಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಾಜಕಾಲುವೆ ಒತ್ತುವರಿಗಳನ್ನು ತೆರವುಗೊಳಿಸಬೇಕು ಹಾಗೂ ಹೆಬ್ಬಾಳ ಕಣಿವೆಯ ಮಳೆ ನೀರು ಹರಿಸುವುದಕ್ಕೆ ಮುಖ್ಯ ರಾಜಕಾಲುವೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಕ್ರಿಯಾಯೋಜನೆ ರೂಪಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿದರು.

ಭಾರಿ ಮಳೆಯಿಂದ ಪ್ರವಾಹ ಉಂಟಾಗಿರುವ ಯಲಹಂಕ, ಜಕ್ಕೂರು ಹಾಗೂ ಮಾನ್ಯತಾ ಟೆಕ್‌ಪಾರ್ಕ್ ಪ್ರದೇಶಗಳಿಗೆ ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಮುಖ್ಯಮಂತ್ರಿ, ‘ಶ್ರೀಮಂತರು ಮಾಡಿರುವ ರಾಜಕಾಲುವೆ ಹಾಗೂ ಅದರ ಮೀಸಲು ಪ್ರದೇಶಗಳ ಒತ್ತುವರಿಗಳನ್ನು ಮೊದಲ ಹಂತದಲ್ಲಿ ತೆರವುಗೊಳಿಸಲಾಗುತ್ತದೆ. ಬಡವರು ಒತ್ತುವರಿ ಮಾಡಿದ್ದರೆ, ಅವರಿಗೆ ಪರ್ಯಾಯ ನಿವೇಶನಗಳನ್ನು ಒದಗಿಸಿ ನಂತರ ಒತ್ತುವರಿ ತೆರವು ಮಾಡುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ’ ಎಂದರು.

‘ರಾಜಕಾಲುವೆ ಮೀಸಲು ಪ್ರದೇಶ ಒತ್ತುವರಿ ಮಾಡಿಕೊಂಡು ನಿರ್ಮಾಣವಾಗಿರುವ ಅಪಾರ್ಟ್‌ಮೆಂಟ್ ಸಮುಚ್ಚಯಗಳನ್ನು ತೆರವು ಮಾಡುವಂತೆ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ ಆದೇಶವೂ ಇದೆ. ಕೆರೆ, ಕಾಲುವೆಗಳ ಮೀಸಲು ಪ್ರದೇಶದಲ್ಲಿ ಅಪಾರ್ಟ್‌ಮೆಂಟ್ ಸಮುಚ್ಚಯಗಳಿರುವುದು ದೊಡ್ಡ ಪ್ರಮಾಣದಲ್ಲಿ ಮಳೆಯಾದಾಗ ಬಯಲಿಗೆ ಬರುತ್ತದೆ. ಇಂತಹ ಕಟ್ಟಡಗಳ ಮಾಲೀಕರಿಗೆ ಈಗಾಗಲೇ ನೋಟಿಸ್ ನೀಡಲಾಗಿದೆ. ಮಳೆನೀರು ಹರಿವಿಗೆ ವ್ಯವಸ್ಥೆ ಕಲ್ಪಿಸಲು ಅವರು ಜಾಗ ಬಿಟ್ಟುಕೊಡಬೇಕು. ಇಲ್ಲದಿದ್ದರೆ ಅವರಿಗೇ ತೊಂದರೆ. ಈ ಕುರಿತು ಒಂದು ಅಭಿಯಾನ ನಡೆಸುತ್ತೇವೆ’ ಎಂದು ಮುಖ್ಯಮಂತ್ರಿ ತಿಳಿಸಿದರು.


‘ರಾಜಕಾಲುವೆ ಮೇಲೆ ಅಥವಾ ಅದರ ಮೀಸಲು ಪ್ರದೇಶದಲ್ಲಿ ಅಪಾರ್ಮೆಂಟ್ ಸಮುಚ್ಚಯ ನಿರ್ಮಿಸಲು ಅಧಿಕಾರಿಗಳು ಅನುಮತಿ ನೀಡಿದ್ದರೆ ಅದು ತಪ್ಪು. ಈ ಬಗ್ಗೆ ಮುಖ್ಯ ಆಯುಕ್ತರು ನೋಟಿಸ್ ನೀಡಿ ಇಂತಹ ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳಲಿದ್ದಾರೆ’ ಎಂದರು.

‘ಪ್ರವಾಹ ಉಂಟಾಗಲು ರಾಜಕಾಲುವೆ ಒತ್ತುವರಿ ಹಾಗೂ ಕೆಲವೆಡೆ ಕಾಲುವೆಗಳು ಮುಚ್ಚಿ ಹೋಗಿರುವುದರ ಜೊತೆ ಇತರ ಕಾರಣಗಳೂ ಇವೆ. ಇಷ್ಟು ವರ್ಷ ಮಳೆಯಿಂದ ಇಷ್ಟೊಂದು ಸಮಸ್ಯೆ ಆಗಿರಲಿಲ್ಲ. ಈ ಬಾರಿ ಬೆಂಗಳೂರು ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲೂ ಭಾರಿ ಮಳೆಯಾಗಿದೆ. ಎರಡೇ ಗಂಟೆಯಲ್ಲಿ 138 ಮಿ.ಮೀ ಮಳೆ ಬಿದ್ದಿದೆ. ಈ ಪ್ರದೇಶದ 11 ಕೆರೆಗಳ ನೀರು ಯಲಹಂಕ ಹಾಗೂ ಜಕ್ಕೂರು ಕೆರೆಗಳನ್ನು ಸೇರುತ್ತದೆ. 11 ಕೆರೆಗಳು ತುಂಬಿ ಹರಿದು ಕೋಡಿ ಹರಿದಿವೆ. ಇಲ್ಲಿನ ರಾಜಕಾಲುವೆಗಳ ಗಾತ್ರ ಕಡಿಮೆ ಇದೆ. ಕೆರೆ ನೀರಿನ ಭಾರಿ ಹೊರ ಹರಿವಿನ ಒತ್ತಡ ತಾಳಲು ಅವುಗಳ ಅಗಲ ಸಾಲುತ್ತಿಲ್ಲ’ ಎಂದು ಮುಖ್ಯಮಂತ್ರಿಯವರು ವಿಶ್ಲೇಷಿಸಿದರು.

ಕ್ರಿಯಾಯೋಜನೆ ಸಿದ್ಧಪಡಿಸಲು ಸೂಚನೆ: ಈ ಪ್ರದೇಶದ 11 ಕೆರೆಗಳು ತುಂಬಿ ಹರಿದಾಗ ನೀರು ಯಲಹಂಕ ಕೆರೆ, ಜಕ್ಕೂರು ಕೆರೆ, ರಾಚೇನಹಳ್ಳಿ ಕೆರೆಗಳನ್ನು ಸೇರುತ್ತದೆ. ಈ ಪ್ರದೇಶದ ಮಳೆ ನೀರು ಮಹಾದೇವಪುರ ನಾಲ್ಕೈದು ಕೆರೆಗಳನ್ನು ದಾಟಿ ಪಿನಾಕಿನಿ ನದಿಯ ಮೂಲಕ ತಮಿಳುನಾಡಿನತ್ತ ಹರಿಯುತ್ತದೆ. ರಾಜಕಾಲುವೆಗಳು ಮುಚ್ಚಿರುವುದನ್ನು ಹಾಗೂ ಅತಿಕ್ರಮಣಗಳನ್ನು ತೆರವುಗೊಳಿಸಿ ಸರಾಗವಾಗಿ ನೀರು ಹರಿಯಲು ವ್ಯವಸ್ಥೆ ಕಲ್ಪಿಸಬೇಕಿದೆ. ಶಾಶ್ವತ ರಾಜಕಾಲುವೆ ನಿರ್ಮಿಸಲು ಕ್ರಿಯಾಯೋಜನೆ ಸಿದ್ಧಪಡಿಸುವಂತೆ ಸೂಚನೆ ನೀಡಿದ್ದೇನೆ’ ಎಂದು ಮುಖ್ಯಮಂತ್ರಿ ತಿಳಿಸಿದರು.

‘ಸದ್ಯ ಇಲ್ಲಿನ ರಾಜಕಾಲುವೆಗಳ ಅಗಲ 8 ಅಡಿಗಳಷ್ಟು ಮಾತ್ರ ಇದೆ. ಅದು 30 ಅಡಿಗಳಷ್ಟಾದರೂ ಆಗಬೇಕು. ಹಾಗಾಗಿ ರಾಜಕಾಲುವೆ ವಿಸ್ತರಿಸಬೇಕಿದೆ. ಕೆಲವು ಕಡೆ ದಿಕ್ಕು ಬದಲಿಸಿ ಪರ್ಯಾಯ ಕಾಲುವೆ ರಚಿಸಬೇಕಿದೆ. ಇದಕ್ಕಾಗಿ ಅಗತ್ಯವಿರುವ ಕಡೆ ಅಭಿವೃದ್ಧಿ ಹಕ್ಕು ವರ್ಗಾವಣೆ (ಟಿಡಿಆರ್) ಪ್ರಮಾಣಪತ್ರ ನೀಡುವ ಮೂಲಕ ಭೂಮಿ ಪಡೆದುಕೊಳ್ಳುವಂತೆ ಸೂಚಿಸಿದ್ದೇನೆ. ವಸತಿ ಸಮುಚ್ಚಯಗಳ ಬಳಿ ತುಂಬಿರುವ ನೀರು ಹೊರಹಾಕಲು ಚರಂಡಿ ನಿರ್ಮಿಸುವಂತೆ ಸಲಹೆ ನೀಡಿದ್ದೇನೆ. ಯಲಹಂಕ ಪ್ರದೇಶದ ರಾಜಕಾಲುವೆ ರಾಷ್ಟ್ರೀಯ ಹೆದ್ದಾರಿಯ ಅಡಿಯಿಂದ ಮುಂದಕ್ಕೆ ಹಾದುಹೋಗಬೇಕಿದ್ದು, ಇದಕ್ಕೂ ಕ್ರಮ ಕೈಗೊಳ್ಳಲಿದ್ದೇವೆ’ ಎಂದರು.

‘ರಾಜಕಾಲುವೆಗಳ ಸಮಸ್ಯೆ ಬೆಂಗಳೂರಿನಾದ್ಯಂತ ಇದೆ. ಈ ವರ್ಷ 50 ಕಿ.ಮೀ ಉದ್ದದ ರಾಜಕಾಲುವೆ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಹೆಚ್ಚುವರಿಯಾಗಿ ಇನ್ನೂ 50 ಕಿ.ಮೀ.ಗಳಷ್ಟು ರಾಜಕಾಲುವೆ ಅಭಿವೃದ್ಧಿಪಡಿಸಲು ಮೊನ್ನೆ ನಡೆದ ಸಭೆಯಲ್ಲಿ ತೀರ್ಮಾನಿಸಿದ್ದೇವೆ’ ಎಂದು ತಿಳಿಸಿದರು.



ಜಕ್ಕೂರಿನ ಜವಾಹರ ಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರಕ್ಕೆ ಮಂಗಳವಾರ ಭೇಟಿ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೇಂದ್ರದ ಗೌರವಾಧ್ಯಕ್ಷ ಪ್ರೊ.ಸಿ.ಎನ್.ಆರ್.ರಾವ್ ಅವರಿಗೆ ನಮಿಸಿದರು

ವರದಿ ಪಡೆದ ಪ್ರಧಾನಿ

‘ಪ್ರಧಾನಿ ನರೇಂದ್ರ ಮೋದಿಯವರು ದೂರವಾಣಿ ಕರೆ ಮಾಡಿ ರಾಜ್ಯದಲ್ಲಿ ಮಳೆ, ಬೆಳೆಹಾನಿ, ಪ್ರಾಣಹಾನಿ ಹಾಗೂ ಕೈಗೊಂಡ ಪರಿಹಾರ ಕ್ರಮಗಳ ಬಗ್ಗೆ ವಿಚಾರಿಸಿದ್ದಾರೆ. ಬೆಂಗಳೂರು ನಗರದ ಬಗ್ಗೆ ಹೆಚ್ಚಿನ ಕಾಳಜಿ ತೋರಿಸಿ ವಿವರ ಪಡೆದುಕೊಂಡಿದ್ದಾರೆ. ಪರಿಸ್ಥಿತಿಯ ಸುಧಾರಣೆಗೆ ಅಲ್ಪಾವಧಿ ಹಾಗೂ ದೀರ್ಘಾವಧಿ ಕ್ರಮ ಕೈಕೊಳ್ಳಲು ಸೂಚನೆಯನ್ನು ನೀಡಿದ್ದಾರೆ’ ಎಂದು ಮುಖ್ಯಮಂತ್ರಿ ತಿಳಿಸಿದರು.

‘ಮನೆ ಕಳೆದುಕೊಂಡವರಿಗೆ ₹ 5 ಲಕ್ಷ’

‘ಯಲಹಂಕ ಕ್ಷೇತ್ರದಲ್ಲಿ 400 ಮನೆಗಳಿಗೆ ಹಾಗೂ ಬ್ಯಾಟರಾಯನಪುರ ಕ್ಷೇತ್ರದಲ್ಲಿ 600 ಮನೆಗಳಿಗೆ ಹಾನಿ ಉಂಟಾಗಿದೆ’ ಎಂದು ಮುಖ್ಯಮಂತ್ರಿ ತಿಳಿಸಿದರು.

ನೀರು ನುಗ್ಗಿ ಸಾಮಗ್ರಿಗಳು, ಪರಿಕರಗಳು ಹಾನಿಗೊಳಗಾಗಿರುವ ಮನೆ ಮಾಲೀಕರರಿಗೆ ಕೂಡಲೇ ₹ 10 ಸಾವಿರ ಪರಿಹಾರ ಬಿಡುಗಡೆ ಮಾಡಬೇಕು. ಪೂರ್ಣ ಪ್ರಮಾಣದಲ್ಲಿ ಮನೆಯನ್ನು ಕಳೆದುಕೊಂಡವರಿಗೆ ₹ 5 ಲಕ್ಷ ಪರಿಹಾರ ನೀಡಬೇಕು. ಇದರ ಮೊದಲ ಕಂತಿನ ರೂಪದಲ್ಲಿ ₹ 1 ಲಕ್ಷವನ್ನು ತಕ್ಷಣವೇ ನೀಡಬೇಕು. ಕಟ್ಟಡಕ್ಕೆ ಭಾಗಶಃ ಹಾನಿ ಆಗಿದ್ದರೆ ₹ 1 ಲಕ್ಷ ಪರಿಹಾರ ನೀಡಬೇಕು ಎಂದು ಮುಖ್ಯಮಂತ್ರಿಯವರು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಸೂಚನೆ ನೀಡಿದರು.

‘ಹಾನಿಗೊಳಗಾಗಿರುವ ಮೂಲಸೌಕರ್ಯ ದುರಸ್ತಿಗೂ ಅನುದಾನ ಒದಗಿಸುತ್ತೇವೆ. ಇದರ ಅಂದಾಜುಪಟ್ಟಿ ತಯಾರಿಸುವಂತೆ ನಿರ್ದೇಶನ ನಿಡಿದ್ದೇನೆ. ಯಲಹಂಕ ಕ್ಷೇತ್ರದಲ್ಲಿ 10 ಕಿ.ಮೀ ಉದ್ದದಷ್ಟು ಮುಖ್ಯರಸ್ತೆ ಹಾಗೂ 20 ಕಿ.ಮೀ ಉದ್ದದಷ್ಟು ಇತರ ರಸ್ತೆಗಳು ಹಾನಿಗೊಳಾಗಿವೆ. ಬ್ಯಾಟರಾಯನಪುರ ಕ್ಷೇತ್ರದಲ್ಲಿ 45 ಕಿ.ಮೀ ಉದ್ದದ ರಸ್ತೆಗಳಿಗೆ ಹಾನಿ ಆಗಿದೆ. ಅವುಗಳ ದುರಸ್ತಿಗೆ ಕ್ರಮ ಕೈಗೊಳ್ಳುತ್ತೇವೆ’ ಎಂದರು.

‘ಮಾನ್ಯತಾ ಟೆಕ್‌ಪಾರ್ಕ್ ಸಮಸ್ಯೆ ನೀಗಿಸಲು ಕ್ರಮ‘

‘ಮಾನ್ಯತಾ ಟೆಕ್ ಪಾರ್ಕ್‌ನಲ್ಲಿರುವ ಆಂತರಿಕ ಚರಂಡಿ ವ್ಯವಸ್ಥೆಯಿಂದ ನೀರು ವಾಪಸ್ ಬಂದು ಸಮಸ್ಯೆ ಸೃಷ್ಟಿಯಾಗುತ್ತಿದೆ. ಟೆಕ್‌ಪಾರ್ಕ್‌ನ ಆಂತರಿಕ ಚರಂಡಿ ವ್ಯವಸ್ಥೆಯ ಲೋಪ ಹಾಗೂ ಹೊರಗಿನ ರಾಜಕಾಲುವೆ ಸಮಸ್ಯೆ ಬಗ್ಗೆ ಅಧಿಕಾರಿಗಳು ಹಾಗೂ ಟೆಕ್‌ಪಾರ್ಕ್‌ನವರು ಪರಸ್ಪರ ಸಮಾಲೋಚಿಸಿ ಸರಿಪಡಿಸಲಿದ್ದಾರೆ. ಇಲ್ಲಿ ಕೆಲಸ ಮಾಡುವ ನೌಕರರಿಗೆ ತೊಂದರೆಯಾಗದಂತೆ ಶೀಘ್ರವೇ ಕ್ರಮ ಕೈಗೊಳ್ಳಲು ಸೂಚನೆ ನೀಡಿದ್ದೇವೆ’ ಎಂದು ಮುಖ್ಯಮಂತ್ರಿ ತಿಳಿಸಿದರು.

ಹೊಲಕ್ಕೊಂದು ಕೆರೆ, ಕನಿಷ್ಠ ಬೆಲೆ

ಒಂದನೇ ಪುಟದಿಂದ

ಬೆಲೆ ಏರಿಳಿತ ತಪ್ಪಿಸಲು ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಉತ್ಪನ್ನಗಳನ್ನು ಖರೀದಿಸಬೇಕು. ಈ ಉದ್ದೇಶಕ್ಕೆ ಆವರ್ತ ನಿಧಿಯ ಮೊತ್ತ ಹೆಚ್ಚಿಸಬೇಕು. ರಾಜ್ಯದಲ್ಲಿ ಬೆಳೆಯುವ ಭತ್ತ, ರಾಗಿ, ಜೋಳ ಉತ್ಪನ್ನಗಳ ಉತ್ಪಾದನೆ ಸುಸ್ಥಿರಗೊಳಿಸಲು, ರೈತರಿಂದ ಉತ್ಪನ್ನಗಳನ್ನು ಬೆಂಬಲ ಬೆಲೆಯಲ್ಲಿ ಖರೀದಿಸಿ ಪಡಿತರ ವ್ಯವಸ್ಥೆಯಲ್ಲಿ ವಿತರಿಸಿದರೆ ಬೆಳೆಗಾರರಿಗೆ ನಿರ್ದಿಷ್ಟ ಬೆಲೆ ಸಿಗುವಂತೆ ಮಾಡಬಹುದು ಎಂದೂ ಆಯೋಗ ಅಭಿಪ್ರಾಯಪಟ್ಟಿದೆ.

ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಹನುಮಗೌಡ ಬೆಳಗುರ್ಕಿ ವರದಿ ಸಲ್ಲಿಸಿದರು. ಕೃಷಿ ಇಲಾಖೆ ನಿರ್ದೇಶಕ ಶ್ರೀನಿವಾಸ್, ಬಿಜೆಪಿ ಮುಖಂಡ ಪ್ರತಾಪಗೌಡ ಪಾಟೀಲ ಇದ್ದರು.

ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯಲ್ಲಿ ಬದಲಾವಣೆ

ಒಂದನೇ ಪುಟದಿಂದ

‘ವರ್ಗಾವಣೆ ಅವಕಾಶದಿಂದ ವಂಚಿತರಾಗಿದ್ದ 40ಕ್ಕೂ ಹೆಚ್ಚು ತಾಲ್ಲೂಕುಗಳ ಶಿಕ್ಷಕರಿಗೆ ಈ ಆದೇಶದಿಂದ ಅನುಕೂಲವಾಗಲಿದೆ. ಈ ಎಲ್ಲ ಶಿಕ್ಷಕರೂ ಅರ್ಜಿ ಸಲ್ಲಿಸಬೇಕಿರುವುದರಿಂದ ಬುಧವಾರದಿಂದ ಆರಂಭವಾಗಬೇಕಿದ್ದ ವರ್ಗಾವಣೆ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಕೆಲವು ದಿನಗಳ ಕಾಲ ಮುಂದೂಡುವ ಸಾಧ್ಯತೆ ಇದೆ’ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ತಿಳಿಸಿದ್ದಾರೆ.

ಫೇಸ್‌ಬುಕ್ ಲೈವ್ ಸಂವಾದದಲ್ಲಿ ಕಾಂಗ್ರೆಸ್, ಎಎಪಿ ಆರೋಪ

‘ನೈತಿಕ ಶಕ್ತಿ ಕಳೆದುಕೊಂಡ ಬಿಜೆಪಿ’

ಪ್ರಜಾವಾಣಿ ವಾರ್ತೆ

ರಾಜ್ಯದಲ್ಲಿ ಸರ್ಕಾರಿ ಕಾಮಗಾರಿಗಳಿಗೆ ಬಿಡುಗಡೆಯಾಗುವ ಅನುದಾನದಲ್ಲಿ ಶೇಕಡ 40ರಷ್ಟು ಮೊತ್ತ ಲಂಚದ ರೂಪದಲ್ಲಿ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳ ಜೇಬು ಸೇರುತ್ತಿದೆ ಎಂದು ಆರೋಪಿಸಿ ರಾಜ್ಯ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೂರು ನೀಡಿದ್ದಾರೆ. ರಾಜ್ಯಪಾಲರು, ಮುಖ್ಯಮಂತ್ರಿ ಸೇರಿದಂತೆ ಹಲವರಿಗೆ ಇದೇ ದೂರನ್ನು ಸಲ್ಲಿಸಿ, ಕ್ರಮಕ್ಕೆ ಆಗ್ರಹಿಸಿದ್ದಾರೆ. ಈ ವಿಷಯ ಈಗ ರಾಜ್ಯ ರಾಜಕೀಯದಲ್ಲಿ ಆರೋಪ– ಪ್ರತ್ಯಾರೋಪಗಳಿಗೆ ನಾಂದಿಹಾಡಿದೆ. ಈ ಕುರಿತು ‘ಪ್ರಜಾವಾಣಿ’ ಮಂಗಳವಾರ ಆಯೋಜಿಸಿದ್ದ ಫೇಸ್‌ಬುಕ್ ಲೈವ್ ಸಂವಾದದಲ್ಲಿ ಕಾಂಗ್ರೆಸ್, ಬಿಜೆಪಿ, ಆಮ್ ಆದ್ಮಿ ಪಕ್ಷಗಳ ಪ್ರತಿನಿಧಿಗಳು ವ್ಯಕ್ತಪಡಿಸಿದ ಅಭಿಪ್ರಾಯಗಳ ಸಂಕ್ಷಿಪ್ತ ರೂಪ ಇಲ್ಲಿದೆ.

ಸಂವಾದವನ್ನು ವೀಕ್ಷಿಸಲು https://m.facebook.com/prajavani.net/videos/433154954837031/ ಲಿಂಕ್ ಬಳಸಬಹುದು.

ಶೇ 40ರಷ್ಟು ‘ಬಿಜೆಪಿ ಟ್ಯಾಕ್ಸ್’




ಹಿಂದೆ ಕಾಂಗ್ರೆಸ್ ಆಡಳಿತದಲ್ಲಿ ‘ಶೇ 10ರ ಸರ್ಕಾರ’ ಇದ್ದರೆ, ಸಮ್ಮಿಶ್ರ ಸರ್ಕಾರದಲ್ಲಿ ಅದು ಶೇ 15ರಿಂದ 20ಗೆ ಏರಿಕೆಯಾಯಿತು. ಬಿಜೆಪಿ ಸರ್ಕಾರದಲ್ಲಿ ಇದು ಶೇ 40ರಿಂದ 52ಕ್ಕೆ ತಲುಪಿದೆ. ಬಿಜೆಪಿ, ಕಾಂಗ್ರೆಸ್ ಪಕ್ಷಗಳು ಪರಸ್ಪರ ಆರೋಪ ಮಾಡುತ್ತಿವೆಯೇ ವಿನಾ ತನಿಖೆಗೆ ಮುಂದಾಗುತ್ತಿಲ್ಲ. ಜನರು ನೀಡುತ್ತಿರುವ ತೆರಿಗೆಯ ಹಣ ಲಂಚದ ರೂಪದಲ್ಲಿ ಬಿಜೆಪಿ ಪಾಲಾಗುತ್ತಿದೆ. ಗುತ್ತಿಗೆದಾರರ ಮೂಲಕ ಸರ್ಕಾರಕ್ಕೆ ಶೇ 40ರಷ್ಟು ‘ಬಿಜೆಪಿ ಟ್ಯಾಕ್ಸ್’ ತಲುಪುತ್ತಿದೆ.

ಕಾಮಗಾರಿಗಳ ಟೆಂಡರ್ ಅಧಿಸೂಚನೆ ಪ್ರಕಟಿಸುವುದಕ್ಕೂ ಲಂಚ ನೀಡಬೇಕಾದ ಪರಿಸ್ಥಿತಿ ರಾಜ್ಯದಲ್ಲಿ ಇದೆ. ಮೂರೂ ಪಕ್ಷಗಳ ಭ್ರಷ್ಟಾಚಾರದ ಬಗ್ಗೆ ಆಮ್ ಆದ್ಮಿ ಪಾರ್ಟಿ ಜನಜಾಗೃತಿ ಅಭಿಯಾನ ನಡೆಸುತ್ತಿದೆ. ಸಾಮಾಜಿಕ ಸಮೀಕ್ಷೆ ಮೂಲಕ ಕಳಪೆ ಕಾಮಗಾರಿಗಳನ್ನು ಬೆಳಕಿಗೆ ತಂದು ಮತದಾರರನ್ನು ಎಚ್ಚರಿಸುವ ಕೆಲಸ ಮಾಡುತ್ತೇವೆ.

ಉಷಾ ಮೋಹನ್, ಆಮ್ ಆದ್ಮಿ ಪಾರ್ಟಿ ವಕ್ತಾರೆ

facebook LIVE

‘ಕೇಶವ ಕೃಪಾ’ದಲ್ಲಿ ಅಪಪ್ರಚಾರದ ತರಬೇತಿ



ರಾಜ್ಯ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಬಿಜೆಪಿ ಸರ್ಕಾರದ ಮೇಲೆ ಮಾಡಿರುವ ಲಂಚದ ಆರೋಪದ ಬಗ್ಗೆ ಸ್ವತಂತ್ರ ನ್ಯಾಯಾಂಗ ತನಿಖೆ ಆಗಬೇಕು. ‘ನಾನು ತಿನ್ನಲ್ಲ, ತಿನ್ನೋಕೆ ಬಿಡಲ್ಲ’ ಎಂಬುದು ಈ ಹಿಂದಿನ ಎರಡು ಚುನಾವಣೆಗಳಲ್ಲಿ ಪ್ರಧಾನಿಯವರ ಘೋಷಣೆಯಾಗಿತ್ತು. ಆದರೆ, ಈಗ ಕೇಂದ್ರ, ರಾಜ್ಯ ಸರ್ಕಾರಗಳು ‘ನನಗೆ ತಿನ್ನಿಸು, ನೀನೂ ತಿನ್ನು’ ಎಂಬ ಮಟ್ಟಕ್ಕೆ ಇಳಿದಿವೆ. ಬಿಜೆಪಿ ಈಗ ‘ಭ್ರಷ್ಟಾಚಾರ ಜನತಾ ಪಕ್ಷ’ವಾಗಿದೆ. ಬಿಜೆಪಿ ಹಾಗೂ ಈ ಪಕ್ಷಕ್ಕೆ ಪರೋಕ್ಷ ಬೆಂಬಲ ನೀಡುತ್ತಿರುವ ಆರ್‌ಎಸ್‌ಎಸ್ ನೈತಿಕ ಶಕ್ತಿ ಕಳೆದುಕೊಂಡಿವೆ. ಭ್ರಷ್ಟಾಚಾರ ಪ್ರಶ್ನಿಸುವ ಸಿದ್ದರಾಮಯ್ಯ ವಿರುದ್ಧ ಅಪಪ್ರಚಾರ ನಡೆಸುವ ಕುರಿತು ಕೇಶವಕೃಪಾದಲ್ಲೇ ತರಬೇತಿ ನೀಡಲಾಗುತ್ತಿದೆ.

ಹೆಚ್ಚು ಅನುದಾನ ಇರುವ ಎಲ್ಲ ಇಲಾಖೆಗಳಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ. ಭ್ರಷ್ಟಾಚಾರದ ವಿರುದ್ಧ ಮಾತನಾಡಿದರೆ ಅದಕ್ಕೆ ಕಾಂಗ್ರೆಸ್ ಪಕ್ಷವನ್ನು ತಳಕು ಹಾಕುವ ಜಾಯಮಾನ ಬಿಜೆಪಿಯದ್ದು. ಬಿಟ್‌ಕಾಯಿನ್ ಹಾಗೂ ಲಂಚ ಆರೋಪದ ಬಗ್ಗೆ ಸಮಗ್ರ ಮಾಹಿತಿ ಕಲೆಹಾಕಿದ್ದೇವೆ. ಎರಡೂ ವಿಷಯಗಳಲ್ಲಿ ಮುಂಬರುವ ವಿಧಾನಮಂಡಲ ಅಧಿವೇಶನದಲ್ಲಿ ಬಿಜೆಪಿಯ ವಿರುದ್ಧ ಪ್ರಬಲ ಹೋರಾಟ ನಡೆಸುತ್ತೇವೆ.

ರಮೇಶ್ ಬಾಬು, ಕಾಂಗ್ರೆಸ್ ರಾಜ್ಯ ಘಟಕದ ವಕ್ತಾರ

ಭ್ರಷ್ಟಾಚಾರ ಪರಿಚಯಿಸಿದ್ದೇ ಕಾಂಗ್ರೆಸ್



ಈ ದೇಶಕ್ಕೆ ಭ್ರಷ್ಟಾಚಾರ ಪರಿಚಯಿಸಿದ್ದೇ ಕಾಂಗ್ರೆಸ್ ಪಕ್ಷ. ಬಿಜೆಪಿ ನೀಡುತ್ತಿರುವ ಉತ್ತಮ ಆಡಳಿತ ಸಹಿಸಿಕೊಳ್ಳಲಾಗದೆ, ವಿನಾಕಾರಣ ಆಪಾದನೆ ಮಾಡುತ್ತಿದೆ. ಗುತ್ತಿಗೆದಾರರ ಆರೋಪಗಳು ಕಾಂಗ್ರೆಸ್ ಪ್ರೇರಿತವಾಗಿವೆ. ಲಂಚ ಕೊಡುವುದೂ ತಪ್ಪು, ತೆಗೆದುಕೊಳ್ಳುವುದೂ ತಪ್ಪೇ. ಆದ್ದರಿಂದ ಯಾರಿಗೆ ಹಣ ಕೊಟ್ಟಿದ್ದೇವೆ ಎಂಬುದನ್ನು ಗುತ್ತಿಗೆದಾರರ ಸಂಘದವರು ಸ್ಪಷ್ಟಪಡಿಸಬೇಕು.

ಸರ್ಕಾರ ₹100 ಬಿಡುಗಡೆ ಮಾಡಿದರೆ ₹15 ಮಾತ್ರ ಫಲಾನುಭವಿಗೆ ತಲುಪುತ್ತದೆ ಎಂದು ರಾಜೀವ್ ಗಾಂಧಿ ಹಿಂದೆಯೇ ಹೇಳಿದ್ದರು. ಆ ಬಗ್ಗೆ ಕಾಂಗ್ರೆಸ್ ಏನು ಹೇಳುತ್ತದೆ? ಬಿಟ್‌ಕಾಯಿನ್ ವಿಚಾರದಲ್ಲಿ ಸಿದ್ದರಾಮಯ್ಯ ಅವರ ಪುತ್ರನ ಹೆಸರು ಮುನ್ನೆಲೆಗೆ ಬರುತ್ತಿದ್ದಂತೆ ಕಾಂಗ್ರೆಸ್ ಮೌನವಹಿಸಿದ್ದೇಕೆ? ₹8,000 ಕೋಟಿಯ ಎತ್ತಿನಹೊಳೆ ಯೋಜನೆಯನ್ನು ಸಿದ್ದರಾಮಯ್ಯ ಅವಧಿಯಲ್ಲಿ ₹12,000 ಕೋಟಿಗೆ ಹೆಚ್ಚಿಸಿದ್ದೇಕೆ?

ಸರ್ಕಾರದ ಮೇಲೆ ಗೂಬೆ ಕೂರಿಸುವುದು, ಎಲ್ಲದಕ್ಕೂ ಸಂಘ ಪರಿವಾರವನ್ನು ಎಳೆದು ತರುವುದು ಕಾಂಗ್ರೆಸ್‌ಗೆ ರೂಢಿಯಾಗಿದೆ. ಕಾಂಗ್ರೆಸ್ ತನ್ನ ಅಧಿಕಾರಾವಧಿಯಲ್ಲಿ ನಡೆದ ಭ್ರಷ್ಟಾಚಾರ ಬಯಲಿಗೆ ಬರಬಹುದೆಂಬ ಭೀತಿಯಲ್ಲಿ ಲೋಕಾಯುಕ್ತದ ಕತ್ತು ಹಿಸುಕಿದೆ. ಭ್ರಷ್ಟಾಚಾರದ ಬಗ್ಗೆ ದಾಖಲೆಗಳಿದ್ದರೆ ಬಹಿರಂಗಪಡಿಸಬೇಕು. ಆಧಾರರಹಿತ ಆರೋಪ ಮಾಡುವುದು ಸರಿಯಲ್ಲ.

ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ



ಕಸಾಪ: ಫಲಿತಾಂಶ ಇಂದು

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯ ಫಲಿತಾಂಶ ಪರಿಷತ್ತಿನ ಕೇಂದ್ರ ಕಚೇರಿಯಲ್ಲಿ ಬುಧವಾರ ಅಧಿಕೃತವಾಗಿ ಘೋಷಣೆಯಾಗಲಿದೆ. ಭಾನುವಾರ ನಡೆದಿದ್ದ ಮತದಾನದಲ್ಲಿ 1.59 ಲಕ್ಷ ಮಂದಿ ಹಕ್ಕು ಚಲಾಯಿಸಿದ್ದರು.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ 21 ಅಭ್ಯರ್ಥಿಗಳಲ್ಲಿ ಮಹೇಶ ಜೋಶಿಗೆ 68,525 ಮತಗಳು ಲಭಿಸಿದ್ದರೆ, ಶೇಖರಗೌಡ ಮಾಲಿ ಪಾಟೀಲ ಅವರಿಗೆ 22,357 ಮತಗಳು ಬಂದಿದ್ದವು. ಮಹೇಶ ಜೋಶಿ ಅವರು 46,168 ಮತಗಳ ಮುನ್ನಡೆ ಸಾಧಿಸಿದ್ದು, ಹೊರನಾಡ ಅಂಚೆ ಮತಗಳು ಮಾತ್ರ ಎಣಿಕೆಯಾಗಬೇಕಿದೆ. ಹೀಗಾಗಿ, ಜೋಶಿ ಅವರ ಗೆಲುವು ಈಗಾಗಲೇ ಖಚಿತಗೊಂಡಿದ್ದು, ಅಧಿಕೃತ ಘೋಷಣೆ ಮಾತ್ರ ಬಾಕಿಯಿದೆ. ಹೊರ ರಾಜ್ಯಗಳಲ್ಲಿ 4,479 ಮತದಾರರಿದ್ದು, 1,300ಕ್ಕೂ ಅಧಿಕ ಮತಪತ್ರಗಳು ವಿಳಾಸ ಮತ್ತಿತರ ಕಾರಣಗಳಿಂದ ವಾಪಸ್ ಆಗಿವೆ. ತಮಿಳುನಾಡು ಗಡಿನಾಡು ಘಟಕದ ಅಧ್ಯಕ್ಷ ಸ್ಥಾನಕ್ಕೆ ಒಬ್ಬರು ಕಣದಲ್ಲಿದ್ದರು. ಹೀಗಾಗಿ, ಅಲ್ಲಿ ಅವಿರೋಧ ಆಯ್ಕೆ ನಡೆಯಲಿದೆ. ಗೋವಾ ಗಡಿನಾಡು ಘಟಕಕ್ಕೆ ಯಾವುದೇ ಅಭ್ಯರ್ಥಿ ಸ್ಪರ್ಧಿಸಿಲ್ಲ. ಕೇರಳ, ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶ ಗಡಿನಾಡು ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯ ಫಲಿತಾಂಶವೂ ಬುಧವಾರ ಹೊರಬೀಳಲಿದೆ.

ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆಗೆ ಎಲ್ಲಾ ಜಿಲ್ಲೆಗಳಿಂದ ಬಂದ ಮತಗಳ ವಿವರ ಹಾಗೂ ಅಂಚೆ ಮತಗಳನ್ನು ಕ್ರೋಢೀಕರಿಸಿ, ಕೇಂದ್ರ ಚುನಾವಣಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಘೋಷಿಸಲಿದ್ದಾರೆ.

ದಶಕಗಳ ವೈಜ್ಞಾನಿಕ ಸಂಶೋಧನೆ ನೀರುಪಾಲು!

ಒಂದನೇ ಪುಟದಿಂದ

ಅನೇಕ ಸಂಶೋಧನೆಗಳು ಅಂತಿಮ ಹಂತದಲ್ಲಿದ್ದವು. ಅವುಗಳನ್ನು ಪೂರ್ಣಗೊಳಿಸುವುದು ಹೇಗೆಂದೇ ತೋಚುತ್ತಿಲ್ಲ ಎಂದು ಇಲ್ಲಿ ಸಂಶೋಧನಾನಿರತ ವಿಜ್ಞಾನಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಕಳವಳ ವ್ಯಕ್ತಪಡಿಸಿದರು.

‘ಅಲ್ಜೈಮರ್ಸ್, ಪಾರ್ಕಿನ್ಸನ್, ಎಚ್‌ಐವಿ, ಮಲೇರಿಯಾ, ಅಪಸ್ಮಾರ ಸೇರಿದಂತೆ ಅನೇಕ ಪ್ರಮುಖ ಕಾಯಿಲೆಗಳಿಗೆ ಸಂಬಂಧಿಸಿದ ಸಂಶೋಧನೆಗಳು ಇಲ್ಲಿನ ಪ್ರಯೋಗಾಲಯಗಳಲ್ಲಿ ನಡೆಯುತ್ತಿವೆ. ಆಕರ ಕೋಶಗಳು, ಮಿದುಳಿನ ಜೀವಕೋಶಗಳ ಹಾಗೂ ವಂಶವಾಹಿ ಸಂಶೋಧನೆಗೆ ಸಂಬಂಧಿಸಿದ ಜೀವಕೋಶಗಳ ಮಾದರಿಗಳ ಭಾರಿ ಸಂಗ್ರಹ ಇಲ್ಲಿದೆ. ಇವುಗಳನ್ನು ಕಳೆದುಕೊಳ್ಳಬೇಕಾದ ಪ್ರಮೇಯ ಎದುರಾಗಿದೆ’ ಎಂದು ಅಣು ಜೀವವಿಜ್ಞಾನ ಮತ್ತು ವಂಶವಾಹಿ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ರವಿ ಮಂಜಿತ್ತಾಯ ಬೇಸರ ವ್ಯಕ್ತಪಡಿಸಿದರು.

‘ನಮ್ಮ ಸಂಸ್ಥೆಯ ಸಂಶೋಧನೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಪಡೆದಿವೆ. ನಮ್ಮ ವಿಜ್ಞಾನಿಗಳೇ ಅಭಿವೃದ್ಧಿಪಡಿಸಿರುವ ರಿಏಜೆಂಟ್‌ಗಳನ್ನು ಕಳೆದುಕೊಂಡಿದ್ದೇವೆ. ಅನೇಕ ಉಪಕರಣಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳಬೇಕಾಗುತ್ತದೆ’ ಎಂದರು.

ಇಸ್ರೋನ ವಿಜ್ಞಾನಿ ಪ್ರೊ. ಶಿವಪ್ರಸಾದ್, ‘ನೆಲಮಹಡಿಯಲ್ಲಿದ್ದ ಕೆಲವು ಪ್ರಯೋಗಾಲಯಗಳಲ್ಲಿ ಮೂರು– ನಾಲ್ಕು ಅಡಿಗಳಷ್ಟು ನೀರು ನಿಂತಿತ್ತು. ಅನಿವಾರ್ಯವಾಗಿ ಉಪಕರಣಗಳಿಗೆ ವಿದ್ಯುತ್ ಪೂರೈಕೆ ಸ್ಥಗಿತಗೊಳಿಸಬೇಕಾಯಿತು. ಅಳಿದುಳಿದ ಮಾದರಿಗಳಲ್ಲಿ ಈಗ ಎಷ್ಟು ಸುಸ್ಥಿತಿಯಲ್ಲಿವೆ ಎಂಬುದು ತಿಳಿಯದು. ಸಂಶೋಧನಾ ಚಟುವಟಿಕೆಯನ್ನು ಸಹಜ ಸ್ಥಿತಿಗೆ ತರಲು ತಿಂಗಳಾನುಗಟ್ಟಲೆ ಶ್ರಮಿಸಬೇಕಿದೆ. ಸದ್ಯ ಹಾನಿಯ ಲೆಕ್ಕಾಚಾರದಲ್ಲಿ ತೊಡಗಿದ್ದೇವೆ’ ಎಂದರು.

‘ಸಂಶೋಧನೆ ಪ್ರಕ್ರಿಯೆ ಇನ್ನೇನು ಮುಗಿಯುವ ಹಂತದಲ್ಲಿತ್ತು. ಅಷ್ಟರಲ್ಲಿ ಕೋವಿಡ್ ಎದುರಾಯಿತು. ಕೆಲ ತಿಂಗಳ ಹಿಂದಷ್ಟೇ ಸಂಶೋಧನೆ ಪುನರಾರಂಭ ಮಾಡಿದ್ದೆವು. ಪ್ರವಾಹ ನಮ್ಮ ಶ್ರಮವನ್ನೆಲ್ಲ ನೀರುಪಾಲು ಮಾಡಿದೆ. ದಿಕ್ಕೇ ತೋಚದ ಸ್ಥಿತಿಯಲ್ಲಿ ನಾವಿದ್ದೇವೆ’ ಎಂದು ಸಂಶೋಧನಾ ವಿದ್ಯಾರ್ಥಿಯೊಬ್ಬರು ಅಳಲು ತೋಡಿಕೊಂಡರು.



ಜಕ್ಕೂರಿನ ಜವಾಹರಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರದೊಳಗೆ ನಿಂತಿದ್ದ ಕೆಸರು ನೀರನ್ನು ತೆರವುಗೊಳಿಸುವುದರಲ್ಲಿ ಮಂಗಳವಾರ ನಿರತವಾಗಿರುವ ಸಂಶೋಧನಾ ವಿದ್ಯಾರ್ಥಿ –ಪ್ರಜಾವಾಣಿ ಚಿತ್ರ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	4,292	4,067
ಹಾರಂಗಿ	2,859	2,857.53	780	1,100
ಕಬಿನಿ	2,284	2,283.96	2,900	1,500
ಹೇಮಾವತಿ	2,922	2,911.77	5,919	350
ಲಿಂಗನಮಕ್ಕಿ	1,819	1,780.60	12,327	1,603
ಸೂಪಾ (ಮೀ)	564	555.15	1,161	3,327
ಮಾಣಿ	594	583.9	3,568	-
ತುಂಗಭದ್ರಾ	1,633	1,632.92	55,840	52,099
ಮಲಪ್ರಭಾ	2,079.50	2,077.00	769	769
ಘಟಪ್ರಭಾ	2,175	2,165.63	175	175
ಭದ್ರಾ	186	162.70	15,835	2,004
ಆಲಮಟ್ಟಿ (ಮೀ)	519.60	518.37	6,800	1,580
ನಾರಾಯಣಪುರ (ಮೀ)	492.25	491.96	8,369	420

* ನೆಲಮಟ್ಟದಿಂದ

ಮಳೆ ಹಾನಿ: ₹ 418 ಕೋಟಿ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜುಲೈ ತಿಂಗಳಿನಿಂದ ಈವರೆಗೆ ಸುರಿದ ಅತಿವೃಷ್ಟಿಯಿಂದ ಬಾಧಿತರಾದ ಸಂತ್ರಸ್ತರಿಗೆ ಪರಿಹಾರ ವಿತರಿಸಲು ರಾಜ್ಯ ವಿಕೋಪ ಪರಿಹಾರ ನಿಧಿಯಿಂದ ₹418.72 ಕೋಟಿ ಅನುದಾನ ಬಿಡುಗಡೆ ಮಾಡಿ ಕಂದಾಯ ಇಲಾಖೆ ಮಂಗಳವಾರ ಆದೇಶ ಹೊರಡಿಸಿದೆ.

21 ಜಿಲ್ಲೆಗಳ ಜಿಲ್ಲಾಧಿಕಾರಿಗಳ ಖಾತೆಗೆ ಈ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ಜುಲೈ ತಿಂಗಳಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಉಂಟಾಗಿದ್ದ ಪ್ರವಾಹ, ಬಳಿಕ ಆಗಸ್ಟ್‌ನಿಂದ ನವೆಂಬರ್‌ವರೆಗೆ ಸುರಿದ ಮಳೆಯಿಂದ ಸಂತ್ರಸ್ತರಾದವರಿಗೆ ಪರಿಹಾರ ನೀಡಲು ಈ ಮೊತ್ತವನ್ನು ಬಳಕೆ ಮಾಡಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಅತಿವೃಷ್ಟಿಯಿಂದ ಸಂತ್ರಸ್ತರಾಗಿರುವ 85,862 ಕುಟುಂಬಗಳಿಗೆ ಗೃಹೋಪಯೋಗಿ ವಸ್ತುಗಳ ಹಾನಿಯ ಬಾಬ್ತು ಪರಿಹಾರ ವಿತರಿಸಲು ₹ 85.86 ಕೋಟಿ ಒದಗಿಸಲಾಗಿದೆ. ಹಾನಿಗೀಡಾದ ಮನೆಗಳಿಗೆ ಪರಿಹಾರ ನೀಡಲು ₹ 332.86 ಕೋಟಿ ಅನುದಾನ ಒದಗಿಸಲಾಗಿದೆ.

ಚಾವಣಿ ಕುಸಿದು ಮಹಿಳೆ ಸಾವು

ಕೂಡ್ಲಿಗಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ತುಪ್ಪಾಕನಹಳ್ಳಿಯಲ್ಲಿ ಸೋಮವಾರ ಬೆಳಗಿನ ಜಾವ 2ಗಂಟೆ ಹೊತ್ತಿಗೆ ಮನೆಯ ಚಾವಣಿ ಕುಸಿದು ಕೊಟ್ರಮ್ಮ (51) ಮೃತಪಟ್ಟಿದ್ದಾರೆ.



ಕೊಟ್ರಮ್ಮ

ಕೊಟ್ರಮ್ಮ ಹಾಗೂ ಅವರ ಮಗ ಸಿದ್ದಲಿಂಗ ಸ್ವಾಮಿ ಮನೆಯಲ್ಲಿ ಮಲಗಿದ್ದರು. ಕುಸಿತದ ಶಬ್ದ ಕೇಳಿ ಸಿದ್ದಲಿಂಗಸ್ವಾಮಿ ಮನೆಯಿಂದ ಹೊರ ಓಡಿ ಬಂದಿದ್ದಾರೆ. ಕೊಟ್ರಮ್ಮ ಅವರ ಪತಿ ರುದ್ರಯ್ಯ ಮನೆಯ ಹೊರಗಡೆ ಮಲಗಿದ್ದರು. ಸ್ಥಳಕ್ಕೆ ತಹಶೀಲ್ದಾರ್ ಟಿ. ಜಗದೀಶ ಭೇಟಿ ನೀಡಿದ್ದರು.

ಮೂವರು ವಿದ್ಯಾರ್ಥಿಗಳಿಗೆ ಗಾಯ(ಹಾಸನ ವರದಿ): ಮಳೆಯಿಂದಾಗಿ ನಗರದ ಸಂತೆಪೇಟೆಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಚಾವಣಿ ಕುಸಿದು, ಮೂವರು ವಿದ್ಯಾರ್ಥಿಗಳಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಅರ್ಧ ವಾರ್ಷಿಕ ಪರೀಕ್ಷೆ ನಡೆಯುತ್ತಿದ್ದ ಕಾರಣ ಒಂದು ಬೆಂಚ್‌ನಲ್ಲಿ ಇಬ್ಬರು ವಿದ್ಯಾರ್ಥಿಗಳಷ್ಟೇ ಕುಳಿತಿದ್ದರು. ಮಳೆಯಿಂದ ಶಿಥಿಲಗೊಂಡಿದ್ದ ಚಾವಣಿ ಕುಸಿದು ಬಿದ್ದಿದೆ. ವಿದ್ಯಾರ್ಥಿಗಳು ಹಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

‘ತಳವಾರ ವಿರುದ್ಧ ಕ್ರಮ ಕೈಗೊಳ್ಳಿ’

ಒಂದನೇ ಪುಟದಿಂದ

‘ತಳವಾರ ವಿರುದ್ಧ ಕ್ರಮ ಜರುಗಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ನಿವೃತ್ತ ಉಪನ್ಯಾಸಕ ಆರ್. ನಾರಾಯಣ ಸ್ವಾಮಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸ್ವಯಂಪ್ರೇರಿತ ಅರ್ಜಿಯಾಗಿ ಪರಿವರ್ತಿಸಿಕೊಂಡು ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. ‘ಈ ಕುರಿತ ಅನುಪಾಲನಾ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಬೇಕು’ ಎಂದು ನಿರ್ದೇಶಿಸಿದ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿದೆ.

‘ತಳವಾರ ನೇಮಕಾತಿ ಹಾಗೂ ನಡತೆ ಬಗ್ಗೆ ಲೋಕಾಯುಕ್ತ, ಬಿ.ವಿ. ಕೃಷ್ಣರಾವ್ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯ ನಿರ್ವಾಹಕ ನಿರ್ದೇಶಕರಾಗಿದ್ದ ವಿಕಾಸ್ ಕಿಶೋರ್ ಸುರಳ್ಕರ್ ತನಿಖೆ ನಡೆಸಿ ಸರ್ಕಾರಕ್ಕೆ ಪ್ರತ್ಯೇಕ ವರದಿ ಸಲ್ಲಿಸಿದ್ದಾರೆ. ಈ ವರದಿಗಳನ್ನು ಆಧರಿಸಿ ಸರ್ಕಾರ ತನ್ನ ವಿವೇಚನಾ ಕ್ರಮ ಕೈಗೊಳ್ಳಬಹುದು’ ಎಂದು ನ್ಯಾಯಪೀಠ ಹೇಳಿದೆ.

ತಳವಾರ ನೇಮಕಾತಿ ಮತ್ತು ಅವರು ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ನಡೆಸಿದ ಭ್ರಷ್ಟಾಚಾರ, ಅಧಿಕಾರ ದುರ್ಬಳಕೆ ಕುರಿತು ಲೋಕಾಯುಕ್ತ ಸಂಸ್ಥೆ, ಬಿ.ವಿ. ಕೃಷ್ಣರಾವ್ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು. ಅಂತೆಯೇ, ತಳವಾರ ವಿರುದ್ಧ ಮಾಡಲಾಗಿದ್ದ 56 ವೈಯಕ್ತಿಕ ದೂರುಗಳನ್ನು ವಿಕಾಸ್ ಕಿಶೋರ್ ಸುರಳ್ಕರ್ ತನಿಖೆ ನಡೆಸಿ, 11 ದೂರುಗಳಲ್ಲಿ ತಳವಾರ ಅವರ ಕರ್ತವ್ಯ ನಿರ್ಲಕ್ಷತೆ ಮೇಲ್ನೋಟಕ್ಕೆ ಸಾಬೀತಾಗಿದೆ. ಅವರ ಕಾರ್ಯವೈಖರಿ ತೃಪ್ತಿಕರವಾಗಿರುವುದಿಲ್ಲ’ ಎಂದು ತಿಳಿಸಿತ್ತು.

‘ಸರ್ಕಾರವು ಈ ಮೂರೂ ವರದಿಗಳನ್ನು ಪರಿಗಣಿಸಿಲ್ಲ ಮತ್ತು ತಳವಾರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ಆಕ್ಷೇಪಿಸಿ ನಾರಾಯಣ ಸ್ವಾಮಿ ಪಿಐಎಲ್ ಸಲ್ಲಿಸಿದ್ದರು. ಏತನ್ಮಧ್ಯೆ, ತಳವಾರ ನೀಡಿದ್ದ ದೂರಿನ ಅನುಸಾರ ಪೊಲೀಸರು ಅರ್ಜಿದಾರರನ್ನು ಬಂಧಿಸಿದ್ದ ಅಂಶ ವಿಚಾರಣೆ ವೇಳೆ ಬಯಲಾಗಿತ್ತು. ಇದರಿಂದ ಅವರನ್ನು ಪ್ರಕರಣದಿಂದ ಕೈಬಿಟ್ಟಿದ್ದ ಹೈಕೋರ್ಟ್, ಸ್ವಯಂ ಪ್ರೇರಿತವಾಗಿ ವಿಚಾರಣೆ ನಡೆಸುತ್ತಿತ್ತು.

ಬಿಜೆಪಿ ಮುಖಂಡ ಮಹೇಂದ್ರಗೌಡ ವಿರುದ್ಧ ಕ್ರಮ

ಒಂದನೇ ಪುಟದಿಂದ

‘ಇದಕ್ಕೆ ಸಂಬಂಧಿಸಿದಂತೆ ಬಿಜೆಪಿಯ ಪದ್ಮನಾಭನಗರ ಘಟಕದ ಅಧ್ಯಕ್ಷ ರವಿಕುಮಾರ್ ಕೂಡ ದೂರು ಸಲ್ಲಿಸಿದ್ದಾರೆ. ಈ ಎಲ್ಲ ಕಾರಣಗಳಿಂದ ಕಾರ್ಯಕಾರಿಣಿ ಸದಸ್ಯ ಸ್ಥಾನದಿಂದ ತೆಗೆದು ಹಾಕಲಾಗಿದೆ. ಇನ್ನು ಮುಂದೆ ಪಕ್ಷದ ಯಾವುದೇ ಚಟುವಟಿಕೆಗಳಲ್ಲಿ ಅಧಿಕೃತವಾಗಿ ಭಾಗವಹಿಸಲು ಅವಕಾಶ ಇಲ್ಲ’ ಎಂದು ತಿಳಿಸಿದ್ದಾರೆ.

ಮಹೇಂದ್ರಗೌಡ ಅವರನ್ನು ಕಾರ್ಯಕಾರಿಣಿ ಸದಸ್ಯ ಸ್ಥಾನದಿಂದ ತೆಗೆದು ಹಾಕಿರುವ ಪತ್ರದ ಪ್ರತಿಯನ್ನು ಹಲವರು ಫೇಸ್‌ಬುಕ್‌ನಲ್ಲಿ ಟ್ಯಾಗ್ ಮಾಡಿ ಟೀಕಿಸಿದ್ದಾರೆ. ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಪತ್ರವನ್ನು ಟ್ಯಾಗ್ ಮಾಡಿರುವ ಲೇಖಕ ಕೆ.ಪಿ.ಸುರೇಶ, ‘ಮಹೇಶ್ ಜೋಶಿಗೆ ಬಿಜೆಪಿ ಬೆಂಬಲ ನೀಡಿರುವ ಅಧಿಕೃತ ಮಾಹಿತಿ ಇದು’ ಎಂದು ವ್ಯಂಗ್ಯವಾಡಿದ್ದಾರೆ.

‘ಸಾಹಿತ್ಯ ಪರಿಷತ್ತು ಇನ್ನು ಮುಂದೆ ಬಿಜೆಪಿಯ ಅಂಗ ಸಂಸ್ಥೆಯಾಗಿ ಕೆಲಸ ಮಾಡಲಿದೆ. ರಾಜಕೀಯ ಪಕ್ಷವೊಂದು ರಾಜಕೀಯೇತರ ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿ ಬೆಂಬಲಿಸುವುದು ಅಸಹ್ಯ, ನೀಚತನ’ ಎಂದು ಫೇಸ್‌ಬುಕ್‌ನಲ್ಲಿ ಗಾಯತ್ರಿ ಎಚ್.ಎನ್. ಅವರು ಟೀಕಿಸಿದ್ದಾರೆ.

ಬಿಜೆಪಿ ಕಚೇರಿಗಳಲ್ಲಿ ಚುನಾವಣಾ ಪ್ರಚಾರ ನಡೆಸುತ್ತಿರುವ ಚಿತ್ರಗಳನ್ನೂ ಫೇಸ್‌ಬುಕ್‌ನಲ್ಲಿ ಹಲವರು ಟ್ಯಾಗ್ ಮಾಡಿ ಪ್ರಶ್ನೆಗಳನ್ನು ಎತ್ತಿದ್ದಾರೆ. ಇನ್ನೊಂದೆಡೆ, ಮಹೇಶ್ ಜೋಶಿ ಅವರಿಗೆ ಫೇಸ್‌ಬುಕ್‌ನಲ್ಲಿ ಬಿಜೆಪಿ ಮುಖಂಡರು ಅಭಿನಂದನೆಗಳ ಮಹಾಪೂರ ಹರಿಸಿದ್ದಾರೆ.



ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಕಚೇರಿಯಲ್ಲಿ ಪ್ರಚಾರ ಸಭೆ ನಡೆಸಿದ್ದ ಮಹೇಶ್ ಜೋಶಿ. ಬಿಜೆಪಿ ಮುಖಂಡ ಎಸ್‌.ಮುನಿರಾಜು, ಮಂಡಲ ಅಧ್ಯಕ್ಷ ಲೋಕೇಶ್ ಹಾಗೂ ಸ್ಥಳೀಯ ಬಿಜೆಪಿ ಮುಖಂಡರು ಚಿತ್ರದಲ್ಲಿದ್ದಾರೆ.

‘ಎಲ್ಲಾ ಪಕ್ಷದ ಕಚೇರಿಗಳಿಗೂ ಹೋಗಿದ್ದೇನೆ’

ಮಹೇಂದ್ರಗೌಡ ವಿರುದ್ಧ ಕ್ರಮದ ಬಗ್ಗೆ ನನಗೆ ಮಾಹಿತಿ ಇಲ್ಲ. ಪತ್ರ ನಿಜವೋ ಸುಳ್ಳೋ ಎಂಬುದನ್ನು ಪರಿಶೀಲಿಸಬೇಕಿದೆ. ಬಿಜೆಪಿ ಕಚೇರಿ ಮಾತ್ರವಲ್ಲ ಎಲ್ಲಾ ಪಕ್ಷದ ಕಚೇರಿಗಳಿಗೂ ಹೋಗಿ ಪರಿಷತ್ ಸದಸ್ಯರಿಂದ ಮತ ಕೇಳಿದ್ದೇನೆ. ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡರನ್ನೂ ಸಂಪರ್ಕಿಸಿದ್ದೆ. ಅವರು ನನ್ನ ಪರವಾಗಿ ಪತ್ರ ಬರೆದಿದ್ದರು ಎಂದು ಮಹೇಶ್ ಜೋಶಿ ಹೇಳಿದ್ದಾರೆ.

ಆನ್‌ಲೈನ್‌ನಲ್ಲಿ ಹರಾಜು ಹಾಕಿದ್ದ ಆರೋಪಿ

ಕೋವಿಡ್‌ನಿಂದ ನಷ್ಟ: ಕಲಾಕೃತಿ ಕದ್ದ ಜವಳಿ ವ್ಯಾಪಾರಿ

ಪ್ರಜಾವಾಣಿ ವಾರ್ತೆ

ಮೈಸೂರು: ಕೋವಿಡ್ ಪರಿಸ್ಥಿತಿಯಿಂದಾಗಿ ನಷ್ಟಕ್ಕೀಡಾಗಿದ್ದ ಜವಳಿ ವ್ಯಾಪಾರಿಯೊಬ್ಬ ಸ್ನೇಹಿತನೊಂದಿಗೆ ಸೇರಿ ಕೆ.ಆರ್.ನಗರ ತಾಲ್ಲೂಕಿನ ಚಂದಗಾಲು ಗ್ರಾಮದ ಶ್ರೀರಾಮಮಂದಿರ ಹಾಗೂ ಸಮೀಪದ ಗ್ರಂಥಾಲಯದಲ್ಲಿ ಅಮೂಲ್ಯ ಕಲಾಕೃತಿಗಳನ್ನು ಕಳವು ಮಾಡಿ ಆನ್‌ಲೈನ್‌ನಲ್ಲಿ ಹರಾಜಿಗಿಟ್ಟಿದ್ದ, ಇಬ್ಬರನ್ನೂ ಪೊಲೀಸರು ಬಂಧಿಸಿದ್ದಾರೆ. 10 ಕಲಾಕೃತಿಗಳನ್ನು ವಶಪಡಿಸಿಕೊಂಡಿದ್ದಾರೆ.

ದೇಗುಲ ಮತ್ತು ಗ್ರಂಥಾಲಯದ ಸಿಬ್ಬಂದಿಗೆ ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್ ನಗರದಲ್ಲಿ ಮಂಗಳವಾರ ಕಲಾಕೃತಿಗಳನ್ನು ಹಸ್ತಾಂತರಿಸಿದರು.

‘ಆರೋಪಿಯು ಅಂಗಡಿ ಬಾಡಿಗೆಯನ್ನೂ ಪಾವತಿಸಲಾಗದೇ ಪರದಾಡುತ್ತಿದ್ದ. ಹೀಗಾಗಿ ಕಲಾಕೃತಿಗಳನ್ನು ಕಳವು ಮಾಡಿ ಮಾರಾಟಕ್ಕೆ ಮುಂದಾಗಿದ್ದ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಆರೋಪಿಯು ವೆಬ್‌ಸೈಟ್‌ವೊಂದರಲ್ಲಿ ಕಲಾಕೃತಿಗಳನ್ನು ಹರಾಜಿಗೆ ಇಟ್ಟಿದ್ದ. ಹಳೆಯ ಮನೆ ಕೆಡವುವಾಗ ಸಿಕ್ಕಿದವು ಎಂದು ಫೇಸ್‌ಬುಕ್ ಪುಟದಲ್ಲಿ ಬರೆದುಕೊಂಡಿದ್ದ. ₹ 4.50 ಲಕ್ಷದವರೆಗೂ ಹರಾಜು ಕೂಗಲಾಗಿದೆ ಎಂಬ ಮಾಹಿತಿ ತಿಳಿದ ಬಳಿಕ ಖರೀದಿದಾರರಂತೆಯೇ ಫೇಸ್‌ಬುಕ್ ಮೂಲಕವೇ ಸಂಪರ್ಕಿಸಿ, ಬಂಧಿಸಲಾಯಿತು. ವಿಷ್ಣುವಿನ ದಶಾವತಾರಗಳ ಚಿತ್ರಗಳಿದ್ದ ಈ ಕಲಾಕೃತಿಗಳ ರೇಖೆಗಳ ಮೇಲೆ ಚಿನ್ನದ ಲೇಪನವಿದೆ’ ಎಂದು ತಿಳಿಸಿದರು.

‘ನೂರು ವರ್ಷಕ್ಕೂ ಹಿಂದೆ ಮಹಾರಾಜರು ಕಾಣಿಕೆಯಾಗಿ ಈ ಕೃತಿಗಳನ್ನು ಅರ್ಪಿಸಿದ್ದರು’ ಎಂದು ದೇಗುಲದ ಸಿಬ್ಬಂದಿಯೊಬ್ಬರು ತಿಳಿಸಿದರು. ಆರೋಪಿಗಳ ಹೆಸರು ಮತ್ತು ಇತರೆ ವಿವರಗಳನ್ನು ಪೊಲೀಸರು ಬಹಿರಂಗಪಡಿಸಿಲ್ಲ.



ಪೊಲೀಸರು ವಶಪಡಿಸಿಕೊಂಡ ಅಮೂಲ್ಯ ಕಲಾಕೃತಿಗಳು

ಜೆಡಿಎಸ್– ಬಿಜೆಪಿ ಒಳ ಒಪ್ಪಂದ ಶಾಸಕ ಪರಮೇಶ್ವರ ಗುಮಾನಿ


ಪ್ರಜಾವಾಣಿ ವಾರ್ತೆ

ತುಮಕೂರು: 'ಮೇಲ್ಮನೆ ಚುನಾವಣೆಯಲ್ಲಿ ಜೆಡಿಎಸ್– ಬಿಜೆಪಿ ಮೈತ್ರಿ ಮಾಡಿಕೊಂಡಿರುವ ಬಗ್ಗೆ ನಮಗೆ ಬಲವಾದ ಅನುಮಾನವಿದೆ' ಎಂದು ಶಾಸಕ ಡಾ.ಜಿ.ಪರಮೇಶ್ವರ ಮಂಗಳವಾರ ಹೇಳಿದರು.


ಪರಮೇಶ್ವರ

ಕಾಂಗ್ರೆಸ್ ಅಭ್ಯರ್ಥಿ ನಾಮಪತ್ರ ಸಲ್ಲಿಕೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ಬಿಜೆಪಿಯವರಿಗೆ ಬೆಂಬಲ ಸೂಚಿಸಲು ಜೆಡಿಎಸ್ 7 ಕ್ಷೇತ್ರಗಳಲ್ಲಿ ಮಾತ್ರ ಸ್ಪರ್ಧಿಸಿದೆ. ಒಂದು ರೀತಿಯಲ್ಲಿ ಒಳ ಒಪ್ಪಂದವಾಗಿದೆ' ಎಂದು ಹೇಳಿದರು.

ಬಿಜೆಪಿ ತಿರುಗೇಟು: ಪರಮೇಶ್ವರ ಆರೋಪಕ್ಕೆ ಪ್ರತಿಕ್ರಿಯಿಸಿದ ಬಿಜೆಪಿ ಸದಸ್ಯ ಎನ್.ರವಿಕುಮಾರ್, 'ಇಂತಹ ಆರೋಪ ಗಮನಿಸಿದರೆ ಚುನಾವಣೆಗೆ ಮೊದಲೇ ಕಾಂಗ್ರೆಸ್ ನಾಯಕರು ಸೋಲು ಒಪ್ಪಿಕೊಂಡಂತಿದೆ. ಒಳ ಒಪ್ಪಂದವಾಗಿದ್ದರೆ ಜೆಡಿಎಸ್‌ನವರು ಏಕೆ ಅಭ್ಯರ್ಥಿಗಳನ್ನು ಕಣಕ್ಕಿಳಿಸುತ್ತಿದ್ದರು? ಕೆಲವು ಕ್ಷೇತ್ರಗಳಲ್ಲಿ ಜೆಡಿಎಸ್‌ಗೆ ಸಮರ್ಥ ಅಭ್ಯರ್ಥಿಗಳು ಸಿಕ್ಕಿಲ್ಲ. ಹಾಗಾಗಿ ಅವರು ನಿಲ್ಲಿಸಿಲ್ಲ' ಎಂದು ಸ್ಪಷ್ಟಪಡಿಸಿದರು.


ಎನ್‌ ರವಿ ಕುಮಾರ್

'40 ಪರ್ಸೆಂಟ್ ಕಮಿಷನ್ ಸರ್ಕಾರ' ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಎಚ್.ಡಿ.ಕುಮಾರಸ್ವಾಮಿ ನಿರುದ್ಯೋಗಿಗಳ ಗುಂಪು. ಇವರಿಗೆ ಕೆಲಸ ಇಲ್ಲ. ಪರ್ಸೆಂಟೇಜ್‌ಗೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಮೇಲೆ 37 ಪ್ರಕರಣಗಳಿವೆ' ಎಂದರು.

'ಜೆಡಿಎಸ್ ಬೆಂಬಲ ಪಡೆದರೆ ತಪ್ಪೇನಿಲ್ಲ'

ಶಿರಸಿ: 'ಕಾಂಗ್ರೆಸ್ ನಮ್ಮ ವಿರೋಧಿ. ಅವರಿಗಿಂತ ಜೆಡಿಎಸ್‌ನವರು ಹತ್ತಿರದವರು. ಅವರ ಅಭ್ಯರ್ಥಿ ಇಲ್ಲದ ಕಡೆ ಬೆಂಬಲ ಪಡೆದರೆ ತಪ್ಪೇನಿಲ್ಲ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಮಂಗಳವಾರ ಹೇಳಿದರು.


ಆರಗ ಜ್ಞಾನೇಂದ್ರ

ಸಿದ್ದಾಪುರ ತಾಲ್ಲೂಕಿನ ಕಲಗದ್ದೆಯಲ್ಲಿ ಮಾತನಾಡಿದ ಅವರು, 'ಬಿಜೆಪಿ–ಜೆಡಿಎಸ್ ಒಳ ಒಪ್ಪಂದ ಮಾಡಿಕೊಂಡಿವೆ' ಎಂಬ ಕಾಂಗ್ರೆಸ್ ಆರೋಪಕ್ಕೆ ಪ್ರತಿಕ್ರಿಯಿಸಿ, 'ಕಾಂಗ್ರೆಸ್‌ಗೆ ಒಳ ಒಪ್ಪಂದಗಳ ರೂಢಿ ಇದೆ. ಕಾಂಗ್ರೆಸ್ ಸೋಲಿಸುವುದಷ್ಟೇ ನಮ್ಮ ಗುರಿ. ಜೆಡಿಎಸ್ ಅಭ್ಯರ್ಥಿ ಇಲ್ಲದ ಕಡೆ ಅವರ ಬೆಂಬಲ ಪಡೆದು ಹೆಚ್ಚು ಲೀಡ್ ಪಡೆಯುತ್ತೇವೆ' ಎಂದರು.

ಜೆಡಿಎಸ್ ಬೆಂಬಲ ಪಡೆಯಲು ಮಾತುಕತೆ: ಈಶ್ವರ ಖಂಡ್ರೆ

ಬೀದರ್: 'ವಿಧಾನ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಗಳನ್ನು ಕಣಕ್ಕಿಳಿಸದ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಬೆಂಬಲ ನೀಡುವಂತೆ ಜೆಡಿಎಸ್ ಮುಖಂಡರೊಂದಿಗೆ ಚರ್ಚಿಸಲಾಗುವುದು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಹೇಳಿದರು.


ಈಶ್ವರ ಖಂಡ್ರೆ

'ಬಿಜೆಪಿ ಸರ್ಕಾರವು, ಹಿಂದಿನ ಅವಧಿಯ ಗ್ರಾಮ ಪಂಚಾಯಿತಿ ಸದಸ್ಯರಿಗೆ ಮೂರು ತಿಂಗಳ ಗೌರವಧನ ಕೊಟ್ಟಿಲ್ಲ. ಈಗ ಚುನಾವಣೆಯಲ್ಲಿ ಮತ ಸೆಳೆಯಲು ಮಾಸಿಕ ₹10 ಸಾವಿರ ಗೌರವಧನ ಕೊಡುವ ಸುಳ್ಳು ಭರವಸೆ ನೀಡಿದ್ದಾರೆ' ಎಂದು ಇಲ್ಲಿ ಟೀಕಿಸಿದರು.


ಮೈಸೂರು–ಚಾಮರಾಜನಗರ ದ್ವಿಸದಸ್ಯ ಕ್ಷೇತ್ರ: ಇಬ್ಬರು ಹೊಸಬರು; ಒಬ್ಬರು ಹಳಬರು

ಸೋತವರಿಗೆ ಟಿಕೆಟ್, ಗೆದ್ದವರಿಗೆ ನಿರಾಸೆ

• ಕೆ.ಓಂಕಾರ ಮೂರ್ತಿ

ಮುಖ್ಯಾಂಶಗಳು
- ಡಾ.ತಿಮ್ಮಯ್ಯ, ಮಂಜೇಗೌಡ ಹೊಸಮುಖ
- ಗೆದ್ದಿದ್ದ ಧರ್ಮಸೇನ, ಸಂದೇಶ್ ನಾಗರಾಜ್‌ಗೆ ನಿರಾಸೆ
- ಸೋತಿದ್ದ ರಘುಗೆ ಮತ್ತೆ ಟಿಕೆಟ್


ಹಿಂದಿನ ಚುನಾವಣೆಯಲ್ಲಿ ಸೋತಿದ್ದರೂ ಕ್ಷೇತ್ರದೊಂದಿಗೆ ಹಾಗೂ ಪಕ್ಷಾತೀತವಾಗಿ ಗ್ರಾಮ ಪಂಚಾಯ್ತಿ ಸದಸ್ಯರೊಂದಿಗೆ ಒಡನಾಟವಿದೆ
ಆರ್.ರಘು (ಕೌಟಿಲ್ಯ) ಬಿಜೆಪಿ ಅಭ್ಯರ್ಥಿ


ಕ್ಷೇತ್ರದ ಕಾರ್ಯಕರ್ತರ ಅಭಿಪ್ರಾಯ ಆಲಿಸಿ ಪಕ್ಷ ಟಿಕೆಟ್ ನೀಡಿದೆ. ಜಿಲ್ಲೆಯಲ್ಲಿ ಆರೋಗ್ಯಾಧಿಕಾರಿಯಾಗಿ ಕೆಲಸ ಮಾಡಿದ ಅನುಭವ, ಸಾಮಾಜಿಕ ಕಳಕಳಿ ಇದೆ
ಡಾ.ಡಿ.ತಿಮ್ಮಯ್ಯ, ಕಾಂಗ್ರೆಸ್ ಅಭ್ಯರ್ಥಿ


ನಾನು ಮಾಜಿ ಯೋಧ. ಜೆಡಿಎಸ್‌ನಲ್ಲಿದ್ದೆ. ಮತ್ತೆ ಅದೇ ಪಕ್ಷ ಸೇರಿರುವೆ. ಕುಮಾರಣ್ಣನನ್ನು ಮತ್ತೊಮ್ಮೆ ಸಿ.ಎಂ ಮಾಡುವುದೇ ನಮ್ಮ ಗುರಿ
ಸಿ.ಎನ್.ಮಂಜೇಗೌಡ ಜೆಡಿಎಸ್ ಅಭ್ಯರ್ಥಿ

ಮೈಸೂರು: ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯುವ ಮೈಸೂರು-ಚಾಮರಾಜನಗರ ದ್ವಿಸದಸ್ಯ ಕ್ಷೇತ್ರದಿಂದ ಹಿಂದಿನ ಚುನಾವಣೆಯಲ್ಲಿ ಸೋತವರಿಗೆ ಟಿಕೆಟ್ ಲಭಿಸಿದ್ದು, ಗೆದ್ದವರಿಗೆ ನಿರಾಸೆಯಾಗಿದೆ.

2015ರ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಸೋಲು ಕಂಡಿದ್ದ ಆರ್.ರಘು (ಕೌಟಿಲ್ಯ) ಅವರಿಗೆ ಮತ್ತೆ ಟಿಕೆಟ್ ಲಭಿಸಿದೆ. ಆ ಚುನಾವಣೆಯಲ್ಲಿ ಗೆದ್ದಿದ್ದರೂ ಸಂದೇಶ್ ನಾಗರಾಜ್ (ಜೆಡಿಎಸ್) ಹಾಗೂ ಆರ್.ಧರ್ಮಸೇನ (ಕಾಂಗ್ರೆಸ್) ಟಿಕೆಟ್ ವಂಚಿತರಾಗಿದ್ದಾರೆ.

ಸಂದೇಶ್ ನಾಗರಾಜ್ 2009ರ ಚುನಾವಣೆಯಲ್ಲೂ ಹಾಗೂ ಧರ್ಮಸೇನ 2013ರ ಉಪಚುನಾವಣೆಯಲ್ಲೂ ಗೆದ್ದು ಮೊದಲ ಬಾರಿ ವಿಧಾನ ಪರಿಷತ್ ಪ್ರವೇಶಿಸಿದ್ದರು.

ಜೆಡಿಎಸ್‌ನಿಂದ ಸಿ.ಎನ್. ಮಂಜೇಗೌಡ ಹಾಗೂ ಕಾಂಗ್ರೆಸ್‌ನಿಂದ ಡಾ.ಡಿ.ತಿಮ್ಮಯ್ಯ ಅವರಿಗೆ ಟಿಕೆಟ್ ನೀಡಿದ್ದು ಇಬ್ಬರೂ ಮೊದಲ ಬಾರಿ ಕಣಕ್ಕಿಳಿಯುತ್ತಿದ್ದಾರೆ.

ಸಿದ್ದರಾಮಯ್ಯ ಆಪ್ತರಾಗಿದ್ದ ಮೈಸೂರು ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಮಂಜೇಗೌಡ ಅವರು ಕಾಂಗ್ರೆಸ್ ತೊರೆದ ದಿನವೇ ಜೆಡಿಎಸ್ ಟಿಕೆಟ್ ಗಿಟ್ಟಿಸಿಕೊಂಡಿದ್ದಾರೆ. ಅವರು ಮೊದಲು ಬಿಜೆಪಿ, ನಂತರ ಜೆಡಿಎಸ್, ಬಳಿಕ ಕಾಂಗ್ರೆಸ್ ಸುತ್ತಿ ಮತ್ತೆ ಜೆಡಿಎಸ್‌ಗೆ ಬಂದಿದ್ದಾರೆ.

ಆರ್.ಧರ್ಮಸೇನ ಅವರ ಸ್ಪರ್ಧೆಗೆ 33 ವರ್ಷಗಳ ಕುಟುಂಬ ರಾಜಕಾರಣ ಅಡ್ಡಿಯಾಯಿತು. ತಿ.ನರಸೀಪುರದ ಎನ್.ರಾಚಯ್ಯ ಕುಟುಂಬದವರಿಗೆ 1988ರಿಂದ ಟಿಕೆಟ್ ನೀಡಲಾಗಿತ್ತು. ಅದಕ್ಕೆ ಈ ಬಾರಿ ಪಕ್ಷದಲ್ಲೇ ಆಕ್ಷೇಪ ವ್ಯಕ್ತವಾಗಿದ್ದರಿಂದ ನಿವೃತ್ತ ಆರೋಗ್ಯಾಧಿಕಾರಿ, ಕೆಪಿಸಿಸಿ ಮಾಜಿ ಕಾರ್ಯದರ್ಶಿ ಡಾ.ತಿಮ್ಮಯ್ಯ ಅವರಿಗೆ ಟಿಕೆಟ್ ಒಲಿದಿದೆ. ಅವರು ಕೂಡ ದಲಿತರಲ್ಲಿ 'ಎಡಗೈ' ಸಮುದಾಯಕ್ಕೆ ಸೇರಿದವರು.

ಸಂದೇಶ್ ನಾಗರಾಜ್ ಜೆಡಿಎಸ್ ಪಕ್ಷದ ಚಟುವಟಿಕೆಗಳಿಂದ ದೂರವೇ ಉಳಿದು ಬಿಜೆಪಿ ಸಂಪರ್ಕದಲ್ಲಿದ್ದರು. ಕೊನೆಯಲ್ಲಿ ಬಿಜೆಪಿ ಟಿಕೆಟ್ ಸಿಗಲಿಲ್ಲ; ಇತ್ತ ಜೆಡಿಎಸ್‌ಗೆ ಮರಳುವ ಪ್ರಯತ್ನವೂ ಈಡೇರಲಿಲ್ಲ. ಹೀಗಾಗಿ, ಅವರು ಈ ಬಾರಿ ಸ್ಪರ್ಧೆಯಿಂದ ಹೊರಗುಳಿದಿದ್ದಾರೆ. ಇನ್ನು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆಗಿರುವ ರಘು ಅವರು ಬಿ.ಎಸ್.ಯಡಿಯೂರಪ್ಪ ಹಾಗೂ ಬಿ.ವೈ.ವಿಜಯೇಂದ್ರ ಮೂಲಕ ಮತ್ತೆ ಟಿಕೆಟ್ ಗಿಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

'ದೇಶದ ರಾಜಕಾರಣದಲ್ಲಿ ಕುಟುಂಬದ ಹೊರಗೆ, ಒಳಗೆ ಎನ್ನುವುದಕ್ಕೆ ಅರ್ಥವಿಲ್ಲ. ಸಂವಿಧಾನದಲ್ಲಿ ಮುಕ್ತ ಅವಕಾಶವಿದೆ. ಹಾಲಿ ಸದಸ್ಯ ಧರ್ಮಸೇನ ಒಳ್ಳೆಯವರು. ಕಾಂಗ್ರೆಸ್‌ಗೆ ನಿಷ್ಠಾವಂತರು. ಆದರೆ, ಬಹುತೇಕ ಮುಖಂಡರು ಈ ಬಾರಿ ಬದಲಾವಣೆ ಬಯಸಿದರು' ಎಂದು ಕಾಂಗ್ರೆಸ್ ಮುಖಂಡ ಡಾ.ಎಚ್.ಸಿ.ಮಹದೇವಪ್ಪ ಸಮರ್ಥಿಸಿಕೊಂಡರು.

'ಹಿಂದೆ ನಮ್ಮ ಪಕ್ಷದಲ್ಲೇ ಇದ್ದ ಮಂಜೇಗೌಡ ಮತ್ತೆ ಬಂದಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಡಾ.ತಿಮ್ಮಯ್ಯ ಕೂಡ ನಮ್ಮ ಪಕ್ಷದಲ್ಲಿದ್ದವರೇ. ಸಂದೇಶ್ ನಾಗರಾಜ್ ಅವರು ಬಿಜೆಪಿ ಜೊತೆ ಗುರುತಿಸಿಕೊಂಡಿದ್ದರು' ಎಂದು ಜೆಡಿಎಸ್ ಶಾಸಕ ಸಾ.ರಾ.ಮಹೇಶ್ ಹೇಳಿದರು.

'ರಘು ಕಳೆದ ಚುನಾವಣೆಯಲ್ಲಿ ಸೋತ ಬಳಿಕವೂ ಎಲ್ಲ ಸದಸ್ಯರ ಜೊತೆ ಸಂಪರ್ಕದಲ್ಲಿದ್ದಾರೆ. ಅವರ ಗೆಲುವಿಗಾಗಿ ಈಗಾಗಲೇ ತಂತ್ರ ರೂಪಿಸಿದ್ದೇವೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಪ್ರತಿಕ್ರಿಯಿಸಿದರು.

ಸಾವಿರಾರು ಜನರನ್ನು ಸೇರಿಸಿದ್ದ ಪಕ್ಷೇತರ ಅಭ್ಯರ್ಥಿ ಲಖನ್

ನಾಮಪತ್ರ ಸಲ್ಲಿಕೆ: ಶಕ್ತಿ ಪ್ರದರ್ಶನದ ವೇದಿಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ಡಿ.10ರಂದು ನಡೆಯಲಿರುವ ಚುನಾವಣೆಗೆ ಮಂಗಳವಾರ ನಾಮಪತ್ರ ಸಲ್ಲಿಕೆಯನ್ನು ಪ್ರಮುಖ ಅಭ್ಯರ್ಥಿಗಳು ತಮ್ಮ ಶಕ್ತಿ ಪ್ರದರ್ಶನದ ವೇದಿಕೆಯನ್ನಾಗಿ ಮಾಡಿಕೊಂಡರು.

3ನೇ ಬಾರಿಗೆ ಆಯ್ಕೆ ಬಯಸಿರುವ ಮಹಾಂತೇಶ ಕವಟಗಿಮಠ ಬಿಜೆಪಿ ಅಭ್ಯರ್ಥಿಯಾಗಿ, ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಅವರ ಕಿರಿಯ ಸಹೋದರ ಚನ್ನರಾಜ ಹಟ್ಟಿಹೊಳಿ ಮತ್ತು ಜಾರಕಿಹೊಳಿ ಕುಟುಂಬದ ಉದ್ಯಮಿ ಲಖನ್ ಜಾರಕಿಹೊಳಿ ಪಕ್ಷೇತರ ಅಭ್ಯರ್ಥಿಯಾಗಿ ಜಿಲ್ಲಾ ಚುನಾವಣಾಧಿಕಾರಿ ಆರ್. ವೆಂಕಟೇಶಕುಮಾರ್ ಅವರಿಗೆ ಉಮೇದುವಾರಿಕೆ ಸಲ್ಲಿಸಿದರು.

ಬಿಜೆಪಿಯಲ್ಲಿ ನಾಯಕರ ಸಂಖ್ಯೆ ಜಾಸ್ತಿ ಇತ್ತು. ಕಾಂಗ್ರೆಸ್‌ನವರು ನೂರಾರು ಕಾರ್ಯಕರ್ತರನ್ನು ಸೇರಿಸಿದ್ದರು. ಪಕ್ಷೇತರನಾಗಿ ಕಣಕ್ಕಿಳಿದಿರುವ ಲಖನ್ ಪರವಾಗಿ ಹೆಚ್ಚಿನ ಜನರು ಜಮಾಯಿಸಿದ್ದರು. ತ್ರಿಕೋನ ಹಣಾಹಣಿ ಇರಲಿದೆ ಎಂಬ ಸಂದೇಶ ರವಾನೆ ಆಯಿತು.

ನಾಮಪತ್ರ ಸಲ್ಲಿಕೆ ವೇಳೆ ಜಾರಕಿಹೊಳಿ ಸಹೋದರರು ಮತ್ತು ಕುಟುಂಬದವರು ಹೆಚ್ಚು ಗಮನಸೆಳೆದರು. ಜೀಪ್‌ನಲ್ಲಿ ಮೆರವಣಿಗೆಯಲ್ಲಿ ಬಂದ ಕಾಂಗ್ರೆಸ್ ಅಭ್ಯರ್ಥಿ ಜೊತೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಇದ್ದರು. ಬಿಜೆಪಿ ಅಭ್ಯರ್ಥಿ ಜೊತೆಗೆ ಗೋಕಾಕದ ಶಾಸಕ ರಮೇಶ ಜಾರಕಿಹೊಳಿ ಹೆಜ್ಜೆ ಹಾಕಿದರು. ಪಕ್ಷೇತರ ಲಖನ್ ಜೊತೆ ರಮೇಶ ಅವರ ಪುತ್ರ ಅಮರನಾಥ್ ಜಾರಕಿಹೊಳಿ, ಅಳಿಯ ಅಂಬಿರಾವ್ ಪಾಟೀಲ ಮತ್ತು ಆಪ್ತರು ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಸಹೋದರರ ಸವಾಲ್‌ನಂತೆಯೂ ಇತ್ತು.

ಬಿಜೆಪಿಯ ವರಿಷ್ಠರಿಂದ ಸೂಕ್ತ ಸ್ಥಾನಮಾನದ ಭರವಸೆ ಸಿಕ್ಕರೆ ಲಖನ್ ಜಾರಕಿಹೊಳಿ ಚುನಾವಣಾ ಕಣದಿಂದ ಹಿಂದೆ ಸರಿಯಲೂಬಹುದು. ನಾಮಪತ್ರ ವಾಪಸ್‌ಗೆ ಅವಕಾಶವಿದೆ
ಸತೀಶ ಜಾರಕಿಹೊಳಿ ಕಾರ್ಯಾಧ್ಯಕ್ಷ, ಕೆಪಿಸಿಸಿ

ಕಾಂಗ್ರೆಸ್ ಅಭ್ಯರ್ಥಿ ಸೋಲಿಸಲು 2ನೇ ಅಭ್ಯರ್ಥಿಗೆ (ಲಖನ್) ಬೆಂಬಲ ನೀಡಲು ಸಂಬಂಧಿಸಿದಂತೆ, ನ.29ರಂದು ದೆಹಲಿಗೆ ಹೋಗಿ ವರಿಷ್ಠರನ್ನು ಒಪ್ಪಿಸುತ್ತೇನೆ
ರಮೇಶ ಜಾರಕಿಹೊಳಿ ಬಿಜೆಪಿ ಶಾಸಕ

ಬಿಜೆಪಿ ಟಿಕೆಟ್ ಕೇಳಿರಲಿಲ್ಲ. ಬೆಂಬಲಿಗರು ಹಾಗೂ ಅಭಿಮಾನಿಗಳ ಆಶಯದಂತೆ ಪಕ್ಷೇತರನಾಗಿ ಸ್ಪರ್ಧಿಸಿದ್ದೇನೆ. ನಾನು ಬಂಡಾಯ ಅಭ್ಯರ್ಥಿ ಅಲ್ಲ. ನಾಮಪತ್ರ ವಾಪಸ್ ಪಡೆಯುವುದಿಲ್ಲ.
ಲಖನ್ ಜಾರಕಿಹೊಳಿ, ಪಕ್ಷೇತರ ಅಭ್ಯರ್ಥಿ

ಇತ್ತೀಚೆಗೆ ಬಿಜೆಪಿಯಲ್ಲಿ ಗುರುತಿಸಿಕೊಂಡಿದ್ದ ಲಖನ್ ಸ್ಪರ್ಧೆ ಬಿಜೆಪಿ, ಕಾಂಗ್ರೆಸ್ ಪಕ್ಷಗಳಿಗೆ ಆತಂಕ ಮೂಡಿಸಿದೆ ಎನ್ನಲಾಗುತ್ತಿದೆ. ಲಖನ್‌ಗೆ ಸಹೋದರರಾದ ಬಾಲಚಂದ್ರ ಮತ್ತು ರಮೇಶ ಪರೋಕ್ಷವಾಗಿ ಬೆಂಬಲ ನೀಡಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ.

'ಕಾಂಗ್ರೆಸ್ ಹೆಚ್ಚು ಸ್ಥಾನ ಗೆದ್ದು ತೋರಿಸಲಿ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ವಿಧಾನಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಹೆಚ್ಚಿನ ಸ್ಥಾನಗಳನ್ನು ಗೆದ್ದು ತೋರಿಸಲಿ ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ಮಂಗಳವಾರ ಸವಾಲು ಹಾಕಿದರು.


ಶ್ರೀರಾಮುಲು

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಿಧಾನಸಭೆಯ ಎರಡು ಕ್ಷೇತ್ರಗಳಿಗೆ ನಡೆದಿದ್ದ ಉಪಚುನಾವಣೆಯಲ್ಲಿ ಒಂದು ಸ್ಥಾನ ಗೆದ್ದಿರುವ ಕಾಂಗ್ರೆಸ್, 2023ರಲ್ಲಿ ಅಧಿಕಾರಕ್ಕೆ ಬರುವ ಕನಸು ಕಾಣುತ್ತಿದೆ' ಎಂದು ವ್ಯಂಗ್ಯವಾಡಿದರು.

'ಮೇಲ್ಮನೆ ಚುನಾವಣೆಯಲ್ಲಿ 25 ಸ್ಥಾನಗಳಲ್ಲಿ ಬಿಜೆಪಿ ಕನಿಷ್ಠ 14 ಸ್ಥಾನ ಗೆಲ್ಲಲಿದೆ. ಹತಾಶರಾಗಿರುವ ಕಾಂಗ್ರೆಸ್ ನಾಯಕರು ಈಗ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಸತ್ಯಕ್ಕೆ ದೂರವಾದ ಸಂಗತಿಗಳನ್ನು ಮುಂದಿಡುತ್ತಿದ್ದಾರೆ. ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರು ಪರಸ್ಪರ ಒಬ್ಬರನ್ನೊಬ್ಬರು ನೋಡಿಕೊಳ್ಳಲು ಸಾಧ್ಯವಿಲ್ಲದ ಸ್ಥಿತಿ ಆ ಪಕ್ಷದಲ್ಲಿದೆ' ಎಂದು ಕುಟುಕಿದರು.

ಯೂಸುಫ್ ಷರೀಫ್ ₹1,743 ಕೋಟಿ ಮೌಲ್ಯದ ಸ್ಥಿರಾಸ್ತಿ ಒಡೆಯ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಚುನಾವಣೆಯಲ್ಲಿ ಕಣದಲ್ಲಿರುವ ಅಭ್ಯರ್ಥಿಗಳ ಪೈಕಿ, ಬೆಂಗಳೂರು ನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಉದ್ಯಮಿ ಯೂಸುಫ್ ಷರೀಫ್ (ಕೆಜಿಎಫ್ ಬಾಬು) ಅತ್ಯಂತ ಶ್ರೀಮಂತ ವ್ಯಕ್ತಿ!

ಯೂಸುಫ್ ಷರೀಫ್ ಅವರು 5ನೇ ತರಗತಿವರೆಗೆ ಓದಿದ್ದು, ಅವರಿಗೆ ಇಬ್ಬರು ಪತ್ನಿಯರು, ಐವರು ಮಕ್ಕಳಿದ್ದಾರೆ.

ನಾಮಪತ್ರದ ಜೊತೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಅವರು ತಮ್ಮ ಬಳಿ ₹ 97.98 ಕೋಟಿ ಮೌಲ್ಯದ ಚರಾಸ್ತಿ, ₹ 1,643.59 ಕೋಟಿ ಮೌಲ್ಯದ ಸ್ಥಿರಾಸ್ತಿ, ಇಬ್ಬರ ಪತ್ನಿಯರ ಪೈಕಿ, ಮೊದಲ ಪತ್ನಿಯ ಬಳಿ ₹ 98.96 ಲಕ್ಷ ಮೌಲ್ಯದ ಚರಾಸ್ತಿ, ₹ 1.07 ಕೋಟಿ ಮೌಲ್ಯದ ಸ್ಥಿರಾಸ್ತಿ, ಎರಡನೇ ಪತ್ನಿಯ ಬಳಿ ₹ 32.22 ಲಕ್ಷ ಮೌಲ್ಯದ ಚರಾಸ್ತಿ ಇದೆ. ತಮಗೆ ₹64.24 ಕೋಟಿ ಸಾಲವಿದೆ ಎಂದು ಘೋಷಿಸಿಕೊಂಡಿದ್ದಾರೆ.


ಯೂಸುಫ್ ಷರೀಫ್

ಒಟ್ಟು ಸ್ಥಿರಾಸ್ತಿಯ ಪೈಕಿ, ಕೈಯಲ್ಲಿ ₹ 19.53 ಲಕ್ಷ, ಬ್ಯಾಂಕ್ ಖಾತೆಯಲ್ಲಿ ₹ 16.87 ಲಕ್ಷವಿದೆ. ₹ 58.10 ಕೋಟಿ ಇತರರಿಗೆ ವೈಯಕ್ತಿಕ ಸಾಲ ನೀಡಿದ್ದು, ₹ 2.99 ಕೋಟಿ ಮೌಲ್ಯದ ವಿವಿಧ ವಾಹನಗಳಿವೆ. ಅಲ್ಲದೆ, ₹ 2.19 ಕೋಟಿ ಮೌಲ್ಯದ ಚಿನ್ನಾಭರಣವಿದೆ ಎಂದೂ ಪ್ರಮಾಣ ಪತ್ರದಲ್ಲಿ ಅವರು ತಿಳಿಸಿದ್ದಾರೆ.

ತಮ್ಮ ಮೊದಲ ಪತ್ನಿಯ ಬ್ಯಾಂಕ್ ಖಾತೆಯಲ್ಲಿ ₹ 16.99 ಲಕ್ಷ ಹಣವಿದೆ. ಅಲ್ಲದೆ, ₹ 1.65 ಲಕ್ಷ ಮೌಲ್ಯದ ವಾಹನ, ₹ 77.15 ಲಕ್ಷ ಮೌಲ್ಯದ ಚಿನ್ನಾಭರಣವಿದೆ. ಎರಡನೇ ಪತ್ನಿಯ ಹೆಸರಿನಲ್ಲಿ ₹ 30.37 ಲಕ್ಷ ಹಾಗೂ ಒಟ್ಟು ಐವರು ಮಕ್ಕಳ ಪೈಕಿ ಮೊದಲ ಮಗಳ ಹೆಸರಿನಲ್ಲಿ ₹ 58.73 ಲಕ್ಷ ಮೌಲ್ಯದ ಚಿನ್ನಾಭರಣವಿದೆ ಎಂದೂ ಅವರು ಘೋಷಿಸಿಕೊಂಡಿದ್ದಾರೆ. ನಗರದ ಯಲಹಂಕ ನ್ಯೂಟೌನ್, ಜಯನಗರ, ಹಲಸೂರು ಮತ್ತು ಕಾಟನ್‌ಪೇಟೆ ಪೊಲೀಸ್ ಠಾಣೆಗಳಲ್ಲಿ ತಲಾ ಒಂದೊಂದು ಅಪರಾಧ ಪ್ರಕರಣ ಇವರ ವಿರುದ್ಧ ದಾಖಲಾಗಿದೆ. ಆದಾಯ ತೆರಿಗೆ ₹ 13.43 ಕೋಟಿ ಪಾವತಿ ಬಾಕಿ ಸಂಬಂಧಿಸಿದಂತೆ ಮೇಲ್ಮನವಿ ಸಲ್ಲಿಸಿದ್ದು, ವಿಚಾರಣೆ ಇನ್ನೂ ಆರಂಭ ಆಗಿಲ್ಲ ಎಂದೂ ಅವರು ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ಬಿ.ಸೋಮಶೇಖರ ₹116 ಕೋಟಿ ಒಡೆಯ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಬಿ. ಸೋಮಶೇಖರ ₹116 ಕೋಟಿ ಆಸ್ತಿ ಹೊಂದಿರುವುದಾಗಿ ಘೋಷಣೆ ಮಾಡಿಕೊಂಡಿದ್ದಾರೆ. ಇವರ ಪತ್ನಿ ₹23 ಕೋಟಿ ಆಸ್ತಿಯ ಒಡತಿ.


ಸೋಮಶೇಖರ್

ಬೆಂಗಳೂರಿನಲ್ಲಿ ಉದ್ಯಮಿಯಾಗಿರುವ ಸೋಮಶೇಖರ ಅವರು ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನವರು. ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಬೊಮ್ಮನಹಳ್ಳಿಯಲ್ಲಿ ನೆಲೆಸಿದ್ದಾರೆ. ಎಸ್ಸೆಸ್ಸೆಲ್ಸಿ ವಿದ್ಯಾರ್ಹತೆ ಹೊಂದಿದ್ದಾರೆ. ಪತ್ನಿ ಮಂಜುಳಾ ಹಾಗೂ ಮೂವರು ಮಕ್ಕಳಿದ್ದಾರೆ.

₹ 35 ಕೋಟಿ ಚರಾಸ್ತಿ ಹಾಗೂ ₹80 ಕೋಟಿ ಸ್ಥಿರಾಸ್ತಿ ಹೊಂದಿದ್ದಾರೆ. ಐದು ಬ್ಯಾಂಕುಗಳಲ್ಲಿ ₹ 6.32 ಕೋಟಿ ಠೇವಣಿ ಇಟ್ಟಿದ್ದಾರೆ. ₹ 28.52 ಕೋಟಿ ಹಣವನ್ನು ಉದ್ಯಮದಲ್ಲಿ ತೊಡಗಿಸಿದ್ದಾರೆ. ಅವರ ಹೆಸರಲ್ಲಿ ರೇಂಜ್ ರೋವರ್ ಕಾರು, ಪತ್ನಿ ಹೆಸರಲ್ಲಿ ಇನ್ನೋವಾ ಕಾರು ಇದೆ.

ಮಂಜುಳಾ ಅವರ ಬಳಿ ₹ 1.4 ಲಕ್ಷ ಮೌಲ್ಯದ ಮೊಬೈಲ್ ಫೋನ್, ₹8 ಲಕ್ಷ ಮೌಲ್ಯದ ಚಿನ್ನಾಭರಣ ಇವೆ. ₹ 22.4 ಕೋಟಿ ಮೌಲ್ಯದ ಕೃಷಿಯೇತರ ಭೂಮಿ ಇದೆ. ಇವರು ₹ 91 ಲಕ್ಷ ಹಾಗೂ ಸೋಮಶೇಖರ ₹ 71 ಲಕ್ಷ ಸಾಲ ಮಾಡಿದ್ದಾರೆ.

ಶಶಿಕುಮಾರ್ ಆಸ್ತಿ ಮೌಲ್ಯ ₹ 60 ಸಾವಿರ

ಶಿವಮೊಗ್ಗ: ಜೆಡಿಯು ಭದ್ರಾವತಿಯ ಬಿ.ಕೆ. ಶಶಿಕುಮಾರ್ ಅವರನ್ನು ವಿಧಾನಪರಿಷತ್ ಚುನಾವಣಾ ಕಣಕ್ಕೆ ಇಳಿಸಿದೆ. ಅವರ ಒಟ್ಟು ಆಸ್ತಿ ಮೌಲ್ಯ ₹ 60 ಸಾವಿರ. ಪತ್ನಿ ಬಳಿ 25 ಗ್ರಾಂ ಒಡವೆ ಇದೆ.

ಏಚರೆಡ್ಡಿ ಸತೀಶ್ ಆಸ್ತಿ ₹ 137 ಕೋಟಿ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ವಿಧಾನ ಪರಿಷತ್ ಚುನಾವಣೆಗೆ ಬಳ್ಳಾರಿ ಮತ್ತು ವಿಜಯನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಸ್ಪರ್ಧಿಸಿರುವ ಬಿಜೆಪಿ ಏಚರೆಡ್ಡಿ ಸತೀಶ್ 'ಭಾರಿ ಕುಳ' ಎರಡು ಮರ್ಸಿಡಿಸ್ ಬೆಂಜ್ ಹಾಗೂ ಒಂದು ರೇಂಜ್ ರೋವರ್ ಕಾರ್ ಒಳಗೊಂಡಂತೆ ಏಳು ಐಷಾರಾಮಿ ಕಾರುಗಳಿವೆ. ಸತೀಶ್ ಅವರಿಗೆ ಹೋಲಿಸಿದರೆ ಕಾಂಗ್ರೆಸ್‌ನ ಕೊಂಡಯ್ಯ ಸಾಧಾರಣ ಕುಳ!

ಸತೀಶ್ ಅವರ ಬಳಿ (ಕುಟುಂಬ ಸದಸ್ಯರ ಹೆಸರಿನಲ್ಲಿರುವ ಆಸ್ತಿಯೂ ಸೇರಿ) ₹ 93.09 ಕೋಟಿ ಮೌಲ್ಯದ ಚರಾಸ್ತಿ ಮತ್ತು ₹43.99 ಕೋಟಿ ಮೌಲ್ಯದ ಸ್ಥಿರಾಸ್ತಿ ಇದೆ. ನಾಮಪತ್ರಗಳ ಜತೆ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಆಸ್ತಿಪಾಸ್ತಿಗೆ ಸಂಬಂಧಿಸಿದ ಪ್ರಮಾಣ ಪತ್ರದಲ್ಲಿ ಈ ವಿವರಗಳನ್ನು ಅವರು ತಿಳಿಸಿದ್ದಾರೆ.

ಸತೀಶ್, ಪತ್ನಿ ಪ್ರೀತಿ ಹಾಗೂ ಮಕ್ಕಳಾದ ಕೌಶಿಕ್ ಮತ್ತು ಕಾರ್ತಿಕ್ ಹೆಸರಿನಲ್ಲಿ ಕೋಟ್ಯಂತರ ಮೌಲ್ಯದ ಸ್ಥಿರಾಸ್ತಿ, ಚರಾಸ್ತಿ ಹಾಗೂ ಚಿನ್ನಾಭರಣ, ವಿವಿಧ ಕಂಪನಿಗಳ ಷೇರುಗಳು ಮತ್ತು ಡಿಬೆಂಚರ್ಸ್ ಇರುವುದಾಗಿ ಘೋಷಿಸಿದ್ದಾರೆ. ಸತೀಶ್ ಅವರ ಕೈಯಲ್ಲಿ ₹ 7.02ಲಕ್ಷ, ಪ್ರೀತಿ ಬಳಿ ₹ 86ಸಾವಿರ, ಕೌಶಿಕ್ ಕೈಯಲ್ಲಿ ₹ 26ಸಾವಿರ, ಕಾರ್ತಿಕ್ ಬಳಿ ₹ 11 ಸಾವಿರ ನಗದಿದೆ. ತಮ್ಮ ಹೆಸರಿನಲ್ಲಿ ವಿವಿಧ ಬ್ಯಾಂಕ್‌ಗಳಲ್ಲಿ ₹ 1.33ಕೋಟಿ, ಪತ್ನಿ ಹೆಸರಿನಲ್ಲಿ ₹ 55.17ಲಕ್ಷ, ಇಬ್ಬರು ಪುತ್ರರ ಹೆಸರಿನಲ್ಲಿ ಒಟ್ಟು ₹ 11.63ಲಕ್ಷ ಠೇವಣಿ ಇರುವುದಾಗಿ ಸತೀಶ್ ಹೇಳಿದ್ದಾರೆ.

ಇದಲ್ಲದೆ, ಬಿಜೆಪಿ ಅಭ್ಯರ್ಥಿ ₹8.40ಕೋಟಿ, ಪ್ರೀತಿ ₹ 1.68ಕೋಟಿ, ಹಿರಿಯ ಪುತ್ರ ₹ 39.49ಲಕ್ಷ ಮತ್ತು ದ್ವಿತೀಯ ಪುತ್ರ ₹ 35.49ಲಕ್ಷ ಹೂಡಿಕೆ ಮಾಡಿದ್ದಾರೆ. ಜತೆಗೆ, ನಾಲ್ವರು ಕ್ರಮವಾಗಿ ₹ 14.04ಕೋಟಿ, ₹ 17.99ಲಕ್ಷ, ಪುತ್ರ ಕೌಶಿಕ್ ₹ 5ಲಕ್ಷ ಸಾಲ ಕೊಟ್ಟಿದ್ದಾರೆ.

ಎ.ಮಂಜು ವಿರುದ್ಧ ಕ್ರಮ

ಬೆಂಗಳೂರು: ಹಾಸನ ಜಿಲ್ಲೆಯ ಪಕ್ಷದ ನಾಯಕ ಎ.ಮಂಜು ಅವರಿಗೆ ನೀಡಿದ್ದ ಮಂಡ್ಯ ಜಿಲ್ಲಾ ಉಸ್ತುವಾರಿಯೂ ಸೇರಿ ಪಕ್ಷದ ಎಲ್ಲಾ ಜವಾಬ್ದಾರಿಗಳಿಂದಲೂ ಬಿಜೆಪಿ ಮುಕ್ತಗೊಳಿಸಿದೆ.


ಮಂಜು ಅವರ ಪುತ್ರ ಡಾ.ಮಂತರ್ ಗೌಡ ಅವರಿಗೆ ವಿಧಾನಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ನೀಡಿರುವ ಬೆನ್ನಲ್ಲೇ ಬಿಜೆಪಿ ಈ ಕ್ರಮ ಕೈಗೊಂಡಿದೆ. ಮಂತರ್ ಗೌಡ ಅವರು ಕೊಡಗು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ.

'ಇತ್ತೀಚಿನಬೆಳವಣಿಗೆಗಳಿಂದಕೆಲವು ಸಂಶಯ ಉಂಟಾಗಿದೆ. ಈ ಕಾರಣದಿಂದ ಪಕ್ಷದ ಮಂಡ್ಯ ಜಿಲ್ಲೆ ಪ್ರಭಾರಿ ಮತ್ತು ಉಳಿದ ಜವಾಬ್ದಾರಿಗಳಿಂದ ಮುಕ್ತಗೊಳಿಸಲಾಗಿದೆ' ಎಂದು ಬಿಜೆಪಿ ತಿಳಿಸಿದೆ.

ಶಂಖ ಊದಲು ಎಲ್ಲಾ ಕಡೆ ನಾನೇ ಹೋಗಬೇಕು: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಎಲ್ಲ ಕಡೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಪ್ರಚಾರ ಮಾಡಲು ಸಮಯ ಇಲ್ಲ. ಜೆಡಿಎಸ್‌ನಲ್ಲಿ ಶಂಖ ಊದಲೂ ಜನರಿಲ್ಲ ಎಂದು ಈಶ್ವರಪ್ಪ ಹೇಳಿದ್ದಾರೆ. ಶಂಖ ಊದಲು ಎಲ್ಲ ಕಡೆ ನಾನೇ ಹೋಗಬೇಕಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.


ಕುಮಾರಸ್ವಾಮಿ

ಮಂಗಳವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ವಿಧಾನ ಪರಿಷತ್ ಚುನಾವಣೆಗೆ ಏಳು ಕ್ಷೇತ್ರಗಳಲ್ಲಿ ಮಾತ್ರ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದೇವೆ. ಕೋಲಾರ, ತುಮಕೂರು, ಬೆಂಗಳೂರು ಗ್ರಾಮಾಂತರ, ಮೈಸೂರು, ಹಾಸನ, ಮಂಡ್ಯ ಹಾಗೂ ಕೊಡಗಿನಲ್ಲಿ ಮಾತ್ರ ಹೋರಾಟ ನಡೆಸುತ್ತೇವೆ. ಕಳೆದ ಬಾರಿ ನಾಲ್ಕು ಸ್ಥಾನ ಗೆದ್ದಿದ್ದೆವು. ಈ ಬಾರಿ ಅದಕ್ಕಿಂತ ಹೆಚ್ಚಿನ ಸ್ಥಾನ ಗೆಲ್ಲುವ ವಿಶ್ವಾಸವಿದೆ' ಎಂದರು.

'ಪಕ್ಷಕ್ಕೆ ಯಾರೂ ಅನಿವಾರ್ಯ ಅಲ್ಲ. ಕಾರ್ಯಕರ್ತರು ಶಕ್ತಿ ತುಂಬಿ ನಾಯಕರನ್ನು ಸೃಷ್ಟಿಸುತ್ತಾರೆ' ಎಂದು ಜಿ.ಟಿ.ದೇವೇಗೌಡ ಹಾಗೂ ಸಂದೇಶ್ ನಾಗರಾಜ್ ಅವರಿಗೆ ತಿರುಗೇಟು ನೀಡಿದರು.

ಸಂದೇಶ್ ನಾಗರಾಜ್ ಅವರು ಸ್ಪರ್ಧೆಯಿಂದ ಹಿಂದೆ ಸರಿದು ಎಚ್.ಡಿ.ದೇವೇಗೌಡ ಹಾಗೂ ರೇವಣ್ಣ ಅವರಿಗೆ ಧನ್ಯವಾದ ಅರ್ಪಿಸಿರುವ ಬಗ್ಗೆ ಪ್ರತಿಕ್ರಿಯಿಸಿ, 'ಹಿಂದೆ ಎರಡೂ ಬಾರಿ ಸ್ಪರ್ಧೆಗೆ ಸಹಾಯ ಮಾಡಿದ್ದ ದೇವೇಗೌಡ, ರೇವಣ್ಣ ಅವರನ್ನು ಸ್ಮರಿಸಿಕೊಂಡಿದ್ದಾರೆ ಅಷ್ಟೆ' ಎಂದು ಹೇಳಿದರು.

ಉದ್ಯೋಗ ವಾಣಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಬುದ್ಧಿವಂತ ವ್ಯಕ್ತಿಗಳು ಆರಂಭದಲ್ಲಿ ಏನು ಮಾಡುತ್ತಾರೋ ಅದನ್ನೇ ಮೂರ್ಖರು ಕೊನೆಯಲ್ಲಿ ಮಾಡುತ್ತಾರೆ.
–ವಾರನ್ ಬಫೆಟ್

ಆ್ಯಪ್ ಮೂಲಕ ಅಕ್ರಮ ಸಾಲ ಶಾಸನಬದ್ಧ ನಿಯಂತ್ರಣ ವ್ಯವಸ್ಥೆ ಬೇಕು

ಹಣಕಾಸು ತಂತ್ರಜ್ಞಾನವು ವೈಯಕ್ತಿಕ ಸಾಲ ಸಿಗುವುದನ್ನು ಬಹಳ ಸುಲಭವಾಗಿಸಿದೆ. ಬ್ಯಾಂಕ್‌ಗೆ ಹೋಗಿ ಅರ್ಜಿ ಸಲ್ಲಿಸಿ, ಹಲವು ಪ್ರಶ್ನೆಗಳಿಗೆ ವಿವರಣೆ ನೀಡಿ, ದಿನಗಟ್ಟಲೆ ಕಾಯ್ದು, ಸಾಲಕ್ಕೆ ಜಾಮೀನು ನೀಡಲು ಯಾರನ್ನಾದರೂ ಗೊತ್ತುಮಾಡಿಕೊಂಡು, ನಂತರ ಸಾಲ ಪಡೆಯಬೇಕಾದ ಅನಿವಾರ್ಯ ಈಗಿಲ್ಲ. ಕೆಲವು ಹಣಕಾಸು ತಂತ್ರಜ್ಞಾನ ಕಂಪನಿಗಳು ಒಂದೆರಡು ನಿಮಿಷಗಳಲ್ಲಿ ವೈಯಕ್ತಿಕ ಸಾಲ ಮಂಜೂರು ಮಾಡುತ್ತವೆ. ಸಾಲ ಕೋರಿದವನ ಖಾತೆಗೆ ಹಣವು ಕೆಲವೇ ಗಂಟೆಗಳಲ್ಲಿ ಜಮಾ ಆಗುತ್ತದೆ. ಆದರೆ, ತೀರಾ ಸುಲಭವಾಗಿ ಸಿಗುವ ಇಂತಹ ಸಾಲ ಸೌಲಭ್ಯಗಳು ಕೆಲವೊಮ್ಮೆ ಒಂದಿಷ್ಟು ಸಮಸ್ಯೆಗಳನ್ನೂ ಹೊತ್ತು ತರುತ್ತವೆ. ಸಾಲ ಪಡೆದ ವ್ಯಕ್ತಿ ನಂತರದಲ್ಲಿ ಹಲವು ಬಗೆಯ ಕಷ್ಟಗಳಿಗೆ ಗುರಿಯಾಗಿದ್ದಿದೆ. ಸಾಲ ಮರುಪಾವತಿ ಕಂತುಗಳಲ್ಲಿ ತುಸು ವ್ಯತ್ಯಾಸ ಆದರೂ, ಸಾಲ ನೀಡಿದ ಆ್ಯಪ್ ಕಂಪನಿಯ ಕಡೆಯಿಂದ ಕಿರುಕುಳ ಎದುರಾದ ಬಗ್ಗೆ ವರದಿಗಳು ಇವೆ. ಕಿರುಕುಳಕ್ಕೆ ಗುರಿಯಾದ ಕೆಲವರು ಪೊಲೀಸರಲ್ಲಿ ದೂರು ಒಯ್ದಿದ್ದಾರೆ ಕೂಡ. ಹಿಂದಿನ ವರ್ಷದಲ್ಲಿ ಇಂತಹ ದೂರುಗಳ ಸಂಖ್ಯೆ ಹೆಚ್ಚಾದ ನಂತರದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಕಾರ್ಯಕಾರಿ ಸಮಿತಿಯೊಂದನ್ನು ರಚಿಸಿ, ಇಂತಹ ಆ್ಯಪ್‌ಗಳ ನಿಯಂತ್ರಣಕ್ಕೆ ಶಿಫಾರಸುಗಳನ್ನು ಸಲ್ಲಿಸಲು ಸೂಚಿಸಿತ್ತು. ಈಗ ಆ ಸಮಿತಿಯು ಕೆಲವು ಶಿಫಾರಸುಗಳನ್ನು ಆರ್‌ಬಿಐಗೆ ಸಲ್ಲಿಸಿದೆ.



ಆ್ಯಪ್ ಮೂಲಕ ಸಾಲ ನೀಡುವ ವ್ಯವಸ್ಥೆಯನ್ನು ನಿಯಂತ್ರಿಸಲು ಪ್ರತ್ಯೇಕ ಕಾನೂನಿನ ಅಗತ್ಯ ಇದೆ

ದೇಶದಲ್ಲಿ ಸ್ಮಾರ್ಟ್‌ಫೋನ್ ಮೂಲಕ ಸಾಲ ವಿತರಣೆ ಮಾಡುವ 1,100 ಆ್ಯಪ್‌ಗಳು ಲಭ್ಯವಿವೆ. ಈ ಪೈಕಿ 600ರಷ್ಟು ಆ್ಯಪ್‌ಗಳು ಅಕ್ರಮವಾಗಿ ಸಾಲ ನೀಡುತ್ತಿವೆ ಎಂದು ಸಮಿತಿಯು ತನ್ನ ವರದಿಯಲ್ಲಿ ಹೇಳಿದೆ. ಆ್ಯಪ್ ಮೂಲಕ ಸಾಲ ನೀಡುವ ವ್ಯವಸ್ಥೆಯನ್ನು ನಿಯಂತ್ರಿಸಲು ಪ್ರತ್ಯೇಕ ಕಾನೂನಿನ ಅಗತ್ಯ ಇದೆ ಎಂದು ಸಮಿತಿಯು ಹೇಳಿದೆ.

ಈ ಆ್ಯಪ್‌ಗಳು ಗೂಗಲ್‌ನ ಪ್ಲೇಸ್ಟೋರ್ ಮಾತ್ರವೇ ಅಲ್ಲದೆ, ಬೇರೆ ಬೇರೆ ಆ್ಯಪ್ ಸ್ಟೋರ್‌ಗಳಲ್ಲಿಯೂ ಲಭ್ಯವಾಗುತ್ತವೆ. 600ರಷ್ಟು ಆ್ಯಪ್‌ಗಳು ಅಕ್ರಮವಾಗಿ ಸಾಲ ನೀಡುತ್ತಿವೆ ಎಂಬ ಮಾತು ಇವುಗಳಿಂದ ಸೃಷ್ಟಿಯಾಗಿರುವ, ಸೃಷ್ಟಿಯಾಗಬಹುದಾದ ಸಮಸ್ಯೆ ಎಷ್ಟು ವ್ಯಾಪಕವಾಗಿ ಇರಬಹುದು ಎಂಬುದನ್ನು ಸೂಚ್ಯವಾಗಿ ಹೇಳುತ್ತದೆ. ಇಂತಹ ಆ್ಯಪ್‌ಗಳ ಬಗ್ಗೆ ದೂರು ನೀಡಲು ಆರ್‌ಬಿಐ, ಸಚೇತ ಎಂಬ ಪೋರ್ಟಲ್ ರೂಪಿಸಿದೆ. ಆ ಪೋರ್ಟಲ್ ಮೂಲಕ, 2020ರ ಜನವರಿಯಿಂದ 2021ರ ಮಾರ್ಚ್‌ವರೆಗಿನ ಅವಧಿಯಲ್ಲಿ ಎರಡೂವರೆ ಸಾವಿರಕ್ಕೂ ಅಧಿಕ ದೂರುಗಳು ದಾಖಲಾಗಿವೆ. ದೂರುಗಳ ರಾಜ್ಯವಾರು ಪಟ್ಟಿಯಲ್ಲಿ ಕರ್ನಾಟಕವು ಎರಡನೆಯ ಸ್ಥಾನದಲ್ಲಿ ಇದೆ. ವಿವಿಧ ವೇದಿಕೆಗಳ ಮೂಲಕ ಆ್ಯಪ್‌ಗಳನ್ನು ಜನರ ಬಳಕೆಗೆ ಮುಕ್ತವಾಗಿಸುವ ಪ್ರಕ್ರಿಯೆ ಮೇಲೆ ನಿಗಾ ಇರಿಸುವ ಶಾಸನಾತ್ಮಕ ವ್ಯವಸ್ಥೆ ದೇಶದಲ್ಲಿ ಇಲ್ಲ. ಅಧಿಕಾರಶಾಹಿಯ ನಿಯಂತ್ರಣ ಇಲ್ಲದಿರುವುದರಿಂದ ಆ್ಯಪ್ ಜಗತ್ತಿನಲ್ಲಿ ಸೃಜನಶೀಲತೆಗೆ ವಿಪುಲ ಅವಕಾಶ ಸೃಷ್ಟಿಯಾಗಿರಬಹುದು. ಆದರೆ, ನಿಯಂತ್ರಣ ಇಲ್ಲದಿರುವ ವಿಷಯವು ಅಕ್ರಮವಾಗಿ ಸಾಲ ನೀಡುವ ಆ್ಯಪ್‌ಗಳು ಸೃಷ್ಟಿಯಾಗಲು ಒಂದು ಮುಖ್ಯ ಕಾರಣ ಎಂದರೆ ತಪ್ಪಾಗದು. ಆ್ಯಪ್ ಸ್ಟೋರ್‌ಗಳು ಹತ್ತು ಹಲವು ಬಗೆಯ ಆರ್ಥಿಕ ಚಟುವಟಿಕೆಗಳಿಗೆ ವೇದಿಕೆ ಕೂಡ ಹೌದು. ಸುಲಭದಲ್ಲಿ ಸಾಲ ಕೊಡುತ್ತೇವೆ ಎಂದು ಹೇಳಿಕೊಳ್ಳುವ ಹಣಕಾಸು ತಂತ್ರಜ್ಞಾನ ಕಂಪನಿಗಳಿಗೆ ಜನರನ್ನು ತಲುಪಲು ಇರುವ ಸರಾಗ ಸೇತುವೆ ಈ ಆ್ಯಪ್ ಸ್ಟೋರ್‌ಗಳು. ನ್ಯಾಯಬದ್ಧ ಕಂಪನಿಗಳಿಗೆ ವಂಚನೆ ಆಗದಂತೆ ನೋಡಿಕೊಳ್ಳಲು, ಜನಸಾಮಾನ್ಯರು ಸಾಲದ ಹೆಸರಿನಲ್ಲಿ ಕಿರುಕುಳಕ್ಕೆ ಒಳಗಾಗದಂತೆ ನೋಡಿಕೊಳ್ಳಲು ಇಂತಹ ಆ್ಯಪ್ ಸ್ಟೋರ್‌ಗಳ ಮೇಲೆ ನಿಗಾ ಇರಿಸಬೇಕಾದ ಅಗತ್ಯ ಖಂಡಿತ ಇದೆ. ಸರ್ಕಾರ ಹಾಗೂ ಉದ್ಯಮದ ಪ್ರತಿನಿಧಿಗಳನ್ನು ಒಳಗೊಂಡ ಶಾಸನಬದ್ಧ ವ್ಯವಸ್ಥೆಯೊಂದನ್ನು ಈ ಉದ್ದೇಶಕ್ಕಾಗಿ ರೂಪಿಸಬಹುದು.

ಹಣಕಾಸು ತಂತ್ರಜ್ಞಾನ ಉದ್ಯಮ ವಲಯವು ದೇಶದಲ್ಲಿ ಭವಿಷ್ಯದಲ್ಲಿ ಬೃಹತ್ ಪ್ರಮಾಣದಲ್ಲಿ ಬೆಳೆದು ನಿಲ್ಲುವ ಭರವಸೆಯನ್ನು ಮೂಡಿಸಿದೆ. ಸಹಸ್ರಾರು ಜನರಿಗೆ ಉದ್ಯೋಗ ಸೃಷ್ಟಿಸುವ ಶಕ್ತಿ ಈ ಉದ್ಯಮಕ್ಕೆ ಇದೆ. ಇದರ ಬೆಳವಣಿಗೆಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಕೆಲವು ರಾಜ್ಯಗಳು ಕಾರ್ಯಪಡೆ ರಚಿಸಿರುವುದೂ ಇದೆ. ಸಾಲ ನೀಡುವುದಾಗಿ ಹೇಳಿಕೊಳ್ಳುವ ಆ್ಯಪ್ ಆಧಾರಿತ ಕಂಪನಿಗಳು ಹಣಕಾಸು ತಂತ್ರಜ್ಞಾನ ವಲಯದವು. ಇಲ್ಲಿ ಅಕ್ರಮವಾಗಿ ಸಾಲ ನೀಡುವ ಆ್ಯಪ್‌ಗಳು ಜಾಸ್ತಿ ಇದ್ದರೆ, ಉದ್ಯಮಕ್ಕೆ ಕೆಟ್ಟ ಹೆಸರು. ಸಾಲ, ಠೇವಣಿಯಂತಹ ಬ್ಯಾಂಕಿಂಗ್ ವಹಿವಾಟುಗಳು ಗ್ರಾಹಕರ ವಿಶ್ವಾಸವನ್ನು ನೆಚ್ಚಿಕೊಂಡು ನಡೆಯಬೇಕಾದವು. ಇಲ್ಲಿ ಅಕ್ರಮ ಆ್ಯಪ್‌ಗಳು ತಲೆಹಾಕುವುದು ಎಂದರೆ ಜನರ ವಿಶ್ವಾಸಕ್ಕೆ ಚ್ಯುತಿ ತರುವುದಕ್ಕೆ ಸಮ. ಇದು ಇಡೀ ಉದ್ಯಮದ ಬೆಳವಣಿಗೆಗೆ ಅಡ್ಡಿಯಾಗುವ ಪರಿಣಾಮವೂ ಆಗಬಹುದು. ಹೊಸ ಕಾಲದ ತಂತ್ರಜ್ಞಾನಗಳು ಮನೆಯಿಂದಲೇ ಸಾಲಕ್ಕೆ ಅರ್ಜಿ ಸಲ್ಲಿಸುವ, ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಮನೆಯಿಂದಲೇ ಪರಿಶೀಲನೆಗೆ ಒಪ್ಪಿಸುವ ಸಾಧ್ಯತೆಗಳನ್ನು ತೆರೆದಿರಿಸಿವೆ. ಇಂಥವುಗಳಿಗೆ ಉತ್ತೇಜನ ನೀಡಬೇಕು. ಅಂದರೆ, ಇಲ್ಲಿ ಕಾನೂನುಬಾಹಿರವಾಗಿ ಯಾವುದೇ ಚಟುವಟಿಕೆ ನಡೆಯದಂತೆ ನೋಡಿಕೊಳ್ಳಬೇಕು. ಇಲ್ಲಿನ ಪ್ರಕ್ರಿಯೆಗಳ ಬಗ್ಗೆ ಜನ ವಿಶ್ವಾಸ ಕಳೆದುಕೊಂಡರೆ, ಅವರು ಮತ್ತೆ ಭೌತಿಕವಾಗಿ ಬ್ಯಾಂಕ್‌ಗಳಿಗೆ ತೆರಳಿ ತಮ್ಮ ಕೆಲಸ ಮಾಡಿಸಿಕೊಳ್ಳುವ ವ್ಯವಸ್ಥೆಯತ್ತ ಮುಖ ಮಾಡಬಹುದು. ಜನ ವಿಶ್ವಾಸ ಕಳೆದುಕೊಳ್ಳುವ ಸ್ಥಿತಿ ಬರಬಾರದು. ಹೊಸ ತಂತ್ರಜ್ಞಾನದ ಸಾಧ್ಯತೆಗಳನ್ನು ಸೂಕ್ತ ಬಗೆಯಲ್ಲಿ ಬಳಸಿಕೊಳ್ಳಬೇಕು. ಅಕ್ರಮವಾಗಿ ಸಾಲ ನೀಡುವ ಆ್ಯಪ್‌ಗಳನ್ನು ಆದಷ್ಟು ಬೇಗ ಹತ್ತಿಕ್ಕಬೇಕು.

ದಿನದ ಟ್ವೀಟ್

ಹ್ಯಾಕರ್‌ಗಳ ಕೈಚಳಕ



ಇ-ಕಾಮರ್ಸ್‌ನ ಸಾವಿರಾರು ವೆಬ್‌ಸೈಟ್‌ಗಳು ಹೊಂದಾಣಿಕೆ ಮಾಡಿಕೊಂಡಿವೆ ಮತ್ತು ತಮ್ಮ ಗ್ರಾಹಕರ ಕಾರ್ಡ್ ವಿವರಗಳು ಹಾಗೂ ಇತರ ದಾಖಲೆಗಳನ್ನು ಹ್ಯಾಕರ್‌ಗಳು ಕದಿಯುತ್ತಿರುವ ಬಗ್ಗೆ ಅವುಗಳಿಗೆ ಅರಿವೇ ಇಲ್ಲ.

ಸಂಜಯ್ ಕಾಟ್ಕರ್, ಉದ್ಯಮಿ

ಕಿಡಿನುಡಿ



ಅಡುಗೆ ಮನೆಯಲ್ಲಿ ಸಿಆರ್‌ಪಿಸಿಯ ಸೆಕ್ಷನ್ 144 ಜಾರಿಯಲ್ಲಿ ಇರುವಂತೆ ಕಾಣುತ್ತದೆ. ನೀವು ಅಲ್ಲಿ ನಾಲ್ಕಕ್ಕಿಂತ ಹೆಚ್ಚಿಗೆ ಟೊಮೆಟೊ ಅಥವಾ ಈರುಳ್ಳಿಯನ್ನು ಇರಿಸಿಕೊಳ್ಳುವಂತಿಲ್ಲ.

ಪವನ್ ಖೇರಾ, ಕಾಂಗ್ರೆಸ್ ವಕ್ತಾರ

25 ವರ್ಷಗಳ ಹಿಂದೆ

ಭಾನುವಾರ, 24-11-1996

• **ಗ್ರೀಸ್‌ನ ಐರಿನ್ ಸ್ಲೀವಾ ವಿಶ್ವಸುಂದರಿ**

ಬೆಂಗಳೂರು, ನ. 23– ವಿಶ್ವಸುಂದರಿ ಮುಕುಟ ಗ್ರೀಸ್ ದೇಶದ ಹದಿನೆಂಟರ ಚೆಲುವೆ ಐರಿನ್ ಸ್ಲೀವಾ ಅವರ ಮುಡಿಯೇರಿತು. ಹಿಂದೆಂದೂ ಕಾಣದಂಥ ಬಿಗಿ ಭದ್ರತಾ ವ್ಯವಸ್ಥೆಯ ನಡುವೆ ಝಗಮಗಿಸುತ್ತಿದ್ದ ವಿದ್ಯುತ್ ದೀಪಗಳಿಂದ ಅಲಂಕೃತವಾದ ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಿರ್ಮಾಣಗೊಂಡಿದ್ದ ಬಣ್ಣದ ಬೆಡಗಿನ ಲೋಕದಲ್ಲಿ ಶನಿವಾರ ಮಧ್ಯರಾತ್ರಿ 12 ಗಂಟೆಗೆ ಸರಿಯಾಗಿ 46ನೇ ವಿಶ್ವಸುಂದರಿಯಾಗಿ ಐರಿನ್ ಸ್ಲೀವಾ ಜಗತ್ತಿನ ಹೊಸ ಚೆಲುವೆಯ ಪಟ್ಟ ಅಲಂಕರಿಸಿದರು.

ನರ್ತಕಿಯರ ಸಂಭ್ರಮ, ಮಂಗಳ ಘೋಷ, ಮುಗಿಲು ಮುಟ್ಟಿದ ಪ್ರೇಕ್ಷಕರ ಹರ್ಷೋದ್ಗಾರಗಳ ನಡುವೆ, ಇದುವರೆಗೆ ವಿಶ್ವಸುಂದರಿ ಪಟ್ಟ ಅಲಂಕರಿಸಿದ್ದ ವೆನಿಜುವೆಲಾದ ಚೆಲುವೆ ಜಾಕ್ವೆಲಿನ್ ಆಗುಲೇರಿಯಾ ಅವರು ಹಂಸಗಮನೆಯಾಗಿ ನಡೆದು ಬಂದ ಐರಿನ್ ಸ್ಲೀವಾ ಅವರಿಗೆ ವಿಶ್ವಸುಂದರಿ ಕಿರೀಟ ಧಾರಣೆ ಮಾಡಿ, ಹೊಸ ಚೆಲುವೆಗೆ ಮುತ್ತಿಕ್ಕಿದರು.

• **ಬಂದ್ ವಿಫಲ: ಲಾಠಿ ಪ್ರಹಾರ**

ಬೆಂಗಳೂರು, ನ. 23– ವಿಶ್ವ ಸುಂದರಿ ಸ್ಪರ್ಧೆಯ ವಿರುದ್ಧ ಬಿಜೆಪಿ ಇಂದು ಕರೆ ನೀಡಿದ್ದ ಬೆಂಗಳೂರು ಬಂದ್ ವಿಫಲವಾಯಿತು. ಆದರೆ ಪ್ರತಿಭಟನಾಕಾರರಿಂದ ಕಲ್ಲುತೂರಾಟ, ಪೊಲೀಸರಿಂದ ಅಶ್ರುವಾಯು ಪ್ರಯೋಗ, ಲಾಠಿ ಪ್ರಹಾರ, ಎಂಪಿಗಳು, ಶಾಸಕರು ಸೇರಿ ಸಾವಿರಾರು ಜನರ ಬಂಧನದೊಂದಿಗೆ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆ ಹಿಂಸೆಯ ರೂಪ ಪಡೆಯಿತು.

ಬಸ್‌ಗಳಿಗೆ ಕಲ್ಲು ತೂರಿದ, ಅಂಗಡಿ ಬಲವಂತವಾಗಿ ಮುಚ್ಚಿಸಲು ಯತ್ನಿಸಿದ ಒಂದೆರಡು ಘಟನೆಗಳು ನಡೆದಿವೆ ಎಂದು ಹೆಚ್ಚುವರಿ ಪೊಲೀಸ್ ಕಮಿಷನರ್ ಎಚ್.ಆರ್. ಕಸ್ತೂರಿರಂಗನ್ ತಿಳಿಸಿದರು.

50 ವರ್ಷಗಳ ಹಿಂದೆ

ಬುಧವಾರ, 24-11-1971

• **ಭಾರತದ ನ್ಯಾಟ್‌ಗಳಿಗೆ ಮೂರು ಪಾಕ್ ಸೇಬರ್‌ಜೆಟ್‌ಗಳು ಬಲಿ**

ನವದೆಹಲಿ, ನ. 23– ಕಲ್ಕತ್ತದ ಈಶಾನ್ಯದಲ್ಲಿ ಸುಮಾರು 30 ಕಿಲೊ ಮೀಟರ್ ದೂರದಲ್ಲಿರುವ ಬ್ರೋಯ್ರಾ ಸಮೀಪ ನಿನ್ನೆ ಭಾರತದ ವಾಯುಪ್ರದೇಶ ಉಲ್ಲಂಘಿಸಿ ಬಂದ ಪಾಕಿಸ್ತಾನದ ನಾಲ್ಕು ಸೇಬರ್‌ಜೆಟ್ ವಿಮಾನಗಳಲ್ಲಿ ಮೂರನ್ನು ಭಾರತೀಯ ವಿಮಾನಪಡೆಯ ನಾಲ್ಕು ನ್ಯಾಟ್ ವಿಮಾನಗಳು ಹೊಡೆದು ಉರುಳಿಸಿದವು.

ಪಾಕಿಸ್ತಾನಿ ವಿಮಾನ ಚಾಲಕರು ಪ್ಯಾರಾಚೂಟ್ ಮೂಲಕ ಕೆಳಕ್ಕೆ ಇಳಿದರು. ಅವರಲ್ಲಿ ಫ್ಲೈಟ್ ಲೆಫ್ಟಿನೆಂಟ್ ಪಾರ್ವೇಜ್ ಮೆಹದಿ ಮತ್ತು ಫ್ಲೈಯಿಂಗ್ ಆಫೀಸರ್ ಖಲೀಲ್ ಅಹಮದ್ ಎಂಬ ಇಬ್ಬರು 'ನಮ್ಮ ಬಂಧನದಲ್ಲಿದ್ದಾರೆ'. ಇನ್ನೊಬ್ಬ ಚಾಲಕನೂ ಬಂಧಿಸಲ್ಪಟ್ಟಿರುವುದಾಗಿ ಅಧಿಕೃತ ವಲಯಗಳಿಂದ ನಂತರ ಗೊತ್ತಾಗಿದೆ. ಆದರೆ ಅವನ ಹೆಸರು ಗೊತ್ತಾಗಲಿಲ್ಲ.

• **ಜನತಾ ಚೀನಾದ ಜತೆ ಉತ್ತಮ ಬಾಂಧವ್ಯಕ್ಕೆ ಸರ್ವ ಯತ್ನ**

ನವದೆಹಲಿ, ನ. 23– ಭಾರತದ ವಿರುದ್ಧ ಆಪಾದನೆ ಮಾಡಿ ಚೀನಾ, ವಿಶ್ವಸಂಸ್ಥೆಯ ಮೂರನೆಯ ಸಮಿತಿಯಲ್ಲಿ ಹೇಳಿಕೆ ನೀಡಿದ್ದರೂ ಭಾರತವು ಅದರೊಂದಿಗೆ ತನ್ನ ಬಾಂಧವ್ಯವನ್ನು ಉತ್ತಮಪಡಿಸಿಕೊಳ್ಳುವ ಯತ್ನದಲ್ಲಿ ಮುಂದುವರಿಯುತ್ತದೆ ಎಂದು ವಿದೇಶಾಂಗ ಸಚಿವ ಸ್ವರಣ್ ಸಿಂಗ್ ಸ್ಪಷ್ಟಪಡಿಸಿದ್ದಾರೆ.

ಈ ಕ್ಷೇತ್ರದಲ್ಲಿ ಸರ್ಕಾರ ತರಲು ಹೊರಟಿರುವ ಬದಲಾವಣೆಗಳಿಗೆ ಹಲವಾರು ಕಾರಣಗಳಿವೆ

ಇಂಧನ ಬಳಕೆ: ಬದಲಾವಣೆಯ ಪರ್ವ



ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ನಮ್ಮ ದೇಶದಲ್ಲಿ ಬಳಕೆಯಾಗುತ್ತಿರುವ ಪೆಟ್ರೋಲ್ ಮತ್ತು ವಾಹನಗಳಿಗೆ ಸಂಬಂಧಿಸಿದಂತೆ ಎರಡು ಮಹತ್ವದ ಬದಲಾವಣೆಗಳನ್ನು ಸದ್ಯದಲ್ಲೇ ತರುವ ಸೂಚನೆಯನ್ನು ಕೇಂದ್ರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ನೀಡಿದ್ದಾರೆ. ಮೊದಲನೆಯದು, ಪೆಟ್ರೋಲ್‌ನೊಂದಿಗೆ ಹದವಾಗಿ ಬೆರೆಸುತ್ತಿರುವ ಎಥನಾಲ್ ಪ್ರಮಾಣವನ್ನು ಸದ್ಯದ ಶೇ 8.5ರಿಂದ ಹಂತ ಹಂತವಾಗಿ, 2023ರ ಏಪ್ರಿಲ್- 2025ರ ಏಪ್ರಿಲ್ ನಡುವೆ ಶೇ 20ಕ್ಕೆ ಏರಿಸುವುದು. ಎರಡನೆಯದಾಗಿ, ಆ ಅವಧಿಯೊಳಗಾಗಿಯೇ, ಒಂದಕ್ಕಿಂತ ಹೆಚ್ಚಿನ ಇಂಧನವನ್ನು ಬಳಸಬಲ್ಲ ಸಾಮರ್ಥ್ಯವಿರುವ ಎಂಜಿನ್‌ಗಳನ್ನು ಕಡ್ಡಾಯವಾಗಿ ವಾಹನಗಳಲ್ಲಿ ಅಳವಡಿಸುವುದು. 'ಫ್ಲೆಕ್ಸಿಬಲ್ ಫ್ಯೂಯೆಲ್ ವೆಹಿಕಲ್' (ಎಫ್‌ಎಫ್‌ವಿ) ಅಥವಾ ವಿವಿಧ ಇಂಧನಗಳನ್ನು ಬಳಸಬಲ್ಲ ವಾಹನಗಳ ಉತ್ಪಾದನೆಗೆ ಸಂಬಂಧಿಸಿದಂತೆ ವಿವರವಾದ ಮಾರ್ಗದರ್ಶಿ ಸೂಚನೆಗಳನ್ನು ಮುಂದಿನ ಆರು ತಿಂಗಳ ಒಳಗಾಗಿ ಪ್ರಕಟಿಸಲಾಗುವುದೆಂದು ಸಚಿವರು ತಿಳಿಸಿದ್ದಾರೆ.

ಎಥನಾಲ್ ಸಸ್ಯಮೂಲದಿಂದ ಪಡೆಯಬಹುದಾದ ಈಥೈಲ್ ಆಲ್ಕೊಹಾಲ್. ಪೆಟ್ರೋಲ್, ಡೀಸೆಲ್ ಮತ್ತು ಇತರ ಹೈಡ್ರೊಕಾರ್ಬನ್‌ಗಳಿಗಿಂತ ಶುದ್ಧವಾದ ಇಂಧನ. ಪೆಟ್ರೋಲ್‌ನೊಂದಿಗೆ ಎಥನಾಲನ್ನು ಸೇರಿಸುವ ಕ್ರಮ ನಮ್ಮ ದೇಶದಲ್ಲಿ ಪ್ರಾರಂಭವಾದದ್ದು 2003ರಲ್ಲಿ. 2007ರಲ್ಲಿ ಶೇ 5ರಷ್ಟು ಎಥನಾಲನ್ನು ಸೇರಿಸುವುದು ಕಡ್ಡಾಯವಾಯಿತು. ಇದೀಗ ಶೇ 8.5ರಷ್ಟು ಎಥನಾಲನ್ನು ಸೇರಿಸಿದ ಪೆಟ್ರೋಲ್ ದೇಶದಾದ್ಯಂತ ಮಾರಾಟವಾಗುತ್ತಿದೆ. ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ನೇಮಿಸಿದ್ದ ಪರಿಣತರ ಸಮಿತಿ, ಶೇ 20ರಷ್ಟು ಎಥನಾಲನ್ನು ಪೆಟ್ರೋಲಿಗೆ ಸೇರಿಸಿ ಬಳಕೆಗೆ ತರುವುದರ ಜೊತೆಗೆ, ಅದನ್ನು ಸಾಧಿಸಲು ಈ ಮುಂಚೆ ನಿಗದಿಯಾಗಿದ್ದ ಕಾಲಮಿತಿಯನ್ನು 2030ರಿಂದ 2025ಕ್ಕೆ ಇಳಿಸಿದೆ.

ಸರ್ಕಾರ ತರಲು ಹೊರಟಿರುವ ಈ ಎರಡು ಬದಲಾವಣೆಗಳಿಗೆ ಹಲವಾರು ಕಾರಣಗಳಿವೆ. ಕೇಂದ್ರ ಸರ್ಕಾರದ ಮೂಲದಂತೆ ಕಚ್ಚಾ ತೈಲದ ಆಮದಿಗೆ ವಾರ್ಷಿಕ ವೆಚ್ಚ ಸುಮಾರು ₹ 7 ಲಕ್ಷ ಕೋಟಿಯಿಂದ 8 ಲಕ್ಷ ಕೋಟಿ. ಮುಂದಿನ 5 ವರ್ಷಗಳಲ್ಲಿ ಇದು ₹ 15 ಲಕ್ಷ ಕೋಟಿ ಆಗಲಿದೆ. 2025ರ ವೇಳೆಗೆ ದೇಶದಾದ್ಯಂತ ಶೇ 20ರಷ್ಟು ಎಥನಾಲನ್ನು ಸೇರಿಸಿರುವ ಪೆಟ್ರೋಲನ್ನು (ಇ 20 ಇಂಧನ) ಬಳಸುವುದು ಸಾಧ್ಯವಾದರೆ ಪ್ರತಿವರ್ಷ ₹ 30,000 ಕೋಟಿ ಉಳಿತಾಯ ಸಾಧ್ಯವಾಗುತ್ತದೆ. ಇ-20 ಇಂಧನದ ಬಳಕೆಯಿಂದ ಅಪಾಯಕಾರಿಯಾದ ಹಸಿರುಮನೆ ಅನಿಲಗಳ ಉತ್ಸರ್ಜನೆಯನ್ನು ಶೇ 16ರಷ್ಟು ತಗ್ಗಿಸಬಹುದು. ಸದ್ಯದಲ್ಲಿ ನಮ್ಮ ದೇಶದಲ್ಲಿ ಪೆಟ್ರೋಲ್‌ನೊಂದಿಗೆ ಬೆರೆಸಲು ಲಭ್ಯವಿರುವ ಎಥನಾಲ್ ಪ್ರಮಾಣ ಸುಮಾರು 150 ಕೋಟಿ ಲೀಟರ್‌ಗಳು. 2025ರ ವೇಳೆಗೆ ದೇಶದಾದ್ಯಂತ ಇ-20 ಇಂಧನ ದೊರೆಯಬೇಕಾದರೆ ಎಥನಾಲ್ ಉತ್ಪಾದನೆ 1000 ಕೋಟಿ ಲೀಟರ್‌ಗಳಾಗಬೇಕು. ಇದು ಸಾಧ್ಯವೆಂಬುದೇ ಸರ್ಕಾರದ ಉತ್ಸಾಹಕ್ಕೆ ಕಾರಣ.

2018ರವರೆಗೆ ನಮ್ಮ ದೇಶದ ಎಥನಾಲ್ ಉತ್ಪಾದನೆಯ ಶೇ 90ರಷ್ಟು ಭಾಗ ಬರುತ್ತಿದ್ದುದು ಸಕ್ಕರೆ ಕಾರ್ಖಾನೆಗಳಿಂದ. 2018ರಲ್ಲಿ ಜಾರಿಗೆ ಬಂದ ರಾಷ್ಟ್ರೀಯ ಜೈವಿಕ ಇಂಧನ ನೀತಿಯ ಅನ್ವಯ ನಗರ, ಗ್ರಾಮೀಣ ಪ್ರದೇಶಗಳ ಜೈವಿಕ ಕಸ ಮತ್ತು ಸೆಲ್ಯುಲೋಸ್‌ಯುಕ್ತ ಸಸ್ಯಮೂಲಗಳ ಆರ್ಗ್ಯಾನಿಕ್ ಪದಾರ್ಥಗಳಿಂದಲೂ ಎಥನಾಲ್ ಉತ್ಪಾದನೆಗೆ ಪ್ರೋತ್ಸಾಹ ದೊರೆಯಿತು. ಹೀಗಾಗಿ ಜೋಳ, ಗೆಣಸು, ಕೊಳೆತ ಆಲೂಗೆಡ್ಡೆ, ಮುಗ್ಗಲಾದ ಮೆಕ್ಕೆಜೋಳ, ಅಕ್ಕಿ, ಗೋಧಿ, ಕಟಾವಿನ ನಂತರ ನೆಲದಲ್ಲಿ ಉಳಿಯುವ ಕೂಳೆ ಮುಂತಾದವುಗಳನ್ನೂ ಎಥನಾಲ್ ಉತ್ಪಾದನೆಯಲ್ಲಿ ಬಳಸುವ ಪ್ರಕ್ರಿಯೆ ನಿಧಾನವಾಗಿ ಪ್ರಾರಂಭವಾಯಿತು. ಇದರ ಜೊತೆಗೆ, ಸಕ್ಕರೆ ಕಾರ್ಖಾನೆಗಳಲ್ಲಿ ಹೆಚ್ಚುವರಿಯಾಗಿ ಗೋದಾಮುಗಳಲ್ಲಿರುವ ಸುಮಾರು 60 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಸಕ್ಕರೆಯ ದಾಸ್ತಾನಿನಿಂದ, ಅಗತ್ಯವಾದಷ್ಟನ್ನು ಬಳಸಿ ಎಥನಾಲನ್ನು ಉತ್ಪಾದಿಸಬಹುದೆಂದು ಗಡ್ಕರಿ ಸೂಚಿಸಿದ್ದಾರೆ. ಈ ಎಲ್ಲ ಕ್ರಮಗಳಿಂದ ದೇಶದಾದ್ಯಂತ ಇ-20 ಇಂಧನ ಬಳಕೆಗೆ ಬಂದಾಗ ರೈತರ ಆರ್ಥಿಕ ಪರಿಸ್ಥಿತಿಯೂ ಸುಧಾರಿಸುವುದೆಂಬ ನಿರೀಕ್ಷೆಯಿದೆ. ಬೆಳೆ ಕೂಳೆಯಿಂದ ಎಥನಾಲನ್ನು ಉತ್ಪಾದಿಸುವ ತಂತ್ರಜ್ಞಾನ ಇಂದು ಲಭ್ಯವಿರುವುದರಿಂದ, ಕೃಷಿ ಉಳಿಕೆಯನ್ನು ದಹಿಸುವುದರಿಂದ ಆಗುತ್ತಿರುವ ಪರಿಸರ ಮಾಲಿನ್ಯವನ್ನೂ ತಡೆಯಬಹುದು.

ಸದ್ಯದಲ್ಲಿ ನಮ್ಮ ರಸ್ತೆಗಳಲ್ಲಿ ಸಂಚರಿಸುತ್ತಿರುವ ಪೆಟ್ರೋಲ್ ವಾಹನಗಳಲ್ಲಿ, ಶೇ 10ರಷ್ಟು ಎಥನಾಲನ್ನು ಸೇರಿಸಿರುವ ಇ-10 ಇಂಧನವನ್ನು ಯಾವುದೇ ತೊಂದರೆಯಿಲ್ಲದೆ ನೇರವಾಗಿ ಬಳಸಬಹುದೆಂದು ತಜ್ಞರ ಸಮಿತಿ ಶಿಫಾರಸು ಮಾಡಿದೆ. ಆದರೆ ಮುಂದಿನ ಹಂತದಲ್ಲಿ ಇ-20 ಇಂಧನವನ್ನು ಬಳಸಿದಾಗ ಇಂಧನ ದಕ್ಷತೆ (ಫ್ಯೂಯೆಲ್ ಎಫಿಶಿಯೆನ್ಸಿ), ನಾಲ್ಕು ಚಕ್ರದ ವಾಹನಗಳಲ್ಲಿ ಶೇ 6ರಿಂದ 7ರಷ್ಟು ಮತ್ತು ದ್ವಿಚಕ್ರ ವಾಹನಗಳಲ್ಲಿ ಶೇ 3ರಿಂದ 4ರಷ್ಟು ಕಡಿಮೆಯಾಗಲಿದೆ ಎಂಬುದು ತಜ್ಞರ ಅಭಿಪ್ರಾಯ. ಆದರೆ ಇಂಧನ ಸರಿಯಾದ ರೀತಿಯಲ್ಲಿ ದಹನಕ್ಕೆ ಒಳಗಾಗುವಂತೆ ಎಂಜಿನನ್ನು ಸರಿಹೊಂದಿಸುವುದರಿಂದ ಈ ನಷ್ಟವನ್ನು ಕಡಿಮೆ ಮಾಡಬಹುದು.



2023ರಿಂದ ಪ್ರಾಯೋಗಿಕವಾಗಿ ಪ್ರಾರಂಭಿಸಿ, 2023- 2025ರ ಅವಧಿಯಲ್ಲಿ ಫ್ಲೆಕ್ಸಿಬಲ್ ಫ್ಯೂಯೆಲ್ ಕಾರುಗಳನ್ನು ವ್ಯಾಪಕವಾಗಿ ಬಳಕೆಗೆ ತರುವುದು ಸರ್ಕಾರದ ಇನ್ನೊಂದು ಮುಖ್ಯ ಯೋಜನೆ. ಒಂದೇ ವಾಹನ, ಒಂದಕ್ಕಿಂತ ಹೆಚ್ಚಿನ ಇಂಧನದ ಮೇಲೆ ಓಡುವುದೇ ಈ ಎಫ್‌ಎಫ್ ವಾಹನಗಳ ವೈಶಿಷ್ಟ್ಯ. ಉದಾಹರಣೆಗೆ, ಬ್ರೆಜಿಲ್‌ನಲ್ಲಿ ವ್ಯಾಪಕವಾಗಿ ಬಳಕೆಯಲ್ಲಿರುವ ಇಂತಹ ವಾಹನಗಳು ಶುದ್ಧ ಪೆಟ್ರೋಲ್, ವಿವಿಧ ಪ್ರಮಾಣಗಳಲ್ಲಿ ಮಿಶ್ರವಾಗಿರುವ ಎಥನಾಲ್-ಪೆಟ್ರೋಲ್ ಹಾಗೂ ಸಂಪೂರ್ಣವಾಗಿ ಎಥನಾಲ್- ಈ ಮೂರೂ ಇಂಧನಗಳನ್ನು ಬಳಸಬಲ್ಲವು.

ಬ್ರೆಜಿಲ್‌ನ ರಸ್ತೆಗಳಲ್ಲಿ ಸಂಚರಿಸುತ್ತಿರುವ ಸುಮಾರು ನಾಲ್ಕು ಕೋಟಿಗೂ ಹೆಚ್ಚಿನ ಎಫ್‌ಎಫ್ ವಾಹನಗಳಿಗೆ ಮೂರು ರೀತಿಯ ಇಂಧನಗಳನ್ನು ಬಳಸುವ ಆಯ್ಕೆಯಿದೆ. ಕಬ್ಬಿನ ಇಳುವರಿ ಉತ್ತಮವಾಗಿ ಎಥನಾಲ್ ಉತ್ಪಾದನೆ ಹೆಚ್ಚಿ, ಬೆಲೆ ಕಡಿಮೆಯಾದಾಗ ಬಹುತೇಕ ವಾಹನಗಳು ಶುದ್ಧ ಎಥನಾಲನ್ನೇ ಇಂಧನವಾಗಿ ಬಳಸುತ್ತವೆ. ಫ್ಲೆಕ್ಸಿ ಇಂಧನದ ಬೆಲೆ, ಪೆಟ್ರೋಲ್‌ಗಿಂತ ಶೇ 30ರಷ್ಟು ಕಡಿಮೆಯಿದ್ದಾಗ ವಾಹನಗಳು ಶುದ್ಧ ಪೆಟ್ರೋಲನ್ನು ಬಳಸುವುದೇ ಇಲ್ಲ.

ಎಥನಾಲ್‌ನಲ್ಲಿರುವ ಶಕ್ತಿಯ ಪ್ರಮಾಣ ಪೆಟ್ರೋಲ್‌ಗಿಂತ ಶೇ 34ರಷ್ಟು ಕಡಿಮೆ. ಅದನ್ನು ಪೆಟ್ರೋಲ್‌ನೊಂದಿಗೆ ಬೆರೆಸಿದಾಗ ಸಹಜವಾಗಿಯೇ ವಾಹನ ನೀಡುವ ಮೈಲೇಜ್ ಕಡಿಮೆಯಾಗುತ್ತದೆ. ಆದರೆ ಫ್ಲೆಕ್ಸಿ ಇಂಧನದ ಬೆಲೆಯೂ ಪೆಟ್ರೋಲ್‌ಗೆ ಹೋಲಿಸಿದರೆ ಶೇ 35ರಿಂದ 40ರಷ್ಟು ಕಡಿಮೆ. ಈ ಕಾರಣದಿಂದಾಗಿ ಬ್ರೆಜಿಲ್, ಅಮೆರಿಕ, ಕೆನಡಾ, ಯುರೋಪ್ ಮತ್ತು ಸ್ವೀಡನ್‌ಗಳಲ್ಲಿ ಈ ರೀತಿಯ ವಾಹನಗಳಿಗೆ ಉತ್ತಮ ಮಾರುಕಟ್ಟೆಯಿದೆ. ಈ ಮಾದರಿಯನ್ನು ಅನುಸರಿಸಿ, ಅಲ್ಲಿನ ತಂತ್ರಜ್ಞಾನವನ್ನು ಮತ್ತಷ್ಟು ಉತ್ತಮಪಡಿಸಿ, ಫ್ಲೆಕ್ಸಿ ಇಂಧನ ವಾಹನಗಳನ್ನು 2023- 2025ರ ಕಾಲಮಿತಿಯಲ್ಲಿ ಭಾರತದ ಮಾರುಕಟ್ಟೆಗೆ ಪರಿಚಯಿಸಬೇಕೆಂದು ಉದ್ಯಮವನ್ನು ಗಡ್ಕರಿ ಕೋರಿದ್ದಾರೆ. ಈ ದಿಕ್ಕಿನಲ್ಲಿ ಕೆಲಸ ಪ್ರಾರಂಭಿಸಿರುವುದಾಗಿ ಮಾರುತಿ ಸುಜುಕಿ ಹೇಳಿಕೆ ನೀಡಿದೆ. ಉಳಿದ ಅನೇಕ ವಾಹನ ಉತ್ಪಾದಕರು ಸರ್ಕಾರ ಪ್ರಕಟಿಸಲಿರುವ ಮಾರ್ಗದರ್ಶಿ ಸೂಚನೆಗಳನ್ನು ಎದುರು ನೋಡುತ್ತಿದ್ದಾರೆ.

ಎಥನಾಲ್‌ಗೆ ಬೇಡಿಕೆ ಹೆಚ್ಚಾದಂತೆ, ಆಹಾರ ಧಾನ್ಯಗಳು ಬೆಳೆಯುವ ಕೃಷಿಭೂಮಿಯನ್ನು ಕಬ್ಬು ಮುಂತಾದವುಗಳನ್ನು ಬೆಳೆಯಲು ಬಳಸುವ ಪ್ರವೃತ್ತಿ ಹೆಚ್ಚಾಗಿ, ಆಹಾರ ಸಾಮಗ್ರಿಗಳ ಬೆಲೆ ಏರಬಹುದೆಂಬ ಕಾಳಜಿ, ಟೀಕೆಗಳು ವ್ಯಕ್ತವಾಗಿವೆ. ಆದರೆ ಇತ್ತೀಚೆಗೆ ಅಭಿವೃದ್ಧಿಪಡಿಸಿರುವ ಹಲವಾರು ಜೈವಿಕ ತಂತ್ರಜ್ಞಾನಗಳಿಂದ ಎಲ್ಲ ರೀತಿಯ ಜೈವಿಕ ತ್ಯಾಜ್ಯಗಳಿಂದಲೂ ಎಥನಾಲನ್ನು ಉತ್ಪಾದಿಸಬಹುದಾದ್ದರಿಂದ ಈ ಸಮಸ್ಯೆ ಉದ್ಭವಿಸುವುದಿಲ್ಲ ಎಂಬ ವಾದವೂ ಇದೆ. ಕಚ್ಚಾ ತೈಲದ ಮೇಲಿನ ಅಪಾಯಕಾರಿ ಅವಲಂಬನೆಯನ್ನು ಕಡಿಮೆ ಮಾಡಿ, ಪರಿಸರ ಮಾಲಿನ್ಯವನ್ನು ನಿಯಂತ್ರಿಸಲು ನೆರವಾಗಿ, ಉದ್ಯೋಗಾವಕಾಶಗಳನ್ನು ಸೃಷ್ಟಿಸಿ, ರೈತರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿ, ಬಳಕೆದಾರರಿಗೆ ಇಂಧನದ ಆಯ್ಕೆಯ ಅವಕಾಶ ನೀಡಲಿದೆಯೆಂದು ಸರ್ಕಾರ ಹೇಳುತ್ತಿರುವ ಈ ಬದಲಾವಣೆಗಳಿಗೆ ಎಂತಹ ಸ್ವಾಗತ ದೊರೆಯಲಿದೆ ಎಂಬುದನ್ನು ಕಾದು ನೋಡಬೇಕಿದೆ.

ಚುರುಮುರಿ



ಕೋಟಿ ರೂ ಗಡಿಯಾರ

• ಆನಂದ

'ಇದೇನ್ರೀ ಒಂದು ಗಡಿಯಾರಕ್ಕೆ 5 ಕೋಟಿ ರೂಪಾಯಿ?' ಹೆಂಡತಿ ಕೇಳಿದಳು.

'ಕ್ರಿಕೆಟಿಗ ಹಾರ್ದಿಕ್ ಪಾಂಡ್ಯ ಗಡಿಯಾರ ತಾನೇ? ಅದು ಕೇವಲ 1.5 ಕೋಟಿ ರೂಪಾಯಿ'.

'ಗಡಿಯಾರಕ್ಕೆ ಅಷ್ಟು ದುಡ್ಡೇ?'

'ಕಾಸಿಗೆ ತಕ್ಕ ಕಜ್ಜಾಯ, ಬೆಲೆಗೆ ತಕ್ಕ ಗಡಿಯಾರ' ನಾನು ಸಮಾಧಾನಿಸಿದೆ.

'ಒಂದಾನೊಂದು ಕಾಲದಲ್ಲಿ ಎಚ್‌ಎಂಟಿ 100 ರೂಪಾಯಿಗೆ ಜನತಾ ಗಡಿಯಾರ ಕೊಡ್ತಿತ್ತು ನೆನಪಿದೆಯೆ?'

'ಅದನ್ನು ಕಟ್ಟಿದ್ದೂ ನೆನಪಿದೆ. ಮದುವೇಲಿ ನನ್ನ ಮಾವ ಅರ್ಥಾತ್ ನಿಮ್ಮ ತಂದೆ ಅದನ್ನೇ ತಾನೇ ಕೊಟ್ಟಿದ್ದು' ಎಂದು ನೆನಪಿಸಿದೆ.

'ಕೊಂಕು ಸಾಕು, ಅದೂ 24 ಗಂಟೇನೇ ತಾನೆ ತೋರಿಸ್ತಾ ಇದ್ದದ್ದು? ಮತ್ತೆ ಈ 5 ಕೋಟಿ, ಸಾರಿ ಕೇವಲ 1.5 ಕೋಟಿ ರೂಪಾಯಿ ವಾಚ್ ಎಷ್ಟು ಗಂಟೆ ತೋರಿಸುತ್ತೆ?' ಎಂಬ ಗಹನವಾದ ಪ್ರಶ್ನೆ ಮುಂದಿಟ್ಟಳು.

'ವೈ ಡೌಟ್? ಅದೂ ಎಚ್‌ಎಂಟಿ ಜನತಾ ಗಡಿಯಾರದ ತರಹ 24 ಗಂಟೇನೇ ತೋರಿಸೋದು' ಎಂದು ವಿವರಿಸಿದೆ.

'ಮತ್ತೆ ಅದಕ್ಕೆ ಅಷ್ಟೊಂದು ದುಡ್ಡು ಸುರಿಯಬೇಕೆ? ಗಡಿಯಾರ ಟೈಂ ತೋರಿಸೋದಕ್ಕಷ್ಟೆ ತಾನೇ ಇರೋದು?' ಎಂಬ ಸಹಜವಾದ ಪ್ರಶ್ನೆ ಮುಂದಿಟ್ಟಳು.

'ಇಬ್ಬರು ಮೂವರು ಇರೋರು ಯಾಕೆ 4-5 ಬೆಡ್‌ರೂಮ್ ಮನೆ ಕಟ್ತಾರೆ?' ಎಂದು ಕೌಂಟರ್ ಕ್ವಶ್ಚನ್ ಕೇಳಿದೆ.

'ಮನೆ ದೊಡ್ಡದಾಗಿದ್ದಷ್ಟೂ ಪ್ರತಿಷ್ಠೆ ಹೆಚ್ಚೋಲ್ವೆ?'

'ಹಾಗೇ ಗಡಿಯಾರ ಸಹ'.

'ಅಲ್ರೀ, ಮನೆ ದೊಡ್ಡದಿದ್ದಾಗ ಹೋಗೋರು ಬರೋರಿಗೆಲ್ಲ ಗೊತ್ತಾಗುತ್ತೆ ಯಾರೋ ಭಾರಿ ಕುಳ ಇದರ ಓನರ್ರೂ ಅಂತ. ಯಾವ ಗಡಿಯಾರ ಕಟ್ಟಿದರೂ ಅದರ ಬೆಲೆ ಯಾರಿಗೆ ತಿಳಿಯುತ್ತೆ? ಓನರ್ ಹೇಳಬೇಕು ಅಥವಾ ಯಾರಾದರೂ ಕೇಳಬೇಕು. ಯಾರು ಕೇಳ್ತಾರೆ?

'ಹಾಗಿದ್ದರೆ ಮದುವೆಗೇಕೆ ರೇಷ್ಮೆ ಸೀರೇನೆ ಬೇಕು?'

'ಹೋಗ್ರೀ, ಯಥಾಪ್ರಕಾರ ಸೀರೆ ವಿಷಯಕ್ಕೇ ಬರ್ತೀರಿ' ಎಂದು ವಾದ ಮುಗಿಸಿದಳು.

ಆದರೆ ಗಡಿಯಾರಕ್ಕೆ ಕೋಟಿ ಯಾಕೆ ಎಂದು ನನಗೂ ಗೊತ್ತಾಗಲಿಲ್ಲ, ನಿಮಗೆ?

ಸಂಗತ

ಸಂಘಟಿತ ಹೋರಾಟದ ಎರಡು ಮಾದರಿ

ಈಗಿನ ರೈತರ ಹೋರಾಟಕ್ಕೂ ನೀಲಿ ಗಿಡ ಬೆಳೆದ ಆಗಿನ ರೈತರ ಹೋರಾಟಕ್ಕೂ ಸಾಮ್ಯತೆಯಿದೆ

• ಸಿ.ಎನ್.ರಾಮಚಂದ್ರನ್

ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ನಡೆಯುತ್ತಿರುವ 'ರೈತರ ಪ್ರತಿಭಟನೆಯನ್ನು ಸರ್ಕಾರವು ಅತ್ಯಂತ ಲಘುವಾಗಿ ಪರಿಗಣಿಸಿತ್ತು' ಎಂಬ ಸತಾರ್ಕಿಕ ಹಾಗೂ ಅರ್ಥಪೂರ್ಣವಾದ ವಾಕ್ಯವನ್ನು ಸಂಪಾದಕೀಯದಲ್ಲಿ (ಪ್ರ.ವಾ., ನ. 20) ಓದುತ್ತಿದ್ದಂತೆ, 160 ವರ್ಷಗಳ ಹಿಂದೆ ನಡೆದಿದ್ದ ರೈತ ಹೋರಾಟ ನೆನಪಿಗೆ ಬಂದಿತು. ಸುಮಾರು ಮೂರು ವರ್ಷಗಳ ಕಾಲ ನೀಲಿ ಬೆಳೆಯ ವಿರುದ್ಧ ನಡೆದಿದ್ದ ರೈತರ ಹೋರಾಟ ಅದು.

ಮಗ್ಗಗಳಲ್ಲಿ ನೇಯ್ದ ಹತ್ತಿ ಬಟ್ಟೆಗಳಿಗೆ ಉಪಯೋಗಿಸುವ ಬಣ್ಣವನ್ನು ನೀಲಿ ಗಿಡದ ಎಲೆಗಳ ಮೂಲಕ ತಯಾರಿಸುವ ಪದ್ಧತಿ ಭಾರತದಲ್ಲಿ, ಮುಖ್ಯವಾಗಿ ಬಂಗಾಳದಲ್ಲಿ, ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿತ್ತು. ಆದರೆ, ನೀಲಿ ಬೆಳೆ ಎಂದೂ ವ್ಯಾಪಾರಿ ಬೆಳೆಯಾಗಿರಲಿಲ್ಲ. ಸ್ಥಳೀಯ ನೇಯ್ಗೆಗಾರರ ಅವಶ್ಯಕತೆ ಹಾಗೂ ಧಾರ್ಮಿಕ ಆಚರಣೆಗಳಿಗೆ ಅಗತ್ಯವಾದಷ್ಟನ್ನು ಮಾತ್ರ ರೈತರು ಬೆಳೆಯುತ್ತಿದ್ದರು.

18ನೆಯ ಶತಮಾನದಿಂದ ಇಂಗ್ಲೆಂಡ್ ಹಾಗೂ ಯುರೋಪಿಯನ್ ರಾಷ್ಟ್ರಗಳಲ್ಲಿ ಟೆಕ್ಸ್‌ಟೈಲ್ ಉದ್ಯಮವು ಪ್ರಬಲವಾದಾಗ, ಡೆನಿಮ್ ಬಟ್ಟೆಗಳಿಗೆ ಹಾಗೂ ನೀಲಿ ಜೀನ್ಸ್‌ಗೆ ಬೇಕಾಗುವ ನೀಲಿ ಬಣ್ಣಕ್ಕೆ ಇನ್ನಿಲ್ಲದ ಬೇಡಿಕೆ ಬಂದಿತು. ಆಗ ಬಂಗಾಳದಲ್ಲಿ ಪರಮಾಧಿಕಾರ ಹೊಂದಿದ್ದ ಈಸ್ಟ್ ಇಂಡಿಯಾ ಕಂಪನಿಯು ನೀಲಿಯನ್ನು ಬೆಳೆಯಲು ಅಲ್ಲಿಯ ರೈತರನ್ನು ಆಗ್ರಹಿಸಲು ಆರಂಭಿಸಿತು.

ರೆಗ್ಯುಲೇಶನ್ 7- 1799, ರೆಗ್ಯುಲೇಶನ್ 5- 1812 ಈ ಶಾಸನಗಳ ಮೂಲಕ ಭೂಮಿಯ ಸಂಪೂರ್ಣ ಒಡೆತನವನ್ನು ಜಮೀನ್ದಾರರಿಗೆ ಕಂಪನಿ ಕೊಟ್ಟಿತು. ಎಂದೂ ಸ್ವತಃ ಕೃಷಿ ಮಾಡದ ಜಮೀನ್ದಾರರನ್ನು ಒಲಿಸಿಕೊಳ್ಳುವುದು ಕಂಪನಿಗೆ ಸುಲಭವಾಗಿತ್ತು ಮತ್ತು 1837ರ ಶಾಸನವು ಹೊರದೇಶಗಳ ಯಾರು ಬೇಕಾದರೂ ಬಂಗಾಳದಲ್ಲಿ ಕೃಷಿಭೂಮಿಯನ್ನು ಕೊಂಡುಕೊಳ್ಳುವ ಹಾಗೂ ಅಲ್ಲಿ ಯಾವ ಬೆಳೆಯನ್ನು ಬೇಕಾದರೂ ಬೆಳೆಯುವ ಹಕ್ಕನ್ನು ಕೊಟ್ಟಿತು (ಜಾಗತೀಕರಣದತ್ತ ಮೊದಲ ಹೆಜ್ಜೆ?). ಪರಿಣಾಮವಾಗಿ ಬ್ರಿಟಿಷ್ ಹಾಗೂ ಇತರ ಯುರೋಪಿಯನ್ ಉದ್ಯಮಿಗಳು ಬಂಗಾಳದಲ್ಲಿ ಕೃಷಿಭೂಮಿಯನ್ನು ಕೊಂಡುಕೊಂಡು, ಅಲ್ಲಿ ಕೇವಲ ನೀಲಿ ಗಿಡಗಳನ್ನೇ ಬೆಳೆಯಲು ತಮ್ಮ ಪ್ರತಿನಿಧಿಗಳ ಮೂಲಕ ಗೇಣಿದಾರರ ಮೇಲೆ ಒತ್ತಾಯ ಹೇರಲಾರಂಭಿಸಿದರು. ಈ ಪ್ರತಿನಿಧಿಗಳು ಮೊದಲು ರೈತರನ್ನು ಸಂಪರ್ಕಿಸಿ, ಅವರಿಗೆ ಸಾಲವನ್ನು ಕೊಟ್ಟು, ನೀಲಿ ಗಿಡಗಳನ್ನು ಬೆಳೆಯುವ ಮತ್ತು ಅದರಿಂದ ತಯಾರಾದ ನೀಲಿ ಬಣ್ಣವನ್ನು ತಮಗೇ ಮಾರಾಟ ಮಾಡುವ ಒಪ್ಪಂದವನ್ನು ಮಾಡಿಕೊಳ್ಳುತ್ತಿದ್ದರು. ಆನಂತರ ಆ ಬಣ್ಣವನ್ನು ಕೊಂಡುಕೊಳ್ಳುವಾಗ ಅದು ತಮ್ಮ ನಿರೀಕ್ಷೆಗೆ ಸರಿಯಾಗಿಲ್ಲವೆಂದು ರೈತರಿಗೆ ಅತಿ ಕಡಿಮೆ ಬೆಲೆಯನ್ನು ಕೊಡುತ್ತಿದ್ದರು. ಬೇರೆ ಯಾರಿಗೂ ಅದನ್ನು ಮಾರುವಂತಿರಲಿಲ್ಲ. ಇತ್ತ ರೈತರಿಗೆ ಹಣವೂ ಇಲ್ಲ, ಅತ್ತ ಆಹಾರಧಾನ್ಯವನ್ನು ಬೆಳೆಯುವ ಅವಕಾಶವೂ ಇಲ್ಲ. ಈ ಪರಿಸ್ಥಿತಿಯಲ್ಲಿ ಸಾವಿರಾರು ರೈತರು ಮಾಡಿದ ಸಾಲವನ್ನು ತೀರಿಸಲಾಗದೆ ನಿರ್ಗತಿಕರಾಗಿ, ತಮ್ಮ ಮನೆ-ಮಠಗಳನ್ನು ಕಳೆದುಕೊಂಡು ನಗರಗಳಲ್ಲಿ ಕೂಲಿ ಕೆಲಸ ಮಾಡಲು ಗುಳೆ ಹೋದರು. ನೂರಾರು ಜನ ಆತ್ಮಹತ್ಯೆ ಮಾಡಿಕೊಂಡರು.

ಭಾರತೀಯರೊಬ್ಬರು ಬರೆದ ಮೊದಲ ಇಂಗ್ಲಿಷ್ ಸಾಮಾಜಿಕ ಕಾದಂಬರಿ ಈ ಪರಿಸ್ಥಿತಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಅದರ ಮುಖ್ಯ ಪಾತ್ರವಾದ ಗೇಣಿ ಕೃಷಿಕ ಹೀಗೆ ಅಳುತ್ತಾನೆ: 'ನೀಲಿ ಬೆಳೆದರೆ ನಾವು ಹೊಟ್ಟೆಗೆ ಏನು ತಿನ್ನುವುದು?' (ಲಾಲ್ ಬಿಹಾರಿ ಡೇ, 'ಗೋವಿಂದ ಸಾಮಂತ', 1874).



ಈ ಪರಿಸ್ಥಿತಿಯು ಉಲ್ಬಣವಾದಾಗ, 1859ರಲ್ಲಿ, ತಾವು ನೀಲಿ ಕೃಷಿಯನ್ನು ಮಾಡುವುದಿಲ್ಲವೆಂದು ರೈತರು ಒಟ್ಟಾಗಿ ಸರ್ಕಾರದ ನೀತಿಯ ವಿರುದ್ಧ ಬಂಡೆದ್ದರು. ಮೊದಲು ಜೆಸ್ಸೋರ್ ಮತ್ತು ನಾದಿಯಾ ಪ್ರದೇಶಗಳಲ್ಲಿ ಪ್ರಾರಂಭವಾದ ಈ ಚಳವಳಿ ಬಹು ಬೇಗ ಬಂಗಾಳದ ಇತರ ಪ್ರದೇಶಗಳಿಗೂ ಹರಡಿ, ಸುಮಾರು ಎರಡೂವರೆ ವರ್ಷಗಳ ಕಾಲ ಶಾಂತಿಯುತವಾಗಿ ಮುಂದುವರಿಯಿತು. ಇವರನ್ನು ಮಣಿಸಲು ಈಸ್ಟ್ ಇಂಡಿಯಾ ಕಂಪನಿಯು ಭಾರತೀಯ ಪೊಲೀಸರನ್ನೇ ಉಪಯೋಗಿಸಿಕೊಂಡು ಹಿಂಸೆಯ ಎಲ್ಲಾ ಮಾರ್ಗಗಳನ್ನು ಅವಲಂಬಿಸಿದರೂ ನೂರಾರು ರೈತರು ಹಾಗೂ ರೈತ ಮಹಿಳೆಯರು ಸಾವು- ನೋವುಗಳನ್ನು ಅನುಭವಿಸಿದರೂ ಹೋರಾಟದ ಕೆಚ್ಚು ಹೆಚ್ಚುತ್ತಲೇ ಹೋಯಿತು. ಕೊನೆಗೆ (ಅಷ್ಟು ಹೊತ್ತಿಗೆ ಇಂಗ್ಲೆಂಡಿನ ರಾಣಿಯೇ ನೇರವಾಗಿ ಭಾರತದ ಆಡಳಿತವನ್ನು ವಹಿಸಿಕೊಂಡುದರಿಂದ) ಬ್ರಿಟಿಷ್ ಸರ್ಕಾರವೇ ಮಣಿದು, ಆ ಮೂರೂ ಕೃಷಿ ಕಾಯ್ದೆಗಳನ್ನು 1862ರಲ್ಲಿ ಹಿಂಪಡೆಯಿತು (ಈ ಕಾಯ್ದೆಗಳನ್ನು ರದ್ದು ಮಾಡಿದ ಶಾಸನವನ್ನು ಲಾಲ್ ಬಿಹಾರಿ ಡೇ 'ಇದು ಕೃಷಿಕರ ಮ್ಯಾಗ್ನಾಕಾರ್ಟಾ' ಎಂದು ತಮ್ಮ ಕಾದಂಬರಿಯಲ್ಲಿ ವರ್ಣಿಸುತ್ತಾರೆ).

ಭೂಮಿಯಲ್ಲಿ ಹಗಲೂ- ರಾತ್ರಿ ದುಡಿಯುವ ರೈತರಿಗೆ ಭೂಮಿಯಷ್ಟೇ ಸಹನೆ ಇರುತ್ತದೆ. ಆದರೆ, ಶೋಷಣೆ ಹೆಚ್ಚಾಗಿ ಅವರ ಸಹನೆಯ ಕಟ್ಟೆ ಒಡೆದು ಅವರು ಸಂಘಟಿತರಾಗಿ ಬಂಡೆದ್ದರೆ ಯಾವ ಪ್ರಭುತ್ವವೂ- ಅದು ಬ್ರಿಟಿಷ್ ಪ್ರಭುತ್ವವಾಗಲೀ ದೇಶಿ ಪ್ರಭುತ್ವವಾಗಲೀ- ಆ ಹೋರಾಟವನ್ನು ನಿಲ್ಲಿಸಲು ಅಥವಾ ಸೋಲಿಸಲು ಸಾಧ್ಯವಿಲ್ಲ ಎಂಬುದನ್ನು ಇಂದಿನ ರೈತರು ಮತ್ತೊಮ್ಮೆ ಸಾರಿ ಹೇಳಿದ್ದಾರೆ.

ವಾಚಕರ ವಾಣಿ

ತಮ್ಮತನ ಪ್ರದರ್ಶಿಸಿದ ಮಾದರಿ ನಡೆ

ವೋಟ್ ಬ್ಯಾಂಕ್ ವೃದ್ಧಿಸಿಕೊಳ್ಳುವ ಸಲುವಾಗಿ ಬಿಜೆಪಿಯವರು ಪಕ್ಷ ಸೇರಲು ತಮಗೆ ನೀಡಿದ ಆಹ್ವಾನವನ್ನು ಒಪ್ಪದೆ ತಮ್ಮತನ ಪ್ರದರ್ಶಿಸಿದ ಪುನೀತ್ ರಾಜ್‌ಕುಮಾರ್ ಅವರ ನಿಲುವು ಅನುಕರಣೀಯ. ಹಾಗಾಗಿ, ಆನೆ ನಡೆದದ್ದೇ ದಾರಿ ಎಂಬ ಮಾತಿನಂತೆ ಅಪ್ಪು ನಡೆದದ್ದು ಹೆದ್ದಾರಿ ಎಂದು ಹೇಳಬಹುದೇನೊ. ಅವರವರ ಕ್ಷೇತ್ರ ಅವರವರಿಗೆ. ಅಲ್ಲಿ ಸಲ್ಲದವರು ಎಲ್ಲಿ ಸಲ್ಲುವರು? ಕ್ಷೇತ್ರದಿಂದ ಕ್ಷೇತ್ರಕ್ಕೆ, ಪಕ್ಷದಿಂದ ಪಕ್ಷಕ್ಕೆ ಕಪ್ಪೆ ಜಿಗಿತ ಮಾಡುವವರು ಮುಟ್ಟಿ ನೋಡಿಕೊಳ್ಳುವಂತಿದೆ ಪುನೀತ್ ಅವರ ಈ ನಡೆ.

ಮಲ್ಲಿಕಾರ್ಜುನ, ಸುರಧೇನುಪುರ

ನೇರವಾಗಿ ಹಾಲು ವಿತರಣೆಯಾಗಲಿ

ರಾಜ್ಯದಲ್ಲಿ ಶಾಲಾ ಮಕ್ಕಳಿಗೆ ಹಾಲಿನ ಪುಡಿ ನೀಡಲಾಗುತ್ತಿದೆ. ಪೌಷ್ಟಿಕತೆ ಹೆಚ್ಚಿಸುವುದು ಈ ಕ್ರಮದ ಹಿಂದಿರುವ ಉದ್ದೇಶ. ಆದರೆ, ಕೆಲವು ಮಕ್ಕಳು ಈ ಹಾಲನ್ನು ಕುಡಿಯಲು ಹಿಂಜರಿಯುತ್ತಿದ್ದಾರೆ. ಸ್ವತಃ ಪೋಷಕರೇ 'ನಮ್ಮ ಮಕ್ಕಳಿಗೆ ಪುಡಿಯ ಹಾಲು ಕೊಡಬೇಡಿ' ಎಂದು ಶಿಕ್ಷಕರಿಗೆ ಹೇಳುತ್ತಾರೆ. ಇದರಿಂದಾಗಿ ಹಾಲಿನ ಪುಡಿ ವ್ಯರ್ಥವಾಗುತ್ತಿದೆ. ಇದರ ಬದಲು ನೇರವಾಗಿ ಹಾಲನ್ನು ವಿತರಿಸುವ ವ್ಯವಸ್ಥೆ ಮಾಡಬೇಕು ಅಥವಾ ಮೊಟ್ಟೆ ನೀಡಬೇಕು. ಇಲ್ಲವೇ ಬೇರೊಂದು ವ್ಯವಸ್ಥೆ ಮಾಡಬೇಕು.

ಸಣ್ಣಮಾರಪ್ಪ, ದೇವರುಹಟ್ಟಿ, ಶಿರಾ

ಈ ಪರಿಯ ದರದಲ್ಲಿ ಸದೃಢ ಆರೋಗ್ಯದ ಮಾತೆಲ್ಲಿ?

ಮಳೆ ಹಾನಿಯಿಂದ ನಿರಂತರ ಏರಿಕೆ ಕಂಡಿರುವ ಟೊಮೆಟೊ ದರ ನೂರು ರೂಪಾಯಿಯ (ಒಂದು ಕೆ.ಜಿಗೆ) ಆಸುಪಾಸಿನಲ್ಲಿದೆ. ಆದರೆ ಇನ್ನಿತರ ತರಕಾರಿ, ಹೂವು, ಸೊಪ್ಪು, ಹಣ್ಣುಗಳ ದರವೂ ಇದೇ ರೀತಿ ಏರಿಕೆಯಾಗಿದ್ದು ಇವೆಲ್ಲವೂ ಸಾಮಾನ್ಯರ ಕೈಗೆಟುಕದಂತೆ ಮುಗಿಲು ಮುಟ್ಟಿವೆ. ಪೌಷ್ಟಿಕ ಆಹಾರವಾದ ಹಣ್ಣು, ತರಕಾರಿಗಳನ್ನು ಹೆಚ್ಚಾಗಿ ಬಳಸಿ ಎನ್ನುವ ವೈದ್ಯರ ಸಲಹೆಯ ನಡುವೆ, ಹಸಿವು ಮತ್ತು ಅಪೌಷ್ಟಿಕತೆಗೆ ಸಂಬಂಧಿಸಿದ ವರದಿಗಳು ಸಹ ಆಗಾಗ ಬರುತ್ತಿರುತ್ತವೆ. ಏರಿದ ಬೆಲೆಯಿಂದಾಗಿ ಸಾಮಾನ್ಯ ಜನರು ಊಟ ಉಪಚಾರಕ್ಕೇ ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿರುವಾಗ ಇನ್ನು ಸದೃಢ ಆರೋಗ್ಯ ಕಾಯ್ದುಕೊಳ್ಳುವ ಮಾತೆಲ್ಲಿ?

ಈಗ ಮಳೆ ಬಂತು, ಸರಿ. ಮಳೆ ಬಾರದ ಕಾಲದಲ್ಲೂ ಇವುಗಳ ಬೆಲೆ ಎಷ್ಟೋ ಬಾರಿ ಗಗನಮುಖಿಯಾಗುತ್ತದೆ ಅಲ್ಲವೇ? ಸಂಬಂಧಪಟ್ಟ ಇಲಾಖೆ ಅಥವಾ ಅಧಿಕಾರಿಗಳು ಈ ಕುರಿತು ಗಮನಹರಿಸಬೇಕು. ದರ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಮಕ್ಕಳು, ವೃದ್ಧ ತಂದೆತಾಯಿಗಳ ಪೋಷಣೆ, ಪಾಲನೆ ಮಾಡುವುದು ಹೇಗೆ?

ಅಶ್ವತ್ಥ ಕಲ್ಲೇದೇವರಹಳ್ಳಿ, ಕುಂಕಾನಾಡು, ಕಡೂರು

ಕಸಾಪ: ಬದಲಾವಣೆಯ ಇಚ್ಛೆ ಸ್ವಾಗತಾರ್ಹ

ಕನ್ನಡ ಸಾಹಿತ್ಯ ಪರಿಷತ್ತಿಗೆ ಹೊಸ ರೂಪ ನೀಡುವುದಾಗಿ ಕಸಪಾ ಅಧ್ಯಕ್ಷ ಚುನಾವಣೆಯಲ್ಲಿ ಭಾರಿ ಮುನ್ನಡೆ ಸಾಧಿಸಿರುವ (ಅಧಿಕೃತ ಘೋಷಣೆ ಆಗಬೇಕಿದೆ) ಡಾ. ಮಹೇಶ್ ಜೋಶಿ ಹೇಳಿರುವುದಾಗಿ ವರದಿಯಾಗಿದೆ. ಇದು ಸ್ವಾಗತಾರ್ಹ. ಈಗಿರುವ ಚುನಾವಣಾ ಪದ್ಧತಿಯನ್ನು ತೆಗೆದುಹಾಕಿ ಡಿಜಿಟಲ್ ವ್ಯವಸ್ಥೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಹೊಸ ಪದ್ಧತಿಯು ಅಭ್ಯರ್ಥಿಗಳ ಮೇಲಿನ ಒತ್ತಡ, ಜಾತಿ ರಾಜಕಾರಣ, ಹಣದ ಆಮಿಷದ ಆಪಾದನೆಗಳಿಂದ ಮುಕ್ತಗೊಳಿಸುತ್ತದೆ. ಅದರ ಜತೆಗೆ ಪರಿಷತ್ತಿನ ಆಡಳಿತ ಮಂಡಳಿಯ ಅಧಿಕಾರ ಅವಧಿಯನ್ನು ಮೊದಲಿನಂತೆ ಮೂರು ವರ್ಷಕ್ಕೆ ಇಳಿಸಬೇಕು.

ಕನ್ನಡವು ಶಾಸ್ತ್ರೀಯ ಭಾಷೆಯ ಸ್ಥಾನಮಾನ ಪಡೆದಿದೆ. ಇದಕ್ಕೆ ಅಭಿಜಾತ ಹಳಗನ್ನಡ ಕಾವ್ಯಗಳು ಮುಖ್ಯ ಕಾರಣ. ಅಂತೆಯೇ ಹಳಗನ್ನಡ ಮತ್ತು ನಡುಗನ್ನಡ ಕಾವ್ಯಗಳನ್ನು ಉಳಿಸಿ ಬೆಳೆಸಲು ಗಮಕ ಕಲೆಯನ್ನು ಪ್ರೋತ್ಸಾಹಿಸಬೇಕು. ಅದಕ್ಕಾಗಿ ತರಬೇತಿ, ಗೋಷ್ಠಿ, ಪ್ರಾತ್ಯಕ್ಷಿಕೆಗಳನ್ನು ನಡೆಸುವುದು ಹಾಗೂ ಶಿಕ್ಷಣ ಪದವಿ ಪಠ್ಯದಲ್ಲಿ ತರುವ ಮೂಲಕ ಶಾಸ್ತ್ರೀಯ ಕನ್ನಡದ ಉಳಿವಿಗೆ ಮಹತ್ವ ನೀಡಬೇಕು. ಸಾಹಿತ್ಯ ಸಮ್ಮೇಳನಗಳು ಜಾತ್ರೆಗಳಂತಾಗದೆ ಕನ್ನಡ ಆಸಕ್ತರು ಸಮ್ಮೇಳನದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತೆ, ಗೋಷ್ಠಿಗಳು ಅರ್ಥಪೂರ್ಣವಾಗುವಂತೆ ಗಮನಿಸಬೇಕು.

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

ಅಂಟುರೋಗಕ್ಕೆ ಮತದಾರನೇ ಮದ್ದು!

ಸಮಾಜದಲ್ಲಿ ಅನೇಕ ವೃತ್ತಿಗಳಿವೆ. ಸಾಮಾನ್ಯವಾಗಿ ಒಬ್ಬ ರೈತ ತನ್ನ ಮಕ್ಕಳು ರೈತರಾಗಿ ಕಷ್ಟಪಡುವುದು ಬೇಡವೆಂದೇ ಬಯಸುತ್ತಾನೆ, ಒಬ್ಬ ಶಿಕ್ಷಕ ತನ್ನ ಮಕ್ಕಳು ಶಿಕ್ಷಕರಾಗುವುದನ್ನು ಒಪ್ಪುವುದಿಲ್ಲ. ಇದಕ್ಕೆ ಅಪವಾದಗಳು ಇಲ್ಲದಿಲ್ಲ.

ಯಾವುದೇ ವೃತ್ತಿಯಿರಲಿ ಆ ಕಷ್ಟ-ನಷ್ಟವನ್ನು ನೋಡಿದ ಪೋಷಕರು ತಮ್ಮ ಮಕ್ಕಳಿಗೆ ಅದು ಬೇಡವೆಂದೇ ಬಯಸುತ್ತಾರೆ. ಇದು ಮನುಷ್ಯ ಸಹಜಗುಣವೂ ಹೌದು. ಆದರೆ... ಇಂತಹ ಗುಣಕ್ಕೆ ತದ್ವಿರುದ್ಧವಾದ ಏಕೈಕ ವೃತ್ತಿ ಎಂದರೆ 'ರಾಜಕೀಯ'. ಈ ರಾಜಕಾರಣಿಗಳಿಗೆ ತಮ್ಮ ಮಕ್ಕಳು ಎಷ್ಟೇ ಅತ್ಯುನ್ನತ ಶಿಕ್ಷಣ ಪಡೆದು, ಎಂತಹ ಅತ್ಯುನ್ನತ ಹುದ್ದೆಯಲ್ಲಿದ್ದರೂ ರಾಜಕೀಯದಲ್ಲಿ ನೆಲೆ ಕಂಡರಷ್ಟೇ ನೆಮ್ಮದಿ-ಸಂತೃಪ್ತಿ. ಇದು ರಾಜಕಾರಣಿಗಳ ಅಂಟುರೋಗವೂ ಹೌದು. ಇದಕ್ಕಿರುವ ಏಕೈಕ ಮದ್ದೆಂದರೆ 'ಮತದಾರ' ಮಾತ್ರ.

ಮನು ಕೆ.ಬಿ., ದೊಡ್ಡಕೋಡಿಹಳ್ಳಿ, ಬೇಲೂರು

ಚಿಕಿತ್ಸೆಗೆ ನೆರವಾಗಿ

ಎರಡು ವರ್ಷದ ನನ್ನ ಮಗ ತೇಜಸ್ ರಾಜು ನಾಯ್ಕಗೆ ತಲಸ್ಸೇಮಿಯಾ ಕಾಯಿಲೆಗಾಗಿ ಸುಮಾರು ₹ 20 ಲಕ್ಷ ವೆಚ್ಚ ಮಾಡಿ ಇತ್ತೀಚೆಗೆ ಅಸ್ಥಿಮಜ್ಜೆ ಕಸಿ ಚಿಕಿತ್ಸೆ ನೆರವೇರಿಸಲಾಗಿದೆ. ಶಸ್ತ್ರಚಿಕಿತ್ಸೆ ಫಲಕಾರಿಯಾಗಿದೆ. ಆದರೆ ಇನ್ನೂ ಐದಾರು ತಿಂಗಳು ಚಿಕಿತ್ಸೆ ಮುಂದುವರಿಸಲು ಸುಮಾರು ₹ 3 ಲಕ್ಷದ ಅವಶ್ಯಕತೆ ಇದೆ ಎಂದು ವೈದ್ಯರು ತಿಳಿಸಿದ್ದಾರೆ. ಕುಟುಂಬವು ಆರ್ಥಿಕ ಸಂಕಷ್ಟದಲ್ಲಿ ಇರುವುದರಿಂದ ದಾನಿಗಳು ದಯಮಾಡಿ ನೆರವಾಗಿ. ಬ್ಯಾಂಕ್ ಖಾತೆ ವಿವರ: ಸುಮಿತ್ರಾ ರಾಜು ನಾಯ್ಕ (ತಾಯಿ), ಕೆನರಾ ಬ್ಯಾಂಕ್, ಖಾತೆ ಸಂಖ್ಯೆ 3338101003259, ಸಿದ್ದಾಪುರ ಶಾಖೆ, IFSC: CNRB0003338, ಸಂಪರ್ಕ ಸಂಖ್ಯೆ: ರಾಜು ಡಿ ನಾಯ್ಕ (ತಂದೆ)– 9980065691.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸಾಂಕ್ರಾಮಿಕ ತೀವ್ರಗೊಳ್ಳುವ ಸಾಧ್ಯತೆ ಕಡಿಮೆ: ಪರಿಣತರ ಅಭಿಮತ

ಹಿಮ್ಮೆಟ್ಟಿತೇ ಕೋವಿಡ್ ಮೂರನೇ ಅಲೆ?

ನವದೆಹಲಿ (ಪಿಟಿಐ): ದೇಶದಲ್ಲಿ ಕೊರೊನಾ ಸೋಂಕಿನಿಂದ ಮತ್ತು ಲಸಿಕೆಯ ಕಾರಣದಿಂದ ಹೈಬ್ರಿಡ್ ರೋಗನಿರೋಧಕ ಶಕ್ತಿ ಸೃಷ್ಟಿಯಾಗಿದೆ. ಇದರಿಂದಾಗಿ ದೇಶದಲ್ಲಿ ಕೋವಿಡ್‌ನ ಮೂರನೇ ಅಲೆ ಬರುವ ಸಾಧ್ಯತೆ ಕಡಿಮೆ. ಬಂದರೂ ಅದು ಎರಡನೇ ಅಲೆಯಷ್ಟು ತೀವ್ರವಾಗಿರುವುದಿಲ್ಲ ಎಂದು ದೇಶದ ಅತ್ಯುನ್ನತ ವೈದ್ಯಕೀಯ ಸಂಶೋಧನಾ ಸಂಸ್ಥೆಗಳ ತಜ್ಞರು ಹೇಳಿದ್ದಾರೆ.

ದೇಶದಲ್ಲಿ ಈಗ ಪ್ರತಿದಿನ ಪತ್ತೆಯಾಗುತ್ತಿರುವ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ದಿನೇದಿನೇ ಇಳಿಯುತ್ತಲೇ ಇದೆ. ದೇಶದಲ್ಲಿ ಮಂಗಳವಾರ ಒಂದು ದಿನ 7,579 ಹೊಸ ಪ್ರಕರಣಗಳಷ್ಟೇ ಪತ್ತೆಯಾಗಿವೆ. ಇದು 543 ದಿನಗಳಲ್ಲಿ ದಿನವೊಂದರಲ್ಲಿ ಪತ್ತೆಯಾದ ಅತ್ಯಂತ ಕಡಿಮೆ ಸಂಖ್ಯೆಯ ಪ್ರಕರಣಗಳು. ದೇಶದಲ್ಲಿ ಸತತ 46 ದಿನಗಳಿಂದ, ಪ್ರತಿದಿನ 20,000ಕ್ಕಿಂತ ಕಡಿಮೆ ಪ್ರಕರಣಗಳು ಪತ್ತೆಯಾಗಿವೆ. ಸತತ 149 ದಿನಗಳಿಂದ, ಪ್ರತಿದಿನ 50,000ಕ್ಕಿಂತಲೂ ಕಡಿಮೆ ಪ್ರಕರಣಗಳು ಪತ್ತೆಯಾಗಿವೆ. ಇದು ಕೋವಿಡ್ ಹರಡುವಿಕೆ ತೀವ್ರತೆ ಕಳೆದುಕೊಳ್ಳುತ್ತಿರುವುದನ್ನು ಸೂಚಿಸುತ್ತದೆ ಎಂದು ತಜ್ಞರು ವಿವರಿಸಿದ್ದಾರೆ.

ದೇಶದಲ್ಲಿ ಕೋವಿಡ್‌ನ ಮೊದಲನೇ ಅಲೆ ಮತ್ತು ಎರಡನೇ ಅಲೆ ವೇಳೆ ಗಣನೀಯ ಸಂಖ್ಯೆಯ ಮಂದಿ ಸೋಂಕಿಗೆ ಒಳಗಾಗಿದ್ದರು. ಅವರಲ್ಲಿ ರೋಗನಿರೋಧಕ ಶಕ್ತಿ ಸೃಷ್ಟಿಯಾಗಿರುತ್ತದೆ. ಜತೆಗೆ ದೇಶದಲ್ಲಿ ಈವರೆಗೆ 100 ಕೋಟಿಗೂ ಹೆಚ್ಚು ಡೋಸ್ ಲಸಿಕೆ ನೀಡಲಾಗಿದೆ. ಇದು ಸಹ ಜನರಲ್ಲಿ ಕೋವಿಡ್ ನಿರೋಧಕ ಶಕ್ತಿ ಸೃಷ್ಟಿಸಿದೆ. ಇವೆರಡೂ ಇರುವ ಕಾರಣ, ಮೂರನೇ ಅಲೆ ಬರುವ ಸಾಧ್ಯತೆ ಅತ್ಯಂತ ಕಡಿಮೆ. ಆದರೆ, ಕೋವಿಡ್ ನಿಯಂತ್ರಣ ಕ್ರಮಗಳನ್ನು ಕಡೆಗಣಿಸುವಂತಿಲ್ಲ ಎಂದು ತಜ್ಞರು ಎಚ್ಚರಿಕೆಯನ್ನೂ ನೀಡಿದ್ದಾರೆ.





ಲಸಿಕೆ ಪಡೆಯಲು ಜನರ ಸಾಲು

ಸೋಂಕಿಗೆ ಲಸಿಕೆಯ ಲಗಾಮು

ಎರಡನೇ ಅಲೆಯ ತೀವ್ರ ಹೊಡೆತದ ಬಳಿಕ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ ಬಿರುಸು ಪಡೆದಿದ್ದರಿಂದ, ಆ ನಂತರ ಸೋಂಕಿತರ ಪ್ರಮಾಣ ಗಣನೀಯವಾಗಿ ಇಳಿಕೆಯಾಗುತ್ತಿದೆ. ಸೋಂಕಿಗೆ ಒಳಗಾಗುವ, ಆಸ್ಪತ್ರೆ ಸೇರುವ ಅಥವಾ ಸಾವಿಗೀಡಾಗುವವರ ಪ್ರಮಾಣವನ್ನು ತಡೆಯುವಲ್ಲಿ ಲಸಿಕೆಗಳು ನಿರ್ಣಾಯಕ ಪಾತ್ರ ವಹಿಸಿವೆ ಎಂದು ಅಶೋಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಗೌತಮ್ ಮೆನನ್ ಅಭಿಪ್ರಾಯಪಟ್ಟಿದ್ದಾರೆ.

ಲಸಿಕೆಗಳ ಪರಿಣಾಮಕಾರಿತ್ವವೂ ಸೋಂಕು ಹರಡುವಿಕೆಯನ್ನು ತಡೆಗಟ್ಟುವಲ್ಲಿ ಮುಖ್ಯವಾಗಿದೆ. ಎರಡೂ ಡೋಸ್ ಕೋವಿಶೀಲ್ಡ್ ಲಸಿಕೆ ಹಾಕಿಸಿಕೊಂಡವರಿಗೆ ಸೋಂಕು ಹರಡುವ ಸಾಧ್ಯತೆ ಶೇ 80ರಷ್ಟು ಕಡಿಮೆಯಿರುತ್ತದೆ. ಕೋವ್ಯಾಕ್ಸಿನ್‌ನಲ್ಲಿ ಈ ಪ್ರಮಾಣ ಶೇ 69. ಡೆಲ್ಟಾ ರೂಪಾಂತರ ವೈರಸ್ ವಿರುದ್ಧ ಈ ಎರಡೂ ಲಸಿಕೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿವೆ ಎಂದು ಐಸಿಎಂಆರ್ ನೇತೃತ್ವದ ಅಧ್ಯಯನ ತಿಳಿಸಿದೆ.





ಕೋವಿಡ್ ಲಸಿಕೆ ವಿವರ

118 ಕೋಟಿ
ದೇಶದಲ್ಲಿ ಈವರೆಗೆ ನೀಡಲಾಗಿರುವ ಕೋವಿಡ್ ಲಸಿಕೆಯ ಡೋಸ್‌ಗಳ ಸಂಖ್ಯೆ

77 ಕೋಟಿ
ಮೊದಲ ಡೋಸ್ ಪಡೆದವರ ಸಂಖ್ಯೆ

41 ಕೋಟಿ
ಎರಡೂ ಡೋಸ್ ಪಡೆದವರ ಸಂಖ್ಯೆ

ಎಚ್ಚರಿಕೆ ಅಗತ್ಯ

ಅಮೆರಿಕ ಮತ್ತು ಐರೋಪ್ಯ ದೇಶಗಳಲ್ಲಿ ಒಂದು ತಿಂಗಳಿನಿಂದ ಸೋಂಕಿತರ ಪ್ರಮಾಣ ಹೆಚ್ಚುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಅಮೆರಿಕದಲ್ಲಿ ನಿತ್ಯ ವರದಿಯಾಗುವ ಸೋಂಕಿತರ ಪ್ರಮಾಣ ಒಂದು ಲಕ್ಷದ ಆಸುಪಾಸಿನಲ್ಲಿದೆ. ಜರ್ಮನಿಯಲ್ಲಿ ಪರಿಸ್ಥಿತಿ ಹದಗೆಡುತ್ತಿದೆ ಎಂದು ಛಾನ್ಸಲರ್ ಅಂಗೆಲಾ ಮರ್ಕೆಲ್ ಹೇಳಿದ್ದಾರೆ. ಕೋವಿಡ್ ವ್ಯಾಪಿಸುತ್ತಿರುವ ಆಸ್ಟ್ರಿಯಾ, ಚೀನಾದ ಕೆಲವು ಭಾಗಗಳಲ್ಲಿ ಲಾಕ್‌ಡೌನ್ ಹೇರಲಾಗಿದೆ.

ಅಮೆರಿಕ ಮತ್ತು ಐರೋಪ್ಯ ದೇಶಗಳಲ್ಲಿ ಮೊದಲ ಹಾಗೂ ಎರಡನೇ ಅಲೆ ಕಾಣಿಸಿಕೊಂಡ ಬಳಿಕ, ಅದು ಭಾರತದಲ್ಲೂ ಪುನರಾವರ್ತನೆಯಾಗುತ್ತಿತ್ತು. ಆದರೆ ಮೂರನೇ ಅಲೆಯ ವಿಚಾರದಲ್ಲಿ ಹಾಗಾಗುವುದಿಲ್ಲ ಎನ್ನುತ್ತಾರೆ ತಜ್ಞರು. ಮೂರನೇ ಅಲೆಯು ಕಾಣಿಸಿಕೊಂಡರೂ, ಅದರ ತೀವ್ರತೆ ಹೆಚ್ಚಿರುವುದಿಲ್ಲ ಎಂದು ಅಂದಾಜಿಸಿದ್ದಾರೆ.

‘ಭಾರತದಲ್ಲಿ ಕಾಣಿಸಿಕೊಂಡಿದ್ದ ಎರಡನೇ ಅಲೆಯು ಯುರೋಪಿನ ಮೂರನೇ ಅಲೆಗೆ ಹೋಲಿಕೆಯಾಗುತ್ತಿದೆ. ಭವಿಷ್ಯದಲ್ಲಿ ಇಲ್ಲಿಯೂ ದೊಡ್ಡ ಅಲೆ ಏಳುವುದಿದ್ದರೆ, ಅದರ ಆರಂಭಿಕ ಲಕ್ಷಣಗಳು ಈಗಾಗಲೇ ಗೋಚರಿಸಬೇಕಿತ್ತು. ಮೂರನೇ ಅಲೆಯು ಸೆಪ್ಟೆಂಬರ್ ಮಧ್ಯಭಾಗದಲ್ಲಿ ಬಂದು ಹೋಗಿದೆ. ದೇಶವು ಅದೃಷ್ಟವಶಾತ್ ದೊಡ್ಡ ಅಲೆಯಿಂದ ಪಾರಾಗಿರಬಹುದು’ ಎಂದು ಐಎಂಎಸ್‌ಸಿ ಪ್ರಾಧ್ಯಾಪಕ ಸೀತಾಭ್ರ ಸಿನ್ಹಾ ಅಭಿಪ್ರಾಯಪಟ್ಟಿದ್ದಾರೆ.

ಸೋಂಕಿತ ವ್ಯಕ್ತಿಯು ಎಷ್ಟು ಜನರಿಗೆ ಸೋಂಕು ಹರಡಿಸಬಲ್ಲ ಎಂದು ತಿಳಿಸುವ ‘ಆರ್-ವ್ಯಾಲ್ಯೂ’ ಪ್ರಮಾಣವು ಮಿಜೋರಾಂ, ಜಮ್ಮು ಕಾಶ್ಮೀರ, ಪಶ್ಚಿಮ ಬಂಗಾಳದಲ್ಲಿ ಅಧಿಕವಾಗಿದೆ. ಮುಂಬೈ, ಪುಣೆ, ಚೆನ್ನೈ, ಕೋಲ್ಕತ್ತ ನಗರಗಳಲ್ಲಿಯೂ ಇದು ಸಾಮಾನ್ಯಕ್ಕಿಂತ ಅಧಿಕವಾಗಿದೆ. ಚಳಿಗಾಲದ ಸಮಯದಲ್ಲಿ ಎಚ್ಚರ ವಹಿಸದಿದ್ದರೆ, ಇದು ಇನ್ನಷ್ಟು ಏರಿಕೆಯಾಗಬಹುದು ಎಂದು ಸಿನ್ಹಾ ಎಚ್ಚರಿಸಿದ್ದಾರೆ.

ಎರಡನೇ ಅಲೆಯ ಪರಿಣಾಮ...

‘ದೇಶದಲ್ಲಿ ಕೋವಿಡ್‌ನ ಎರಡನೇ ಅಲೆ ಅತ್ಯಂತ ತೀವ್ರವಾಗಿತ್ತು. ಎರಡನೇ ಅಲೆ ತೀವ್ರವಾಗಿದ್ದ ಕಾರಣದಿಂದ ದೇಶದ ಒಟ್ಟು ಜನಸಂಖ್ಯೆಯ ದೊಡ್ಡ ಭಾಗವು ಕೋವಿಡ್‌ಗೆ ಒಳಗಾಗಿತ್ತು. ಕೋವಿಡ್‌ಗೆ ಒಳಗಾಗಿ, ಗುಣಮುಖರಾದ ನಂತರ ಅವರಲ್ಲಿ ಕೋವಿಡ್ ನಿರೋಧಕ ಶಕ್ತಿ ಸೃಷ್ಟಿಯಾಗಿದೆ. ಇದು ಕೋವಿಡ್ ಮತ್ತೆ ತಗುಲುವುದನ್ನು ಬಹುಪಾಲು ತಡೆಯುತ್ತದೆ’ ಎಂದು ಅಶೋಕ ವಿಶ್ವವಿದ್ಯಾಲಯದ ಜೀವವಿಜ್ಞಾನ ಮತ್ತು ಭೌತವಿಜ್ಞಾನ ವಿಭಾಗದ ಪ್ರೊಫೆಸರ್ ಗೌತಮ್ ಮೆನನ್ ಹೇಳಿದ್ದಾರೆ.

ಎರಡನೇ ಅಲೆಯ ವೇಳೆ ದೇಶದಲ್ಲಿ ಸೋಂಕು ಹರಡುವಿಕೆಯ ವೇಗ ತೀವ್ರವಾಗಿತ್ತು. ಅದು ಉಂಟುಮಾಡುತ್ತಿದ್ದ ಆರೋಗ್ಯದ ಪರಿಣಾಮಗಳೂ ಗಂಭೀರವಾಗಿದ್ದವು. ಎರಡನೇ ಅಲೆಯಲ್ಲಿ ದೇಶದ ಬಹುತೇಕ ಎಲ್ಲಾ ರಾಜ್ಯಗಳಲ್ಲಿ ಡೆಲ್ಟಾ ತಳಿಯ ಕೊರೊನಾವೈರಾಣು ಪತ್ತೆಯಾಗಿತ್ತು. ಅದಕ್ಕಿಂತಲೂ ಕ್ಷಿಪ್ರವಾಗಿ ಹರಡುವ ಸಾಮರ್ಥ್ಯವಿದ್ದ ಡೆಲ್ಟಾ + ತಳಿ ಸಹ ಹಲವು ರಾಜ್ಯಗಳಲ್ಲಿ ಪತ್ತೆಯಾಗಿತ್ತು. ಮೊದಲ ಮತ್ತು ಎರಡನೇ ಅಲೆ ವೇಳೆ ದೇಶದ 3.43 ಕೋಟಿ ಜನರಿಗೆ ಕೋವಿಡ್ ತಗುಲಿದ್ದು ಪರೀಕ್ಷೆಗಳಿಂದ ದೃಢಪಟ್ಟಿತ್ತು. ಇದರಲ್ಲಿ 3.39 ಕೋಟಿ ಜನರು ಈಗ ಗುಣಮುಖರಾಗಿದ್ದಾರೆ. ಇವರೆಲ್ಲರಲ್ಲೂ ಕೋವಿಡ್ ನಿರೋಧಕ ಶಕ್ತಿ ಸೃಷ್ಟಿಯಾಗಿರುತ್ತದೆ. ಹೀಗಾಗಿ ಇವರಿಗೆ ಮತ್ತೆ ಕೋವಿಡ್ ತಗಲುವ ಸಾಧ್ಯತೆ ಕಡಿಮೆ. ತಗುಲಿದರೂ, ಅದರ ತೀವ್ರತೆ ಕಡಿಮೆ ಇರಲಿದೆ ಎಂದು ಅವರು ವಿವರಿಸಿದ್ದಾರೆ.

ದೇಶದಲ್ಲಿ ಮೊದಲನೇ ಮತ್ತು ಎರಡನೇ ಅಲೆಯ ವೇಳೆ ಪ್ರಮುಖ ನಗರಗಳಲ್ಲಿ, ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು (ಐಸಿಎಂಆರ್) ಸೆರೊ ಸಮೀಕ್ಷೆಯನ್ನು ನಡೆಸಿತ್ತು. ಆ ನಗರಗಳಲ್ಲಿನ ಒಟ್ಟು ಜನಸಂಖ್ಯೆಯ ಶೇ 50–80ರಷ್ಟು ಜನರಲ್ಲಿ ಕೋವಿಡ್ ನಿರೋಧಕ ಶಕ್ತಿ ಇರುವುದು ಸೆರೊ ಸಮೀಕ್ಷೆಯಲ್ಲಿ ಪತ್ತೆಯಾಗಿತ್ತು. ಜನರಲ್ಲಿ ಕೋವಿಡ್ ನಿರೋಧಕ ಶಕ್ತಿ ಸೃಷ್ಟಿಯಾಗಬೇಕೆಂದರೆ, ಅದಕ್ಕೂ ಮುನ್ನ ಅವರಿಗೆ ಕೋವಿಡ್ ತಗುಲಿರಲೇಬೇಕು. ಸೆರೊ ಸಮೀಕ್ಷೆಯಲ್ಲಿ ಕೋವಿಡ್ ನಿರೋಧಕ ಶಕ್ತಿ ಪತ್ತೆಯಾದ ಜನರ ಪ್ರಮಾಣದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ, ನಗರದಿಂದ ನಗರಕ್ಕೆ ವ್ಯತ್ಯಾಸವಿದೆ. ಆದರೆ ಸಮೀಕ್ಷೆಗೆ ಒಳಪಟ್ಟ ಪ್ರದೇಶ ಮತ್ತು ನಗರಗಳಲ್ಲಿ ಈ ಪ್ರಮಾಣವು ಶೇ 50ಕ್ಕಿಂತ ಕಡಿಮೆಯಾಗಿಲ್ಲ. ಇದನ್ನು ದೇಶದ ಎಲ್ಲೆಡೆಗೆ ಅನ್ವಯಿಸಿದರೆ, ಒಟ್ಟು ಜನಸಂಖ್ಯೆಯ ಅರ್ಧದಷ್ಟು ಮಂದಿಯಲ್ಲಿ ಕೋವಿಡ್ ನಿರೋಧಕ ಶಕ್ತಿ ಇದೆ ಎಂದು ಪರಿಗಣಿಸಬಹುದು ಎಂದು ದೆಹಲಿಯ ಸಿಎಸ್‌ಐಆರ್–ಐಜಿಐಬಿ ಸಂಸ್ಥೆಯ ನಿರ್ದೇಶಕ ಅನುರಾಗ್ ಅಗರ್ವಾಲ್ ವಿವರಿಸಿದ್ದಾರೆ.

ಹೈಬ್ರಿಡ್ ರೋಗನಿರೋಧಕ ಶಕ್ತಿ

ದೇಶದ ವಯಸ್ಕ ಜನಸಂಖ್ಯೆಯ ಶೇ 80ರಷ್ಟು ಮಂದಿ ಕೋವಿಡ್ ಲಸಿಕೆಯ ಒಂದು ಡೋಸನ್ನಾದರೂ ಹಾಕಿಸಿಕೊಂಡಿದ್ದಾರೆ. ಕೋವಿಡ್‌ನಿಂದ ಗುಣಮುಖರಾಗಿರುವವರಲ್ಲಿ ಸಹಜವಾಗಿಯೇ ರೋಗ ನಿರೋಧಕ ಶಕ್ತಿ ಇರುತ್ತದೆ, ಲಸಿಕೆ ಪಡೆದುಕೊಂಡ ನಂತರ ನಿರೋಧಕ ಶಕ್ತಿ ಮತ್ತಷ್ಟು ಹೆಚ್ಚುತ್ತದೆ. ಇದನ್ನೇ ಹೈಬ್ರಿಡ್ ರೋಗನಿರೋಧಕ ಶಕ್ತಿ ಎಂದು ಕರೆಯಲಾಗಿದೆ. ದೇಶದ ಬಹುತೇಕ ಜನರಲ್ಲಿ ಈ ಹೈಬ್ರಿಡ್ ರೋಗನಿರೋಧಕ ಶಕ್ತಿ ಸೃಷ್ಟಿಯಾಗಿದೆ. ಈ ಕಾರಣದಿಂದಲೇ ಕೋವಿಡ್ ಹರಡುವಿಕೆಯ ತೀವ್ರತೆ ಕಡಿಮೆಯಾಗುತ್ತಿದೆ ಎಂದು ರೋಗನಿರೋಧಕ ಶಕ್ತಿ ತಜ್ಞೆ ವಿನಿತಾ ಬಲ್ ಅವರು ವಿವರಿಸಿದ್ದಾರೆ.

ಕೋವಿಡ್ ತಗುಲಿ, ಅದರಿಂದ ಗುಣಮುಖರಾದವರಲ್ಲಿ ಕೋವಿಡ್ ನಿರೋಧಕ ಶಕ್ತಿ ಈಗಾಗಲೇ ಸೃಷ್ಟಿಯಾಗಿರುತ್ತದೆ. ಲಸಿಕೆ ಪಡೆದುಕೊಂಡು ಸೃಷ್ಟಿಯಾದ ಕೋವಿಡ್ ನಿರೋಧಕ ಶಕ್ತಿಗಿಂತಲೂ, ಕೋವಿಡ್‌ನಿಂದ ಗುಣಮುಖ ಆದವರಲ್ಲಿರುವ ನಿರೋಧಕ ಶಕ್ತಿಯು ಹೆಚ್ಚು ಪ್ರಬಲವಾಗಿರುತ್ತದೆ. ಅಂತಹವರು ಕೋವಿಡ್‌ನಿಂದ ಸಂಪೂರ್ಣವಾಗಿ ಗುಣಮುಖರಾದ ನಂತರ ಲಸಿಕೆ ಪಡೆದುಕೊಂಡಿರುತ್ತಾರೆ. ಆಗ ಅವರಲ್ಲಿ ಈ ಮೊದಲೇ ಇದ್ದ ಪ್ರಬಲವಾದ ಕೋವಿಡ್ ನಿರೋಧಕ ಶಕ್ತಿಯು, ಮತ್ತಷ್ಟು ಪ್ರಬಲವಾಗುತ್ತದೆ. ಅಂತಹವರಿಗೆ ಕೋವಿಡ್ ತಗುಲುವ ಸಾಧ್ಯತೆ ಅತ್ಯಂತ ಕಡಿಮೆ. ತಗುಲಿದರೂ, ಅದರ ತೀವ್ರತೆ ಗಣನೀಯ ಪ್ರಮಾಣದಲ್ಲಿ ಇರುವುದಿಲ್ಲ ಎಂದು ಅವರು ವಿವರಿಸಿದ್ದಾರೆ.

ಐಸಿಎಂಆರ್‌ನ ಸೆರೊ ಸಮೀಕ್ಷೆಗಳ ವರದಿಗಳ ಪ್ರಕಾರ, ದೇಶದ ಪ್ರಮುಖ ನಗರ-ಪಟ್ಟಣಗಳ ಒಟ್ಟು ಜನಸಂಖ್ಯೆಯ ಶೇ 50–80ರಷ್ಟು ಜನರಲ್ಲಿ ಈಗಾಗಲೇ ಕೋವಿಡ್ ನಿರೋಧಕ ಶಕ್ತಿ ಇದೆ. ಕೋವಿಡ್ ಲಸಿಕೆ ಪಡೆದುಕೊಳ್ಳಲು 96 ಕೋಟಿ ಅರ್ಹ ಜನರನ್ನು ಗುರುತುಮಾಡಿದ್ದು, ಇದರಲ್ಲಿ 77.22 ಕೋಟಿ ಜನರಿಗೆ ಕೋವಿಡ್ ಲಸಿಕೆಯ ಒಂದು ಡೋಸ್ ಲಸಿಕೆ ನೀಡಲಾಗಿದೆ. ಇವರಲ್ಲಿ ಈಗಾಗಲೇ ಪ್ರಬಲವಾದ ಹೈಬ್ರಿಡ್ ರೋಗ ನಿರೋಧಕ ಶಕ್ತಿ ಸೃಷ್ಟಿಯಾಗಿರುತ್ತದೆ. 41 ಕೋಟಿಯಷ್ಟು ಜನರಿಗೆ ಲಸಿಕೆಯ ಎರಡೂ ಡೋಸ್ ನೀಡಲಾಗಿದೆ. ಅವರಲ್ಲಿ ಕೋವಿಡ್ ನಿರೋಧಕ ಶಕ್ತಿ ಮತ್ತಷ್ಟು ತೀವ್ರವಾಗಿರುತ್ತದೆ ಎಂದು ತಜ್ಞರು ವಿವರಿಸಿದ್ದಾರೆ.

ಈ ಹೈಬ್ರಿಡ್ ರೋಗನಿರೋಧಕ ಶಕ್ತಿಯು ಬಹುತೇಕ ಮಂದಿಯಲ್ಲಿ ಸೃಷ್ಟಿಯಾಗಿದ್ದರೆ, ಅವರಿಗೆ ಮತ್ತೆ ಕೋವಿಡ್ ತಗಲುವ ಸಾಧ್ಯತೆ ಇರುವುದಿಲ್ಲ. ಹೀಗಾಗಿ ಕೋವಿಡ್‌ನ ಹೊಸ ಪ್ರಕರಣಗಳು ಪತ್ತೆಯಾಗುವ ಪ್ರಮಾಣ ಕಡಿಮೆಯಾಗುತ್ತದೆ. ಜತೆಗೆ ಅವರ ಮೂಲಕ ವೈರಾಣು ಬೇರೆಯವರಿಗೆ ರವಾನೆಯಾಗುವ ಸಾಧ್ಯತೆಯೂ ಕ್ಷೀಣಿಸುತ್ತದೆ. ಹೀಗಾಗಿ, ಮತ್ತಷ್ಟು ಜನರಿಗೆ ಕೋವಿಡ್ ಹರಡುವ ಸಾಧ್ಯತೆ ಕಡಿಮೆಯಾಗುತ್ತದೆ. ಹೀಗೆ ಎರಡು ರೀತಿಯಲ್ಲಿ ಕೋವಿಡ್ ಹರಡುವುದನ್ನು ಈ ರೋಗನಿರೋಧಕ ಶಕ್ತಿ ತಡೆಯುತ್ತದೆ. ಭಾರತದಲ್ಲಿ ಇಂತಹ ಸ್ಥಿತಿ ನಿರ್ಮಾಣವಾಗಿರುವ ಸಾಧ್ಯತೆ ಅತ್ಯಧಿಕವಾಗಿದೆ. ಹೀಗಾಗಿ ಕೋವಿಡ್‌ನ ಮೂರನೇ ಅಲೆ ಬರುವ ಸಾಧ್ಯತೆ ಕಡಿಮೆ ಎಂದು ತಜ್ಞರು ವಿವರಿಸಿದ್ದಾರೆ.

ವೇದವ್ಯಾಸರ ಶಿವಪುರಾಣದ ಕುಮಾರಖಂಡಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 13



ಗಣೇಶನ ಜನನ

ಇಲ್ಲಿಯವರೆಗೂ ನಾರದನು ತನ್ನ ತಂದೆ ಬ್ರಹ್ಮನಿಂದ ಶಿವಮಹಾಪುರಾಣದಲ್ಲಿ ಬರುವ ರುದ್ರಸಂಹಿತೆಯ ಕುಮಾರಖಂಡದ ಸುಬ್ರಹ್ಮಣ್ಯಚರಿತ್ರೆ ಕೇಳಿದ. ನಂತರ ಅದರಲ್ಲಿ ಬರುವ ಗಣಪತಿಚರಿತ್ರೆಯನ್ನೂ ಹೇಳು ಅಂತ ನಾರದ ತನ್ನ ತಂದೆ ಬ್ರಹ್ಮನನ್ನು ಕೋರಿದ. ಮಹಾಮುನಿಯಾದ ನಾರದನ ಮಾತನ್ನು ಕೇಳಿ ಬ್ರಹ್ಮನು ಸಂತುಷ್ಟನಾಗಿ ಶಿವನನ್ನು ಧ್ಯಾನಿಸುತ್ತಾ ನಾರದನಿಗೆ ಹೇಳಿದ, ‘ಕಲ್ಪಭೇದವಾದಂತೆಲ್ಲಾ ಗಣಪತಿ ಉತ್ಪತ್ತಿಯೂ ಬೇರೆಯಾಗಿರುವುದು. ಶನಿಯ ದೃಷ್ಟಿಯಿಂದ ಗಣಪತಿಯ ತಲೆಯು ಕತ್ತರಿಸಿಹೋಯಿತು. ಆಗ ಆನೆಯ ತಲೆಯನ್ನು ಕೂಡಿಸಿದರು. ಈಗ ನಾನು ಶ್ವೇತವರಾಹಕಲ್ಪ ಕಾಲದ ಅನುಸಾರವಾಗಿ ಗಣಪತಿಯ ಉತ್ಪತ್ತಿಯನ್ನು ಹೇಳುವೆನು, ಕೇಳು’ ಅಂತ ಬ್ರಹ್ಮ ‘ಗಣೇಶನ ಜನನ’ದ ಕತೆ ಹೇಳತೊಡಗಿದ.

ಶಿವ-ಪಾರ್ವತಿಯರು ಮದುವೆಯಾದ ನಂತರ ಕೈಲಾಸದಲ್ಲಿ ವಾಸಿಸುತ್ತಿರುವಾಗ ಜಯಾ, ವಿಜಯಾ ಎಂಬ ಇಬ್ಬರು ಸಖಿಯರು ಪಾರ್ವತಿಗೆ ಕಿವಿಮಾತು ಹೇಳಿದರು. ‘ಶಿವನ ಪ್ರಮಥಗಣಗಳಾದ ನಂದಿ, ಭೃಂಗಿ ಎಲ್ಲರೂ ಶಿವ ಹೇಳಿದಂತೆ ಕೇಳುವವರು. ನಮ್ಮ ಸುತ್ತ ಅಸಂಖ್ಯಾತರಾದ ಪ್ರಮಥಗಣದವರಿದ್ದರೂ ಅವರೆಲ್ಲರೂ ದ್ವಾರಪಾಲಕರಾಗಿ ಶಂಕರನ ಆಜ್ಞೆಯನ್ನು ಪಾಲಿಸುತ್ತಿರುವರು. ಆದುದರಿಂದ ಪಾಪರಹಿತಳಾದ ಪಾರ್ವತಿಯೇ, ನಮ್ಮವನಾಗಿರುವ ಒಬ್ಬನನ್ನು ನೀನು ಸೃಷ್ಟಿಮಾಡು’ ಎಂದರು.

ಸಖಿಯರ ಸುಂದರವಾದ ಆ ಮಾತನ್ನು ಕೇಳಿ ಪಾರ್ವತಿ ಪುಳಕಿತಳಾದಳು. ಇದರ ಬಗ್ಗೆ ಆಳವಾಗಿ ಯೋಚಿಸುತ್ತಿದ್ದಳು. ಒಂದು ದಿನ ಪಾರ್ವತಿಯು ಅಭ್ಯಂಜನವನ್ನು ಮಾಡುತ್ತಿರುವಾಗ ಸದಾಶಿವನು ಪಾರ್ವತಿಯ ಮನೆಯ ಬಾಗಿಲನ್ನು ಕಾಯುತ್ತಿದ್ದ ನಂದಿಯನ್ನು ಬೆದರಿಸಿ ಒಳಗೆ ಬಂದನು. ಶಿವನ ಅತಿಕ್ರಮ ಪ್ರವೇಶದಿಂದ ಪಾರ್ವತಿಗೆ ತನ್ನ ಸಖಿಯರು ಹಿಂದೆ ಹೇಳಿದ ಮಾತು ತಕ್ಷಣ ಜ್ಞಾಪಕಕ್ಕೆ ಬಂತು. ಹೀಗೆ ಕೆಲಕಾಲ ಕಳೆದ ನಂತರ ಮಂಗಳಾಂಗಿಯಾದ ಪಾರ್ವತಿಯು ತನಗೆ ಒಬ್ಬ ಶುಭಕರನಾದ ಸೇವಕನು ಬೇಕು. ಅವನು ನನ್ನ ಅಪ್ಪಣೆಯನ್ನು ಚಾಚೂ ತಪ್ಪದಂತೆ ಪಾಲಿಸಬೇಕು. ಅಂತಹ ನಂಬಿಕಸ್ತನನ್ನು ಸೃಷ್ಟಿಸಬೇಕು ಎಂದು ಯೋಚಿಸಿ, ತನ್ನ ಮೈಯಿನ ಕೊಳೆಯಿಂದ ಒಬ್ಬನನ್ನು ಸೃಷ್ಟಿಮಾಡಿದಳು. ಅವನು ಸರ್ವಲಕ್ಷಣ ಸಂಪನ್ನನಾಗಿದ್ದನು. ಅವನ ಅಂಗಾಂಗಳೆಲ್ಲವೂ ನಿರ್ದೋಷವಾಗಿತ್ತು. ಸರ್ವಾಂಗಸುಂದರನಾದ ಅವನು ಮಹಾಬಲಶಾಲಿಯಾಗಿದ್ದನು. ಬಹಳ ತೇಜಸ್ವಿಯಾಗಿ ಕಂಗೊಳಿಸುತ್ತಿದ್ದನು. ಅವನಿಗೆ ಪಾರ್ವತಿಯು ನಾನಾ ವಿಧವಾದ ವಸ್ತ್ರಗಳನ್ನುಡಿಸಿ, ತುಂಬು ಹೃದಯದಿಂದ ಆಶೀರ್ವಾದ ಮಾಡಿದಳು.

‘ನೀನು ನನ್ನ ಮಗನು. ನನಗೆ ಬೇರೆ ಮಕ್ಕಳಾರೂ ಇಲ್ಲ’ ಎಂದು ಪಾರ್ವತಿ ಹೇಳಿದಾಗ, ಆ ಬಾಲಕನು ಅವಳಿಗೆ ನಮಸ್ಕರಿಸಿ ಹೀಗೆಂದನು: ‘ನಿನಗಾಗಿ ನಾನು ಯಾವ ಕೆಲಸವನ್ನು ಬೇಕಾದರೂ ಮಾಡಲು ಸಿದ್ಧನಾಗಿರುವೆ. ಅಂತಹ ಕಾರ್ಯವಿದ್ದರೇ ತಿಳಿಸು ಅಮ್ಮ’. ಆಗ ಪಾರ್ವತಿಯು, ‘ಮಗುವೇ, ನನ್ನ ಮಾತನ್ನು ಕೇಳು. ನೀನು ನನ್ನ ಮಗನು ಹಾಗೂ ನನ್ನ ಕಡೆಯವನು. ನನ್ನ ಅಪ್ಪಣೆಯಿಲ್ಲದೆ ಮನೆಯೊಳಕ್ಕೆ ಯಾರನ್ನೂ ಬಿಡಬೇಡ. ಬಲಾತ್ಕಾರವಾಗಿ ಯಾರೇ ಬಂದರೂ ತಡೆದುಬಿಡು’ ಎಂದು ಒಂದು ಗಟ್ಟಿಯಾದ ಕೋಲನ್ನು ಕೊಟ್ಟು ತನ್ನ ಮನೆಯ ಬಾಗಿಲಿನಲ್ಲಿ ನಿಲ್ಲಿಸಿದಳು.

ಪಾರ್ವತಿಯೂ ಅಭ್ಯಂಜನ ಮಾಡಲು ಸಖಿಯರೊಡನೆ ಒಳಕ್ಕೆ ಹೋದಳು. ಇದೇ ಸಮಯಕ್ಕೆ ಈಶ್ವರ ಮನೆಗೆ ಬಂದಾಗ ಬಾಗಿಲ ಬಳಿ ಬಾಲಕನೊಬ್ಬ ನಿಂತಿರುವುದು ಕಂಡು ಆಶ್ಚರ್ಯಪಟ್ಟ. ಶಿವ ಒಳಹೋಗಲು ಪ್ರಯತ್ನಿಸಿದಾಗ ಬಾಲಗಣಪ ತಡೆದ. ತಾನು ಪಾರ್ವತಿಯ ಪತಿ ಶಿವ ಈ ಮನೆಯ ಒಡೆಯ ಎಂದರೂ ಒಳಗೆ ಬಿಡಲಿಲ್ಲ. ಬಲವಂತವಾಗಿ ಒಳಗೆ ಬರಲು ಪ್ರಯತ್ನಿಸಿದಾಗ ಗಣಪತಿ ಕೋಲಿನಿಂದ ಶಿವನನ್ನು ಹೊಡೆದೇಬಿಟ್ಟ. ಬಾಲಕನ ಉದ್ಧಟತನದಿಂದ ಕೋಪಗೊಂಡ ಶಿವ ತನ್ನ ಗಣಗಳನ್ನು ಕರೆದು ಇವನಾರು ವಿಚಾರಿಸಿ ಅಂತ ಹೇಳಿ, ಮನೆಯ ಹೊರಗಡೆಯೇ ಕಾದು ನಿಂತ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ ಕಾಶಿಯಲ್ಲಿರುವ ವಿಶ್ವನಾಥ ಮಂದಿರದ ಜೀರ್ಣೋದ್ಧಾರ ನಡೆಯುತ್ತಿದ್ದು, ಮುಂದಿನ ತಿಂಗಳು ಪ್ರಧಾನಿ ನರೇಂದ್ರ ಮೋದಿ ಅವರು ನವೀಕೃತ ದೇವಸ್ಥಾನವನ್ನು ಉದ್ಘಾಟಿಸುವ ಕಾರ್ಯಕ್ರಮವಿದೆ. ಭೂಸ್ವಾಧೀನ ಪೂರ್ಣಗೊಂಡಿದ್ದು, ಮಂದಿರದ ಆವರಣದಲ್ಲಿ ವಿವಿಧ ಕಾಮಗಾರಿಗಳು ನಡೆಯುತ್ತಿವೆ. ದೇವಸ್ಥಾನದ ಆವರಣವು ದೀಪಗಳಿಂದ ಪ್ರಜ್ವಲಿಸುತ್ತಿರುವ ಚಿತ್ರವೊಂದು ಭಾರಿ ಸುದ್ದಿಯಲ್ಲಿದೆ. ನವೀಕರಣಗೊಂಡ ನಂತರದ ಮೊದಲ ಚಿತ್ರವಿದು ಎಂಬುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ.



✓ ವೈರಲ್ ಆಗಿರುವ ಈ ಚಿತ್ರವು ಸೋಮನಾಥ ಮಂದಿರದ ಚಿತ್ರವೇ ಹೊರತು ಕಾಶಿ ದೇವಸ್ಥಾನದ್ದಲ್ಲ ಎಂದು ಇಂಡಿಯಾಟುಡೇ ವರದಿ ಮಾಡಿದೆ. 2021ರ ಮಾರ್ಚ್‌ನಲ್ಲಿ ಇನ್‌ಸ್ಟಾಗ್ರಾಮ್‌ನಲ್ಲಿ ಅಪ್ಲೋಡ್ ಮಾಡಲಾಗಿರುವ ವಿಡಿಯೊದಿಂದ ಈ ಚಿತ್ರವನ್ನು ಗ್ರ್ಯಾಬ್ ಮಾಡಲಾಗಿದೆ. ಇದು ಸೋಮನಾಥ ಮಂದಿರದ ದೃಶ್ಯ ಎಂದು ದೇವಸ್ಥಾನದ ವಕ್ತಾರ ಧ್ರುವ್ ಜೋಷಿ ಸ್ಪಷ್ಟಪಡಿಸಿದ್ದಾರೆ. ಕಾಶಿ ದೇವಸ್ಥಾನ ನವೀಕರಣ ನಡೆಯುತ್ತಿದ್ದು, ಮೂಲ ವಿನ್ಯಾಸದಲ್ಲಿ ಮಹತ್ವದ ಬದಲಾವಣೆ ಮಾಡಲಾಗಿಲ್ಲ ಎಂದು ಕಾಶಿ ಮಂದಿರ ಟ್ರಸ್ಟ್‌ನ ಸಿಇಒ ಸುನಿಲ್ ವರ್ಮಾ ತಿಳಿಸಿದ್ದಾರೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ದೈವಕೃಪೆಗೆ ಅರ್ಹತೆ

ಗಗನ ಬಿಸಿಗವಸಾಗಿ, ಕೆರೆಗಳಾವಿಗೆಯಾಗಿ|
ಜಗದುಸಿರೆ ಹೊಗೆಯಾಗಿ ಧಗಧಗಿಸುವಂದು||
ಬಗೆದೆತ್ತಣಿನೊ ರಾತ್ರಿಯಲಿ ಧರೆಗೆ ತಂಪೆರೆವ
ಮುಗಿಲವೊಲು ದೈವಕೃಪೆ – ಮಂಕುತಿಮ್ಮ||504||

ಪದ-ಅರ್ಥ: ಬಿಸಿಗವಸಾಗಿ = ಬಿಸಿ + ಗವಸಾಗಿ (ಹೊದಿಕೆಯಾಗಿ), ಕೆರೆಗಳಾವಿಗೆಯಾಗಿ = ಕೆರೆಗಳು + ಆವಿಗೆಯಾಗಿ (ಮಡಕೆ ಬೇಯಿಸುವ ಒಲೆಯಾಗಿ), ಜಗದುಸಿರೆ = ಜಗದ + ಉಸಿರೆ, ಬಗೆದೆತ್ತಣಿನೊ = ಬಗೆದು (ಹುಟ್ಟಿ) + ಎತ್ತಣಿನೊ (ಎಲ್ಲಿಂದಲೊ)

ವಾಚ್ಯಾರ್ಥ: ಆಕಾಶವೇ ಒಂದು ಬಿಸಿಯಾದ ಹೊದಿಕೆಯಾಗಿ, ಕೆರೆಗಳು ಒಣಗಿ ಬೆಂಕಿಯ ಒಲೆಗಳಾಗಿ, ಜಗತ್ತಿನ ಉಸಿರೇ ಹೊಗೆಯಾಗಿ, ಧಗಧಗನೆ ಉರಿಯುವಾಗ, ಎಲ್ಲಿಯೋ ಹುಟ್ಟಿ, ಈ ಕಡೆಗೆ ಬಂದು ರಾತ್ರಿಯಲ್ಲಿ ಮಳೆಸುರಿಸಿ, ಭೂಮಿಯನ್ನು ತಂಪುಗೊಳಿಸುವ ಮುಗಿಲಿನಂತೆ ದೈವಕೃಪೆ ಇದೆ.

ವಿವರಣೆ: ಯಾವುದೇ ಸಾಧನೆಗೆ ಪೂರಕವಾದ ಪ್ರಯತ್ನ, ಅರ್ಹತೆ ಬೇಕಾಗುತ್ತದೆ. ವೈದ್ಯರಾಗಬೇಕೆಂದಿದ್ದರೆ ಹತ್ತು ವರ್ಷಗಳ ಸತತ ಪರಿಶ್ರಮ ಅಗತ್ಯ. ಒಂದು ಆಟದಲ್ಲಿ ರಾಜ್ಯವನ್ನು, ರಾಷ್ಟ್ರವನ್ನು ಪ್ರತಿನಿಧಿಸಬೇಕಾದರೆ ಹತ್ತಾರು ವರ್ಷಗಳ ಅವಿರತ ದುಡಿಮೆ, ಗುರಿಯೆಡೆಗಿನ ದೃಷ್ಟಿ, ಅಲುಗದ ನಿಷ್ಠೆ ಬೇಕು. ಮೂವತ್ತು, ನಲವತ್ತು ವರ್ಷಗಳ ಕಾಲ ನಡುವೆ ಬರುವ ವೈಫಲ್ಯಗಳನ್ನು ಮರೆತು, ಸಿದ್ಧಿಯತ್ತ ದುಡಿಯುತ್ತಲೇ ಹೋದಾಗ ಅಂತರರಾಷ್ಟ್ರೀಯ ಮನ್ನಣೆ, ಪ್ರಶಸ್ತಿ ಬಂದೀತು. ಸಾಧನೆಯಾಗುವವರೆಗಿನ ಕಷ್ಟವೇನು ಸುಲಭವೇ ಅರಗಿಸಿಕೊಳ್ಳಲು? ಮನಸ್ಸು ಕುದಿದು ಹೋದೀತು, ಕೆಲವೊಮ್ಮೆ ಜೀವನೋತ್ಸಾಹ ಕುಂದೀತು, ಬದುಕು ಭಾರವೆನ್ನಿಸಿ, ಕೆಲಸ ಸಾಕು ಎನ್ನಿಸೀತು. ಇವೆಲ್ಲ ಹಂತಗಳನ್ನು ದಾಟಿದ ಮೇಲೆಯೇ ಸಾಧನೆಯ ಶಿಖರ ಗೋಚರವಾಗುವುದು. ಆದರೆ ಕೊನೆಗೆ ಗುರಿ ತಲುಪಿದಾಗ, ಸಾಧನೆಯ ಸಿದ್ಧಿಯಾದಾಗ, ಕಾದನೆಲ ತಂಪಾದಂತೆ, ಸಂತೃಪ್ತಿ ಆವರಿಸುತ್ತದೆ. ಒಂದು ಸಾಧನೆಯ ಕೈಗೂಡುವಿಕೆಗೇ ಇಷ್ಟೊಂದು ಶ್ರಮ, ಏಕಾಗ್ರತೆಯ ಅವಶ್ಯಕತೆ ಇದ್ದರೆ, ದೇಹವಿಲ್ಲದ, ಆಕಾರವಿಲ್ಲದ, ಎಲ್ಲೆಲ್ಲಿಯೂ ಇರುವ ಆದರೆ ಆಗೋಚರ ಶಕ್ತಿಯಾದ ಭಗವಂತನನ್ನು ಪಡೆಯುವ, ಅವನ ಕೃಪೆಗೆ ಪಾತ್ರರಾಗುವ ಕ್ರಿಯೆ ಅದೆಷ್ಟು ಕಠಿಣವಾಗಿರಬೇಕು? ದೇವಕೃಪೆ ದೊರೆಯುವುದು ಅರ್ಹನಾದವನಿಗೆ ಮಾತ್ರ. ಅರ್ಹತೆಯಿಲ್ಲದೆ ಅಪೇಕ್ಷಿಸಿದರೆ ಅದು ಸಿಗುವುದಲ್ಲ. ಅದಕ್ಕೇ ಮೊದಲು ಭಗವಂತ ಪರೀಕ್ಷೆ ಮಾಡುತ್ತಾನಂತೆ. ಹರಿಶ್ಚಂದ್ರನಿಗೆ ಆದ ಪರೀಕ್ಷೆಗಳು ಕಡಿಮೆಯೆ? ವಿಶ್ವಾಮಿತ್ರ ಬ್ರಹ್ಮರ್ಷಿಯಾಗುವವರೆಗೆ ಪಟ್ಟ ಕಷ್ಟಗಳೆಷ್ಟು? ಬೇಡರ ಕಣ್ಣಪ್ಪ, ತನ್ನ ಕಣ್ಣುಗಳನ್ನು ತೆಗೆಯುವವರೆಗೆ ಪರೀಕ್ಷೆ ನಡೆಯಲಿಲ್ಲವೆ? ಮನ ಬರಿದಾಗಿ, ಭಾವ ನಿರ್ಭಾವವಾಗಿ, ಧ್ಯಾನ ತಾನೇ ತಾನಾದಾಗ ಭಗವಂತನ ಕೃಪೆಯಾಗುತ್ತದೆ ಎಂದು ಹೇಳುತ್ತಾನೆ ಡೋಹರ ಕಕ್ಕಯ್ಯ. ನೆನೆಯಲರಿಯೆ ನಿರ್ಧರಿಸಲರಿಯೆ ಮನವಿಲ್ಲವಾಗಿ ಭಾವಿಸಲರಿಯೆ ಬೆರಸಲರಿಯೆ ಭಾವ ನಿರ್ಭಾವವಾಯಿತ್ತಾಗಿ ಧ್ಯಾನ ಮೌನವನರಿಯೆ ಧ್ಯಾನಾತೀತ ತಾನೆಯಾಯಿತ್ತಾಗಿ ಜ್ಞಾತೃ ಜ್ಞಾನ ಜ್ಞೇಯಂಗಳೆಲ್ಲವ ಮೀರಿ ಅಭಿನಯ ಮಲ್ಲಿಕಾರ್ಜುನನಲ್ಲಿ ಪರಮ ಸುಖಿಯಾಗಿರ್ದೆ ಕಗ್ಗ ಹೇಳುತ್ತದೆ, ಆಕಾಶವೇ ಕಾದ ಹೊದ್ದಿಕೆಯಂತೆ, ಕೆರೆಗಳು ಕುಂಬಾರ ಮಡಕೆಯ ಒಲೆಯಂತೆ, ಜನರ ಉಸಿರೇ ಕುದಿದು ಧಗಧಗಿಸುತ್ತಿರುವಾಗ, ಎಲ್ಲಿಂದಲೋ ಬಂದ ಮಳೆ ತಂಪೆರೆಯುವಂತೆ ದೈವಕೃಪೆಯ ಅವತರಣವಾಗುತ್ತದೆ. ಅದಕ್ಕೆ ಅರ್ಹತೆ ಬೇಕು, ಪ್ರಯತ್ನ ಬೇಕು. ❖

ದಿನ ಭವಿಷ್ಯ

ಬುಧವಾರ ನವೆಂಬರ್ 24, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಅನೂರಾಧಾ ಪಂಚಮೀ ಗಂ. 39-39 (ರಾ. 10-20) ಬುಧವಾರ ನಿತ್ಯ ನಕ್ಷತ್ರ ಪುನರ್ವಸು ಗಂ. 16-57 (ಹ. 1-16) ಶುಕ್ಲ ನಾಮ ಯೋಗ ಗಂ. 57-23 ಕೌಲವ ಕರಣ ಗಂ. 7-43 ವಿಷ ಗಂ. 38-28 ಅಮೃತ ಗಂ 9-41 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 : ಸೂರ್ಯೋದಯ: 6-25 ಸೂರ್ಯಾಸ್ತ: 5-46 ಅದೃಷ್ಟ ಸಂಖ್ಯೆ 5

ಮೇಷ: ಕಾರ್ಯಕ್ಷೇತ್ರದಲ್ಲಿ ಒತ್ತಡವಿದ್ದರೂ ಯೋಜಿತ ಕ್ರಮದಂತೆ ಸುಗಮವಾಗಿ ಕೈಗೂಡುವುದು. ಮನಸ್ಸಿಗೆ ನೆಮ್ಮದಿ ದೊರೆತು ನಿರಾಳ ಆಗುವಿರಿ. ಸಂಗಾತಿಯೊಂದಿಗೆ ಸಂತಸವನ್ನು ಹಂಚಿಕೊಳ್ಳುವ ಸುಯೋಗ ನಿಮ್ಮದಾಗಲಿದೆ.

ವೃಷಭ: ಪರಿಸ್ಥಿತಿ ನಿಮಗೆ ವಿರೋಧವಾಗಿರುವುದರ ಜೊತೆಗೆ ಮಕ್ಕಳ ನಡೆ ನುಡಿಗಳಿಗೆ ನೀವು ತಲೆ ತಗ್ಗಿಸುವ ಸಂದರ್ಭ ಒದಗಬಹುದು. ಆರೋಗ್ಯದಲ್ಲಿ ಸುಧಾರಣೆ ಕಂಡುಕೊಳ್ಳುವಿರಿ.

ಮಿಥುನ: ಸಂಯಮದಿಂದ ಕಾರ್ಯ ಪ್ರವೃತರಾಗಿ. ಸಾಂಸಾರಿಕವಾಗಿ ತಲೆದೋರಿರುವ ಏರಿಳಿತಗಳ ಬಗ್ಗೆ ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ. ಗುರುಹಿರಿಯರ ಸಕಾಲಿಕ ನೆರವಿನಿಂದ ಸಂತಸದ ಕ್ಷಣಗಳು ನಿಮ್ಮದಾಗುವವು.

ಕರ್ಕಾಟಕ: ವಿದ್ಯಾರ್ಥಿಗಳಿಗೆ ಪ್ರಗತಿದಾಯಕ ದಿನ. ವಿವಾಹಾಕಾಂಕ್ಷಿಗಳಿಗೆ ಉತ್ತಮ ಆಯ್ಕೆ ದೊರೆಯುವುದು. ಕ್ಷಿಪ್ರ ವಿವಾಹ ಸಂಬಂಧಗಳು ಕೂಡಿಬರುವ ಸಾಧ್ಯತೆ. ದಿನದಾಂತ್ಯಕ್ಕೆ ಮನೆಯಲ್ಲಿ ಸಂತಸದ ವಾತಾವರಣ.

ಸಿಂಹ: ನಿಮ್ಮ ಧಾರ್ಮಿಕ ನಡೆಯ ಬಗ್ಗೆ ಇತರರಲ್ಲಿ ಅಚ್ಚರಿ ಮೂಡುವುದು. ಸಮತೋಲನ ದೃಷ್ಟಿಯಿಂದಾಗಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗುವಿರಿ. ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವ ಸಾಧ್ಯತೆ.

ಕನ್ಯಾ: ದೈಹಿಕ ಸೆಳೆತದಿಂದಾಗಿ ಹಾದಿ ತಪ್ಪುವ ಸಾಧ್ಯತೆ. ಮನೋವೃತ್ತಿಯ ಮೇಲೆ ಹಿಡಿತ ಸಾಧಿಸಿ ದಿನ ನಿತ್ಯದ ಕಾರ್ಯಗಳಲ್ಲಿ ಗಮನ ವಹಿಸುವುದು ಉತ್ತಮ. ಸಂಗಾತಿ ಮಾತಿಗೆ ಮನ್ನಣೆ ನೀಡಿ ವ್ಯವಹರಿಸುವುದು ಉತ್ತಮ.

ತುಲಾ: ಕುಟುಂಬ ಸದಸ್ಯರಲ್ಲಿನ ಭಿನ್ನಮತದಿಂದಾಗಿ ಬೇಸರದ ವಾತಾವರಣ. ಹಿರಿಯರ, ಹಿತೈಷಿಗಳ ಮಧ್ಯಪ್ರವೇಶದಿಂದಾಗಿ ಎಲ್ಲವೂ ನಿರ್ಧಾರಕ್ಕೆ ಬರಲಿದೆ. ಆರ್ಥಿಕ ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಹಿಂಜರಿಕೆ ಕಂಡುಬರಲಿದೆ.

ವೃಶ್ಚಿಕ: ಧಾರ್ಮಿಕ ವಿಚಾರಗಳಲ್ಲಿ ಆಸಕ್ತಿ ಮೂಡುವುದು. ದೇವರ ದಯೆಯಿಂದ ನಿಮ್ಮ ಮೇಲಿನ ಎಲ್ಲ ಆಪಾದನೆಗಳಿಂದ ಮುಕ್ತಿಪಡೆದು ಅಭಿಮಾನಕ್ಕೆ ಪಾತ್ರರಾಗುವಿರಿ ಸಾಮಾಜಿಕ ಕಾರ್ಯಗಳಲ್ಲಿ ಯಶಸ್ಸು.

ಧನು: ನಿಮ್ಮ ಮುಂದಾಳುತನದ ಬಗ್ಗೆ ಎಲ್ಲರಿಂದ ಪ್ರಶಂಸೆ ವ್ಯಕ್ತವಾಗುವುದು. ಸಾಮಾಜಿಕ ಕೆಲಸಗಳಲ್ಲಿ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಸಾಧ್ಯತೆ. ಯಶಸ್ಸಿನ ಅಮಲಿನಲ್ಲಿ ಸಂಸಾರದ ಬಗ್ಗೆ ಅವಗಣನೆ ಸಲ್ಲ.

ಮಕರ: ಕೆಲಸ ಕಾರ್ಯಗಳಲ್ಲಿ ಹೊಸತನ, ಉತ್ಸಾಹ ಮೂಡಿಬರಲಿವೆ. ವೈದ್ಯಕೀಯ ವಲಯದಲ್ಲಿರುವವರಿಗೆ ಉತ್ತಮ ಧನಪ್ರಾಪ್ತಿ. ಹೊಸ ಹೊಸ ಸ್ನೇಹಿತರಿಂದ ಹೊಸ ಹೊಸ ವಿಚಾರಗಳ ಬಗ್ಗೆ ತಿಳುವಳಿಕೆ.

ಕುಂಭ: ನಿಮ್ಮ ಬಹುದಿನದ ಕೆಲಸ ಕಾರ್ಯಗಳು ಕ್ಷಿಪ್ರಗತಿಯಲ್ಲಿ ಮುಗಿದು ಮನಸ್ಸಿಗೆ ನೆಮ್ಮದಿ ನೀಡಲಿದೆ. ಆರ್ಥಿಕ ರಂಗದಲ್ಲಿಯೂ ಉತ್ತಮ ಪ್ರಗತಿಯನ್ನು ಹೊಂದಿ ನೆಮ್ಮದಿ ನೆಲೆಮಾಡುವುದು. ಮನೆಯಲ್ಲಿ ಹಬ್ಬದ ವಾತಾವರಣ.

ಮೀನ: ನಿಮ್ಮ ಕೆಲಸ ಕಾರ್ಯಗಳು ಎಂದಿನಂತೆ ಸುಗಮವಾಗಿ ಸಾಗುತ್ತಿರುವಾಗ ಅನ್ಯರ ಅನಪೇಕ್ಷಿತ ಹಸ್ತಕ್ಷೇಪದಿಂದ ಮಾನಸಿಕ ಕಿರಿಕಿರಿ ಉಂಟಾಗಬಹುದು. ಸಂಯಮದಿಂದ ಹಸ್ತಕ್ಷೇಪವನ್ನು ಗಡೆಗಣಿಸುವುದು ಉತ್ತಮ.


ನಿಮ್ಮ ಜನ್ಮದಿನ 24-ನವೆಂಬರ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಸದೃಢ ಆರೋಗ್ಯವು ಲಭಿಸಲಿದೆ. ವ್ಯಾಪಾರ, ಹಣಕಾಸು ವ್ಯವಹಾರಗಳಲ್ಲಿ ತೊಡಗುವವರಿಗೆ ಸ್ವಲ್ಪ ಮಟ್ಟಿನ ಹಿನ್ನಡೆ ಕಂಡುಬರುವುದು. ಪ್ರೇಮ ವ್ಯವಹಾರಗಳಲ್ಲಿ ಕೈ ಸುಟ್ಟುಕೊಳ್ಳುವ ಸಾಧ್ಯತೆ. ದೈಹಿಕ ಶ್ರಮ ವಹಿಸುವವರಿಗೆ ಅತ್ಯಂತ ಪ್ರಶಸ್ತವಾಗಿದೆ.

ಪದಬಂಧ 4787

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ನಾಳಿಕೆಯಿರಿಸಿ ತಿಳಿಸಿರುವ ವಿಚಾರ ಮಾರ್ಗ (4)
2. ದೇಶದ ಹತ್ತಿರವಿರುವ ಜಾಗ! (3)
4. ಹಾಡಿನ ಆರಂಭದ ಸಾಲು (3)
6. ಪ್ರಶ್ನೆಗೆ ಪೂರಕವಾಗಿ ಹೇಳಿದ ಮಾತು (3)
7. ಎಲ್ಲರೂ ಒಟ್ಟಾಗಿಯೇ ಹಾಡುವಿಕೆ (5)
10. ಬಣವೆ ಹಾಕಲು ಈ ತೊಂದರೆಯೇ? (3)
11. ರಂಗನ್ನು ಹಚ್ಚಿಕೊಂಡವನ ವರ್ಣನೆ (3)
13. ಪರವಾಗಿಯೇ ಪಡೆದುಕೊಂಡ ಸಂಬಳ (3)
14. ರತ್ನ ಖಚಿತ ವಸ್ತು (4)

ಮೇಲಿಂದ ಕೆಳಕ್ಕೆ
1. ತಾಪವಿದ್ದಾಗ ತೋರಿದ ಶೌರ್ಯ (3)
2. ಇದು ಅತೀ ತೀಕ್ಷ್ಣವಾದುದು! (3)
3. ಆಯುಧಗಳನ್ನಿಡುವ ಕೋಣೆ (4)
5. ಲಾಸಾಗಿದ್ದರೂ ತೋರಿದ ಬೆಡಗು! (3)
6. ದಾಹವಿದ್ದಾಗ ನೀಡಿದ ದೃಷ್ಟಾಂತ (5)
8. ಈತ ಮುಸಲ್ಮಾನ ದೊರೆ (3)
9. ತಪ್ಪು ಕೆಲಸಕ್ಕಾಗಿ ವಿಷಾದಿಸುವಿಕೆ (4)
10. ಬರದೊಳಗಿರುವ ಅನಾಗರೀಕ (3)
12. ನೆಗೆದಾಡಿದಾಗ ತಲೆದೋರಿದ ಶೀತ! (3)



4786ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಾವಕಾಶ 3.ಆರಾಧಕ 5.ಕರಡು 6.ಕುಲಾವಿ 8.ಸ್ವಹಸ್ತಾಕ್ಷರ 11.ಪರಾತ 12.ಸುಕೃತ 14.ಯಥೋಚಿತ 15.ರುಗ್ಣಾಲಯ

ಮೇಲಿಂದ ಕೆಳಕ್ಕೆ: 1.ಸಾರ್ವಭೌಮ 2.ಶಕ 3.ಆಡು 4.ಕಲಾವಿದ 6.ಕುಟೀರ 7.ಪ್ರಸ್ತಾಪ 8.ಸ್ವಗತ 9.ತಾಪತ್ರಯ 10.ಅಡಿಪಾಯ 12.ಸುತ 13.ತರು

ಸುಡೊಕು 5173

	7			4				9
			6		9			2
2		4		7		3		
7	8						5	
			4			6		7
6		5		8			2	
		7	2				9	
				1	7		3	6
9		1		5		2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5172 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಕಾಂಗ್ರೆಸ್ ಪಕ್ಷವನ್ನು ಮುಜುಗರಕ್ಕೆ ತಳ್ಳಿದ ಸಂಸದ ಮನೀಶ್ ತಿವಾರಿ ನೂತನ ಕೃತಿ

‘ಮುಂಬೈ ದಾಳಿಗೆ ಯುಪಿಎ ಪ್ರತಿಕ್ರಿಯೆ ಜಡ’

ಪ್ರಜಾವಾಣಿ ವಾರ್ತೆ


ಮನೀಶ್ ತಿವಾರಿ

ನವದೆಹಲಿ: ವಿವಿಧ ರಾಜ್ಯಗಳ ವಿಧಾನಸಭೆಯ ಚುನಾವಣೆಯ ಹೊಸ್ತಿಲಲ್ಲಿಯೇ ಕಾಂಗ್ರೆಸ್ ಪಕ್ಷವನ್ನು ಆ ಪಕ್ಷದ ಮುಖಂಡರೇ ಮುಜುಗರಕ್ಕೆ ಸಿಲುಕಿಸುತ್ತಿದ್ದಾರೆ. ಸಲ್ಮಾನ್ ಖುರ್ಷಿದ್ ಬಳಿಕ, ಸಂಸದ ಮನೀಶ್ ತಿವಾರಿ ಅವರು ಪಕ್ಷವು ಇಕ್ಕಟ್ಟಿಗೆ ಸಿಲುಕುವಂತೆ ಮಾಡಿದ್ದಾರೆ. 2008ರಲ್ಲಿ ಮುಂಬೈ ಮೇಲೆ ಉಗ್ರರು ದಾಳಿ ನಡೆಸಿದ ಬಳಿಕ ಭಾರತವು ಪಾಕಿಸ್ತಾನದ ಮೇಲೆ ದಾಳಿ ನಡೆಸಬೇಕಿತ್ತು. ಆದರೆ, ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರವು ಹಾಗೆ ಮಾಡಲಿಲ್ಲ ಎಂದು ತಮ್ಮ ಹೊಸ ಪುಸ್ತಕದಲ್ಲಿ ತಿವಾರಿ ಹೇಳಿದ್ದಾರೆ.

ಸಂಯಮ ಎಂಬುದು ಶಕ್ತಿ ಅಲ್ಲ, ಅದು ದೌರ್ಬಲ್ಯದ ಸಂಕೇತ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ತಿವಾರಿ ಅವರ ‘10 ಫ್ಲ್ಯಾಷ್ ಪಾಯಿಂಟ್ಸ್, 20 ಇಯರ್ಸ್: ನ್ಯಾಷನಲ್ ಸೆಕ್ಯುರಿಟಿ ಸಿಚುವೇಷನ್ಸ್ ದ್ಯಾಟ್ ಇಂಪ್ಯಾಕ್ಟೆಡ್ ಇಂಡಿಯಾ’ ಕೃತಿಯು ಡಿಸೆಂಬರ್ 1ರಂದು ಬಿಡುಗಡೆ ಆಗಲಿದೆ. ರೂಪಾ ಸಂಸ್ಥೆಯು ಕೃತಿಯನ್ನು ಪ್ರಕಟಿಸಲಿದೆ.

ಯುಪಿಎ ಸರ್ಕಾರದ ಪ್ರತಿಕ್ರಿಯೆ ಜಡವಾಗಿತ್ತು ಎಂಬ ಹೇಳಿಕೆಯನ್ನು ಹಿಡಿದುಕೊಂಡು ಬಿಜೆಪಿ, ಕಾಂಗ್ರೆಸ್ ಮೇಲೆ ವಾಗ್ದಾಳಿ ನಡೆಸಿದೆ. 26/11ರ ಮುಂಬೈ ದಾಳಿಗೆ ಸರಿಯಾದ ತಿರುಗೇಟು ನೀಡದೆ ಕಾಂಗ್ರೆಸ್ ನೇತೃತ್ವದ ಸರ್ಕಾರವು ರಾಷ್ಟ್ರೀಯ ಭದ್ರತೆಯನ್ನು ಅಪಾಯಕ್ಕೆ ಒಡ್ಡಿತ್ತು ಎಂದು ಬಿಜೆಪಿ ಆರೋಪಿಸಿದೆ.

‘ಯುಪಿಎ ಸರ್ಕಾರವು ಸಂವೇದನೆರಹಿತ ಮತ್ತು ನಿರುಪಯುಕ್ತವಾಗಿತ್ತು. ಆ ಸರ್ಕಾರಕ್ಕೆ ರಾಷ್ಟ್ರೀಯ ಭದ್ರತೆ ಬಗ್ಗೆಯೂ ಕಳಕಳಿ ಇರಲಿಲ್ಲ’ ಎಂದು ಬಿಜೆಪಿ ವಕ್ತಾರ ಗೌರವ್ ಭಾಟಿಯಾ ಹೇಳಿದ್ದಾರೆ.

‘ರಾಷ್ಟ್ರೀಯ ಭದ್ರತಾ ಸ್ಥಿತಿಗೆ ಸರ್ಕಾರವು ನೀಡಿದ ಪ್ರತಿಕ್ರಿಯೆಯ ವಿಚಾರದ ಸಣ್ಣ ಭಾಗವೊಂದನ್ನು 304 ಪುಟಗಳ ಪುಸ್ತಕದಿಂದ ಆಯ್ದುಕೊಂಡು ಬಿಜೆಪಿ ಪ್ರತಿಕ್ರಿಯೆ ನೀಡುತ್ತಿರುವುದು ನನಗೆ ನಗು ತರಿಸುತ್ತಿದೆ. ರಾಷ್ಟ್ರೀಯ ಭದ್ರತೆಯನ್ನು ಬಿಜೆಪಿ ನೇತೃತ್ವದ ಸರ್ಕಾರವು ನಿರ್ವಹಿಸಿದ ರೀತಿಯ ಬಗೆಗಿನ ‘ಕಠಿಣ ವಿಶ್ಲೇಷಣೆ’ಗೂ ಅವರು ಹೀಗೆಯೇ ಪ್ರತಿಕ್ರಿಯೆ ನೀಡುತ್ತಾರೆಯೇ’ ಎಂದು ತಿವಾರಿ ಅವರು ಟ್ವೀಟ್‌ನಲ್ಲಿ ಪ್ರಶ್ನಿಸಿದ್ದಾರೆ.

ತಿವಾರಿ ಅವರು ಯುಪಿಎ ಸರ್ಕಾರದಲ್ಲಿ 2012–2014ರ ಅವಧಿಯಲ್ಲಿ ವಾರ್ತಾ ಮತ್ತು ಪ್ರಸಾರ ಸಚಿವರಾಗಿದ್ದರು. ಮನಮೋಹನ್ ಸಿಂಗ್ ಅವರಿಗೆ ಒಂದು ಕಾಲದಲ್ಲಿ ನಿಕಟವಾಗಿದ್ದರು. ಇತ್ತೀಚೆಗೆ, ಅವರ ತವರು ರಾಜ್ಯ ಪಂಜಾಬ್‌ನಲ್ಲಿ ಪಕ್ಷದ ಆಗುಹೋಗುಗಳನ್ನು ನಿರ್ವಹಿಸುತ್ತಿರುವುದರ ಬಗ್ಗೆ ಬಹಿರಂಗವಾಗಿಯೇ ಟೀಕೆ ಮಾಡುತ್ತಿದ್ದಾರೆ.

ಪಕ್ಷಕ್ಕೆ ಪೂರ್ಣಾವಧಿ ಅಧ್ಯಕ್ಷರು ಬೇಕು ಎಂದು ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದ 23 ಮುಖಂಡರಲ್ಲಿ ತಿವಾರಿ ಅವರೂ ಇದ್ದರು.

ಮೋದಿ ವಿರುದ್ಧವೂ ಟೀಕೆ

ಪರ್ವತ ಪ್ರದೇಶದಲ್ಲಿ ಹೋರಾಡುವ ತುಕಡಿಯನ್ನು ಕೈಬಿಡುವ ನಿರ್ಧಾರವು ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಈ ದೇಶಕ್ಕೆ ಮಾಡಿದ ಅತಿ ದೊಡ್ಡ ಅನ್ಯಾಯ ಎಂದು ತಿವಾರಿ ಆರೋಪಿಸಿದ್ದಾರೆ.

ಅಂತಹವೊಂದು ತುಕಡಿಯು ಇದ್ದಿದ್ದರೆ ನೈಜ ನಿಯಂತ್ರಣ ರೇಖೆಯಲ್ಲಿನ ಒತ್ತಡ ಕಡಿಮೆ ಆಗುತ್ತಿತ್ತು. 2017ರ ದೋಕಲಾ ಬಿಕ್ಕಟ್ಟು ತಡೆಯಬಹುದಿತ್ತು. ಈ ತುಕಡಿಯನ್ನು ಕೈಬಿಟ್ಟದ್ದು ರಾಷ್ಟ್ರೀಯ ಭದ್ರತೆಗೆ ಬಹುದೊಡ್ಡ ಹೊಡೆತ ಎಂದು ಅವರು ವಿಶ್ಲೇಷಿಸಿದ್ದಾರೆ.

ಖುರ್ಷಿದ್ ವಿವಾದ

ಸಲ್ಮಾನ್ ಖುರ್ಷಿದ್ ಅವರ ‘ಸನ್‌ರೈಸ್ ಇನ್ ಅಯೋಧ್ಯಾ’ ಕೃತಿಯು ಕೆಲವೇ ದಿನಗಳ ಹಿಂದೆ ಬಿಡುಗಡೆ ಆಗಿತ್ತು. ಈ ಕೃತಿಯಲ್ಲಿ, ಹಿಂದುತ್ವವನ್ನು ಇಸ್ಲಾಮಿಸ್ ಸ್ಟೇಟ್ ಮತ್ತು ಬೊಕೊ ಹರಮ್‌ನಂತಹ ಮುಸ್ಲಿಂ ಮೂಲಭೂತವಾದಿ ಸಂಘಟನೆಗಳೊಂದಿಗೆ ಹೋಲಿಸಲಾಗಿತ್ತು. ಹಿಂದುತ್ವ ಮತ್ತು ಬಿಜೆಪಿ ಬೆಂಬಲಿಗರು ಕಾಂಗ್ರೆಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು.

ತ್ರಿಪುರಾ: ಚುನಾವಣೆ ಮುಂದೂಡಲು ಸುಪ್ರೀಂಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ನವೆಂಬರ್ 25ಕ್ಕೆ ನಿಗದಿಯಾಗಿರುವ ತ್ರಿಪುರಾ ನಗರ ಸ್ಥಳೀಯ ಸಂಸ್ಥೆ ಚುನಾವಣೆಯನ್ನು ಮುಂದೂಡುವಂತೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಪುರಸ್ಕರಿಸಿಲ್ಲ.

ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಡುತ್ತಿದೆ ಎಂದು ಆರೋಪಿಸಿದ್ದ ಟಿಎಂಸಿ, ಚುನಾವಣೆ ಮುಂದೂಡುವಂತೆ ಕೋರಿತ್ತು. ಪ್ರಜಾಪ್ರಭುತ್ವದಲ್ಲಿ ಚುನಾವಣೆಯನ್ನು ಮುಂದೂಡುವುದು ತಪ್ಪು ಸಂಪ್ರದಾಯಕ್ಕೆ ನಾಂದಿಯಾಗುತ್ತದೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ. ಚುನಾವಣೆಗಳನ್ನು ಮುಂದೂಡುವುದು ಕೊನೆಯ ಆಯ್ಕೆ ಎಂದಿದೆ.

ಶಾಂತಿಯುತ ಚುನಾವಣೆ ನಡೆಸಲು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ತ್ರಿಪುರಾ ಐಜಿ ಮತ್ತು ಡಿಜಿಪಿ ಅವರಿಗೆ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ ನಿರ್ದೇಶಿಸಿತು. ಶಾಂತಿಯುತ ಚುನಾವಣೆ ನಡೆಸಲು ಅಗತ್ಯವಾಗಿರುವ ಅರೆಸೇನಾಪಡೆ ಸಿಬ್ಬಂದಿ ಲಭ್ಯವಿದ್ದಾರೆಯೇ ಎಂಬುದರ ಕುರಿತಂತೆ ಬುಧವಾರ ಬೆಳಿಗ್ಗೆ ರಾಜ್ಯ ಚುನಾವಣಾ ಆಯುಕ್ತರ ಜೊತೆ ಮಾತುಕತೆ ನಡೆಸುವಂತೆ ಪೊಲೀಸರಿಗೆ ಸೂಚಿಸಿದೆ.

ಚುನಾವಣೆ ನಡೆಸಲು ಮಾಡಿಕೊಂಡಿರುವ ಸಿದ್ಧತೆಯ ಮಾಹಿತಿಯನ್ನು ತ್ರಿಪುರಾ ಸರ್ಕಾರದ ಪರ ವಕೀಲ ಮಹೇಶ್ ಜೇಠ್ಮಲಾನಿ ಅವರು ಕೋರ್ಟ್‌ಗೆ ಸಲ್ಲಿಸಿದರು.

‘ಮೌಖಿಕ ಸಂಭೋಗ ತೀವ್ರ ಲೈಂಗಿಕ ದೌರ್ಜನ್ಯವಲ್ಲ’

ಅಲಹಾಬಾದ್ ಹೈಕೋರ್ಟ್ ತೀರ್ಪು ● ಶಿಕ್ಷೆ ಕಡಿಮೆ ಮಾಡಿದ ನ್ಯಾಯಪೀಠ

ಪ್ರಜಾವಾಣಿ ವಾರ್ತೆ

ಲಖನೌ: ಮಗುವಿನೊಂದಿಗೆ ಮೌಖಿಕ ಸಂಭೋಗ ನಡೆಸಿದ್ದ ವ್ಯಕ್ತಿಯೊಬ್ಬನಿಗೆ ಝಾನ್ಸಿ ಜಿಲ್ಲಾ ನ್ಯಾಯಾಲಯ ವಿಧಿಸಿದ್ದ 10 ವರ್ಷಗಳ ಕಾರಾಗೃಹ ಶಿಕ್ಷೆಯನ್ನು ಏಳು ವರ್ಷಗಳಿಗೆ ಇಳಿಸಿ ಅಲಹಾಬಾದ್ ಹೈಕೋರ್ಟ್ ತೀರ್ಪು ನೀಡಿದೆ. ‘ಅತ್ಯಾಚಾರದಂತಹ ತೀವ್ರ ಲೈಂಗಿಕ ದೌರ್ಜನ್ಯಕ್ಕೆ, ‘ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ–2012 (ಪೋಕ್ಸೊ)’ ಅಡಿ ನೀಡಲಾಗುವ ಶಿಕ್ಷೆಯನ್ನೇ ಮೌಖಿಕ ಸಂಭೋಗದಂತಹ ಲೈಂಗಿಕ ದೌರ್ಜನ್ಯಕ್ಕೆ ನೀಡಲು ಸಾಧ್ಯವಿಲ್ಲ’ ಎಂದು ಅಲಹಾಬಾದ್ ಹೈಕೋರ್ಟ್ ಹೇಳಿದೆ.

2016ರಲ್ಲಿ ಈ ಕೃತ್ಯ ನಡೆದಿದ್ದು, ಸೋನು ಕುಶ್ವಾಹಾ ಎಂಬಾತ ತನ್ನ ಪಕ್ಕದ ಮನೆಯ 10 ವರ್ಷದ ಬಾಲಕನಿಗೆ ₹20 ನೀಡಿ, ಆತನ ಮೇಲೆ ದೇವಸ್ಥಾನದಲ್ಲಿ ದೌರ್ಜನ್ಯ ಎಸಗಿದ್ದ. ₹20 ಹೇಗೆ ಬಂತು ಎಂದು ಪೋಷಕರು ಪ್ರಶ್ನಿಸಿದಾಗ, ನಡೆದ ಘಟನೆಯನ್ನು ಬಾಲಕ ವಿವರಿಸಿದ್ದ.

ಈ ಸಂಬಂಧ ಬಾಲಕನ ಪೋಷಕರು ನೀಡಿದ್ದ ದೂರಿನ ಅನ್ವಯ, ಪ್ರಕರಣ ದಾಖಲಾಗಿತ್ತು. ಆರೋಪ ಸಾಬೀತಾದ ಕಾರಣ ಝಾನ್ಸಿ ಜಿಲ್ಲಾ ನ್ಯಾಯಾಲಯವು ಸೋನುಗೆ 10 ವರ್ಷಗಳ ಜೈಲುಶಿಕ್ಷೆ ವಿಧಿಸಿತ್ತು.

ಝಾನ್ಸಿ ನ್ಯಾಯಾಲಯವು ನೀಡಿದ್ದ ಶಿಕ್ಷೆಯ ವಿರುದ್ಧ ಸೋನು ಅಲಹಾಬಾದ್ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದ. ಶಿಕ್ಷೆಯನ್ನು ರದ್ದುಗೊಳಿಸಿ ಎಂದು ಕೋರಿದ್ದ. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನಿಲ್ ಕುಮಾರ್ ಓಜಾ ಅವರಿದ್ದ ಏಕಸದಸ್ಯ ಪೀಠವು, ಶಿಕ್ಷೆಯ ಪ್ರಮಾಣವನ್ನು ಕಡಿತ ಮಾಡಿದೆ.

‘ಪೋಕ್ಸೊ ಕಾಯ್ದೆಯ ಸೆಕ್ಷನ್ 5 ಮತ್ತು 6ರಲ್ಲಿ ತೀವ್ರ ಲೈಂಗಿಕ ದೌರ್ಜನ್ಯ ಎಂದರೆ ಏನು ಎಂಬುದನ್ನು ಮತ್ತು ಅದಕ್ಕೆ ವಿಧಿಸಬಹುದಾದ ಶಿಕ್ಷೆಯನ್ನು ವಿವರಿಸಲಾಗಿದೆ. ಈ ಪ್ರಕರಣದ ತಪ್ಪಿತಸ್ಥ ಸೋನು, ಮಗುವಿನೊಂದಿಗೆ ಮೌಖಿಕ ಸಂಭೋಗ ನಡೆಸಿದ್ದಾನೆ. ಈ ಕೃತ್ಯವು, ಪೋಕ್ಸೊ ಕಾಯ್ದೆಯ 5 ಮತ್ತು 6ನೇ ಸೆಕ್ಷನ್ ಅಡಿ ತೀವ್ರ ಲೈಂಗಿಕ ದೌರ್ಜನ್ಯ ಎನಿಸಿಕೊಳ್ಳುವುದಿಲ್ಲ. ಈ ಕೃತ್ಯವು ಪೋಕ್ಸೊ ಕಾಯ್ದೆಯ 4ನೇ ಸೆಕ್ಷನ್ ಅಡಿ ಬರುತ್ತದೆ’ ಎಂದು ಪೀಠವು ವಿವರಿಸಿದೆ.

ಪೋಕ್ಸೊ ಕಾಯ್ದೆಯ 5 ಮತ್ತು 6ನೇ ಸೆಕ್ಷನ್ ಅಡಿ ವಿವರಿಸಲಾದ ತೀವ್ರ ಲೈಂಗಿಕ ದೌರ್ಜನ್ಯಕ್ಕೆ ಕಠಿಣ ಶಿಕ್ಷೆ ನೀಡಬೇಕು. ತಪ್ಪಿತಸ್ಥನಿಗೆ 10 ವರ್ಷಕ್ಕಿಂತ ಕಮ್ಮಿ ಇಲ್ಲದಂತೆ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಬೇಕು. ಕಾರಾಗೃಹ ಶಿಕ್ಷೆಯನ್ನು ಜೀವಾವಧಿ ಶಿಕ್ಷೆಯನ್ನಾಗಿಯೂ ಮಾರ್ಪಡಿಸಬಹುದು. ಜತೆಗೆ ದಂಡವನ್ನೂ ವಿಧಿಸಬಹುದು. ಮರಣ ದಂಡನೆ ವಿಧಿಸಲೂ ಈ ಸೆಕ್ಷನ್‌ಗಳು ಅವಕಾಶ ಮಾಡಿಕೊಡುತ್ತವೆ. ಸೆಕ್ಷನ್ 4ರ ಅಡಿ ವಿವರಿಸಲಾದ ಲೈಂಗಿಕ ದೌರ್ಜನ್ಯಗಳಿಗೆ ಶಿಕ್ಷೆಯ ಪ್ರಮಾಣ ಕಡಿಮೆ ಇದೆ.

ಈ ಪ್ರಕರಣದಲ್ಲಿ ಸೋನುಗೆ ವಿಧಿಸಲಾಗಿದ್ದ 10 ವರ್ಷಗಳ ಕಾರಾಗೃಹ ಶಿಕ್ಷೆಯನ್ನು ಅಲಹಾಬಾದ್ ಹೈಕೋರ್ಟ್ ಕಡಿಮೆ ಮಾಡಿದೆ ಮತ್ತು ₹5,000 ದಂಡ ವಿಧಿಸಿದೆ.

ಪೀಠ ಹೇಳಿದ್ದು

- ತೀವ್ರ ಲೈಂಗಿಕ ದೌರ್ಜನ್ಯ ಮತ್ತು ಮುಖಸಂಭೋಗಕ್ಕೆ ಒಂದೇ ಶಿಕ್ಷೆ ಇಲ್ಲ
- ಕಾಯ್ದೆಯ ಸೆಕ್ಷನ್ 5, 6ರಲ್ಲಿ ತೀವ್ರ ಲೈಂಗಿಕ ದೌರ್ಜನ್ಯವನ್ನು ವ್ಯಾಖ್ಯಾನಿಸಲಾಗಿದೆ
- ಕಾಯ್ದೆಯ ಸೆಕ್ಷನ್ 4ರಲ್ಲಿ ಮುಖಸಂಭೋಗದಂತಹ ಕೃತ್ಯ ವ್ಯಾಖ್ಯಾನಿಸಲಾಗಿದೆ

ನಿರ್ಧಾರ ಕೈಗೊಳ್ಳದ ಕೇಂದ್ರ ಸರ್ಕಾರ

ಕಳೆದ ವರ್ಷದ ಜನವರಿಯಲ್ಲಿ ಜಗಮೋಹನ್ ರೆಡ್ಡಿ ನೇತೃತ್ವದ ಸರ್ಕಾರವು ಸಂವಿಧಾನದ ವಿಧಿ 169 (1) ಅನ್ವಯ ಮೇಲ್ಮನೆಯ ರದ್ದತಿಗೆ ನಿರ್ಣಯ ಅಂಗೀಕರಿಸಿತ್ತು.

ಆಂಧ್ರಪ್ರದೇಶ: ಮೇಲ್ಮನೆ ಅಸ್ತಿತ್ವ ಅಬಾಧಿತ

ಅಮರಾವತಿ (ಪಿಟಿಐ): ಆಂಧ್ರಪ್ರದೇಶದಲ್ಲಿ ವಿಧಾನ ಪರಿಷತ್ ಅನ್ನು ಈಗಿರುವಂತೆಯೇ ಮುಂದುವರಿಸಲು ನಿರ್ಧರಿಸಲಾಗಿದೆ. ರಾಜ್ಯ ವಿಧಾನಸಭೆಯು ಮಂಗಳವಾರ ಈ ಕುರಿತು ನಿರ್ಣಯ ಅಂಗೀಕರಿಸಿದೆ.


ಜಗನ್ ಮೋಹನ್ ರೆಡ್ಡಿ

‘ವಿಧಾನಪರಿಷತ್ ರದ್ದುಗೊಳಿಸಲು ಹಿಂದೆ ನಿರ್ಣಯ ಅಂಗೀಕರಿಸಿ, ಕೇಂದ್ರದ ಅನುಮೋದನೆಗೆ ಕಳುಹಿಸಲಾಗಿತ್ತು. ಆದರೆ ಈ ಬಗ್ಗೆ ಕೇಂದ್ರ ಸರ್ಕಾರ ಯಾವುದೇ ನಿರ್ಧಾರವನ್ನು ತೆಗೆದುಕೊಂಡಿಲ್ಲ’ ಎಂದು ಆಂಧ್ರಪ್ರದೇಶ ಸರ್ಕಾರ ಆರೋಪಿಸಿತು.

ಮೇಲ್ಮನೆಯ ಅಸ್ತಿತ್ವವನ್ನು ಮುಂದುವರಿಸುವ ಕುರಿತಂತೆ ಸಂಸದೀಯ ವ್ಯವಹಾರಗಳ ಸಚಿವ ಬುಗ್ಗಣ ರಾಜೇಂದ್ರನಾಥ್ ಅವರು ಮಂಡಿಸಿದ್ದ ನಿರ್ಣಯವನ್ನು ಸದನವು ಧ್ವನಿಮತದಿಂದ ಅಂಗೀಕರಿಸಿತು.

ಕಳೆದ ವರ್ಷದ ಜನವರಿಯಲ್ಲಿ ಮೇಲ್ಮನೆಯ ರದ್ದತಿಗೆ ನಿರ್ಣಯ ಅಂಗೀಕರಿಸಿತ್ತು. ಆಗ ‘ಇದು, ಬೊಕ್ಕಸಕ್ಕೆ ಹೊರೆಯಾಗಿದೆ’ ಎಂದು ಸರ್ಕಾರ ಕಾರಣ ನೀಡಿತ್ತು.

‘ನಿರಂತರವಾಗಿ ವಿವಿಧ ಹಂತಗಳಲ್ಲಿ ಒತ್ತಡ ಹೇರಿದ ನಂತರವೂ ಹಿಂದಿನ ನಿರ್ಣಯ ಕುರಿತಂತೆ ಕೇಂದ್ರ ಸರ್ಕಾರ ನಿರ್ಧಾರ ಕೈಗೊಂಡಿಲ್ಲ. ಈ ಮಧ್ಯೆ, ಸದಸ್ಯರಲ್ಲಿ ತಮ್ಮ ಅಧಿಕಾರಾವಧಿ ಕುರಿತು ಗೊಂದಲ ಇತ್ತು. ಇದನ್ನು ಬಗೆಹರಿಸಲು ಈಗ ಮೇಲ್ಮನೆಯ ಅಸ್ತಿತ್ವ ಮುಂದುವರಿಸಲು ನಿರ್ಣಯ ಅಂಗೀಕರಿಸಲಾಗಿದೆ’ ಎಂದು ರಾಜೇಂದ್ರನಾಥ್ ವಿವರಿಸಿದರು.

ಸಮಿತಿ ಸದಸ್ಯ ಘನವಟ್‌ರಿಂದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ಪತ್ರ

ಕೃಷಿ ಕಾಯ್ದೆ: ತಜ್ಞರ ವರದಿ ಬಹಿರಂಗಕ್ಕೆ ಆಗ್ರಹ

ನವದೆಹಲಿ (ಪಿಟಿಐ): ಮೂರು ಕೃಷಿ ಕಾಯ್ದೆಗಳ ಬಗ್ಗೆ ಸಲ್ಲಿಸಲಾದ ವರದಿಯನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕು ಇಲ್ಲವೇ ವರದಿ ಬಹಿರಂಗಗೊಳಿಸಲು ಸಮಿತಿಗೆ ಅನುಮತಿ ನೀಡಬೇಕು ಎಂದು ಆಗ್ರಹಿಸಿ, ಕೃಷಿ ಕಾಯ್ದೆಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೇಮಿಸಿದ್ದ ಸಮಿತಿಯ ಸದಸ್ಯ ಅನಿಲ್ ಘನವಟ್ ಅವರು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ಮಂಗಳವಾರ ಪತ್ರ ಬರೆದಿದ್ದಾರೆ.

‘ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಈ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವುದಾಗಿ ಸರ್ಕಾರ ಪ್ರಕಟಿಸಿದ ನಂತರ, ಸಮಿತಿ ನೀಡಿರುವ ವರದಿಯು ಅಪ್ರಸ್ತುತ. ಆದರೆ, ಅದರ ಶಿಫಾರಸುಗಳು ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರಮುಖವಾಗಿವೆ’ ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಇನ್ನು ಮುಂದೆ ಆ ಮೂರು ಕಾನೂನುಗಳು ಇಲ್ಲವಾಗಬಹುದು. ಆದರೆ, ಅವುಗಳಲ್ಲಿ ಅಡಕವಾಗಿದ್ದ ‘ಸುಧಾರಣೆಯ ತುಡಿತ’ವನ್ನು ಅಲ್ಲಗಳೆಯುವಂತಿಲ್ಲ ಎಂದು ಘನವಟ್ ಹೇಳಿದ್ದಾರೆ.

ವರದಿ ಸಲ್ಲಿಕೆಯಾದ ಕೆಲ ದಿನಗಳಲ್ಲೇ ಸುಪ್ರೀಂ ಕೋರ್ಟ್ ಅದನ್ನು ಬಿಡುಗಡೆ ಮಾಡಿದ್ದರೆ, ಈ ಪರಿಸ್ಥಿತಿಯೇ ಬರುತ್ತಿರಲಿಲ್ಲ. ವರದಿ ಸಲ್ಲಿಕೆಯಾಗಿ ಎಂಟು ತಿಂಗಳ ಮೇಲಾಗಿದೆ. ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವ ನಿರ್ಧಾರವೂ ಆಗಿದೆ. ಈಗಲಾದರೂ ವರದಿಯ ಶಿಫಾರಸುಗಳು ಏನಿದ್ದವು ಎಂಬುದು ಸಾರ್ವಜನಿಕವಾಗಿ ಗೊತ್ತಾಗಬೇಕು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನಿನ ಖಾತರಿ ಹಾಗೂ ಎಲ್ಲ ಬಗೆಯ ಕೃಷಿ ಉತ್ಪನ್ನಗಳಿಗೂ ಎಂಎಸ್‌ಪಿ ಭರವಸೆ ನೀಡುವಂತೆ ಆಗ್ರಹಿಸಿ ಈಗಲೂ ಪ್ರತಿಭಟನೆ ನಡೆಸುತ್ತಿರುವ ರೈತರ ಬೇಡಿಕೆಗಳು ಈಡೇರಿಸಲು ಶಕ್ಯ ಆಗದೇ ಇರುವಂಥವು ಎಂದು ಹೇಳಿದರು.

ಹೊಸದಾಗಿ ಕೃಷಿ ಕಾನೂನು ರಚಿಸುವುದಕ್ಕಾಗಿ ಅಧಿಕೃತ ಸಮಿತಿಯನ್ನು ರಚನೆಯ ಬಗ್ಗೆಯೂ ಅವರು ಸಲಹೆ ನೀಡಿದ್ದಾರೆ.

‘ಸರ್ಕಾರದ ಈಗಿನ ಯೋಜನೆಗಳೊಂದಿಗೇ ಹೋಗಲಾಗದು. ಸುಧಾರಣೆಗಳು ಬೇಕೇ ಬೇಕು. ಅಂಥ ಸುಧಾರಣೆಗಳ ಬಗ್ಗೆಯೇ ವರದಿಯು ಸಲಹೆ ನೀಡಿತ್ತು. ಹೀಗಾಗಿ, ಎಂಎಸ್‌ಪಿ ಹಾಗೂ ಇತರ ವಿಷಯಗಳ ಬಗ್ಗೆ ಅಧ್ಯಯನ ನಡೆಸುವ ಹೊಸ ಸಮಿತಿಯು ಈ ವರದಿಯನ್ನು ಪರಿಗಣಿಸಬೇಕು’ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೂವರು ತಜ್ಞರ ಸಮಿತಿಯು, ಮಾರ್ಚ್ 19ರಂದು ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಿತ್ತು. ರೈತರ ಪ್ರತಿಭಟನೆಗೆ ಪರಿಹಾರ ಒದಗಿಸುವಲ್ಲಿ ಸಮಿತಿಯ ಶಿಫಾರಸುಗಳು ದಾರಿಯನ್ನು ತೋರಲಿದ್ದು, ವರದಿಯನ್ನು ಬಹಿರಂಗಪಡಿಸಬೇಕು ಎಂದು ಘನವಟ್ ಅವರು ಸೆ.1ರಂದು ಕೂಡ ಮನವಿ ಮಾಡಿದ್ದರು.

ಸೆಂಟ್ರಲ್ ವಿಸ್ತಾ: ಭೂ ಬಳಕೆ ಬದಲಾವಣೆ ಪ್ರಶ್ನಿಸಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ಸೆಂಟ್ರಲ್ ವಿಸ್ತಾ ಯೋಜನೆಯ ಭಾಗವಾಗಿ, ಇಲ್ಲಿನ ‘ಲ್ಯೂಟೆನ್ಸ್’ನಲ್ಲಿ, ಉಪ ರಾಷ್ಟ್ರಪತಿಯ ಅಧಿಕೃತ ನಿವಾಸ ನಿರ್ಮಾಣಕ್ಕಾಗಿ ಭೂ ಬಳಕೆ ಯೋಜನೆ ಬದಲಿಸಿದ್ದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು, ಸುಪ್ರೀಂ ಕೋರ್ಟ್ ಮಂಗಳವಾರ ವಜಾಗೊಳಿಸಿದೆ.

ಎಲ್ಲದರ ಬಗ್ಗೆಯೂ ಟೀಕಿಸಬಹುದು, ಆದರೆ, ಅದು ರಚನಾತ್ಮಕವಾಗಿರಬೇಕು ಎಂದ ಸುಪ್ರೀಂ ಕೋರ್ಟ್, ‘ಇದು ನೀತಿ ನಿರೂಪಣೆಗೆ ಸಂಬಂಧಿಸಿದ ವಿಷಯವಾಗಿದೆ. ಭೂಬಳಕೆಯಲ್ಲಿನ ಬದಲಾವಣೆ ಸಮರ್ಥಿಸಿ, ಅಧಿಕಾರಿಗಳು ಸಾಕಷ್ಟು ವಿವರಣೆ ನೀಡಿದ್ದಾರೆ. ಹೀಗಾಗಿ, ಮತ್ತೆ ಈ ವಿಷಯವಾಗಿ ಪರಿಶೀಲನೆಯ ಅಗತ್ಯ ಕಾಣುತ್ತಿಲ್ಲ. ಅರ್ಜಿಯನ್ನು ವಜಾ ಮಾಡುವ ಮೂಲಕ, ಈ ವಿವಾದವನ್ನು ಇಲ್ಲಿಗೆ ಕೊನೆಗೊಳಿಸುತ್ತೇವೆ’ ಎಂದು ನ್ಯಾಯಮೂರ್ತಿ ಎ.ಎಂ.ಖಾನ್ವಿಲ್ಕರ್ ನೇತೃತ್ವದ ನ್ಯಾಯಪೀಠ ಹೇಳಿತು.

ಸಾರ್ವಜನಿಕ ಮನರಂಜನೆಯ ಉದ್ದೇಶಕ್ಕೆ ಮೀಸಲಿಟ್ಟಿದ್ದ ಭೂಮಿಯನ್ನು, ನಿವಾಸ ನಿರ್ಮಾಣಕ್ಕಾಗಿ ಬಳಸಿಕೊಳ್ಳಲಾಗಿದೆ. ಇದು ಸಾರ್ವಜನಿಕ ಹಿತಕ್ಕೆ ವಿರುದ್ಧವಾಗಿದೆ. ಉಪ ರಾಷ್ಟ್ರಪತಿಗಳ ನಿವಾಸ ನಿರ್ಮಾಣಕ್ಕೆ ತಮ್ಮ ಆಕ್ಷೇಪ ಇಲ್ಲ; ಆದರೆ, ಆರು ಎಕರೆಯಷ್ಟು ಹಸಿರು ಪ್ರದೇಶವು ಅದಕ್ಕಾಗಿ ಬಳಕೆಯಾಗುತ್ತಿದೆ. ಮುಕ್ತ ಜಾಗ ಹಾಗೂ ಹಸಿರು ಪ್ರದೇಶದ ರಕ್ಷಣೆಯಷ್ಟೇ ತಮ್ಮ ಕಾಳಜಿ ಎಂದು ಅರ್ಜಿದಾರರ ಪರ ವಕೀಲರು ನ್ಯಾಯಾಲಯಕ್ಕೆ ತಿಳಿಸಿದರು.

‘ಉಪ ರಾಷ್ಟ್ರಪತಿಯ ನಿವಾಸವನ್ನು ಎಲ್ಲಿ ನಿರ್ಮಿಸಬೇಕು ಎಂಬುದನ್ನೂ ಇನ್ನು ಮೇಲೆ ಜನಸಾಮಾನ್ಯರನ್ನು ಕೇಳಬೇಕೇ’ ಎಂದು ನ್ಯಾಯಮೂರ್ತಿಗಳಾದ ದಿನೇಶ್ ಮಾಹೇಶ್ವರಿ ಮತ್ತು ಸಿ.ಟಿ. ರವಿಕುಮಾರ್ ಅವರೂ ಇದ್ದ ನ್ಯಾಯಪೀಠವು ಪ್ರಶ್ನಿಸಿತು.

ಇಲ್ಲಿ ಯಾರದೋ ಖಾಸಗಿ ಆಸ್ತಿಯನ್ನು ನಿರ್ಮಾಣ ಮಾಡುತ್ತಿಲ್ಲ. ಪ್ರಮಾಣಪತ್ರ ಪ್ರಕಾರ, ಇಲ್ಲಿ ನಿರ್ಮಾಣವಾಗುತ್ತಿರುವುದು ಉಪ ರಾಷ್ಟ್ರಪತಿಯ ನಿವಾಸ. ಅದನ್ನು ಬೇರೆ ಎಲ್ಲೋ ಹೇಗೆ ಸ್ಥಳಾಂತರಿಸಲಾಗುತ್ತದೆ ಎಂದು ಕೇಳಿದ ನ್ಯಾಯಪೀಠವು, ಯೋಜನೆ ರೂಪಿಸಿದವರು ಈ ಎಲ್ಲ ಅಂಶಗಳನ್ನೂ ಗಮನಿಸಿದ್ದಾರೆ ಎಂದು ಹೇಳಿತು.

ಆದರೆ, ಅದು ಯೋಜನೆಗೆ ಸಂಬಂಧಿಸಿದ ವಿಷಯ. ಅದಲ್ಲದೇ, ಅರ್ಜಿದಾರರು ಆರೋಪಿಸುವಂತೆ ಈಗ ಉಪ ರಾಷ್ಟ್ರಪತಿಯ ನಿವಾಸಕ್ಕೆ ಬಳಕೆಯಾಗುತ್ತಿರುವ ಪ್ರದೇಶವು ಮನರಂಜನಾ ಚಟುವಟಿಕೆಗೆ ಮೀಸಲಾಗಿದ್ದ ಮೈದಾನವೇ ಅಲ್ಲ. ಹಾಗೊಂದು ವೇಳೆ ಈ ಹಿಂದೆ ಅದಕ್ಕಾಗಿ ಬಳಕೆಯಾಗಿದ್ದರೂ ಸಮಗ್ರ ಅಭಿವೃದ್ಧಿ ಯೋಜನೆಗೆ ಅಗತ್ಯವಾದಲ್ಲಿ, ಸಂಬಂಧಪಟ್ಟ ಅಧಿಕಾರಿಗಳು ಬದಲಾವಣೆ ಮಾಡಬಾರದೇ ಎಂದೂ ನ್ಯಾಯಪೀಠ ಪ್ರಶ್ನಿಸಿತು.

190 ‘ಭಾರತ್ ಗೌರವ್’ ರೈಲು ಶೀಘ್ರ ಆರಂಭ

ನವದೆಹಲಿ (ಪಿಟಿಐ): ಪ್ರವಾಸೋದ್ಯಮ ಕ್ಷೇತ್ರವನ್ನು ದೃಷ್ಟಿಯಲ್ಲಿಟ್ಟುಕೊಂಡು ಸುಮಾರು 190 ‘ಭಾರತ್ ಗೌರವ್’ ರೈಲುಗಳನ್ನು ಆರಂಭಿಸಲಾಗುವುದು ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮಂಗಳವಾರ ತಿಳಿಸಿದ್ದಾರೆ.

ಖಾಸಗಿ ವಲಯ ಹಾಗೂ ಐಆರ್‌ಸಿಟಿಸಿ ಎರಡೂ ಈ ರೈಲುಗಳ ನಿರ್ವಹಣೆ ನಡೆಸಲಿದೆ. ವೇಳಾಪಟ್ಟಿ ಆಧಾರದಲ್ಲಿ ಈ ರೈಲುಗಳು ಸಂಚಾರ ನಡೆಸಲಿವೆ. ಈ ರೈಲುಗಳು ದೇಶದ ಸಂಸ್ಕೃತಿ, ಪರಂಪರೆಯನ್ನು ಬಿಂಬಿಸಲಿವೆ ಎಂದು ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದ್ದಾರೆ.

‘ಈ ರೈಲುಗಳ ಟಿಕೆಟ್ ದರಗಳನ್ನು ಪ್ರಾಯೋಗಿಕವಾಗಿ ಪ್ರವಾಸದ ಆಯೋಜಕರೇ ನಿರ್ಧರಿಸಲಿದ್ದಾರೆ’ ಎಂದು ಹೇಳಿದ್ದಾರೆ.



ಧಾರವಾಡದಲ್ಲಿ ನವ ಕರ್ನಾಟಕ ಚಲನಚಿತ್ರ ಅಕಾಡೆಮಿಯಿಂದ ಇತ್ತೀಚೆಗೆ ನಡೆದ ಕರ್ನಾಟಕ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಿಲಾಡಿಗಳು ಚಿತ್ರಕ್ಕೆ ‘ಮಕ್ಕಳ ಜಾಗೃತಿ ಚಿತ್ರ’ ಪುರಸ್ಕಾರ ನೀಡಲಾಯಿತು. ಮಾಲ್ಡೀವ್ಸ್ ಪ್ರತಿನಿಧಿ ಮೊಹಮದ್ ರಶೀದ್, ಚಿತ್ರದ ನಿರ್ದೇಶಕ ಬಿ.ಪಿ.ಹರಿಹರನ್, ಅಕಾಡೆಮಿ ಅಧ್ಯಕ್ಷ ಡಾ.ಎಂ.ಎ.ಮಮ್ಮಿಗಟ್ಟಿ ಇದ್ದಾರೆ

‘ಸುಪ್ರೀಂ’ಗೆ ಮಾಹಿತಿ ನೀಡಿದ ಜಾಕಿಯಾ ಜಾಫ್ರಿ

‘ಗುಜರಾತ್ ಹಿಂಸಾಚಾರ ಪೂರ್ವಯೋಜಿತ’

ನವದೆಹಲಿ (ಪಿಟಿಐ): ‘2002ರ ಗುಜರಾತ್ ಗಲಭೆಯಲ್ಲಿನ ಹಿಂಸಾಚಾರವು ಪೂರ್ವಯೋಜಿತ ಕೃತ್ಯವಾಗಿತ್ತು’ ಎಂದು ಗಲಭೆಯಲ್ಲಿ ಹತ್ಯೆಗೀಡಾದ ಕಾಂಗ್ರೆಸ್ ಮುಖಂಡ ಎಹ್ಸಾನ್ ಜಾಫ್ರಿ ಅವರ ಪತ್ನಿ ಜಾಕಿಯಾ ಜಾಫ್ರಿ ಮಂಗಳವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದ್ದಾರೆ.

ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ಅವರ ನೇತೃತ್ವದ ನ್ಯಾಯಮೂರ್ತಿಗಳಾದ ದಿನೇಶ್ ಮಹೇಶ್ವರಿ ಮತ್ತು ಸಿ.ಟಿ. ರವಿಕುಮಾರ್ ಅವರನ್ನೊಳಗೊಂಡ ನ್ಯಾಯಪೀಠದ ಮುಂದೆ ಜಾಕಿಯಾ ಜಾಫ್ರಿ ಪರ ವಾದ ಮಂಡಿಸಿದ ವಕೀಲ ಕಪಿಲ್ ಸಿಬಲ್ ಅವರು, ‘ಗಲಭೆಯ ಸಂದರ್ಭದಲ್ಲಿ ದೊಡ್ಡ ಪಿತೂರಿ ನಡೆಸಲಾಗಿದೆ. ಕಾನೂನಿನ ಗೌರವಕ್ಕೆ ಆಳವಾಗಿ ಘಾಸಿಗೊಳಿಸಿದ ಪ್ರಕರಣ ಇದಾಗಿದೆ’ ಎಂದು ಹೇಳಿದ್ದಾರೆ.



‘2002ರ ಗೋಧ್ರಾ ಘಟನೆ ಹಾಗೂ ನಂತರದ ಗಲಭೆಗಳು ಅಗಾಧ ಪ್ರಮಾಣದ ರಾಷ್ಟ್ರೀಯ ದುರಂತ. ಪುರುಷರು ಪ್ರಾಣಿಗಳಂತೆ ವರ್ತಿಸಿದಾಗ ಕಾನೂನಿನ ಗಾಂಭೀರ್ಯತೆಗೆ ಧಕ್ಕೆಯೊದಗುತ್ತದೆ. ಹಿಂಸಾಚಾರವು ನಿರ್ದಿಷ್ಟ ದಾಖಲೆಗಳಿಂದ ಪೂರ್ವಯೋಜಿತವಾಗಿತ್ತು’ ಎಂದ ಕಪಿಲ್ ಅವರು, ಜಾಕಿಯಾ ಅವರು ಆಧಾರರೂಪದಲ್ಲಿರಿಸಿರುವ ಸಾಮಗ್ರಿಗಳನ್ನು ದಾಖಲೆಗಳೆಂದು ಉಲ್ಲೇಖಿಸಿದರು.

‘ವಿಶೇಷ ತನಿಖಾ ತಂಡವು (ಎಸ್‌ಐಟಿ) ದಾಖಲೆಯಲ್ಲಿ ಲಭ್ಯವಿರುವ ಹಲವು ಅಂಶಗಳು ಮತ್ತು ವಸ್ತುಗಳನ್ನು ತನಿಖೆ ಮಾಡಿಲ್ಲ. ಅಲ್ಲದೆ, ವಿಚಾರಣಾ ನ್ಯಾಯಾಲಯವು ಅವುಗಳನ್ನು ಪರಿಶೀಲಿಸಿಲ್ಲ’ ಎಂದೂ ಕಪಿಲ್ ನ್ಯಾಯಪೀಠದ ಗಮನಕ್ಕೆ ತಂದರು.

ದಾಖಲೆಯಲ್ಲಿ ಲಭ್ಯವಿರುವ ಸಾಮಗ್ರಿಗಳನ್ನು ಉಲ್ಲೇಖಿಸಿದ ಅವರು, ‘ಪಿತೂರಿ ನಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಆದರೆ ಇದರಲ್ಲಿ ಎಲ್ಲರೂ ಷಾಮೀಲಾಗಿದ್ದಾರೆ ಎಂಬುದು ಎಲ್ಲ ಆಯಾಮಗಳಲ್ಲಿ ತನಿಖೆಯಾದರೆ ಮಾತ್ರ ತಿಳಿಯುತ್ತದೆ’ ಎಂದು ಹೇಳಿದರು.

ಕಪಿಲ್ ಸಿಬಲ್ ಅವರ ಅಹವಾಲು ಆಲಿಸಿದ ನ್ಯಾಯಪೀಠವು ಬುಧವಾರ ಎಸ್‌ಐಟಿ ಪರ ವಾದ ಮಂಡಿಸುತ್ತಿರುವ ಹಿರಿಯ ವಕೀಲ ಮುಕುಲ್ ರೋಹಟಗಿ ಅವರ ವಿಚಾರಣೆ ನಡೆಸುವುದಾಗಿ ತಿಳಿಸಿತು.

2002ರ ಫೆ. 28ರಂದು ಅಹಮದಾಬಾದ್‌ನ ಗುಲ್ಬರ್ಗ್ ಸೊಸೈಟಿಯಲ್ಲಿ ನಡೆದ ಹಿಂಸಾಚಾರದಲ್ಲಿ ಕಾಂಗ್ರೆಸ್ ಮುಖಂಡ ಎಹ್ಸಾನ್ ಜಾಫ್ರಿ ಅವರನ್ನು ಹತ್ಯೆ ಮಾಡಲಾಗಿತ್ತು.

ಸಂತೋಷ್ ಬಾಬುಗೆ ‘ಮಹಾವೀರ ಚಕ್ರ’

ನವದೆಹಲಿ (ಪಿಟಿಐ): ಚೀನಾ ವಿರುದ್ಧದ ಹೋರಾಟದಲ್ಲಿ ಹುತಾತ್ಮರಾಗಿದ್ದ ಕರ್ನಲ್ ಬಿಕ್ಕುಮಳ್ಳ ಸಂತೋಷ್ ಬಾಬು ಅವರಿಗೆ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಮಂಗಳವಾರ ಮಹಾವೀರ ಚಕ್ರ ಪ್ರಶಸ್ತಿಯನ್ನು ಮರಣೋತ್ತರವಾಗಿ ಪ್ರದಾನ ಮಾಡಿದರು.

ಸಂತೋಷ್ ಬಾಬು ಅವರು ಕಳೆದ ವರ್ಷ ಜೂನ್ 15 ರಂದು ಪೂರ್ವ ಲಡಾಖ್‌ನ ಗಾಲ್ವನ್ ಕಣಿವೆಯಲ್ಲಿ ಚೀನಾದ ದಾಳಿಯ ವಿರುದ್ಧದ ಹೋರಾಟದ ನೇತೃತ್ವ ವಹಿಸಿದ್ದ 16ನೇ ರೆಜಿಮೆಂಟ್‌ನ ಕಮಾಂಡಿಂಗ್ ಅಧಿಕಾರಿ ಆಗಿದ್ದರು.

ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ದೇಶದ ಉನ್ನತ ಸೇನಾಧಿಕಾರಿಗಳ ಉಪಸ್ಥಿತಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂತೋಷ್ ಬಾಬು ಅವರ ಪತ್ನಿ ಬಿ.ಸಂತೋಷಿ ಮತ್ತು ತಾಯಿ ಮಂಜುಳಾ ಅವರು ಪ್ರಶಸ್ತಿಯನ್ನು ಸ್ವೀಕರಿಸಿದರು.

ಪರಮವೀರ ಚಕ್ರದ ನಂತರ ಮಹಾವೀರ ಚಕ್ರವು ಎರಡನೇ ಅತ್ಯುನ್ನತ ಶೌರ್ಯ ಪ್ರಶಸ್ತಿಯಾಗಿದೆ.

ಗಾಲ್ವನ್ ಕಣಿವೆಯಲ್ಲಿ ಚೀನಾ ಪಡೆಗಳ ವಿರುದ್ಧ ಯುದ್ಧದಲ್ಲಿ ಹುತಾತ್ಮರಾದ ನೈಯಿಬ್ ಸುಬೇದಾರ್ ನುದುರಾಮ್ ಸೊರೆನ್, ಹವಿಲ್ದಾರ್ (ಗನ್ನರ್) ಕೆ.ಪಳನಿ, ನಾಯಕ್ ದೀಪಕ್ ಸಿಂಗ್ ಮತ್ತು ಸಿಪಾಯಿ ಗುರ್ತೇಜ್ ಸಿಂಗ್ ಅವರಿಗೆ ಮರಣೋತ್ತರವಾಗಿ ವೀರಚಕ್ರ ಪ್ರಶಸ್ತಿ ಪ್ರದಾನ ಮಾಡಲಾಯಿತು.


ಹುತಾತ್ಮ ಸಂತೋಷ್ ಬಾಬು ಅವರಿಗೆ ಮರಣೋತ್ತರವಾಗಿ ನೀಡಿದ ಮಹಾವೀರ ಚಕ್ರ ಪ್ರಶಸ್ತಿಯನ್ನು ಸಂತೋಷ್ ಅವರ ಪತ್ನಿ ಬಿ. ಸಂತೋಷಿ, ತಾಯಿ ಮಂಜುಳಾ ಮಂಗಳವಾರ ನವದೆಹಲಿಯಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಂದ ಸ್ವೀಕರಿಸಿದರು —ಪಿಟಿಐ ಚಿತ್ರ

ಸುದ್ದಿ 2 ನಿಮಿಷ

ಮುಂಬೈ: ಬಾಲಿವುಡ್ ನಟಿ ಕಂಗನಾ ರನೌತ್ ವಿರುದ್ಧ ಎಫ್‌ಐಆರ್ ದಾಖಲು

ಮುಂಬೈ (ಪಿಟಿಐ): ಸಾಮಾಜಿಕ ಜಾಲತಾಣದಲ್ಲಿ ಸಿಖ್ ಸಮುದಾಯದ ವಿರುದ್ಧ ಅವಹೇಳನಕಾರಿ ಭಾಷೆ ಬಳಸಿದ ಆರೋಪದಡಿ ಬಾಲಿವುಡ್ ನಟಿ ಕಂಗನಾ ರನೌತ್ ವಿರುದ್ಧ ಮುಂಬೈನಲ್ಲಿ ಮಂಗಳವಾರ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ದೆಹಲಿ ಸಿಖ್ ಗುರುದ್ವಾರ ಮ್ಯಾನೇಜ್‌ಮೆಂಟ್ ಕಮಿಟಿಯು (ಡಿಎಸ್‌ಜಿಎಂಸಿ) ಖಾರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿತ್ತು. ಈ ಸಂಬಂಧ ಕಂಗನಾ ವಿರುದ್ಧ ಐಪಿಸಿ ಸೆಕ್ಷನ್ 295ಎ ಅಡಿ ಪ್ರಕರಣ ದಾಖಲಿಸಲಾಗಿದೆ’ ಎಂದು ಅವರು ಮಾಹಿತಿ ನೀಡಿದರು.

ಡಿಎಸ್‌ಜಿಎಂಸಿಯ ಸದಸ್ಯನಾಗಿರುವ ಮುಂಬೈ ಮೂಲದ ಉದ್ಯಮಿ ಅಮರ್‌ಜೀತ್ ಸಿಂಗ್ ಸಂಧು, ಕಂಗನಾ ವಿರುದ್ಧ ಸೋಮವಾರ ದೂರು ದಾಖಲಿಸಿದ್ದರು. ಈ ಬಳಿಕ ಮಹಾರಾಷ್ಟ್ರದ ಗೃಹ ಸಚಿವ ದಿಲೀಪ್ ವಾಲ್ಸೆ ಪಾಟೀಲ್ ಹಾಗೂ ಮುಂಬೈ ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳನ್ನು ಭೇಟಿಯಾದ ಶಿರೋಮಣಿ ಅಕಾಲಿದಳದ ನಾಯಕ ಮತ್ತು ಡಿಎಸ್‌ಜಿಎಂಸಿ ಅಧ್ಯಕ್ಷ ಮನ್‌ಜಿಂದರ್ ಸಿಂಗ್ ಸಿರ್ಸಾ ನೇತೃತ್ವದ ನಿಯೋಗವು ಕಂಗನಾ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿತು.



ಕಂಗನಾ ಅವರು ರೈತರ ಪ್ರತಿಭಟನೆಯನ್ನು ಉದ್ದೇಶಪೂರ್ವಕವಾಗಿ ಖಾಲಿಸ್ತಾನಿ ಆಂದೋಲನಕ್ಕೆ ಹೋಲಿಸಿದ್ದಾರೆ ಹಾಗೂ ಸಿಖ್ ಸಮುದಾಯವನ್ನು ಖಾಲಿಸ್ತಾನಿ ಉಗ್ರರು ಎಂದು ಬಿಂಬಿಸಿದ್ದಾರೆ. ಅಲ್ಲದೇ, 1984ರ ಸಿಖ್ ವಿರೋಧಿ ದಂಗೆಯನ್ನೂ ಅವರು ಉಲ್ಲೇಖಿಸಿದ್ದಾರೆ. ಇನ್‌ಸ್ಟಾಗ್ರಾಮ್ ಪೋಸ್ಟ್‌ನಲ್ಲಿ ಸಿಖ್ ಸಮುದಾಯದ ವಿರುದ್ಧ ಅವಹೇಳನಕಾರಿ ಭಾಷೆ ಬಳಸಿದ್ದಾರೆ. ಈ ಮೂಲಕ ಸಮುದಾಯದ ಭಾವನೆಗೆ ಧಕ್ಕೆಯನ್ನುಂಟು ಮಾಡಿದ್ದಾರೆ ಎಂದು ದೂರಿನಲ್ಲಿ ಹೇಳಲಾಗಿದೆ.

ಮೇವು ಹಗರಣ: ಸಿಬಿಐ ನ್ಯಾಯಾಲಯಕ್ಕೆ ಹಾಜರಾದ ಲಾಲು

ಪಟ್ನಾ (ಪಿಟಿಐ): ಮೇವು ಹಗರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಜನತಾದಳದ ಅಧ್ಯಕ್ಷ ಲಾಲು ಪ್ರಸಾದ್ ಅವರು ಇಲ್ಲಿನ ಸಿಬಿಐ ವಿಶೇಷ ನ್ಯಾಯಾಲಯಕ್ಕೆ ಮಂಗಳವಾರ ಹಾಜರಾದರು.

ಲಾಲು ಅವರು ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ಕಳೆದ ವಾರ ಆದೇಶ ನೀಡಿದ್ದ ನ್ಯಾಯಾಧೀಶ ಪ್ರಜೇಶ್ ಕುಮಾರ್ ಅವರು ಮುಂದಿನ ವಿಚಾರಣೆಯನ್ನು ಇದೇ 30ಕ್ಕೆ ನಿಗದಿಪಡಿಸಿದ್ದರು. ಮುಂದಿನ ವಿಚಾರಣೆಯಲ್ಲಿ ನ್ಯಾಯಾಲಯವು ಸುಮಾರು 200 ಸಾಕ್ಷಿಗಳ ವಿಚಾರಣೆ ನಡೆಸಲಿದೆ. ಆಗ ಲಾಲು ಅವರು ಹಾಜರಾಗಬೇಕಾಗಿಲ್ಲ. ಆದರೆ ನ್ಯಾಯಾಲಯ ಹೇಳಿದಾಗ ಅವರು ಹಾಜರಾಗುತ್ತಾರೆ ಎಂದು ಲಾಲು ಪ್ರಸಾದ್ ಪರ ವಕೀಲ ಸುಧೀರ್ ಸಿನ್ಹಾ ವರದಿಗಾರರಿಗೆ ತಿಳಿಸಿದರು.

ಬಂಕಾ ಜಿಲ್ಲೆಯ ಖಜಾನೆಯಿಂದ ಸುಮಾರು ₹ 1 ಕೋಟಿ ಅಕ್ರಮವಾಗಿ ಪಡೆದ ಆರೋಪದ ಮೇಲೆ ಲಾಲು ಅವರಿಗೆ ಸಮನ್ಸ್ ನೀಡಲಾಗಿತ್ತು.

ಕ್ರಿಪ್ಟೋ ಕರೆನ್ಸಿ ನಿಷೇಧ: ಸಂಸತ್ ಅಧಿವೇಶನದಲ್ಲಿ ಮಸೂದೆ ಮಂಡನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಈ ಬಾರಿಯ ಚಳಿಗಾಲದ ಅಧಿವೇಶನದಲ್ಲಿ ಕೇಂದ್ರ ಸರ್ಕಾರವು 29 ಮಸೂದೆಗಳನ್ನು ಮಂಡಿಸುತ್ತಿದ್ದು, ಅದರಲ್ಲಿ ಖಾಸಗಿ ಕ್ರಿಪ್ಟೋಕರೆನ್ಸಿಗಳನ್ನು ನಿಷೇಧಿಸುವ ಮಸೂದೆಯೂ ಸೇರಿದೆ.

ಆರ್‌ಬಿಐನಿಂದ ಅಧಿಕೃತ ಡಿಜಿಟಲ್ ಕರೆನ್ಸಿ ಬಿಡುಗಡೆ ಮಾಡುವ ಮೂಲಕ ಭಾರತದಲ್ಲಿನ ಕೆಲವು ಖಾಸಗಿ ಕ್ರಿಪ್ಟೋಕರೆನ್ಸಿಗಳನ್ನು ನಿಷೇಧಿಸುವ ‘ಕ್ರಿಪ್ಟೋ ಕರೆನ್ಸಿ ಮತ್ತು ಅಧಿಕೃತ ಡಿಜಿಟಲ್ ಕರೆನ್ಸಿ ನಿಯಂತ್ರಣ ಮಸೂದೆ 2021’ಅನ್ನು ಸಂಸತ್ತಿನ ಅಧಿವೇಶನದಲ್ಲಿ ಮಂಡಿಸಲು ತಾತ್ಕಾಲಿಕ ಪಟ್ಟಿಯಲ್ಲಿ ಸೇರಿಸಲಾಗಿದೆ.

ಕ್ರಿಪ್ಟೋ ಕರೆನ್ಸಿ, ನಿಯಂತ್ರಣ, ಕೃಷಿ ಕಾಯ್ದೆಗಳನ್ನು ಹಿಂಪಡೆಯುವ ಮಸೂದೆ ಮತ್ತು ಸಿಬಿಐ ಹಾಗೂ ಜಾರಿ ನಿರ್ದೇಶನಾಲಯದ ನಿರ್ದೇಶಕರ ಅಧಿಕಾರಾವಧಿ ವಿಸ್ತರಣೆ ಕುರಿತ ಮಸೂದೆಗಳು ಕೇಂದ್ರ ಸರ್ಕಾರವು ಅಧಿವೇಶನದಲ್ಲಿ ಮಂಡಿಸಲು ಉದ್ದೇಶಿಸಿರುವ ಮಸೂದೆಗಳ ಪಟ್ಟಿಯಲ್ಲಿ ಸೇರಿವೆ.

ಇದರಲ್ಲಿ 26 ಹೊಸ ಮಸೂದೆಗಳಾಗಿದ್ದು, ಪ್ರತಿಭಟನಾನಿರತ ರೈತರು ವಿರೋಧಿಸುತ್ತಿರುವ ವಿದ್ಯುತ್ ತಿದ್ದುಪಡಿ ಮಸೂದೆಯೂ ಸೇರಿದೆ.

ಮುಂದಿನ ಸೋಮವಾರದಿಂದ ಸಂಸತ್ತಿನ ಅಧಿವೇಶನ ಆರಂಭವಾಗುತ್ತಿದ್ದು, ಡಿಸೆಂಬರ್ 23ಕ್ಕೆ ಅಂತ್ಯವಾಗಲಿದೆ.

ಸಂಸತ್ತಿನಲ್ಲಿ ಮಂಡಿಸಲು ಉದ್ದೇಶಿಸಿರುವ ವಿದ್ಯುತ್ ತಿದ್ದುಪಡಿ ಮಸೂದೆ ಪ್ರಕಾರ ವಿದ್ಯುತ್ ಸರಬರಾಜನ್ನು ಸಂಪೂರ್ಣ ಖಾಸಗೀಕರಣಗೊಳಿಸುತ್ತದೆ ಎಂದು ಹೇಳಲಾಗುತ್ತಿದೆ. ಇದರಿಂದಾಗಿ ಪ್ರತಿಭಟನಾನಿರತ ರೈತರು ಮತ್ತಷ್ಟು ಕೆರಳುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.


ನವದೆಹಲಿಯಲ್ಲಿ ಮಂಗಳವಾರ ಟಿಎಂಸಿಗೆ ಸೇರ್ಪಡೆಯಾದ ಕಾಂಗ್ರೆಸ್ ಮುಖಂಡ ಕೀರ್ತಿ ಆಜಾದ್ ಅವರು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಕಾಲಿಗೆ ನಮಸ್ಕರಿಸಿದರು —ಪಿಟಿಐ ಚಿತ್ರ

ಕಾಂಗ್ರೆಸ್ ಮುಖಂಡ ಕೀರ್ತಿ ಆಜಾದ್ ಟಿಎಂಸಿಗೆ ಸೇರ್ಪಡೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ಮುಖಂಡ ಕೀರ್ತಿ ಆಜಾದ್ ಅವರು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸಮ್ಮುಖದಲ್ಲಿ ಮಂಗಳವಾರ ಇಲ್ಲಿ ತೃಣಮೂಲ ಕಾಂಗ್ರೆಸ್‌ಗೆ (ಟಿಎಂಸಿ) ಸೇರ್ಪಡೆಯಾದರು.


ಜೆಡಿಯು ಮಾಜಿ ಪ್ರಧಾನ ಕಾರ್ಯದರ್ಶಿ ಪವನ್ ವರ್ಮಾ, 2019ರಲ್ಲಿ ಕಾಂಗ್ರೆಸ್ ತೊರೆದಿದ್ದ ಅಶೋಕ್ ತನ್ವರ್ ಕೂಡ ಟಿಎಂಸಿಗೆ ಸೇರ್ಪಡೆಯಾಗಿದ್ದಾರೆ.


‘ಬಿಜೆಪಿಯ ವಿಭಜನೆಯ ರಾಜಕೀಯದ ವಿರುದ್ಧ ನಾವು ಹೋರಾಟ ಮಾಡಲಿದ್ದೇವೆ. ಇಂದು ದೇಶಕ್ಕೆ ಮಮತಾ ಅವರಂತಹ ನಾಯಕರ ಅಗತ್ಯವಿದೆ’ ಎಂದು ಆಜಾದ್ ಹೇಳಿದ್ದಾರೆ.

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಮಾಜಿ ಸಲಹೆಗಾರರಾದ ವರ್ಮಾ ಅವರನ್ನು 2020ರ ಜನವರಿಯಲ್ಲಿ ಜೆಡಿಯುನಿಂದ ವಜಾಗೊಳಿಲಾಗಿತ್ತು.

‘ಪ್ರಸ್ತುತ ರಾಜಕೀಯ ಸನ್ನಿವೇಶ ಮತ್ತು ಮಮತಾ ಅವರ ಸಾಮರ್ಥ್ಯವನ್ನು ಕಂಡು ಟಿಎಂಸಿಗೆ ಸೇರ್ಪಡೆಯಾಗಿದ್ದೇನೆ’ ಎಂದು ವರ್ಮಾ ತಿಳಿಸಿದ್ದಾರೆ.

ಅಶೋಕ್ ತನ್ವರ್ ಅವರು ಕಾಂಗ್ರೆಸ್‌ನ ಹರಿಯಾಣ ಘಟಕದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.







ಓದಲು ಪುಸ್ತಕವೇ ಬೇಕಿಲ್ಲ!

ಪ್ರಶಾಂತ್ ಭಟ್

ಆಧುನಿಕ ಜಗತ್ತಿನ ಕಿಷ್ಕಿಂಧೆಯಂತಹ ಅಪಾರ್ಟ್ಮೆಂಟ್ ನಿವಾಸಿಗಳಲ್ಲಿ ಓದಿನ ಆಸಕ್ತಿ ಇರುವವರಿಗೆ ಎದುರಾಗುವ ಬಹುದೊಡ್ಡ ಸಮಸ್ಯೆ ಎಂದರೆ ಓದಲು ಕೊಂಡ ಪುಸ್ತಕಗಳನ್ನು ಕಾಪಿಡುವಂತಹ ಸ್ಥಳಾವಕಾಶದ ಕೊರತೆ. ಇಂತಹ ತೊಂದರೆಗಳ ದೂರ ಮಾಡಲು ಕಳೆದೊಂದು ದಶಕದಿಂದ ಬಹುಜನಪ್ರಿಯವಾಗುತ್ತಿರುವುದು ಇ-ರೀಡರ್‌ಗಳು.

ಇ-ರೀಡರ್‌ಗಳು ಎಂದರೆ ಡಿಜಿಟಲ್ ಆಗಿ ನಿಮ್ಮ ಸ್ಪರ್ಶಪರದೆಯ ಮೇಲೆ ಪುಸ್ತಕಗಳಂತೆ ಓದಲು ಸಾಧ್ಯವಾಗುವ ಹಾಗೆ ಮಾಡುವ ಸಾಧನ. ಇದರ ಕುರಿತಾದ ಮೊಟ್ಟಮೊದಲ ಆಲೋಚನೆ 1930ರಲ್ಲಿ ಬಾಬಿ ಬ್ರೌನ್ ಬರೆದ ಒಂದು ಲೇಖನದಲ್ಲಿತ್ತು. 1994ರ ಸುಮಾರಿಗೆ ಬಂದ ಪಿಡಿಎಫ್ ಫೈಲ್‌ಗಳು, 1997ರ ಸ್ಥಾಪಿತವಾದ ಇ ಇಂಕ್ ಕಾರ್ಪೋರೇಷನ್ ಹಾಗೂ 1998ರ ಸುಮಾರಿಗೆ ಬಂದ ರಾಕೆಟ್ ಇ-ಬುಕ್ ರೀಡರ್ ಈ ದಿಶೆಯಲ್ಲಿ ಮಹತ್ವದ ಹೆಜ್ಜೆಗಳು. ಸೋನಿ ಕಂಪನಿ ಕೂಡ 2004ರಲ್ಲಿ ಸೋನಿ ಲಿಬ್ರೀ ಹಾಗೂ 2006ರಲ್ಲಿ ಸೋನಿ ರೀಡರ್ ಅನ್ನು ಹೊರತಂದು ಇ-ಬುಕ್ ಪ್ರಪಂಚಕ್ಕೆ ಕಾಲಿಟ್ಟಿತು.

ಆದರೆ ಈ ನಿಟ್ಟಿನಲ್ಲಿ ಕ್ರಾಂತಿಕಾರಕ ಬದಲಾವಣೆ ತಂದದ್ದು ಮಾತ್ರ ಅಮೆಜಾನ್. ಅದು 2007ರಲ್ಲಿ ಪರಿಚಯಿಸಿದ 'ಕಿಂಡಲ್' - ಇದು ಪುಸ್ತಕಗಳ ಓದುವ ಪರಿಭಾಷೆಯನ್ನೇ ಬದಲಾಯಿಸಿಬಿಟ್ಟಿತು.

ಇ-ಬುಕ್ ಎಂದರೇನು? ಸರಳವಾಗಿ ಹೇಳುವುದಾದರೆ ಇ-ಬುಕ್ ಅಥವಾ ಇಲೆಕ್ಟ್ರಾನಿಕ್ ಬುಕ್ ಒಂದು ಪುಸ್ತಕದ ಡಿಜಿಟಲ್ ಪ್ರತಿ. ಅದರಲ್ಲಿ ಇಡಿಯ ಪುಸ್ತಕವನ್ನು ಒಂದು ಪರದೆಯ ಮೂಲಕ ಓದಬಹುದಾದ ಅವಕಾಶ ಇರುತ್ತದೆ. ಇದು ಕೆಲವೇ ಮೆಗಾಬೈಟ್ (ಎಮ್‌ಬಿ) ಗಳನ್ನು ಹೊಂದಿರುತ್ತದೆ. ಇಲ್ಲಿ ಪುಸ್ತಕ ಹಾಳಾಗುವ ಭಯ ಇರುವುದಿಲ್ಲ. ಎಲ್ಲಿ ಯಾವಾಗ ಬೇಕಾದರೂ ಓದಬಹುದಾದ ಅವಕಾಶ, ಕಡಿಮೆ ಬೆಲೆ ಇವೆಲ್ಲ ಇ-ಬುಕ್‌ನ ಇತರ ಅಂಶಗಳು. ಇ-ಬುಕ್ ಅನ್ನು ಮೊಬೈಲ್, ಕಂಪ್ಯೂಟರ್ ಹಾಗೂ ಇನ್ನಿತರ ಪರದೆಗಳ ಮೇಲೆ ಓದಬಹುದಾಗಿದೆ.

ಪ್ರಮುಖ ಇ-ರೀಡರ್ ಕಂಪನಿಗಳು

- ಕಿಂಡಲ್ (ಅಮೆಜಾನ್)
- ಕೋಬೋ
- ಬಾರ್ನ್ಸ್ ಆ್ಯಂಡ್ ನೋಬಲ್
- ಪಾಕೆಟ್ ಬುಕ್
- ಬುಕೀನ್

ಇ-ಬುಕ್ ರೀಡರ್

ಧನಾತ್ಮಕ ಅಂಶಗಳು

- ಕಡಿಮೆ ಬೆಲೆಗೆ ಪುಸ್ತಕಗಳ ಡಿಜಿಟಲ್ ಆವೃತ್ತಿ
- ಸಂಗ್ರಹಸಾಮರ್ಥ್ಯ
- ಎಲ್ಲಿ ಬೇಕಾದರೂ ಕೊಂಡೊಯ್ದು ಓದಬಹುದಾದ ಅವಕಾಶ
- ರಾತ್ರಿ ಹಗಲೂ ಓದಬಹುದಾದ ಆಯ್ಕೆ
- ಒಂದು ಸಲ ಚಾರ್ಜ್ ಮಾಡಿದರೆ ತಿಂಗಳುಗಟ್ಟಲೆ ಬಳಸಬಹುದು

ನಕಾರಾತ್ಮಕ ಅಂಶಗಳು

- ಪುಸ್ತಕಗಳನ್ನು ಕೈಯಲ್ಲಿ ಹಿಡಿದು ಓದುವಂಥ ಅನುಭೂತಿಯ ಕೊರತೆ
- ಅತಿಯಾದ ಬೆಳಕಿನಿಂದ ಕಣ್ಣುಗಳಿಗೆ ತೊಂದರೆ
- ಬೇರೆ ಯಾವುದೇ ಕಾರ್ಯಗಳನ್ನು, ಉದಾಹರಣೆಗೆ ಫೋನ್‌ನಲ್ಲಿ ಮಾಡುವಂಥ ಕೆಲಸಗಳನ್ನು ಇದರಿಂದ ಮಾಡಲಾಗುವುದಿಲ್ಲ

> ಜಗತ್ತಿನಾದ್ಯಂತ ಹೆಚ್ಚಿನ ಜನರು ಬಳಸುವ ಹಾಗೂ ಬಹುಜನಪ್ರಿಯ ಇ-ಬುಕ್ ರೀಡರ್ ಎಂದರೆ ಕಿಂಡಲ್. ಭಾರತದ ಇತರ ಭಾಷೆಗಳ ಪುಸ್ತಕಗಳ ತನ್ನಲ್ಲಿ ಅಡಕಗೊಳಿಸಲು ಸರಿಯಾದ ಸಾಫ್ಟ್‌ವೇರ್ ಬೆಳೆಸಿದ ಅಮೆಜಾನ್ ಕಿಂಡಲ್ ಅದೇಕೋ ಕನ್ನಡದ ಬಗ್ಗೆ ಇನ್ನೂ ಒಲವು ತೋರಿಲ್ಲ.

ಜಗತ್ತಿನಾದ್ಯಂತ ಹೆಚ್ಚಿನ ಜನರು ಬಳಸುವ ಹಾಗೂ ಬಹುಜನಪ್ರಿಯ ಇ-ಬುಕ್ ರೀಡರ್ ಎಂದರೆ ಕಿಂಡಲ್. ಇದು ಐದು ಸಾವಿರ ರೂಪಾಯಿಗಳಿಂದ ಇಪ್ಪತ್ತೈದು ಸಾವಿರದವರೆಗಿನ ವಿವಿಧ ಆವೃತ್ತಿಗಳಲ್ಲಿ ಲಭ್ಯ. ನಾಲ್ಕು ಜಿಬಿಯಿಂದ ಹಿಡಿದು ಮೂವತ್ತೆರಡು ಜಿಬಿಯವರೆಗಿನ ಸಾಮರ್ಥ್ಯದ ಇವುಗಳಲ್ಲಿ ಸಾವಿರಾರು ಪುಸ್ತಕಗಳನ್ನು ಸಂಗ್ರಹಿಸಿಡಬಹುದು. ಇದರ ಪರದೆ ಆರರಿಂದ ಏಳು ಇಂಚು ದೊಡ್ಡದಾಗಿರುತ್ತದೆ. ಕಿಂಡಲ್ ಸ್ಟೋರ್‌ನಲ್ಲಿ ಬೇಕಾದ ಪುಸ್ತಕಗಳ ಆಯ್ಕೆ ಮಾಡಿ ಕೊಂಡರೆ ಆಟೋಮ್ಯಾಟಿಕ್ ಆಗಿ ಡೌನ್‌ಲೋಡ್ ಆಗುತ್ತವೆ. ಓದಿ ಡಿಲೀಟ್ ಮಾಡಿದರೂ ನಿಮ್ಮ ಅಕೌಂಟ್‌ನ ಕ್ಲೌಡ್‌ನಲ್ಲಿ ಆ ಪುಸ್ತಕ ಇರುವ ಕಾರಣ ಮತ್ತೆ ಬೇಕಾದಾಗ ಯಾವುದೇ ಖರ್ಚಿಲ್ಲದೆ ಅದನ್ನು ಇಳಿಸಿಕೊಳ್ಳಬಹುದು. ನಿಗದಿತ ಮೊತ್ತ ಪಾವತಿ ಮಾಡಿ, ಬೇಕಾದ ಪುಸ್ತಕ, ವಾರ್ತಾಪತ್ರಿಕೆಗಳಿಗೆ ಚಂದಾದಾರರಾಗುವ ಆಯ್ಕೆಗಳೂ ಇವೆ.

ಇತ್ತೀಚಿನ ಇ-ಬುಕ್ ರೀಡರ್‌ಗಳು ಲೈಟ್ ಆಯ್ಕೆ ಕೂಡ ಹೊಂದಿರುವ ಕಾರಣ ಅವುಗಳನ್ನು ಕತ್ತಲುಕೋಣೆಯಲ್ಲಿ ಕೂಡ, ಇತರರಿಗೆ ತೊಂದರೆ ಆಗದ ಹಾಗೆ ಓದುವ ಅವಕಾಶವನ್ನು ಒದಗಿಸುತ್ತದೆ. ಓದಲು ಸಮಸ್ಯೆ ಆಗುವವರಿಗೆ ಹಾಗೂ ಪುಸ್ತಕ ಹಿಡಿಯಲು ಸಮಯಾಭಾವ ಆಗುವವರಿಗೆ ಎಂದು ಇತ್ತೀಚೆಗೆ ಆಡಿಯೋ ಪುಸ್ತಕಗಳ ಸಂಖ್ಯೆಯೂ ಹೆಚ್ಚುತ್ತಿದೆ.

ಕನ್ನಡದಲ್ಲಿ ಇ-ಬುಕ್‌ಗಳು ಮಾರುಕಟ್ಟೆಗೆ ಬಂದದ್ದು ಇತ್ತೀಚೆಗಷ್ಟೆ. ಭಾರತದ ಇತರ ಭಾಷೆಗಳ ಪುಸ್ತಕಗಳ ತನ್ನಲ್ಲಿ ಅಡಕಗೊಳಿಸಲು ಸರಿಯಾದ ಸಾಫ್ಟ್‌ವೇರ್ ಬೆಳೆಸಿದ ಅಮೆಜಾನ್ ಕಿಂಡಲ್ ಅದೇಕೋ ಕನ್ನಡದ ಬಗ್ಗೆ ಇನ್ನೂ ಒಲವು ತೋರಿಲ್ಲ. ಆದರೆ ಕನ್ನಡದ ಹಲವಾರು ಸಂಸ್ಥೆಗಳ ಸ್ಥಾಪನೆ ಈ ಕೊರತೆಯನ್ನು ಹೋಗಲಾಡಿಸಿದೆ. ಮೈ ಲ್ಯಾಂಗ್, ಋತುಮಾನ, ಮನೋಹರ ಗ್ರಂಥಮಾಲೆ ಅವರ ವಿವಿಧ್ ಲಿಪಿ, ಅಕ್ಷರ ಪ್ರಕಾಶನ ಇವೆಲ್ಲ ತಮ್ಮ ತಮ್ಮ ಪ್ರಕಟಣೆಗಳ ಹಾಗೂ ಇತರ ಪುಸ್ತಕಗಳ ಇ-ಆವೃತ್ತಿ ಬಿಡುಗಡೆ ಮಾಡಿ ಕನ್ನಡದ ಓದುಗರಿಗೆ ಹೊಸ ಓದಿನ ಹಾದಿಯ ಹುಡುಕುವಲ್ಲಿ ಶ್ರಮಿಸುತ್ತಿವೆ. ಇವುಗಳ ಬೆಲೆಯೂ ಕಡಿಮೆ ಇರುವುದರಿಂದ ಓದುಗರ ಕಿಸೆಗೂ ಭಾರವಿಲ್ಲ. ಈ ಸಂಸ್ಥೆಗಳ ಆ್ಯಪ್ ಹಾಕಿಕೊಂಡು ಅದರ ಮೂಲಕ ಖರೀದಿ ನಡೆಸಿ ಓದುವ ಸೌಲಭ್ಯ ಕಲ್ಪಿಸಿಕೊಟ್ಟಿವೆ. ಇವುಗಳ ಬಹುಮುಖ್ಯ ಸಮಸ್ಯೆ ಎಂದರೆ ಇವುಗಳ ಮೊಬೈಲ್, ಕಂಪ್ಯೂಟರ್ ಮತ್ತು ಟ್ಯಾಬ್‌ಗಳಲ್ಲೇ ಓದಬೇಕಾದ ಕಾರಣ ಕಣ್ಣಿಗೆ ಹಾನಿಯಾಗುವ ಸಂಭಾವ್ಯತೆ. ಕಿಂಡಲ್ ತರಹದ ಓದಲೆಂದೇ ಇರುವ ಇ ರೀಡರ್‌ಗಳಲ್ಲಿ ಆ್ಯಂಟಿ ಗ್ಲೇರ್ ಪರದೆ ಇರುವ ಕಾರಣ ಅದು ಕಣ್ಣುಗಳಿಗೆ ಜಾಸ್ತಿ ಹಾನಿ ಉಂಟುಮಾಡುವುದಿಲ್ಲ.

ಜಗತ್ತು ಬೆಳೆಯುತ್ತಾ ಹೋದ ಹಾಗೆ ಹೊಸ ಹೊಸ ಆವಿಷ್ಕಾರಗಳಾಗುತ್ತಾ ಹೋದಂತೆ ಓದಿನ ಸಾಧ್ಯತೆಗಳು ಬದಲಾಗುತ್ತಿವೆ. ದಪ್ಪ ದಪ್ಪ ಪುಸ್ತಕಗಳ ಹಿಡಿದು ಬೆಳಕಿರುವ ಕಡೆ ಕಣ್ಣು ಕೀಲಿಸಿಕೊಂಡು ಓದಬೇಕಾದ ಪರಿಸ್ಥಿತಿಯಿಂದ ಆರಾಮಾಗಿ ಪ್ರಯಾಣ ಮಾಡುವಾಗ ಬೇಕಾದ ಕಡೆ ಮಲಗಿ ನಿಂತು ಸಣ್ಣ ಇ-ರೀಡರ್ ಕೈಲಿ ಹಿಡಿದು ಓದಬಹುದಾದವರೆಗಿನ ಸಾಧನೆ ಸಾಮಾನ್ಯದ್ದಲ್ಲ. ಈ ಕ್ಷೇತ್ರದಲ್ಲಿ ಇನ್ನೂ ಬಹಳಷ್ಟು ಬದಲಾವಣೆಗಳು ಬರಲಿಕ್ಕಿದೆ.

ಕನ್ನಡದ ಪುಸ್ತಕ ಓದಲೆಂದೇ ಒಂದು ಪ್ರತ್ಯೇಕ ಇ-ರೀಡರ್ ಬರಬಹುದಾದ ಓದುಗ ವರ್ಗ ಸೃಷ್ಟಿಯಾಗಲಿ ಎಂದು ಹಾರೈಸೋಣ. ❖

ವಾಟ್ಸ್‌ಆ್ಯಪ್ ಹಂಸೆಯೂ ಆಧುನಿಕ ನಳಮಹಾರಾಜನೂ

ಮಂಜುನಾಥ ಕೊಳ್ಳೇಗಾಲ

ಪೂರ್ವಕಾಲದಲ್ಲಿ ನಳಮಹಾರಾಜ ತನ್ನ ಪ್ರೇಯಸಿಯಾದ ದಮಯಂತಿಗೆ ಹಂಸದ ಮೂಲಕ ಪ್ರೇಮಸಂದೇಶ ಕಳಿಸಿದ್ದನಂತೆ. ಅದು ಮಾತಾಡುವ ಹಂಸ. ನಳನ ಮನದ ಭಾವನೆಗಳನ್ನು ತಕ್ಕ ರೀತಿಯಲ್ಲಿ (ಅಂದರೆ ಸ್ವಲ್ಪ ಮಸಾಲೆ ಸೇರಿಸಿ) ದಮಯಂತಿಗೆ ಅರಿಕೆ ಮಾಡಿತು. ಮತ್ತೆ ಅಲ್ಲಿಂದಿಲ್ಲಿಗೆ ಸಂದೇಶ ತಂದಿತು, ಪ್ರೇಮ ಮೊಳೆಯಿತು, ಬೆಳೆಯಿತು, ಫಲಿಸಿತು - ಮುಂದಿನದು ಬಿಡಿ ಸದ್ಯಕ್ಕೆ.

ಇರಲಿ, ಈಗಿನ ಟೆಕ್ ಯುಗಕ್ಕೆ ಹಂಸಸಂದೇಶದ ಕಥೆ ಪೂರ್ವಕಾಲದ್ದಲ್ಲ, ಪೂರ್ವಜನ್ಮದ್ದೇ ಆಯಿತು. ಹಂಸೆಯ ಕನ್ನಡರೂಪವೇ ಈಗಿನ 'ಅಂಚೆ'. ಅಂಚೆ (ಪೋಸ್ಟ್) ಯಾರಿಗೆ ಗೊತ್ತಿಲ್ಲ. ಅಂಚೆಯಣ್ಣ ಈಗಲೂ ಬರುತ್ತಾನೆ, ಆದರೆ ಆತ ಅಂಚೆಯಣ್ಣನಾಗಿ ಉಳಿದಿಲ್ಲ, ಕೇವಲ ಪೋಸ್ಟ್‌ಮ್ಯಾನ್ ಆಗಿದ್ದಾನೆ. ಆತ ತರುವ ಪತ್ರಗಳಲ್ಲಿ ಪ್ರೀತಿಪಾತ್ರರ ಪತ್ರಗಳು, ಪ್ರೇಮಪತ್ರಗಳಂತೂ ಇಲ್ಲವೇ ಇಲ್ಲವೆನ್ನಬಹುದೇನೋ - ಬರುವುದೆಲ್ಲ ಬಹುತೇಕ ಸರ್ಕಾರೀ ಸಂದೇಶಗಳು, ಕೋರ್ಟು ತಗಾದೆ ಪತ್ರಗಳು, ಕೆಲವು ಮ್ಯಾಗಜೀನು/ಜರ್ನಲುಗಳು.

ನಾವು ಕಳೆದ ದಶಕಗಳಂತೆ ಈಗ ಅಂಚೆಯಣ್ಣನಿಗಾಗಿ ಕಾಯುವುದಿಲ್ಲ. ಆ ಪತ್ರ ಬರೆಯುವ ಸಂಭ್ರಮ, ಬರೆದ ಮೇಲೆ ಕೊಂಡೊಯ್ದು 'ಸರಿಯಾದ' ಅಂಚೆ ಡಬ್ಬದಲ್ಲಿ ಹಾಕುವುದು. ಅಲ್ಲಿಂದ ಬರುವ ಉತ್ತರಕ್ಕಾಗಿ ಕಾಯುವುದು. - ಇವೆಲ್ಲ ಒಂದು ಅನುಭವವೇ. ಪತ್ರದ ಒಂದೊಂದು ಅಂಶವೂ - ಬರೆಯುವುದಕ್ಕೆ ಬಳಸಿದ ಹಾಳೆ, ಅದರ ಬಣ್ಣ, ಇಂಕು, ಹಸ್ತಾಕ್ಷರ, ಲಕೋಟೆ, ಕೆಲವೊಮ್ಮೆ ಅದಕ್ಕೆ ಸವರಿದ ಸುಗಂಧ (ಅಪರೂಪಕ್ಕೆ, ತುಟಿಯ ಮುದ್ರೆ) ಇವೆಲ್ಲ ಪತ್ರ ಬರೆದವರನ್ನೇ ಕಣ್ಣ ಮುಂದೆ ತರುತ್ತಿದ್ದುವು - ಅಯ್ಯೋ ಹೋಯಿತೆ ಆ ನಾಕ ಎಂದು ಉದ್ಗರಿಸುವ ಅಗತ್ಯವಿಲ್ಲ ಬಿಡಿ, ಕೊನೆಯ ಪಕ್ಷ ಆ ಕಾಯುವ 'ಥ್ರಿಲ್' ಆದರೂ ಈಗೇನು ಕಡಿಮೆಯಾಗಿಲ್ಲ, ಕಾಯುವ ಅವಧಿ ಮೊಟಕಾಗಿದೆಯಷ್ಟೇ.


ನೀವು ವಾಟ್ಸ್‌ಆ್ಯಪ್ ಮೆಸೇಜ್ ಕಳುಹಿಸಿದ್ದೀರಿ (ಕಾಗದಗಳ ಜಾಗೆಯನ್ನು ಈಮೈಲುಗಳು ಆಕ್ರಮಿಸಿಕೊಂಡು, ಅವೂ ಮೂಲೆಗೆ ಸರಿದು, ಎಸ್ಸೆಮ್ಮೆಸ್ ಆಯಿತು, ಹ್ಯಾಂಗೌಟ್ ಆಯಿತು, ಈಗ ವಾಟ್ಸ್‌ಆ್ಯಪ್). ನಿಮ್ಮ ಮೆಸೇಜ್ ಎರಡು ಗ್ರೇ ಟಿಕ್ ತೋರಿಸುತ್ತಿದೆ. ಇನ್ನೂ ಓದಿಲ್ಲ. ಈಗ ಓದಬಹುದು, ಇನ್ನೆರಡು ನಿಮಿಷಕ್ಕೆ - ಸರಿ ನಿಮಿಷ ಹತ್ತಾಯಿತು, ಇಪ್ಪತ್ತಾಯಿತು, ಒಂದು ಗಂಟೆಯಾಯಿತು - ಅರೇ! ಆನ್‌ಲೈನ್ ಇದ್ದಾಳ/ನಲ್ಲ ಆದರೂ ಏಕೆ ಓದಿಲ್ಲ. ಓದಿದರೆ ಗ್ರೀನ್ ಟಿಕ್ ಬೀಳುತ್ತೆ ಅಂತ ಗೊತ್ತು, ಅದಕ್ಕೇ ಓದಿಲ್ಲ. ಆತಂಕ ಬೇಡ. ನೀವು ಬಹಳ ಪ್ರೀತಿಪಾತ್ರರಿದ್ದು, ನಿಮ್ಮ ಸಂದೇಶವನ್ನು ನಿಧಾನವಾಗಿ ಓದಿ ಸವಿದು ವಿರಾಮದಲ್ಲಿ ಉತ್ತರಿಸುವ ಉದ್ದೇಶ ಅವರಿಗಿರಬಹುದು, ಸುಮ್ಮನೇ ಏಕೆ ಕೆಟ್ಟದ್ದನ್ನೇ ಯೋಚಿಸುತ್ತೀರಿ? ಅಗೋ ಅಗೋ, ಗ್ರೀನ್ ಟಿಕ್ ಬಿತ್ತು. ಓದಿದ್ದಾಳೆ/ನೆ. ಇನ್ನು ಉತ್ತರಕ್ಕಾಗಿ ಕಾಯುವ ಪರ್ವ - ಆಗ ಬಂದೀತು ಈಗ ಬಂದೀತು. ಒಂದು ಯುಗದನಂತರ (ಯುಗ ಎಂದರೆ ಸುಮಾರು ಹತ್ತು ನಿಮಿಷ) 'ಟೈಪಿಂಗ್...' ಎಂದು ತೋರಿಸಿತೆನ್ನಿ. ಉದ್ವೇಗ ರುಮ್ಮನೆ ಮೇಲೇರತೊಡಗುತ್ತದೆ. ಈ 'ಟೈಪಿಂಗ್...' ನಿಧಾನವಾದಷ್ಟೂ ಉದ್ವೇಗ ಹೆಚ್ಚು. ಸುಮಾರು 'ಯುಗ'ಗಳ ಕಾಲ ಕಾದ ಮೇಲೆ ಕೊನೆಗೂ ಸಂದೇಶ ಬಂದೇ ಬಿಟ್ಟಿತೆನ್ನಿ. ಅದು 'Hmm' ಎಂಬ ಮೂರಕ್ಷರದ ಉತ್ತರವಾಗಿದ್ದರಂತೂ ದೇವರೇ ಗತಿ.

ಅಂದಹಾಗೆ ಇನ್ನೊಂದು ಮಾತು - ಆ ಹಂಸಕ್ಕೆ ನಿಮ್ಮ ಸಂದೇಶದ ಹೂರಣದಲ್ಲಿ ಆಸಕ್ತಿಯಿರಲಿಲ್ಲ. ನಮ್ಮ ಅಂಚೆಯಣ್ಣನೂ ಈ ವಿಷಯದಲ್ಲಿ ಬಹುತೇಕ ನಿರಾಸಕ್ತ. 'ಓಲೆಯ ಕೊಡುವಧಿಕಾರಿಯು ನಾನು, ಆದರು ಅದರಲಿ ಬರೆದುದು ಏನು ಎಂಬುದನರಿಯೆನು ಬಲು ಸುಖಿ ನಾನು' ಎಂದು ಹಾಡುವ ಅಂಚೆಯಣ್ಣನ ಪರಿಚಯ ಎಂಬತ್ತರ ದಶಕದಲ್ಲಿ ಶಾಲೆ ಕಲಿತವರಿಗೆ ಇದ್ದೇ ಇರಬೇಕು. ಆದರೆ ಈ ವಾಟ್ಸ್‌ಆ್ಯಪ್ ಹಂಸೆ ಈ ವಿಷಯದಲ್ಲಿ ಅಷ್ಟು ನಿಸ್ಪೃಹವಲ್ಲ (ಬೆಳ್ಳಗಿರುವುದೆಲ್ಲ ಹಾಲೂ ಅಲ್ಲ ಹಂಸೆಯೂ ಅಲ್ಲ, ನೆನಪಿರಲಿ). ನೀವು ಯಾರ ಹತ್ತಿರ ಏನು ಹರಟುತ್ತಿದ್ದೀರಿ, ನಿಮ್ಮ ಆಸಕ್ತಿಗಳೇನು, ಎಲ್ಲಿ ಏನು ಕೊಳ್ಳಲು ಏನು ತಿನ್ನಲು ಪ್ಲಾನ್ ಮಾಡುತ್ತಿದ್ದೀರಿ ಎಲ್ಲವೂ ಈ ಹಂಸಕ್ಕೆ ಬೇಕು. ಆ ಮಾಹಿತಿಯನ್ನು ಜಾಹೀರಾತುದಾರರು ಬಳಸಿಕೊಳ್ಳುತ್ತಾರೋ ಕಳ್ಳರು ಬಳಸುತ್ತಾರೋ ಹೇಳಬರುವಂತಿಲ್ಲ. ಕೆಲವು ವಿ(ಶೇ)ಷ ಸಂದರ್ಭಗಳಲ್ಲಿ ಹಂಸವೇ ಕಾರ್ಕೋಟಕವಾಗಬಹುದು - ಅಚ್ಚರಿ ಬೇಡ, ಎಚ್ಚರವಿದ್ದರೆ ಸಾಕು. ❖

ಭೂಕುಸಿತದ ಮುನ್ಸೂಚನೆ

ಉದಯ ಶಂಕರ ಪುರಾಣಿಕ

ನಮ್ಮ ದೇಶದಲ್ಲಿ, ವಿಶೇಷವಾಗಿ ಮಳೆಗಾಲದಲ್ಲಿ ಉಂಟಾಗುವ ಭೂಕುಸಿತಗಳಿಂದಾಗಿ ಹೆದ್ದಾರಿಗಳು, ರೈಲುಮಾರ್ಗಗಳು ಮತ್ತು ಜನವಸತಿ ಪ್ರದೇಶಗಳಿಗೆ ತೀವ್ರ ಹಾನಿ, ಸಾವು ಮತ್ತು ನೋವುಂಟಾಗುವ ಪ್ರಕರಣಗಳು ವರದಿಯಾಗುತ್ತಿವೆ. ಉದಾಹರಣೆಗೆ ಕೊಡಗು, ಸಕಲೇಶಪುರ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಮೊದಲಾದ ಕಡೆ ಭೂಕುಸಿತ ಪ್ರಕರಣಗಳನ್ನು ಗಮನಿಸಬಹುದು. ಭೂಕುಸಿತದಿಂದಾಗುವ ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಅಪಾರ ಹಾನಿ, ಸಾವು-ನೋವುಗಳನ್ನು ನೋಡಿದಾಗ, ಇಂದಿನ ಅಧುನಿಕ ತಂತ್ರಜ್ಞಾನದ ಯುಗದಲ್ಲಿ ಭೂಕುಸಿತದ ಮುನ್ಸೂಚನೆಯನ್ನು ನೀಡಲು ಸಾಧ್ಯವಿಲ್ಲವೆ ಎನ್ನುವ ಪ್ರಶ್ನೆ ಎದುರಾಗುತ್ತದೆ.



'ಭೂಕುಸಿತ ಉಂಟಾಗುತ್ತದೆ' ಎನ್ನುವ ಮಾಹಿತಿಯನ್ನು ಎರಡು ವಾರ ಮುಂಚಿತವಾಗಿ ತಿಳಿಸಲು ಸಾಧ್ಯವಿದೆ ಎಂದು ಆಸ್ಟ್ರೇಲಿಯಾ ದೇಶದ ಖ್ಯಾತ ವಿಜ್ಞಾನಿಗಳಲ್ಲಿ ಒಬ್ಬರಾದ ಪ್ರೊ. ರಾಬಿನ್ ಬ್ಯಾಟರ್‌ಹ್ಯಾಮ್ ವಿಶ್ವಾಸ ವ್ಯಕ್ತಪಡಿಸುತ್ತಾರೆ. ಭೂಕುಸಿತವುಂಟಾಗುತ್ತದೆ ಎಂದು ಕೆಲವು ನಿಮಿಷಗಳು ಅಥವಾ ಹೆಚ್ಚೆಂದರೆ ಕೆಲವು ಗಂಟೆಗಳು ಮುಂಚಿತವಾಗಿ ಮುನ್ಸೂಚನೆ ದೊರೆಯುವುದು ಮಾತ್ರ ಸಾಧ್ಯ ಎನ್ನುವ ವಾದವನ್ನು ಅವರು ಒಪ್ಪುವುದಿಲ್ಲ. ಈಗ ಲಭ್ಯವಿರುವ ಅತ್ಯಾಧುನಿಕ ಕಂಪ್ಯೂಟರ್, ತಂತ್ರಾಂಶ, ನೆಟವರ್ಕ್ ಮತ್ತು ಅರ್ಟಿಫಿಶಿಯಲ್ ಇಂಟೆಲಿಜೆನ್ಸ್ ತಂತ್ರಜ್ಞಾನವನ್ನು ಬಳಸಿ, 15 ದಿನಗಳು ಮುಂಚಿತವಾಗಿ ಭೂಕುಸಿತವುಂಟಾಗುವ ಮುನ್ಸೂಚನೆಯನ್ನು ನೀಡಲು ಸಾಧ್ಯವಿದೆ ಎಂದು ಅವರು ವಿವರಿಸುತ್ತಾರೆ.

ಸಾಮಾನ್ಯವಾಗಿ ಭೂಕುಸಿತ ಏಕಾಏಕಿಯಾಗಿ ಆಗುವುದಿಲ್ಲ. ಅತ್ಯಂತ ಸ್ಥಿರವಾಗಿದೆ ಎಂದು ಕಂಡುಬರುವ ಪ್ರದೇಶವನ್ನು ಸೂಕ್ಷ್ಮವಾಗಿ ನೋಡಿದರೆ, ಕೆಲವು ಕಡೆಯಾದರೂ ಮಣ್ಣು ಮತ್ತು ಪುಟ್ಟ ಕಲ್ಲುಗಳು ಸ್ಥಾನಪಲ್ಲಟವಾಗುತ್ತಿರುವುದನ್ನು ಗುರುತಿಸಬಹುದು. ಕಿಲೋಮೀಟರ್‌ಗಳಷ್ಟು ವ್ಯಾಪ್ತಿಯ ಪ್ರದೇಶದಲ್ಲಿ ಕೆಲವೊಂದು ಕಡೆ ದಿನಕ್ಕೆ ಹೆಚ್ಚೆಂದರೆ ಕೆಲವು ಮಿಲಿಮೀಟರ್‌ನಷ್ಟು ಮಣ್ಣು ಮತ್ತು ಪುಟ್ಟ ಕಲ್ಲುಗಳು ಸ್ಥಾನಪಲ್ಲಟವಾಗುತ್ತಿರುವುದನ್ನು ಗುರುತಿಸಲು ತಜ್ಞರ ಸಹಾಯ ಅತ್ಯಗತ್ಯವಾಗುತ್ತದೆ. ಅರಣ್ಯನಾಶ, ಜೋರಾಗಿ ಬೀಸುವ ಗಾಳಿ, ಬಿಸಿಲು, ಹತ್ತಿರದ ರಸ್ತೆಯಲ್ಲಿ ಬೃಹತ್ ಸರಕು ಸಾಗಾಣಿಕೆ ವಾಹನಗಳು ಚಲಿಸುವುದರಿಂದಾಗುವ ಕಂಪನಗಳು, ಸಮೀಪದಲ್ಲಿ ಬೃಹತ್ ಬಂಡೆಗಳನ್ನು ಸಿಡಿಮದ್ದಿನಿಂದ ಸ್ಫೋಟಿಸುವುದು, ರಸ್ತೆ ಅಥವಾ ಸುರಂಗನಿರ್ಮಾಣಕ್ಕೆ ಬಳಸುವ ಬೃಹತ್ ಯಂತ್ರಗಳಿಂದಾಗುವ ಕಂಪನಗಳು - ಹೀಗೆ ಅನೇಕ ಕಾರಣಗಳಿಂದ ಇಂತಹ ಸೂಕ್ಷ್ಮವಾದ ಸ್ಥಾನಪಲ್ಲಟವಾಗುತ್ತಿರಬಹುದು. ತಜ್ಞರ ನೆರವಿನಿಂದ ಒಂದು ಪ್ರದೇಶದಲ್ಲಿ ಮತ್ತೆ ಮತ್ತೆ ಮಣ್ಣು, ಕಲ್ಲುಗಳು ಸ್ಥಾನಪಲ್ಲಟವಾಗುತ್ತಿರುವ ಪ್ರದೇಶಗಳನ್ನು ಗುರುತಿಸಿಲಾಗುತ್ತದೆ. ಮೊದಲು ವಿಶಾಲ ಪ್ರದೇಶದಲ್ಲಿ ಚದುರಿದ ಎಲೆಗಳಂತೆ ಅಲ್ಲಿ ಇಲ್ಲಿ ಕಾಣಸಿಗುವ ಸ್ಥಾನಪಲ್ಲಟವಾಗುವ ಪ್ರದೇಶಗಳ ನಿರಂತರ ಅಧ್ಯಯನವನ್ನು ಹಲವಾರು ದಿನಗಳ ಕಾಲ ನಡೆಸಲಾಗುತ್ತದೆ. ದಿನಕಳೆದಂತೆ, ಹೀಗೆ ಗುರುತು ಮಾಡಿದ ಪ್ರದೇಶಗಳಲ್ಲಿ ಏಕರೂಪದಲ್ಲಿ ಸ್ಥಾನಪಲ್ಲಟವಾಗುತ್ತಿರುವುದನ್ನು ಗುರುತಿಸಲಾಗುತ್ತದೆ. ಹೀಗೆ ಗುರುತು ಮಾಡಿದ ಪ್ರದೇಶಗಳ ಡಿಜಿಟಲ್ ನಕ್ಷೆಯನ್ನು ಸಿದ್ಧಪಡಿಸಿ ಅಧ್ಯಯನ ನಡೆಸಿದಾಗ, ಎಲ್ಲಿ ಭೂಕುಸಿತ ಉಂಟಾಗಬಹುದು ಎನ್ನುವುದು ಸ್ಪಷ್ಟವಾಗುತ್ತದೆ. ದಿನಕ್ಕೆ ಹೆಚ್ಚಂದರೆ ಕೆಲವು ಮಿಲಿಮೀಟರ್ ಸರಿಯುವ ಮಣ್ಣು, ಕಲ್ಲುಗಳು, ಭೂಕುಸಿತವುಂಟಾದಾಗ ಗಂಟೆಗೆ 55 ಕಿಲೋಮೀಟರ್‌ಗಳೂ ಅಧಿಕ ವೇಗದಲ್ಲಿ ಸರಿಯುತ್ತವೆ. ಹೀಗಾಗಿ ಕೆಲವೇ ಕ್ಷಣಗಳಲ್ಲಿ ಸ್ಥಿರವಾಗಿದ್ದ ಪ್ರದೇಶವು ಭೂಕುಸಿತದಿಂದಾಗಿ ಗುರುತೇ ಸಿಗದಷ್ಟು ಬದಲಾಗಿ ಹೋಗುತ್ತದೆ.

ಮಳೆಗಾಲದಲ್ಲಿ ಗಂಟೆಗೆ ಸರಾಸರಿ 55 ಕಿಲೋಮೀಟರ್ ವೇಗದಲ್ಲಿ ನೀರಿನೊಡನೆ ಸಾವಿರಾರು ಟನ್ ಮಣ್ಣು ಜಾರಿದಾಗ, ಅದರ ದಾರಿಯಲ್ಲಿ ಬರುವ ಕಲ್ಲುಗಳು, ಮರಗಳು, ಮನೆಗಳು, ವಾಹನಗಳು - ಹೀಗೆ ಎಲ್ಲವನ್ನೂ ಎಳೆದುಕೊಂಡು ರಭಸವಾಗಿ ಪ್ರವಾಹದಂತೆ ಹರಿಯುತ್ತದೆ. ಇದ್ದಕ್ಕಿದಂತೆ ಇಡೀ ಗುಡ್ಡವೇ ಕುಸಿದುಬಿದ್ದಂತಾಗುತ್ತದೆ.

ಭಾರಿ ಪ್ರಮಾಣದಲ್ಲಿ ಮಳೆಯಾದಾಗ, ಮಳೆಯ ನೀರಿನಿಂದ ಒದ್ದೆಯಾಗುವ ಮಣ್ಣು ಭಾರವಾಗಿ ಗುರುತ್ವಾಕರ್ಷಣೆಯಿಂದಾಗಿ ಜಾರ ತೊಡಗುತ್ತದೆ. ಈ ಮೊದಲು ಗುರುತಿಸಲಾದ ಪ್ರದೇಶಗಳಲ್ಲಿ ಹೀಗೆ ಮಣ್ಣು, ಕಲ್ಲುಗಳು ಸೂಕ್ಷ್ಮವಾಗಿ ಜಾರತೊಡಗಿರುವುದನ್ನು ಗುರುತಿಸಿ, ಅಧ್ಯಯನ ಮಾಡಲಾಗುತ್ತದೆ. ಭೂಪ್ರದೇಶವನ್ನು ಮರಳಿನ ಕಣ ಕಣದಷ್ಟು ಸೂಕ್ಷ್ಮವಾಗಿ ಮಾಡುವ ಇಂತಹ ವೈಜ್ಞಾನಿಕ ವಿಶ್ಲೇಷಣೆ ಮತ್ತು ಅಧ್ಯಯನದಿಂದಾಗಿ, ಮುಂದಿನ 15 ದಿನಗಳಲ್ಲಿ ಯಾವ ಪ್ರದೇಶದಲ್ಲಿ ಮತ್ತು ಎಷ್ಟು ಭೂಕುಸಿತವುಂಟಾಗಬಹುದು ಎಂದು ಮುನ್ನೆಚರಿಕೆಯನ್ನು ನೀಡಲು ಸಾಧ್ಯವಾಗುತ್ತದೆ.

ಗುಡ್ಡಗಾಡು ಪ್ರದೇಶದಲ್ಲಿ ಇಷ್ಟು ಸೂಕ್ಷ್ಮವಾಗಿ ಅಧ್ಯಯನ ಮಾಡಲು ವಿಶೇಷ ರೇಡಾರ್‌ಗಳನ್ನು ಬಳಸಲಾಗುತ್ತದೆ. 2ರಿಂದ 20 ಕಿಲೋಮೀಟರ್ ವ್ಯಾಪ್ತಿಯ ಪ್ರದೇಶದಲ್ಲಿ, ಒಂದು ಮಿಲಿಮೀಟರ್‌ಗಿಂತ ಕಡಿಮೆ ಪ್ರದೇಶದಲ್ಲಿ ಮಣ್ಣು, ಕಲ್ಲುಗಳು ಸ್ಥಾನಪಲ್ಲಟಗೊಂಡರೂ ಗುರುತಿಸುವ ಸಾಮರ್ಥ್ಯವನ್ನು ಈ ವಿಶೇಷ ಡಾಪ್ಲರ್ ರೇಡಾರ್‌ಗಳು ಹೊಂದಿರುತ್ತವೆ. ದಿನರಾತ್ರಿಯೆನ್ನದೆ, ಎಂತಹ ಹವಾಮಾನ ಪರಿಸ್ಥಿತಿಯಲ್ಲೂ ಪ್ರತಿ 6 ನಿಮಿಷಕ್ಕೆ ಒಮ್ಮೆ ಈ ರೀತಿಯ ಮಾಹಿತಿಯನ್ನು ಸಂಗ್ರಹಿಸಿ ಇಂತಹ ರೇಡಾರ್ ನೀಡುತ್ತದೆ. ಸೂಕ್ತವಾದ ಸ್ಥಳಗಳಲ್ಲಿ ಇಂತಹ ರೇಡಾರ್‌ಗಳನ್ನು ಸ್ಥಾಪಿಸಿ, ಅವುಗಳಿಂದ ದೊರೆಯುವ ಮಾಹಿತಿಯನ್ನು ಸಂಗ್ರಹಿಸಲು ನೆಟ್‌ವರ್ಕ್ ಸ್ಥಾಪಿಸಿದರೆ ಅಂಥ ಭೂಪ್ರದೇಶಗಳನ್ನು ನಿರಂತರವಾಗಿ ಅಧ್ಯಯನ ಮಾಡಲು ಸಾಧ್ಯವಾಗುತ್ತದೆ.

ರೇಡಾರ್‌ಗಳು ಕಳುಹಿಸುವ ಅಗಾಧ ಪ್ರಮಾಣದ ಮಾಹಿತಿಯನ್ನು ಸಂಸ್ಕರಿಸಲು ಮತ್ತು ವಿಶ್ಲೇಷಣೆ ಮಾಡಲು ವಿಶೇಷ ತಂತ್ರಜ್ಞಾನ ಮತ್ತು ತಂತ್ರಾಂಶಗಳು ಬೇಕಾಗುತ್ತವೆ. ಹೀಗಾಗಿ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ತಂತ್ರಜ್ಞಾನವನ್ನು ಇಲ್ಲಿ ಬಳಸಲಾಗುತ್ತಿದೆ. ❖

‘ಮೊಬಿಕ್ವಿಕ್ ಐಪಿಒ ವಿಳಂಬ’


ನವದೆಹಲಿ (ರಾಯಿಟರ್ಸ್): ಪಾವತಿ ಸೇವೆಗಳನ್ನು ನೀಡುವ ಮೊಬಿಕ್ವಿಕ್, ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ಷೇರುಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುವುದನ್ನು ತುಸು ವಿಳಂಬ ಮಾಡಲಿದೆ ಎಂದು ಕಂಪನಿಯ ಸಿಇಒ ಬಿಪಿನ್ ಪ್ರೀತ್ ಸಿಂಗ್ ಮಂಗಳವಾರ ತಿಳಿಸಿದ್ದಾರೆ.

ಪೇಟಿಎಂನ ಷೇರುಪೇಟೆ ಪ್ರವೇಶವು ಹೂಡಿಕೆದಾರರಲ್ಲಿ ನಿರುತ್ಸಾಹ ಮೂಡಿಸಿದ ಬಳಿಕ ಮೊಬಿಕ್ವಿಕ್ ಈ ನಿರ್ಧಾರಕ್ಕೆ ಬಂದಿದೆ. ಷೇರುಪೇಟೆಯಲ್ಲಿ ವಹಿವಾಟು ಆರಂಭಿಸಿದ ಬಳಿಕ ಪೇಟಿಎಂ ಕಂಪನಿಯ ಷೇರುಗಳ ಮೌಲ್ಯವು ಶೇಕಡ 27ಕ್ಕಿಂತಲೂ ಹೆಚ್ಚು ಇಳಿಕೆ ಕಂಡಿದೆ.

ನವೆಂಬರ್‌ನಲ್ಲಿ ಮೊಬಿಕ್ವಿಕ್ ಐಪಿಒ ನಡೆಸುವ ಯೋಜನೆ ಹೊಂದಲಾಗಿತ್ತು ಎಂದು ಸಿಂಗ್ ಹೇಳಿದ್ದಾರೆ. ಷೇರುಪೇಟೆಯಲ್ಲಿ ನೋಂದಾಯಿತ ಆಗಲು ಅಕ್ಟೋಬರ್‌ನಿಂದ ಒಂದು ವರ್ಷಗಳ ಕಾಲಾವಕಾಶ ಇರಲಿದೆ. ‘ಈ ಅವಧಿಯೊಳಗೆ ಯಾವಾಗ ಐಪಿಒ ಯಶಸ್ವಿ ಆಗಲಿದೆ ಎಂದು ಅನ್ನಿಸುವುದೋ ಆಗ ಷೇರುಪೇಟೆಯಲ್ಲಿ ನೋಂದಾಯಿತ ಆಗುತ್ತೇವೆ’ ಎಂದು ಅವರು ತಿಳಿಸಿದ್ದಾರೆ.

ಪೇಟಿಎಂ ಷೇರುಗಳ ಮೌಲ್ಯ ಇಳಿಕೆ ಆಗಿರುವುದರಿಂದ ಮುಂಬರಲಿರುವ ಐಪಿಒಗಳ ಮೇಲೆ, ಅದರಲ್ಲಿಯೂ ಮುಖ್ಯವಾಗಿ ಮೊಬಿಕ್ವಿಕ್ ಐಪಿಒ ಮೇಲೆ ಪರಿಣಾಮ ಉಂಟಾಗಬಹುದು ಎಂದು ಬ್ಯಾಂಕಿಂಗ್ ತಜ್ಞರು ಮತ್ತು ವಿಶ್ಲೇಷಕರು ಎಚ್ಚರಿಕೆ ನೀಡಿದ್ದಾರೆ. ಮೊಬಿಕ್ವಿಕ್ ಕಂಪನಿಯು ಪಾವತಿ ಸೇವೆಗಳ ವಿಭಾಗದಲ್ಲಿ ಪೇಟಿಎಂಗೆ ನೇರ ಸ್ಪರ್ಧಿ ಆಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,416
ಇಂದಿನ ಅಂತ್ಯ	17,503
▲	87
ದಿನದ ಗರಿಷ್ಠ	17,553

ವಿನಿಮಯ ದರ

$ ಡಾಲರ್	74.43
£ ಪೌಂಡ್	99.76
€ ಯುರೊ	83.72
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹455
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹452

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1370 (1370)
ಸೋಯಾ (ರಿಫೈನ್ಡ್)	₹1245 (1248)
ಸೂರ್ಯಕಾಂತಿ (ರಿಫೈನ್ಡ್)	₹1310 (1310)
ಪಾಮೋಲಿನ್	₹1200 (1205)

ಸುಪ್ರೀಂ ಕೋರ್ಟ್ ಕದ ತಟ್ಟಿದ ಫ್ಯೂಚರ್ ರಿಟೇಲ್ ನೌಕರರು

ನವದೆಹಲಿ (ರಾಯಿಟರ್ಸ್): ಫ್ಯೂಚರ್ ರಿಟೇಲ್ ಕಂಪನಿಯ ರಿಟೇಲ್ ವಹಿವಾಟಿನ ಆಸ್ತಿಗಳನ್ನು ಮಾರಾಟ ಮಾಡಲು ಅವಕಾಶ ನೀಡಬೇಕು ಎಂದು ಕೋರಿ ‘ಫ್ಯೂಚರ್’ನ ನೌಕರರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಅಮೆಜಾನ್ ಕಂಪನಿಯು ಸಲ್ಲಿಸಿರುವ ಅರ್ಜಿಗಳ ಕಾರಣದಿಂದಾಗಿ, ಫ್ಯೂಚರ್ ಸಮೂಹಕ್ಕೆ ತನ್ನ ರಿಟೇಲ್ ವಹಿವಾಟುಗಳನ್ನು ರಿಲಯನ್ಸ್‌ಗೆ ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲ. ಆದರೆ, ರಿಟೇಲ್ ವಹಿವಾಟುಗಳನ್ನು ರಿಲಯನ್ಸ್‌ಗೆ ಮಾರಾಟ ಮಾಡಲು ತೀರ್ಮಾನಿಸುವ ಮೂಲಕ ಫ್ಯೂಚರ್ ಸಮೂಹವು ತನ್ನ ಜೊತೆ ಮಾಡಿಕೊಂಡಿದ್ದ ಕೆಲವು ಒಪ್ಪಂದಗಳನ್ನು ಉಲ್ಲಂಘಿಸಿದೆ ಎಂದು ಅಮೆಜಾನ್ ವಾದಿಸಿದೆ.

ರಿಲಯನ್ಸ್ ಜೊತೆಗಿನ ಒಪ್ಪಂದವು ಕಾರ್ಯರೂಪಕ್ಕೆ ಬರದೇ ಇದ್ದರೆ ಫ್ಯೂಚರ್ ಸಮೂಹ ಆರ್ಥಿಕವಾಗಿ ಕುಸಿಯುತ್ತದೆ. ಆಗ, ಇಪ್ಪತ್ತೇಳುಸಾವಿರ ನೌಕರರ ಜೀವನೋಪಾಯಕ್ಕೆ ಪೆಟ್ಟು ಬೀಳುತ್ತದೆ. ಈ ನೌಕರರ ಕುಟುಂಬದ ಸದಸ್ಯರು ಬೀದಿಗೆ ಬೀಳುತ್ತಾರೆ ಎಂದು ಫ್ಯೂಚರ್ ಸಮೂಹದ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅರ್ಜಿಯಲ್ಲಿ ಹೇಳಲಾಗಿದೆ.

ಭಾರತದಿಂದ 50 ಲಕ್ಷ ಬ್ಯಾರಲ್ • ಅಮೆರಿಕದಿಂದ 5 ಕೋಟಿ ಬ್ಯಾರಲ್

ಬೆಲೆ ಇಳಿಕೆಗೆ ಸಂಗ್ರಹಾಗಾರದ ತೈಲ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯನ್ನು ತಗ್ಗಿಸುವ ಉದ್ದೇಶದಿಂದ ಅಮೆರಿಕ, ಚೀನಾ, ಜಪಾನ್ ಜೊತೆಗೂಡಿ ಭಾರತ ಕೂಡ ತನ್ನ ತೈಲ ಸಂಗ್ರಹಾಗಾರಗಳಲ್ಲಿ ಇರುವ ಕಚ್ಚಾ ತೈಲವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಿದೆ. ಭಾರತವು ಒಟ್ಟು 50 ಲಕ್ಷ ಬ್ಯಾರೆಲ್ ಕಚ್ಚಾ ತೈಲವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಿದೆ ಎಂದು ಕೇಂದ್ರ ಸರ್ಕಾರ ಮಂಗಳವಾರ ಹೇಳಿದೆ.

ಭಾರತವು ಒಟ್ಟು 3.8 ಕೋಟಿ ಬ್ಯಾರೆಲ್ ಕಚ್ಚಾ ತೈಲವನ್ನು ಸಂಗ್ರಹಾಗಾರಗಳಲ್ಲಿ ಶೇಖರಿಸಿ ಇಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ. ಇದೇ ಮೊದಲ ಬಾರಿಗೆ ದೇಶವು, ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಬೆಲೆಯನ್ನು ತಗ್ಗಿಸುವ ಉದ್ದೇಶದಿಂದ ಈ ಸಂಗ್ರಹವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಿದೆ. ಭಾರತವು ಮಾರುಕಟ್ಟೆಗೆ ಬಿಡುಗಡೆ ಮಾಡಲಿರುವ 50 ಲಕ್ಷ ಬ್ಯಾರೆಲ್ ಕಚ್ಚಾ ತೈಲವು ದೇಶದ ಸರಿಸುಮಾರು ಒಂದು ದಿನದ ತೈಲ ಬೇಡಿಕೆಯನ್ನು ಪೂರೈಸಬಲ್ಲದು.



ಉಡುಪಿ ಸಮೀಪದ ಪಾದೂರಿನಲ್ಲಿ ಇರುವ ತೈಲ ಸಂಗ್ರಹಾಗಾರ

ಅಮೆರಿಕ ಕೂಡ 5 ಕೋಟಿ ಬ್ಯಾರೆಲ್ ಕಚ್ಚಾತೈಲವನ್ನು ತನ್ನ ಸಂಗ್ರಹಾಗಾರಗಳಿಂದ ಮಾರುಕಟ್ಟೆಗೆ ಬಿಡುಗಡೆ ಮಾಡಲಿದೆ. ‘ತೈಲ ಉತ್ಪಾದಿಸುವ ದೇಶಗಳು ತೈಲ ಉತ್ಪಾದನೆಯನ್ನು ಬೇಡಿಕೆಗಿಂತಲೂ ಕಡಿಮೆ ಮಟ್ಟದಲ್ಲಿ ಇರಿಸಿರುವ ವಿಚಾರವಾಗಿ ಭಾರತವು ಮತ್ತೆ ಮತ್ತೆ ಕಳವಳ ವ್ಯಕ್ತಪಡಿಸಿದೆ’ ಎಂದು ಕೇಂದ್ರ ಸರ್ಕಾರದ ಪ್ರಕಟಣೆಯು ಹೇಳಿದೆ. ಕಚ್ಚಾ ತೈಲವನ್ನು ಏಳರಿಂದ ಹತ್ತು ದಿನಗಳಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಬಹುದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಸಂಗ್ರಹಾಗಾರದಲ್ಲಿನ ತೈಲ ಹೊರಕ್ಕೆ ತರುವಂತೆ ಮನವಿ ಮಾಡಿದ ಅಮೆರಿಕ
- ತೈಲ ಬೆಲೆ ಇಳಿಕೆಗೆ ಅಮೆರಿಕದ ಜೊತೆ ಕೈಜೋಡಿಸಿದ ಭಾರತ

ತೈಲವನ್ನು ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್) ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ಗೆ (ಎಚ್‌ಪಿಸಿಎಲ್) ಮಾರಾಟ ಮಾಡಲಾಗುತ್ತದೆ. ಜಾಗತಿಕ ಮಟ್ಟದಲ್ಲಿ ತೈಲ ಬೆಲೆಯನ್ನು ತಗ್ಗಿಸುವ ಉದ್ದೇಶದಿಂದ ಅಮೆರಿಕವು, ಸಂಗ್ರಹಾಗಾರಗಳಲ್ಲಿ ಇರುವ ಕಚ್ಚಾ ತೈಲವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವಂತೆ ಭಾರತ, ಚೀನಾ, ಜಪಾನ್ ಮತ್ತು ಇತರ ಕೆಲವು ದೇಶಗಳಿಗೆ ಮನವಿ ಮಾಡಿತ್ತು. ಅಮೆರಿಕವು ಈ ರೀತಿಯ ಮನವಿಯನ್ನು ಮಾಡಿದ್ದು ತೀರಾ ಅಪರೂಪ.

ಕಚ್ಚಾ ತೈಲ ಉತ್ಪಾದನೆಯನ್ನು ಹೆಚ್ಚಿಸಬೇಕು ಎಂದು ಮತ್ತೆ ಮತ್ತೆ ಮಾಡಿಕೊಂಡ ಮನವಿಯನ್ನು ಒಪೆಕ್ (ಪೆಟ್ರೋಲಿಯಂ ಉತ್ಪನ್ನಗಳ ರಫ್ತುದಾರ ದೇಶಗಳು) ಒಕ್ಕೂಟವು ತಿರಸ್ಕರಿಸಿದ ನಂತರದಲ್ಲಿ ಅಮೆರಿಕ, ಭಾರತ ಮತ್ತು ಇತರ ದೇಶಗಳು ಈ ಕ್ರಮಕ್ಕೆ ಮುಂದಾಗಿವೆ. ಬ್ರೆಂಟ್ ಕಚ್ಚಾ ತೈಲದ ಬೆಲೆಯು ವಾರದ ಹಿಂದೆ ಬ್ಯಾರೆಲ್‌ಗೆ 86.40 ಡಾಲರ್ ಇದ್ದಿದ್ದು ಈಗ 78 ಡಾಲರ್‌ಗೆ ಇಳಿದಿದೆ.

ಕಚ್ಚಾ ತೈಲವನ್ನು ಸಂಗ್ರಹಾಗಾರದಿಂದ ಹೊರಕ್ಕೆ ತರುವ ಕೆಲಸ ಆರಂಭಿಸಿರುವುದಾಗಿ ಚೀನಾ ಹೇಳಿದೆ. ಜಪಾನ್ ಕೂಡ ಇಂಥದ್ದೇ ಕ್ರಮಕ್ಕೆ ಸಿದ್ಧವಿರುವುದಾಗಿ ಹೇಳಿದೆ.

ಪಾರ್ಲೆ ಉತ್ಪನ್ನಗಳ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ಬಿಸ್ಕತ್ತು ತಯಾರಿಕಾ ವಲಯದ ಪ್ರಮುಖ ಕಂಪನಿಯಾದ ಪಾರ್ಲೆ ಪ್ರಾಡಕ್ಟ್ಸ್, ತನ್ನ ಉತ್ಪನ್ನಗಳ ಬೆಲೆಯನ್ನು ಶೇಕಡ 5ರಿಂದ ಶೇ 10ರವರೆಗೆ ಹೆಚ್ಚಳ ಮಾಡಿದೆ. ಸಕ್ಕರೆ, ಗೋಧಿ, ಖಾದ್ಯ ತೈಲದ ಬೆಲೆ ಹೆಚ್ಚಳ ಆಗಿರುವ ಕಾರಣ ಉತ್ಪನ್ನಗಳ ಬೆಲೆ ಏರಿಕೆ ಮಾಡಲಾಗುತ್ತಿದೆ ಎಂದು ಕಂಪನಿ ಹೇಳಿದೆ.

ಪಾರ್ಲೆ-ಜಿ, ಹೈಡ್ ಆ್ಯಂಡ್ ಸೀಕ್, ಕ್ರ್ಯಾಕ್‌ಜಾಕ್‌ನಂತಹ ಬಿಸ್ಕತ್ತುಗಳ ಬೆಲೆ ಶೇ 5ರಿಂದ ಶೇ 10ರಷ್ಟು, ಕೇಕ್ ಮತ್ತು ರಸ್ಕ್‌ಗಳ ಬೆಲೆಯನ್ನು ಶೇ 7ರಿಂದ ಶೇ 8ರಷ್ಟು ಹೆಚ್ಚಳ ಮಾಡಲಾಗಿದೆ. ಪಾರ್ಲೆ-ಜಿ ಬೆಲೆಯು ಗರಿಷ್ಠ ಶೇ 7ರವರೆಗೆ ಹೆಚ್ಚಾಗಿದೆ. ₹ 20ಕ್ಕಿಂತ ಹೆಚ್ಚಿನ ಬೆಲೆಯ ಉತ್ಪನ್ನಗಳ ಬೆಲೆಯಲ್ಲಿ ಏರಿಕೆ ಮಾಡಲಾಗಿದೆ. ಅದಕ್ಕಿಂತ ಕಡಿಮೆ ಬೆಲೆಯ ಉತ್ಪನ್ನಗಳ ತೂಕವನ್ನು ಕಡಿಮೆ ಮಾಡಲಾಗಿದೆ.

ಕರೆ, ಡೇಟಾ ಶುಲ್ಕ ಶೇ 25ರವರೆಗೆ ಹೆಚ್ಚಿಸಿದ ವಿಐಎಲ್

ನವದೆಹಲಿ (ಪಿಟಿಐ): ವೊಡಾಫೋನ್ ಐಡಿಯಾ (ವಿಐಎಲ್) ಕಂಪನಿಯು ಗುರುವಾರದಿಂದ ಜಾರಿಗೆ ಬರುವಂತೆ ಮೊಬೈಲ್ ಕರೆ ಮತ್ತು ಡೇಟಾ ಪ್ಲಾನ್‌ಗಳ ಮೇಲಿನ ಶುಲ್ಕವನ್ನು ಶೇಕಡ 20ರಿಂದ ಶೇ 25ರವರೆಗೆ ಹೆಚ್ಚಿಸಿರುವುದಾಗಿ ಮಂಗಳವಾರ ತಿಳಿಸಿದೆ.

ಶುಲ್ಕ ಹೆಚ್ಚಳ ವಿವರ (₹ಗಳಲ್ಲಿ)

ಯೋಜನೆ	ಹಾಲಿ ದರ	ಹೊಸ ದರ
ಧ್ವನಿ ಆಧರಿತ ಕರೆ	79	99
ಅನಿಯಮಿತ ಕರೆ	149	179
	1,499	1,799
ಡೇಟಾ ಟಾಪ್‌ಅಪ್	48	58
	98	118

‘ಗುಜರಿ ನೀತಿ ಅಡಿ ಇನ್ನಷ್ಟು ವಿನಾಯಿತಿ’

ನವದೆಹಲಿ: ಹಳೆಯ ವಾಹನಗಳನ್ನು ಗುಜರಿಗೆ ಹಾಕಿ ಹೊಸ ವಾಹನ ಖರೀದಿಸುವವರಿಗೆ ಈಚೆಗೆ ಜಾರಿಗೆ ತಂದಿರುವ ರಾಷ್ಟ್ರೀಯ ವಾಹನ ಗುಜರಿ ನೀತಿ ಅನ್ವಯ ಇನ್ನೂ ಹೆಚ್ಚಿನ ತೆರಿಗೆ ವಿನಾಯಿತಿ ನೀಡುವ ಬಗ್ಗೆ ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ ಎಂದು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದರು.

ಕೇಂದ್ರ ಸರ್ಕಾರದ ಮಾನ್ಯತೆ ಪಡೆದಿರುವ ಮೊದಲ ಗುಜರಿ ಘಟಕ ಮಾರುತಿ ಸುಜುಕಿ ಟೊಯೊಟ್ಸು ಉದ್ಘಾಟನಾ ಸಮಾರಂಭದಲ್ಲಿ ಅವರು ಈ ವಿಷಯ ತಿಳಿಸಿದರು. ‘ಹೊಸ ಗುಜರಿ ನೀತಿಯ ಅಡಿಯಲ್ಲಿ ಹೆಚ್ಚಿನ ತೆರಿಗೆ ವಿನಾಯಿತಿ ನೀಡುವುದು ಹೇಗೆ ಎಂಬ ಬಗ್ಗೆ ನಾನು ಹಣಕಾಸು ಸಚಿವಾಲಯದ ಜೊತೆ ಮಾತುಕತೆ ನಡೆಸಲಿದ್ದೇನೆ’ ಎಂದು ಗಡ್ಕರಿ ಹೇಳಿದರು.

ಹಳೆಯ ವಾಹನವನ್ನು ಗುಜರಿಗೆ ಹಾಕಿದ ನಂತರ ಖರೀದಿಸುವ ಹೊಸ ವಾಹನಕ್ಕೆ ರಸ್ತೆ ತೆರಿಗೆಯ ಮೇಲೆ ರಾಜ್ಯ ಸರ್ಕಾರಗಳು ಶೇಕಡ 25ರವರೆಗೆ ವಿನಾಯಿತಿ ನೀಡಲಿವೆ ಎಂದು ಗಡ್ಕರಿ ತಿಳಿಸಿದರು.

ಮುಂಬೈ ಧಾರಣೆ

ಶೇಂಗಾ

23-11-2021

ಜಾವಾ 70/80(ಹೊಸ)	10400-10450
ಜಾವಾ 80/90(ಹೊಸ)	10100-10150
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	9400-9450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1380 (1380)
ಒಂದು ವಾರದ ಡೆಲಿವರಿ	1375 (1375)
ಸೋಯಾ ಕಚ್ಚಾ	1205 (12005)
ಪಾಮ್ ವಾರದ ಡೆಲಿವರಿ	1198 (1203)
ಸೂರ್ಯಕಾಂತಿ ಎಣ್ಣೆ ಕಚ್ಚಾ	1215 (1220)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,600 (48,550)
ಬೆಳ್ಳಿ ಕೆ.ಜಿ	63,700 (65,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಚಂದ್ರೇಗೌಡ (ಹೆಸರು ಬದಲಾಯಿಸಿದೆ), ಹಾಸನ

- **ಪ್ರಶ್ನೆ:** ನಾನು ನಿವೃತ್ತ ನೌಕರ. ವಯಸ್ಸು 67 ವರ್ಷ. ನನಗೆ ಇಬ್ಬರು ಹೆಣ್ಣುಮಕ್ಕಳು. ನಾನು, ನನ್ನ ಹೆಂಡತಿ ಒಂದು ಮನೆಯಲ್ಲಿ ವಾಸವಾಗಿದ್ದೇವೆ. ನಮ್ಮ ಮನೆ ಮೇಲೆ ಎರಡು ಸಣ್ಣ ಮನೆಗಳು ಹಾಗೂ ಅದಕ್ಕೂ ಮೇಲೆ ಒಂದು ರೂಮ್ ಇದೆ. ನಮ್ಮ ನಂತರ ಇಬ್ಬರು ಹೆಣ್ಣುಮಕ್ಕಳಿಗೆ ಈ ಸ್ಥಿರ ಆಸ್ತಿ ಹೊಂದಲು ಹೇಗೆ ಉಯಿಲು ಮಾಡಬೇಕು ತಿಳಿಸಿ. ಮೇಲಿನ ಎರಡೂ ಮನೆಗಳನ್ನು ನಿಮ್ಮ ಅಂಕಣ ಓದಿ ಉಳಿತಾಯ ಮಾಡಿ ಕಟ್ಟಿಸಿದ್ದೇವೆ.

ಉತ್ತರ: ಒಂದೇ ನಿವೇಶನದಲ್ಲಿ ಕೆಳಗೆ ಒಂದು, ಮೇಲೆ ಎರಡು ಮನೆಗಳಿದ್ದು, ಇವುಗಳನ್ನು ಹೇಗೆ ವಿಂಗಡಿಸಿ ಮಕ್ಕಳಿಗೆ ಉಯಿಲು ಬರೆಯುವುದು ಎನ್ನುವುದು ನಿಮ್ಮಲ್ಲಿರುವ ಗೊಂದಲ. ನೀವು ಮತ್ತು ನಿಮ್ಮ ಹೆಂಡತಿ ಒಂದು ತೀರ್ಮಾನಕ್ಕೆ ಬಂದು, ಕೆಳಗಿನ ಮನೆ ಒಬ್ಬಳಿಗೆ ಮೇಲಿನ ಮನೆಗಳನ್ನು ಇನ್ನೊಬ್ಬಳಿಗೆ ಸಿಗುವಂತೆ ಉಯಿಲು ಬರೆಯಬಹುದು. ಉಯಿಲು ಬರೆಯುವಾಗ ನಿವೇಶನದಲ್ಲಿ (ಮನೆ ಕಟ್ಟಿದ ಸ್ಥಳ) ಇಬ್ಬರಿಗೂ ಸಮಾನ ಹಕ್ಕು ಇದೆ ಎನ್ನುವುದನ್ನು ಸ್ಪಷ್ಟಪಡಿಸಬೇಕು. ನೀವು ಈ ಸ್ಥಿರ ಆಸ್ತಿಯನ್ನು ನಿಮ್ಮ ಹೆಂಡತಿ ಹೆಸರಿಗೆ ಉಯಿಲು ಬರೆದು, ನಿಮ್ಮ ಹೆಂಡತಿಯ ಕಾಲಾನಂತರ ಇಲ್ಲಿ ತಿಳಿಸಿದಂತೆ ಇಬ್ಬರು ಹೆಣ್ಣು ಮಕ್ಕಳಿಗೆ ಸೇರುವಂತೆ ಮಾಡಿರಿ. ಇದರಿಂದ ನಿಮ್ಮ ಹೆಂಡತಿಗೆ ಹೆಚ್ಚಿನ ಭದ್ರತೆ ಸಿಕ್ಕಿದಂತಾಗುತ್ತದೆ.

ಮಹಂತೇಶಪ್ಪ, ಇಳಕಲ್

- **ಪ್ರಶ್ನೆ:** ನಾನು ಸರ್ಕಾರಿ ಶಾಲೆಯ ನಿವೃತ್ತ ಶಿಕ್ಷಕ. ನನ್ನ ತಿಂಗಳ ಪಿಂಚಣಿ ₹ 21,500. ಬ್ಯಾಂಕ್‌ನಲ್ಲಿ ₹ 21 ಲಕ್ಷ ಠೇವಣಿ ಇದೆ. ಠೇವಣಿಯ ಬಡ್ಡಿ ಮೂಲದಲ್ಲಿ ₹ 10,600 ಕಡಿತ ಮಾಡಿರುತ್ತಾರೆ. ನಾನು 15ಎಚ್ ಫಾರಂ ಸಲ್ಲಿಸಿರಲಿಲ್ಲ. 15ಎಚ್–15ಜಿ ಇವುಗಳ ವ್ಯತ್ಯಾಸ ಏನು? ಮುರಿದ ಬಡ್ಡಿ ವಾಪಸ್ ಪಡೆಯುವ ಮಾರ್ಗ ತಿಳಿಸಿ. ನಿಮ್ಮ ಅಂಕಣ ಹಲವು ವರ್ಷಗಳಿಂದ ಓದುತ್ತಿದ್ದೇವೆ. ನಿಜವಾಗಿ ದಿನಪತ್ರಿಕೆ ಎಂದರೆ ‘ಪ್ರಜಾವಾಣಿ’. ಪೇಪರ್‌ಗಾಗಿ ಬೆಳಗ್ಗೆ ಕಾಯುತ್ತಿರುತ್ತೇವೆ.

ಉತ್ತರ: 15ಎಚ್–15ಜಿ ಇವೆರಡರಲ್ಲಿ ಬಹಳ ವ್ಯತ್ಯಾಸ ಇಲ್ಲ. ಹಿರಿಯ ನಾಗರಿಕರನ್ನು ಪ್ರತ್ಯೇಕವಾಗಿ ಗುರುತಿಸಲು 15ಎಚ್ ನೀಡಲಾಗಿದೆ. ಹಿರಿಯ ನಾಗರಿಕರು ವಾರ್ಷಿಕ ₹ 50 ಸಾವಿರಕ್ಕೂ ಮಿಗಿಲಾದ ಬಡ್ಡಿ ವರಮಾನ ಪಡೆಯುತ್ತಿದ್ದರೆ 15ಎಚ್, 60 ವರ್ಷದೊಳಗಿನವರು ₹ 40 ಸಾವಿರಕ್ಕೂ ಮಿಗಿಲಾದ ಬಡ್ಡಿ ವರಮಾನ ಪಡೆಯುತ್ತಿದ್ದರೆ 15ಜಿ ಫಾರಂ ಸಲ್ಲಿಸಿದರೆ ಮೂಲದಲ್ಲಿ ತೆರಿಗೆ ಮುರಿಯುವುದಿಲ್ಲ. ಠೇವಣಿದಾರರು ಪ್ರತಿ ವರ್ಷ ಏಪ್ರಿಲ್ 15ರೊಳಗೆ ಬ್ಯಾಂಕ್‌ಗೆ ಈ ಫಾರಂ ಸಲ್ಲಿಸಬೇಕು. ಹಿರಿಯ ನಾಗರಿಕರಿಗೆ ಸೆಕ್ಷನ್ 80ಟಿಟಿಬಿ ಆಧಾರದ ಮೇಲೆ, ಬ್ಯಾಂಕ್ ಹಾಗೂ ಅಂಚೆ ಕಚೇರಿ ಠೇವಣಿಗಳಲ್ಲಿ ಬರುವ ಬಡ್ಡಿ ವರಮಾನದಲ್ಲಿ ಗರಿಷ್ಠ ₹ 50 ಸಾವಿರ ವಿನಾಯಿತಿ ಇದೆ. ಬ್ಯಾಂಕ್ ಈಗಾಗಲೇ ಮುರಿದಿರುವ ಬಡ್ಡಿಯ ವಿಚಾರದಲ್ಲಿ ಫಾರಂ ಸಂಖ್ಯೆ 16 (ಎ) ಬ್ಯಾಂಕ್‌ನಿಂದ ಪಡೆದು ಐ.ಟಿ. ವಿವರ ತುಂಬುವಾಗ ವಿವರಣೆ ನೀಡಿ ರೀಫಂಡ್ ಪಡೆಯಿರಿ. ನೀವು ಪತ್ರಿಕೆಯ ಮೇಲೆ ಇಟ್ಟಿರುವ ಗೌರವಕ್ಕೆ ಧನ್ಯವಾದಗಳು.

ಚಿಕ್ಕಹೊನ್ನಯ್ಯ, ಬಿಡದಿ

- **ಪ್ರಶ್ನೆ:** ನಾನು ನಿವೃತ್ತ ಸರ್ಕಾರಿ ಉದ್ಯೋಗಿ. ತಿಂಗಳ ಪಿಂಚಣಿ ₹ 23,650. ನನಗೆ ಸ್ವಂತ ಮನೆ ಹಾಗೂ 30X40 ಅಳತೆಯ ನಿವೇಶನ ಇದೆ. ಬ್ಯಾಂಕ್‌ನಿಂದ ಸಾಲ ಪಡೆದು ಈ ನಿವೇಶನದಲ್ಲಿ ಒಂದು ಮನೆ ಕಟ್ಟಿಸಿ ಬಾಡಿಗೆಗೆ ಕೊಡುವ ಆಲೋಚನೆ ಇದೆ. ಈ ಮಾರ್ಗ ಸರಿ ಇದೆಯೇ ಅಥವಾ ನಿವೇಶನ ಮಾರಾಟ ಮಾಡಿ ಬರುವ ಮೊತ್ತದಿಂದ ಪ್ರತಿ ತಿಂಗಳು ಬಡ್ಡಿ ಪಡೆಯುವುದು ಒಳಿತೇ ತಿಳಿಸಿರಿ.

ಉತ್ತರ: ನಿಮ್ಮ ಕುಟುಂಬದ ಸದಸ್ಯರ ವಿಚಾರದಲ್ಲಿ ನೀವು ತಿಳಿಸಿಲ್ಲ. ಗೃಹ ಸಾಲ ದೀರ್ಘಾವಧಿಯದಾದ್ದರಿಂದ ಹಿರಿಯ ನಾಗರಿಕರಿಗೆ ಸಾಮಾನ್ಯವಾಗಿ ಬ್ಯಾಂಕ್‌ಗಳಲ್ಲಿ ಗೃಹ ಸಾಲ ನೀಡುವುದಿಲ್ಲ. ನಿಮ್ಮ ಮಕ್ಕಳು ಉತ್ತಮ ಕೆಲಸದಲ್ಲಿದ್ದು, ಗೃಹ ಸಾಲ ಮರುಪಾವತಿಸುವ ಜವಾಬ್ದಾರಿ ಹೊರುವಲ್ಲಿ ನಿಮ್ಮ ಮಗನನ್ನು ಸಹ ಸಾಲಗಾರ ಆಗಿ ಮಾಡಿ ಸಾಲ ಪಡೆಯಬಹುದು. ನಿಮಗೆ ಬರುವ ಮಾಸಿಕ ಪಿಂಚಣಿ ಆದಾಯ ಖರ್ಚಿಗೆ ಸರಿಹೋಗುವಲ್ಲಿ, ಈ ವಯಸ್ಸಿನಲ್ಲಿ ಸಾಲ ಪಡೆದು ಮನೆ ಕಟ್ಟಿಸುವುದು ಸೂಕ್ತವಲ್ಲ. ಬಾಡಿಗೆಯಿಂದ ಬರುವ ವರಮಾನ ಗೃಹ ಸಾಲದ ಕಂತು ಕೊಡಲು ಸಾಕಾಗಲಾರದು. ಇನ್ನು ನಿವೇಶನ ಮಾರಾಟ ಮಾಡುವ ವಿಚಾರ. ಸ್ಥಿರ ಆಸ್ತಿಗೆ ಮಿಗಿಲಾದ ಹೂಡಿಕೆ ಬೇರೊಂದಿಲ್ಲ. ಇಂದಿನ ನಿವೇಶನದ ಮಾರುಕಟ್ಟೆ ಬೆಲೆ ಚೆನ್ನಾಗಿ ಕಂಡರೂ ಮುಂದೆ ಇದೇ ನಿವೇಶನದ ಬೆಲೆ ಎಷ್ಟಾಗಬಹುದು ಎನ್ನುವುದನ್ನು ಎಂದಿಗೂ ತಿಳಿಯಲು ಸಾಧ್ಯವಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಗೃಹ ಸಾಲ ಪಡೆಯುವುದಾಗಲಿ, ನಿವೇಶನ ಮಾರಾಟ ಮಾಡುವುದಾಗಲಿ ಸರಿಯಲ್ಲ. ಬರುವ ಪಿಂಚಣಿಯಿಂದ ನಿಮ್ಮ ನಿವೃತ್ತಿ ಜೀವನವನ್ನು ಸುಖವಾಗಿ ಕಳೆಯಿರಿ ಹಾಗೂ ಇರುವ ಮನೆ ಮತ್ತು ನಿವೇಶನ ಮಾರಾಟ ಮಾಡುವ ವಿಚಾರ ಕೈಬಿಡಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ರಿಲಯನ್ಸ್ ಜುವೆಲ್ಸ್‌ನಿಂದ ವಧುವಿನ ಚಿನ್ನಾಭರಣ ಸಂಗ್ರಹ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಜುವೆಲ್ಸ್ ಕಂಪನಿಯು ಮದುವೆ ಸಮಾರಂಭದಲ್ಲಿ ವಧುವಿನ ಸಿಂಗಾರಕ್ಕೆಂದು ವಿಶೇಷವಾದ ಚಿನ್ನಾಭರಣಗಳ ಸಂಗ್ರಹವನ್ನು ಬಿಡುಗಡೆ ಮಾಡಿದೆ. ಚಿನ್ನ ಮತ್ತು ವಜ್ರದಿಂದ ಮಾಡಿದ ಹಾರಗಳು, ಚೈನ್‌ಗಳು... ಹೀಗೆ ಇನ್ನೂ ಹಲವು ವಿಶಿಷ್ಟ ವಿನ್ಯಾಸದ ಆಧುನಿಕ ಶೈಲಿಯ ಆಭರಣಗಳ ಸಂಗ್ರಹವನ್ನು ಇದು ಒಳಗೊಂಡಿದೆ ಎಂದು ಕಂಪನಿ ಹೇಳಿದೆ.



ಸಾಂಪ್ರದಾಯಿಕ ಮತ್ತು ಸಮಕಾಲೀನ ವಿನ್ಯಾಸದ ಈ ಆಭರಣಗಳು ಭಾರತದ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸಲಿವೆ ಎಂದು ರಿಲಯನ್ಸ್ ಜುವೆಲ್ಸ್‌ನ ಸಿಇಒ ಸುನಿಲ್ ನಾಯಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಆಭರಣಗಳನ್ನು ಕಂಪನಿಯ ರಿಟೇಲ್ ಮಳಿಗೆಗಳು ಮತ್ತು ಜಾಲತಾಣದಲ್ಲಿ ಖರೀದಿಸಬಹುದು ಎಂದು ಹೇಳಿದೆ. ಕಂಪನಿಯು ಮದುವೆ ಸಮಾರಂಭದ ವಿಶೇಷ ಕೊಡುಗೆಯನ್ನು ಘೋಷಿಸಿದ್ದು ಚಿನ್ನದ ಆಭರಣಗಳ ಮೇಕಿಂಗ್ ಶುಲ್ಕ ಮತ್ತು ವಜ್ರದ ಆಭರಣಗಳ ಮೌಲ್ಯದ ಮೇಲೆ ಶೇ 20ರವರೆಗೂ ವಿನಾಯಿತಿ ಸಿಗಲಿದೆ ಎಂದು ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	540
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-42500
ಕುಂದಾಪುರ	
ಹಳೆಚಾಲಿ	45000-50500
ಹೊಸಚಾಲಿ	30000-37000
ಪುತ್ತೂರು	
ಕೋಕ	10500-26000
ಹೊಸತು	27500-42500
ಸಿದ್ದಾಪುರ	
ಬಿಳಿಗೋಟು	32899-41789
ಚಾಲಿ	42899-49411
ಕೋಕ	24499-38799
ಹೊಸಚಾಲಿ	32699-36599
ಕೆಂಪುಗೋಟು	24899-38899
ರಾಶಿ	45399-47989
ತಟ್ಟಿಬೆಟ್ಟೆ	33899-42699
ಶಿರಸಿ	
ಬೆಟ್ಟೆ	42399-46699
ಬಿಳಿಗೋಟು	25099-44878
ಚಾಲಿ	43069-49699
ರಾಶಿ	38399-49209
ಯಲ್ಲಾಪುರ	
ಬಿಳಿಗೋಟು	31222-42389
ಚಾಲಿ	43009-49503
ಕೋಕ	24899-34299
ಕೆಂಪುಗೋಟು	27125-33566
ರಾಶಿ	45698-52950
ತಟ್ಟಿಬೆಟ್ಟೆ	37742-44689
ರಾಮನಗರ ರೇಷ್ಮೆ	
ಮಿಶ್ರತಳಿ	150-495
ದ್ವಿತಳಿ	100-650

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14400	14000	---	231.35 ಸೆಂಟ್ಸ್
ಎಸಿ	6125	5300	---	
ಆರ್‌ಪಿ	6200	---	6300	
ಆರ್‌ಸಿ	3640	3250	3675	2251 ಡಾಲರ್ಸ್

ಚಿನ್ನದ ದರ ₹ 810, ಬೆಳ್ಳಿ ₹ 1,548 ಇಳಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ 10 ಗ್ರಾಂ ಚಿನ್ನದ ದರ ₹ 810ರಷ್ಟು ಇಳಿಕೆ ಕಂಡಿದ್ದು ₹ 46,896ಕ್ಕೆ ತಲುಪಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 1,548ರಷ್ಟು ಇಳಿಕೆ ಕಂಡು ₹ 62,720ರಂತೆ ಮಾರಾಟವಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರವು ಇಳಿಕೆ ಆಗಿರುವುದಕ್ಕೆ ಅನುಗುಣವಾಗಿ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪರಿಣಾಮ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ.

ಭುವನೇಶ್ವರದಲ್ಲಿ ಜೂನಿಯರ್ ಹಾಕಿ ವಿಶ್ವಕಪ್ ಹಾಕಿ ಇಂದಿನಿಂದ; ಆತಿಥೇಯರಿಗೆ ಒಲಿಂಪಿಯನ್ ವಿವೇಕ್ ನಾಯಕತ್ವ

‘ಚಾಂಪಿಯನ್’ ಭಾರತಕ್ಕೆ ಫ್ರಾನ್ಸ್ ಸವಾಲು

ಭುವನೇಶ್ವರ್ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಐತಿಹಾಸಿಕ ಪದಕ ಗೆಲುವಿನ ಸಾಧನೆ ಮಾಡಿದ ಭಾರತ ತಂಡದಲ್ಲಿ ಆಡಿದ್ದ ವಿವೇಕ್ ಸಾಗರ್ ಪ್ರಸಾದ್ ನೇತೃತ್ವದ ತಂಡವು ಬುಧವಾರ ಆರಂಭವಾಗಲಿರುವ ಜೂನಿಯರ್ ವಿಶ್ವಕಪ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದೆ.

ಬಿ ಗುಂಪಿನ ಮೊದಲ ಪಂದ್ಯದಲ್ಲಿ ಭಾರತ ತಂಡವು ಫ್ರಾನ್ಸ್ ಎದುರು ಆಡಲಿದೆ. 21 ವರ್ಷದೊಳಗಿನವರ 16 ತಂಡಗಳು ಈ ಟೂರ್ನಿಯಲ್ಲಿ ಪ್ರಶಸ್ತಿಗಾಗಿ ಸೆಣಸಲಿವೆ. ಭಾರತ ತಂಡವು ಹಾಲಿ ಚಾಂಪಿಯನ್ ಆಗಿದ್ದು ಟ್ರೋಫಿ ಉಳಿಸಿಕೊಳ್ಳುವತ್ತ ಚಿತ್ತ ನೆಟ್ಟಿದೆ. ಅನುಭವಿ ಗ್ರಹಾಂ ರೀಡ್ ಮುಖ್ಯ ಕೋಚ್ ಮತ್ತು ಕನ್ನಡಿಗ ಬಿ.ಜೆ. ಕಾರಿಯಪ್ಪ ಕೋಚ್ ಆಗಿರುವ ತಂಡವು ಆತ್ಮವಿಶ್ವಾಸದ ಆಗಸದಲ್ಲಿದೆ. ಸತತ ಮೂರನೇ ಬಾರಿಗೆ ಭಾರತದಲ್ಲಿ ಈ ಟೂರ್ನಿಯು ಆಯೋಜನೆಯಾಗುತ್ತಿದೆ.

‘20 ಆಟಗಾರರ ತಂಡವನ್ನು ಆಯ್ಕೆ ಆಡಲಾಗಿದೆ. ಅದರಲ್ಲಿ 18 ಆಟಗಾರರು ಫ್ರಂಟ್‌ಲೈನ್‌ನಲ್ಲಿದ್ದಾರೆ. ಇನ್ನಿಬ್ಬರು ಬದಲಿ ಆಟಗಾರರಿದ್ದಾರೆ. ಇದು ಪ್ರಶಸ್ತಿ ಉಳಿಸಿಕೊಳ್ಳಲು ಸಾಮರ್ಥ್ಯವಿರುವ ತಂಡವಾಗಿದೆ. ಸಮತೋಲನವಿರುವ ಬಳಗ ಇದಾಗಿದೆ’ ಎಂದು ರೀಡ್ ಹೇಳಿದ್ದಾರೆ.


40 ವರ್ಷಗಳ ಹಿಂದೆ ಆರಂಭವಾದ ಟೂರ್ನಿಯಲ್ಲಿ ಫ್ರಾನ್ಸ್ ತಂಡವು 2013ರಲ್ಲಿ ರನ್ನರ್ಸ್ ಅಪ್ ಆಗಿತ್ತು. ಭಾರತ ಎರಡು ಬಾರಿ ಚಾಂಪಿಯನ್ ಮತ್ತು ಒಂದು ಬಾರಿ ರನ್ನರ್ಸ್ ಅಪ್ ಆಗಿದೆ. ಜರ್ಮನಿ ಒಟ್ಟು ಆರು ಸಲ ಪ್ರಶಸ್ತಿ ಜಯಿಸಿದ್ದು ಈ ಬಾರಿ ಡಿ ಗುಂಪಿನಲ್ಲಿ ಆಡಲಿದೆ. ತಲಾ ಒಂದು ಬಾರಿ ಪ್ರಶಸ್ತಿ ಜಯಿಸಿರುವ ಪಾಕಿಸ್ತಾನ ಮತ್ತು ಅರ್ಜೆಂಟಿನಾ ಕೂಡ ಇದೇ ಗುಂಪಿನಲ್ಲಿವೆ.

ಕಳಿಂಗ ಕ್ರೀಡಾಂಗಣದಲ್ಲಿ ಬಯೋಬಬಲ್ ವ್ಯವಸ್ಥೆಯಲ್ಲಿ ಪಂದ್ಯಗಳು ನಡೆಯಲಿವೆ. ಪ್ರೇಕ್ಷಕರಿಗೆ ಪ್ರವೇಶ ನಿರ್ಬಂಧಿಸಲಾಗಿದೆ. ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೊಳಿಸಲಾಗಿದೆ.

ತಂಡಗಳು: ಭಾರತ: ವಿವೇಕ್ ಸಾಗರ್ ಪ್ರಸಾದ್(ನಾಯಕ), ಅಂಕಿತ್ ಪಾಲ್, ಗುರುಮುಖ್ ಸಿಂಗ್, ಮಣಿಂದರ್ ಸಿಂಗ್, ರವಿಚಂದ್ರ ಸಿಂಗ್ ಮೊರಂಗ್ತೇಮ್, ವಿಷ್ಣುಕಾಂತ್ ಸಿಂಗ್ (ಮಿಡ್‌ಫೀಲ್ಡರ್‌ಗಳು), ಅಭಿಷೇಕ್ ಲಾಕ್ರಾ, ದಿನಚಂದ್ರ ಸಿಂಗ್ ಮೋರೆಂಗ್ತೆಮ್, ಸಂಜಯ್, ಶ್ರದ್ಧಾನಂದ ತಿವಾರಿ, ಸುನೀಲ್ ಜೊಜೊ, ಯಶದೀಪ್ ಸಿವಾಚ್ (ಡಿಫೆಂಡರ್ಸ್), ಪವನ್, ಪ್ರಶಾಂತ್ ಕುಮಾರ್ ಚೌಹಾಣ್ (ಗೋಲ್‌ಕೀಪರ್ಸ್), ಅರೈಜಿತ್ ಸಿಂಗ್ ಹುಂಡೇಲ್, ಬಾಬಿ ಸಿಂಗ್ ಧಾಮಿ, ಮಂಜೀತ್, ರಾಹುಲ್ ಕುಮಾರ್ ರಾಜಭಾರ್, ಸುದೀಪ್ ಚಿರ್ಮಾಕೊ, ಉತ್ತಮ್ ಸಿಂಗ್ (ಫಾರ್ವರ್ಡ್ಸ್), ಗ್ರಹಾಂ ರೀಡ್ (ಮುಖ್ಯ ಕೋಚ್), ಬಿ.ಜೆ. ಕಾರಿಯಪ್ಪ (ಕೋಚ್), ಸಿ.ಬಿ. ಜನಾರ್ಧನ್ (ಸಹಾಯಕ ಕೋಚ್), ಎಂ. ರಂಗನಾಥನ್ (ಫಿಸಿಯೊಥೆರಪಿಸ್ಟ್), ಹರ್ಷಿತ್ ಎಂ ಲಕ್ಷ್ಮಣ್ (ವಿಡಿಯೊ ಅನಾಲಿಸ್ಟ್), ಅರೂಪ್ ನಾಸ್ಕರ್ , ಸತ್ಪಾಲ್ ಸಿಂಗ್ (ಮಸಾಜ್ ತಜ್ಞ).

ಫ್ರಾನ್ಸ್: ತಿಮೊತಿ ಕ್ಲೆಮೆಂಟ್ (ನಾಯಕ), ಮಾರಿಯಸ್ ಮೆಥ್ಯೂ, ಗೈಲೇಮ್ ಡಿ ವಾಸೆಲೆಸ್ (ಗೋಲ್‌ಕೀಪರ್ಸ್), ಲೂಕಾಸ್ ಮಾಂಟೆಕಾಟ್, ಜೆತನ್ ಲಾರ್ನಿಕೊಲ್, ಮ್ಯಾಟಿಯೊ ಡೆಸ್‌ಗೈಲನ್ಸ್, ಬ್ರೂಸ್ ಡೆಲೆಮಜರ್, ಸ್ಟಾನಿಸ್ಲಾಸ್ ಬ್ರಾನಿಕಿ, ಕೊರೆಂಟಿನ್ ಸೆಲ್ಲಿರ್, ಮಥಾಯಿಸ್ ಕ್ಲೆಮೆಂತ, ಪಾಲ್ ಪ್ಲಾಟ್, ಜೂಲಸ್ ವೆರಿಯರ್, ಬೆಂಜಮಿನ್ ಮರ್ಕ್ಯೂ, ಗಾಸ್ಪರ್ ಕ್ಸೇವಿಯರ್, ರೆಫಿ ಗೊನೆಸಾ, ಲೂಯಿಸ್ ಹಾರ್ಟೆಲ್‌ಮೆಯೆರ್, ಆ್ಯಂಟೊನಿನ್ ಐಗೆ, ನೊಯೊ ಜೂಲಿನ್, ಜೂಲ್ಸ್ ಬಾರ್ನೆಕ್, ಥಾಮಸ್ ಅಸೊನನ್. ಮ್ಯಾಥ್ಯೂ ಮಾರೀಸ್.

ನೇರಪ್ರಸಾರ: ಟೂರ್ನಿಯ ಪಂದ್ಯಗಳು ಎಫ್‌ಐಎಚ್‌ನ watch.hockey ವೆಬ್ ತಾಣದಲ್ಲಿ ನೇರಪ್ರಸಾರವಾಗಲಿವೆ.



ವಿವೇಕ್ ಪ್ರಸಾದ್ ಸಾಗರ್

ಜೂನಿಯರ್ ಹಾಕಿ ವಿಶ್ವಕಪ್ ವಿಜೇತರು

ವರ್ಷ	ಆತಿಥ್ಯ	ವಿಜೇತ	ರನ್ನರ್ ಅಪ್
1979	ಫ್ರಾನ್ಸ್	ಪಾಕಿಸ್ತಾನ	ಜರ್ಮನಿ
1982	ಮಲೇಷ್ಯಾ	ಜರ್ಮನಿ	ಆಸ್ಟ್ರೇಲಿಯಾ
1985	ಕೆನಡಾ	ಜರ್ಮನಿ	ನೆದರ್ಲೆಂಡ್ಸ್
1989	ಮಲೇಷ್ಯಾ	ಜರ್ಮನಿ	ಆಸ್ಟ್ರೇಲಿಯಾ
1993	ಸ್ಪೇನ್	ಜರ್ಮನಿ	ಪಾಕಿಸ್ತಾನ
1997	ಇಂಗ್ಲೆಂಡ್	ಆಸ್ಟ್ರೇಲಿಯಾ	ಭಾರತ
2001	ಆಸ್ಟ್ರೇಲಿಯಾ	ಭಾರತ	ಅರ್ಜೆಂಟಿನಾ
2005	ನೆದರ್ಲೆಂಡ್ಸ್	ಅರ್ಜೆಂಟಿನಾ	ಆಸ್ಟ್ರೇಲಿಯಾ
2009	ಸಿಂಗಪುರ/ ಮಲೇಷ್ಯಾ	ಜರ್ಮನಿ	ನೆದರ್ಲೆಂಡ್ಸ್
2013	ಭಾರತ	ಜರ್ಮನಿ	ಫ್ರಾನ್ಸ್
2016	ಭಾರತ	ಭಾರತ	ಬೆಲ್ಜಿಯಂ

ದಿನಾಂಕ
ನವೆಂಬರ್ **24** ರಿಂದ ಡಿಸೆಂಬರ್ **5**

16 ಟೂರ್ನಿಯಲ್ಲಿ ಆಡುವ ಒಟ್ಟು ತಂಡಗಳು

04 ಟೂರ್ನಿಯಲ್ಲಿ ವಿಂಗಡಿಸಲಾಗಿರುವ ಗುಂಪುಗಳು

ಇಂದಿನ ಪಂದ್ಯಗಳು

ಬೆಲ್ಜಿಯಂ–ದಕ್ಷಿಣ ಆಫ್ರಿಕಾ	ಬೆಳಿಗ್ಗೆ 9.30
ಜರ್ಮನಿ–ಪಾಕಿಸ್ತಾನ	ಮಧ್ಯಾಹ್ನ 12
ಕೆನಡಾ–ಪೋಲೆಂಡ್	ಮಧ್ಯಾಹ್ನ 2.30
ಮಲೇಷ್ಯಾ–ಚಿಲಿ	ಸಂಜೆ 5
ಭಾರತ–ಫ್ರಾನ್ಸ್	ರಾತ್ರಿ 8

ಭಾರತದ ಸಾಧನೆ

ಪ್ರಶಸ್ತಿ ಜಯ	2001, 2016
ರನ್ನರ್ಸ್ ಅಪ್	1997
ನಾಲ್ಕನೇ ಸ್ಥಾನ	2005

ಗುಂಪು	ತಂಡಗಳು
ಎ	ಬೆಲ್ಜಿಯಂ, ಚಿಲಿ, ಮಲೇಷ್ಯಾ, ದಕ್ಷಿಣ ಆಫ್ರಿಕಾ
ಬಿ	ಭಾರತ, ಕೆನಡಾ, ಫ್ರಾನ್ಸ್, ಪೋಲೆಂಡ್
ಸಿ	ದಕ್ಷಿಣ ಕೊರಿಯಾ, ನೆದರ್ಲೆಂಡ್ಸ್, ಸ್ಪೇನ್, ಅಮೆರಿಕ
ಡಿ	ಅರ್ಜೆಂಟಿನಾ, ಈಜಿಪ್ಟ್, ಜರ್ಮನಿ, ಪಾಕಿಸ್ತಾನ


ಕರ್ನಾಟಕ (ನೀಲಿ ಪೋಷಾಕು) ಹಾಗೂ ತಮಿಳುನಾಡು ಆಟಗಾರರ ನಡುವಣ ಪೈಪೋಟಿ

ಸಂತೋಷ್ ಟ್ರೋಫಿ ಅರ್ಹತಾ ಟೂರ್ನಿ

ಸುಧೀರ್ ಮಿಂಚು: ಕರ್ನಾಟಕ ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಧೀರ್ ಕೋಟಿಕೇಲ ಗಳಿಸಿದ ಎರಡು ಗೋಲುಗಳ ಬಲದಿಂದ ಕರ್ನಾಟಕ ತಂಡವು ಸಂತೋಷ್ ಟ್ರೋಫಿ ಫುಟ್‌ಬಾಲ್ ದಕ್ಷಿಣ ವಲಯ ಅರ್ಹತಾ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ‘ಎ’ ಗುಂಪಿನ ಅರ್ಹತಾ ಪಂದ್ಯದಲ್ಲಿ 4–0 ಗೋಲುಗಳಿಂದ ತಮಿಳುನಾಡು ತಂಡವನ್ನು ಪರಾಭವಗೊಳಿಸಿತು.

ರಾಜ್ಯ ತಂಡದ ಪರ ಕಮಲೇಶ್ ಗೋಲಿನ ಖಾತೆ ತೆರೆದರು. 11ನೇ ನಿಮಿಷದಲ್ಲಿ ಕಾಲ್ಚಳಕ ತೋರಿದ ಅವರು ತಂಡಕ್ಕೆ ಮುನ್ನಡೆ ತಂದುಕೊಟ್ಟರು.

42ನೇ ನಿಮಿಷದಲ್ಲಿ ತಮ್ಮ ಮೊದಲ ಗೋಲು ಹೊಡೆದ ಸುಧೀರ್ ತಂಡದ ಮುನ್ನಡೆಯನ್ನು ಹೆಚ್ಚಿಸಿದರು. ಅದೇ ಲಯವನ್ನು ಮುಂದುವರಿಸಿದ ಅವರು 53ನೇ ನಿಮಿಷದಲ್ಲಿ ಮತ್ತೊಂದು ಸೊಗಸಾದ ಗೋಲು ದಾಖಲಿಸಿದರು.

ಈ ಹಂತದಲ್ಲಿ ಆಟ ರಂಗೇರಿತು. ತಮಿಳುನಾಡು ತಂಡದ ಆಟಗಾರರೂ ತಿರುಗೇಟು ನೀಡಲು ಪ್ರಯತ್ನಿಸಿದರು. ಆದರೆ 75ನೇ ನಿಮಿಷದಲ್ಲಿ ಪಿ. ಅಂಕಿತ್ ಯಶಸ್ಸು ಸಾಧಿಸುವುದರೊಂದಿಗೆ ಕರ್ನಾಟಕದ ಗೋಲು ಗಳಿಕೆ ನಾಲ್ಕಕ್ಕೆ ಹೆಚ್ಚಿತು; ತಂಡದ ಜಯವೂ ಖಚಿತವಾಯಿತು.

ತೆಲಂಗಾಣ ಜಯಭೇರಿ: ಮೊಹಮ್ಮದ್ ಇಮಾದುದ್ದೀನ್ ಗಳಿಸಿದ ಎರಡು ಗೋಲುಗಳು ತೆಲಂಗಾಣ ತಂಡದ ಜಯಕ್ಕೆ ಕಾರಣವಾದವು. ಮಂಗಳವಾರ ನಡೆದ ಹಣಾಹಣಿಯಲ್ಲಿ ತಂಡವು 4–0ಯಿಂದ ಆಂಧ್ರ ತಂಡವನ್ನು ಸೋಲಿಸಿತು.

ಮೊಹಮ್ಮದ್ 71 ಮತ್ತು 90+3ನೇ ನಿಮಿಷಗಳಲ್ಲಿ ತಂಡದ ಪರ ಕಾಲ್ಚಳಕ ತೋರಿದರು. ತಂಡದ ಇನ್ನೆರಡು ಗೋಲುಗಳು ಯೂಸೂಫ್ ಅಲಿ (16ನೇ ನಿಮಿಷ) ಮತ್ತು ಪಿ.ಜೋಷುವಾ (87ನೇ ನಿಮಿಷ) ಮೂಲಕ ಬಂದವು.

ಗುರುವಾರ ನಡೆಯುವ ಮೊದಲ ಪಂದ್ಯದಲ್ಲಿ ಆಂಧ್ರಪ್ರದೇಶ–ಕರ್ನಾಟಕ ಮತ್ತು ಎರಡನೇ ಪಂದ್ಯದಲ್ಲಿ ತಮಿಳುನಾಡು–ತೆಲಂಗಾಣ ಮುಖಾಮುಖಿಯಾಗಲಿವೆ.

ವಿಜಯ್ ಹಜಾರೆ ಟ್ರೋಫಿ: ವಿಜಯಶಂಕರ್ ನಾಯಕ

ತಮಿಳುನಾಡು ತಂಡಕ್ಕೆ ವಾಷಿಂಗ್ಟನ್

ಚೆನ್ನೈ (ಪಿಟಿಐ): ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ತಮಿಳುನಾಡು ತಂಡಕ್ಕೆ ಅನುಭವಿ ಆಟಗಾರ ದಿನೇಶ್ ಕಾರ್ತಿಕ್ ಮತ್ತು ಸ್ಪಿನ್ನರ್ ವಾಷಿಂಗ್ಟನ್ ಸುಂದರ್ ಮರಳಿದ್ದಾರೆ.

ಸೋಮವಾರ ನವದೆಹಲಿಯಲ್ಲಿ ಮುಕ್ತಾಯವಾದ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ತಮಿಳುನಾಡು ತಂಡವು ಬಾರಿ ಪ್ರಶಸ್ತಿ ಜಯಿಸಿತ್ತು. ಈ ಟೂರ್ನಿಯಲ್ಲಿ ನಾಯಕತ್ವ ವಹಿಸಿದ್ದ ವಿಜಯಶಂಕರ್ ಅವರು ವಿಜಯ್ ಹಜಾರೆ ಟೂರ್ನಿಯಲ್ಲಿಯೂ ತಂಡವನ್ನು ಮುನ್ನಡೆಸುವರು.

ಟಿ20 ಟೂರ್ನಿಯಲ್ಲಿ ದಿನೇಶ್ ಮತ್ತು ವಾಷಿಂಗ್ಟನ್ ಆಡಿರಲಿಲ್ಲ. ಐಪಿಎಲ್ ನಂತರ ದಿನೇಶ್ ವಿಶ್ರಾಂತಿ ಪಡೆದಿದ್ದರು. ವಾಷಿಂಗ್ಟನ್ ಗಾಯಗೊಂಡಿದ್ದರಿಂದ ಚಿಕಿತ್ಸೆಗೆ ತೆರಳಿದ್ದರು.


ವಾಷಿಂಗ್ಟನ್ ಸುಂದರ್

ದೇಶಿ ಏಕದಿನ ಮಾದರಿಯ ಟೂರ್ನಿಯಲ್ಲಿ ತಮಿಳುನಾಡು ತಂಡವು ಬಿ ಗುಂಪಿನಲ್ಲಿ ಆಡಲಿದೆ. ತಿರುವನಂತಪುರದಲ್ಲಿ ಡಿಸೆಂಬರ್ 8ರಂದು ನಡೆಯುವ ಪಂದ್ಯದಲ್ಲಿ ತಮಿಳುನಾಡು ಮುಂಬೈ ತಂಡವನ್ನು ಎದುರಿಸಲಿದೆ.

ತಂಡ: ವಿಜಯಶಂಕರ್ (ನಾಯಕ), ಎನ್. ಜಗದೀಶನ್ (ಉಪನಾಯಕ), ದಿನೇಶ್ ಕಾರ್ತಿಕ್ (ವಿಕೆಟ್‌ಕೀಪರ್), ಸಿ. ಹರಿನಿಶಾಂತ್, ಎಂ. ಶಾರೂಕ್ ಖಾನ್, ಆರ್. ಸಾಯಿಕಿಶೋರ್, ಮುರುಗನ್ ಅಶ್ವಿನ್, ಸಂದೀಪ್ ವರಿಯರ್, ವಾಷಿಂಗ್ಟನ್ ಸುಂದರ್, ಎಂ ಸಿದ್ಧಾರ್ಥ್, ಬಿ. ಸಾಯಿ ಸುದರ್ಶನ್, ವಿ. ಗಂಗಾಶ್ರೀಧರರಾಜು, ಎಂ. ಮೊಹಮ್ಮದ್, ಜೆ. ಕೌಶಿಕ್, ಪಿ. ಸರವಣಕುಮಾರ್, ಎಲ್. ಸೂರ್ಯಪ್ರಕಾಶ್, ಬಿ. ಇಂದ್ರಜೀತ್, ಆರ್. ಸಂಜಯ್ ಯಾದವ್, ಎಂ. ಕೌಶಿಕ್ ಗಾಂಧಿ ಮತ್ತು ಆರ್. ಸಿಲಂಬರಸನ್.


ನವದೀಪ್ ಸೈನಿ

ಕ್ರಿಕೆಟ್: ಮಲಾನ್, ಟೋನಿ ಶತಕ

ಬ್ಲೂಮ್‌ಫಾಂಟೇನ್ (ಪಿಟಿಐ): ಶತಕ ಬಾರಿಸಿದ ಪೀಟರ್ ಮಲಾನ್ ಮತ್ತು ಟೋನಿ ಡಿ ಝೂರ್ಜಿ ಅವರ ಬ್ಯಾಟಿಂಗ್ ಬಲದಿಂದ ದಕ್ಷಿಣ ಆಫ್ರಿಕಾ ತಂಡವು ಮಂಗಳವಾರ ಆರಂಭವಾದ ಭಾರತ ಎ ಎದುರಿನ ‘ಟೆಸ್ಟ್’ ಪಂದ್ಯದ ಮೊದಲ ದಿನ ಉತ್ತಮ ಮೊತ್ತ ಪೇರಿಸಿತು.

ಪ್ರಿಯಾಂಕ್ ಪಾಂಚಾಲ್ ನಾಯಕತ್ವದ ಭಾರತ ಎ ತಂಡದ ಬೌಲರ್‌ಗಳು ಇಡೀ ದಿನ ಬೆವರು ಹರಿಸಿದರೂ ಆತಿಥೇ ಬ್ಯಾಟರ್‌ಗಳ ಮುಂದೆ ಹೆಚ್ಚು ಸಫಲವಾಗಲಿಲ್ಲ. ಇದರಿಂದಾಗಿ ದಕ್ಷಿಣ ಆಫ್ರಿಕಾ ತಂಡವು 90 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 343 ರನ್‌ಗಳನ್ನು ಗಳಿಸಿತು. ಮಲಾನ್ 258 ಎಸೆತಗಳಲ್ಲಿ 157 ರನ್ ಗಳಿಸಿತು. ಝೂರಿ 186 ಎಸೆತಗಳಲ್ಲಿ 117 ರನ್ ಬಾರಿಸಿದರು. ಇವರಿಬ್ಬರೂ ಮೂರನೇ ವಿಕೆಟ್ ಜೊತೆಯಾಟದಲ್ಲಿ 217 ರನ್ ಸೇರಿಸಿದರು.

ಭಾರತ ತಂಡದ ಮಧ್ಯಮವೇಗಿ ನವದೀಪ್ ಸೈನಿ, ಎಡಗೈ ಮಧ್ಯಮವೇಗಿ ಅರ್ಜನ್ ನಾಗಸ್ವಾಲಾ ಮತ್ತು ಉಮ್ರನ್ ಮಲೀಕ್ ತಲಾ ಒಂದು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ ಎ: 90 ಓವರ್‌ಗಳಲ್ಲಿ 3ಕ್ಕೆ 343 (ಪೀಟರ್ ಮಲಾನ್ ಬ್ಯಾಟಿಂಗ್ 157, ಟೋನಿ ಡಿ ಝೂರ್ಜಿ 117, ಅರ್ಜನ್ ನಾಗಸ್ವಾಲಾ 58ಕ್ಕೆ1)

ರಾಹುಲ್‌ಗೆ ಗಾಯ; ಸೂರ್ಯಗೆ ಸ್ಥಾನ

ನ್ಯೂಜಿಲೆಂಡ್ ಎದುರಿನ ಮೊದಲ ಟೆಸ್ಟ್ ಕ್ರಿಕೆಟ್ ಪಂದ್ಯ ನಾಳೆಯಿಂದ

ಕಾನ್ಪುರ (ಪಿಟಿಐ): ಗುರುವಾರ ಇಲ್ಲಿ ಆರಂಭವಾಗಲಿರುವು ನ್ಯೂಜಿಲೆಂಡ್ ಎದುರಿನ ಮೊದಲ ಟೆಸ್ಟ್‌ನಲ್ಲಿ ಇನಿಂಗ್ಸ್ ಆರಂಭಿಸಬೇಕಿದ್ದ ಬ್ಯಾಟ್ಸ್‌ಮನ್ ಕೆ.ಎಲ್. ರಾಹುಲ್ ಗಾಯಗೊಂಡಿದ್ದಾರೆ. ಇದರಿಂದಾಗಿ ಅವರ ಬದಲಿಗೆ ಸೂರ್ಯಕುಮಾರ್ ಯಾದವ್ ಅವರಿಗೆ ತಂಡದಲ್ಲಿ ಸ್ಥಾನ ನೀಡಲಾಗಿದೆ.

‘ರಾಹುಲ್ ಎಡ ತೊಡೆಯ ಸ್ನಾಯುಸೆಳೆತವಾಗಿದೆ. ಆದ್ದರಿಮದ ಅವರಿಗೆ ವಿಶ್ರಾಂತಿಯ ಅಗತ್ಯವಿದೆ. ಆದ್ದರಿಂದ ಅವರು ಎರಡೂ ಟೆಸ್ಟ್‌ಗಳಲ್ಲಿ ಆಡಲು ಲಭ್ಯರಿಲ್ಲ. ಅವರು ಬೆಂಗಳೂರಿನಲ್ಲಿರುವ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಪುನಶ್ಚೇತನ ತರಬೇತಿಗೆ ಸೇರಿಕೊಳ್ಳಲಿದ್ದಾರೆ. ಮುಂದಿನ ತಿಂಗಳು ನಡೆಯಲಿರುವ ದಕ್ಷಿಣ ಆಫ್ರಿಕಾ ಎದುರಿನ ಸರಣಿಗೆ ಅವರು ಲಭ್ಯರಾಗುವ ನಿರೀಕ್ಷೆ ಇದೆ’ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

ಮಂಗಳವಾರ ನಡೆದ ಅಭ್ಯಾಸದಲ್ಲಿ ರಾಹುಲ್ ಭಾಗವಹಿಸಿರಲಿಲ್ಲ.

29 ವರ್ಷದ ರಾಹುಲ್ 40 ಟೆಸ್ಟ್‌ಗಳಲ್ಲಿ ಆಡಿದ್ದಾರೆ. 2321 ರನ್‌ಗಳನ್ನು ಗಳಿಸಿದ್ದಾರೆ.

ಅವರು ತಂಡದಿಂದ ಹೊರಬಿದ್ದಿರುವುದರಿಂದ ಮಯಂಕ್ ಅಗರವಾಲ್ ಅವರೊಂದಿಗೆ ಇನಿಂಗ್ಸ್ ಆರಂಭಿಸುವ ಹೊಣೆ ಶುಭಮನ್ ಗಿಲ್ ಅವರ ಹೆಗಲಿಗೆ ಬೀಳುವುದು ಖಚಿತವಾಗಿದೆ. ಮುಂಬೈನ ಸೂರ್ಯಕುಮಾರ್ ಯಾದವ್ ಮಧ್ಯಮ ಕ್ರಮಾಂಕದ ಬ್ಯಾಟರ್ ಆಗಿ ಪದಾರ್ಪಣೆ ಮಾಡುವ ಸಾಧ್ಯತೆ ಹೆಚ್ಚಿದೆ. ಈಗಾಗಲೇ ತಂಡದಲ್ಲಿರುವ ಮತ್ತೊಬ್ಬ ಮುಂಬೈಕರ್ ಶ್ರೇಯಸ್ ಅಯ್ಯರ್ ಅವರಿಗೆ ಸ್ಥಾನ ಕೊಟ್ಟರೆ, ಸೂರ್ಯ ಬೆಂಚ್‌ನಲ್ಲಿರಬೇಕಾಗಬಹುದು.

ಮೂವರು ಸ್ಪಿನ್ನರ್‌ಗಳೊಂದಿಗೆ ಕಣಕ್ಕೆ: ಗ್ರೀನ್ ಪಾರ್ಕ್‌ನಲ್ಲಿ ನಡೆಯಲಿರುವ ಮೊದಲ ಟೆಸ್ಟ್‌ನಲ್ಲಿ ತಮ್ಮ ತಂಡವು ಮೂವರು ಸ್ಪಿನ್ನರ್‌ಗಳೊಂದಿಗೆ ಕಣಕ್ಕಿಳಿಯುವ ಸಾಧ್ಯತೆ ದಟ್ಟವಾಗಿದೆ ಎಂದು ನ್ಯೂಜಿಲೆಂಡ್ ತಂಡದ ಕೋಚ್ ಗ್ಯಾರಿ ಸ್ಟೆಡ್ ಹೇಳಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಈ ಪಿಚ್‌ನಲ್ಲಿ ನಾಲ್ವರು ವೇಗಿಗಳು ಮತ್ತು ಒಬ್ಬ ಸ್ಪಿನ್ನರ್ ಆಡಿಸುವ ಸಾಂಪ್ರದಾಯಿಕ ಪದ್ಧತಿಗೆ ಮೊರೆ ಹೋದರೆ ಯಶಸ್ಸು ಸಿಗುವುದಿಲ್ಲ. ಪಂದ್ಯದ ಹಿಂದಿನ ದಿನ ಪಿಚ್ ವೀಕ್ಷಿಸಿದ ನಂತರವಷ್ಟೇ ಈ ಕುರಿತು ನಿರ್ಧರಿಸಲಾಗುವುದು’ ಎಂದು ಗ್ಯಾರಿ ತಿಳಿಸಿದರು.

ಪಟೇಲ್ ಕಣಕ್ಕೆ

ಮುಂಬೈನಲ್ಲಿ ಜನಿಸಿ ನ್ಯೂಜಿಲೆಂಡ್ ತಂಡದಲ್ಲಿ ಆಡುತ್ತಿರುವ ಎಡಗೈ ಸ್ಪಿನ್ನರ್ ಎಜಾಜ್ ಪಟೇಲ್ ಕಣಕ್ಕಿಳಿಯಲಿದ್ದಾರೆ.

ಎಜಾಜ್ ಎಂಟು ವರ್ಷದವರಾಗಿದ್ದಾಗಲೇ ಅವರ ಕುಟುಂಬವು ನ್ಯೂಜಿಲೆಂಡ್‌ಗೆ ತೆರಳಿತ್ತು.

‘ಭಾರತದಲ್ಲಿ ಸ್ಪಿನ್ ಬೌಲಿಂಗ್ ಮೋಡಿ ತೋರಿಸಲು ಉತ್ಸುಕನಾಗಿದ್ದೇನೆ. ಇಲ್ಲಿ ಬ್ಯಾಟರ್‌ಗಳ ಮುಂದೆ ಸ್ಪಿನ್ ಬೌಲಿಂಗ್ ಮಾಡಿ ಯಶಸ್ಸು ಪಡೆಯುವುದು ದೊಡ್ಡ ಸವಾಲೇ ಸರಿ’ ಎಂದಿದ್ದಾರೆ.


ಸೂರ್ಯಕುಮಾರ್ ಯಾದವ್


ಕಾನ್ಪುರದ ಗ್ರೀನ್ ಪಾರ್ಕ್‌ನಲ್ಲಿ ಮಂಗಳವಾರ ಭಾರತ ತಂಡದ ನೆಟ್ಸ್‌ನಲ್ಲಿ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಬೌಲಿಂಗ್ –ಪಿಟಿಐ ಚಿತ್ರ

ಬಿಸಿಸಿಐನಿಂದ ಆಟಗಾರರಿಗೆ ‘ಹಲಾಲ್’ ಮಾಂಸ ಶಿಫಾರಸು: ಅಸಮಾಧಾನ

ಕಾನ್ಪುರ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಟಗಾರರಿಗೆ ‘ಹಲಾಲ್’ ಮಾಂಸಾಹಾರವನ್ನು ನೀಡಬೇಕು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಶಿಫಾರಸು ಮಾಡಿರುವುದು ಕೆಲವರ ಅಸಮಾಧಾನಕ್ಕೆ ಕಾರಣವಾಗಿದೆ.

ಸುದ್ದಿಸಂಸ್ಥೆಗೆ ಲಭ್ಯವಾಗಿರುವ ಊಟದ ಪಟ್ಟಿ ಮತ್ತು ಕೇಟರಿಂಗ್ ಮಾಹಿತಿ ಪುಸ್ತಿಕೆಯಲ್ಲಿ ಹಂದಿ ಮತ್ತು ದನದ ಮಾಂಸದ ಖಾದ್ಯಗಳನ್ನು ಯಾವುದೇ ರೂಪದಲ್ಲಿಯೂ ನೀಡುವಂತಿಲ್ಲವೆಂದೂ ನಮೂದಿಸಲಾಗಿದೆ.

ಈ ಕುರಿತು ಆಕ್ಷೇಪ ಎತ್ತಿರುವ ಬಿಜೆಪಿ ವಕ್ತಾರ ಮತ್ತು ವಕೀಲ ಗೌರವ್ ಗೋ ಯಲ್, ‘ಈ ನಿಯಮವನ್ನು ತಕ್ಷಣ ಹಿಂಪಡೆಯಬೇಕು. ಆಟಗಾರರು ತಮಗೆ ಬೇಕಾಗಿರುವುದನ್ನು ತಿನ್ನುವ ಹಕ್ಕು ಹೊಂದಿದ್ದಾರೆ. ಕೇವಲ ಹಲಾಲ್ ಮಾಂಸ ನೀಡಬೇಕು ಎಂದು ಕಡ್ಡಾಯ ಮಾಡಲು ಬಿಸಿಸಿಐ ಯಾರು? ಇದಕ್ಕೆ ನಾವು ಆಸ್ಪದ ಕೊಡುವುದಿಲ್ಲ. ಇದು ನಿಯಮಬಾಹಿರ’ ಎಂದಿದ್ದಾರೆ.

ಈ ಕುರಿತು ಬಿಸಿಸಿಐನ ಯಾವುದೇ ಅಧಿಕಾರಿಯೂ ಮಾತನಾಡಲು ಒಪ್ಪಲಿಲ್ಲ. ಆಟಗಾರ ಪೋಷಕಾಂಶ ಅಗತ್ಯದ ಆಧಾರದಲ್ಲಿ ತಂಡದ ನೆರವು ಸಿಬ್ಬಂದಿ, ವೈದ್ಯಕೀಯ ಪರಿಣತರು ಮತ್ತು ಆಹಾರತಜ್ಞರು ಸೇರಿ ಈ ಪಟ್ಟಿ ಸಿದ್ಧಪಡಿಸಿದ್ದಾರೆಂದು ತಿಳಿದುಬಂದಿದೆ.

‘ನಾವು ಆಡುವಾಗಲೂ ಕೊಡಲಾಗುತ್ತಿದ್ದ ಊಟ, ತಿಂಡಿಯ ಯಾದಿಯಲ್ಲಿ ದನ ಮತ್ತು ಹಂದಿ ಮಾಂಸಗಳ ಖಾದ್ಯಗಳಿರುವುದನ್ನು ನೋಡಿಲ್ಲ. ಪಂದ್ಯದ ದಿನ ಅಥವಾ ಡ್ರೆಸ್ಸಿಂಗ್ ಕೋಣೆಯಲ್ಲಿಯೂ ಈ ಖಾದ್ಯಗಳನ್ನು ಉಣಬಡಿಸಿರಲಿಲ್ಲ. ಭಾರತದಲ್ಲಿ ಆಡುವಾಗಲಂತೂ ಇಲ್ಲವೇ ಇಲ್ಲ. ಆದ್ದರಿಂದ ಇದರಲ್ಲಿ ಏನೂ ಹೊಸದಲ್ಲ. ದನ, ಮೇಕೆ ಮಾಂಸದಲ್ಲಿ ಕೊಬ್ಬಿನಂಶ ಜಾಸ್ತಿ ಇರುವುದರಿಂದ ಕ್ರಿಕೆಟಿಗರಿಗೆ ಅದನ್ನು ತಿನ್ನುವ ಸಲಹೆಯನ್ನು ನೀಡುವುದಿಲ್ಲ ಎಂಬುದು ಸಾಮಾನ್ಯ ಜ್ಞಾನವಷ್ಟೇ. ಪ್ರೋಟಿನ್‌ಯುಕ್ತ ಆಹಾರಕ್ಕೆ ಒತ್ತು ನೀಡಲಾಗುವುದರಿಂದ ಕೋಳಿಮಾಂಸ ಮತ್ತು ಮೀನಿನ ಖಾದ್ಯಗಳನ್ನು ನೀಡುತ್ತಾರೆ’ ಎಂದು ಭಾರತ ತಂಡದ ಮಾಜಿ ಕ್ರಿಕೆಟಿಗರೊಬ್ಬರು ಹೇಳಿದ್ದಾರೆ.

‘ಬೆಲೆ ಏರಿಕೆಯಂಥ ಸಮಸ್ಯೆಗಳಿಂದ ಬೇರೆಡೆಗೆ ಗಮನ ಸೆಳೆಯುವ ಯತ್ನ’

ನವದೆಹಲಿ (ಪಿಟಿಐ): ‘ಜನ ಸಾಮಾನ್ಯರು ಎದುರಿಸುತ್ತಿರುವ ಬೆಲೆ ಏರಿಕೆಯಂಥ ನೈಜ ಸಮಸ್ಯೆಗಳಿಂದ ದೇಶದ ಗಮನವನ್ನು ಜಾತಿ ಮತ್ತು ಧರ್ಮಗಳಂಥ ಸಮಸ್ಯೆಗಳತ್ತ ತಿರುಗಿಸಲು ಬಿಜೆಪಿ ಸರ್ಕಾರವು ಯತ್ನಿಸುತ್ತಿದೆ’ ಎಂದು ಮಂಗಳವಾರ ಕಾಂಗ್ರೆಸ್ ಆರೋಪಿಸಿದೆ.


ರಾಹುಲ್ ಗಾಂಧಿ

ಕೆಲವು ಸರಕುಗಳ ಮೇಲಿನ ಜಿಎಸ್‌ಟಿ ಹೆಚ್ಚಳವನ್ನು ಪ್ರಸ್ತಾಪಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, ‘ಬಿಜೆಪಿ ಸರ್ಕಾರದ ಚುನಾವಣಾ ಘೋಷಣೆಯಾಗಿರುವ ‘ಅಚ್ಛೇ ದಿನ್’ ವಾಸ್ತವವನ್ನು ನಿರಂತರವಾಗಿ ‘ಬಹಿರಂಗಪಡಿಸುತ್ತಿದೆ’ ಎಂದು ಹೇಳಿದ್ದಾರೆ.

‘ನಿತ್ಯಬಳಕೆಯ ವಸ್ತುಗಳ ಬೆಲೆಯು ಗಗನಕ್ಕೇರಿದ್ದು, ಜನಸಾಮಾನ್ಯರು ತೊಂದರೆ ಅನುಭವಿಸುತ್ತಿದ್ದಾರೆ’ ಎಂದು ಕಾಂಗ್ರೆಸ್ ವಕ್ತಾರ ಪವನ್ ಖೇರಾ ದೂರಿದ್ದಾರೆ.

‘ತಮ್ಮ ವೈಫಲ್ಯಗಳನ್ನು ಮರೆಮಾಚುವ ಮೂಲಕ ಈ ಸರ್ಕಾರವು ದೇಶದ ಸಾಮೂಹಿಕ ಗಮನವನ್ನು ಹೈಜಾಕ್ ಮಾಡಲು ನಾವು ಬಿಡುವುದಿಲ್ಲ. ಪ್ರಧಾನಿ ಮಾಡಿದ ತಪ್ಪಿಗೆ ದೇಶ ಬೆಲೆ ತೆರೆಯುವಂತಾಗಿದೆ’ ಎಂದೂ ಅವರು ಸುದ್ದಿಗಾರರಿಗೆ ತಿಳಿಸಿದರು.

‘ಏಳೂವರೆ ವರ್ಷಗಳ ದೀರ್ಘಾವಧಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸರಪಳಿಯೋಪಾದಿಯಲ್ಲಿ ತಪ್ಪುಗಳನ್ನು ಮಾಡಿದ್ದಾರೆ. ಇವುಗಳಲ್ಲಿ ಕೆಲವನ್ನು ಒಪ್ಪಿಕೊಂಡಿದ್ದಾರೆ, ಮತ್ತೆ ಕೆಲವನ್ನು ಒಪ್ಪಿಕೊಂಡಿಲ್ಲ. ಮೋದಿ ಮಾಡಿದ ತಪ್ಪಿಗೆ ದೇಶ ಏಕೆ ಬೆಲೆ ತೆರಬೇಕು’ ಎಂದು ಅವರು ಪ್ರಶ್ನಿಸಿದರು.

‘ಇತ್ತೀಚಿನ ಉಪಚುನಾವಣೆಗಳ ಫಲಿತಾಂಶದ ನಂತರ ಕೇಂದ್ರ ಸರ್ಕಾರವು ತನ್ನ ಕೆಲವು ತಪ್ಪುಗಳನ್ನು ಅರಿತುಕೊಂಡಿದೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸರ್ಕಾರವು ತನ್ನ ಮತ್ತಷ್ಟು ತಪ್ಪುಗಳನ್ನು ಅರಿತುಕೊಳ್ಳಲಿದೆ’ ಎಂದರು.


ಸಚಿವರ ನಿವಾಸಕ್ಕೆ ಚಾರ್‌ಧಾಮ ಅರ್ಚಕರ ಮುತ್ತಿಗೆ

ಡೆಹ್ರಾಡೂನ್(ಪಿಟಿಐ): ಚಾರ್‌ಧಾಮ ದೇವಸ್ಥಾನ ಮಂಡಳಿಯನ್ನು ವಿಸರ್ಜಿಸಬೇಕೆಂದು ಆಗ್ರಹಿಸಿ ಅರ್ಚಕರ ಗುಂಪೊಂದು ಉತ್ತರಾಖಂಡ ಕೃಷಿ ಸಚಿವ ಸುಬೋಧ್ ಉನಿಯಾಲ್ ಅವರ ನಿವಾಸಕ್ಕೆ ಮಂಗಳವಾರ ಮುತ್ತಿಗೆ ಹಾಕಿದೆ.

2019ರ ಉತ್ತರಾಖಂಡ ಚಾರ್ ಧಾಮ್ ದೇವಸ್ಥಾನ ನಿರ್ವಹಣೆ ಕಾಯಿದೆಯನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿದ ಪ್ರತಿಭಟನಕಾರರು ಸಚಿವರ ನಿವಾಸದ ಎದುರು ಶೀರ್ಷಾಸನ ಹಾಕಿದ್ದಾರೆ.

ಪ್ರತಿಭಟನಕಾರರನ್ನು ಭೇಟಿಯಾದ ಸಚಿವ ಉನಿಯಾಲ್, ‘ನವೆಂಬರ್ 30ರವರೆಗೆ ಕಾಯಿರಿ, ಬಳಿಕ ದೇವಸ್ಥಾನ ಮಂಡಳಿ ಕುರಿತು ಪ್ರಮುಖ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ತಿಳಿಸಿದ್ದಾರೆ.

‘ದೇವಸ್ಥಾನ ಮಂಡಳಿಯು ನಮ್ಮ ಹಕ್ಕುಗಳನ್ನು ಕಸಿಯುತ್ತಿದೆ. ಅದನ್ನು ವಿಸರ್ಜಿಸಿ’ ಎಂದು ಕೇದಾರನಾಥ, ಬದರೀನಾಥ, ಗಂಗೋತ್ರಿ ಮತ್ತು ಯಮುನೋತ್ರಿಯ ಅರ್ಚಕರು ಆಗ್ರಹಿಸಿದ್ದಾರೆ.


ಉತ್ತರ ಮೆಸಡೋನಿಯಾದ ಹೆದ್ದಾರಿಯಲ್ಲಿ ಅಪಘಾತ ಸಂಭವಿಸಿದ ಸ್ಥಳವನ್ನು ಪರಿಶೀಲಿಸಿದ ಅಧಿಕಾರಿಗಳು ರಾಯಿಟರ್ಸ್ ಚಿತ್ರ

ಬಲ್ಗೇರಿಯಾ: ಭೀಕರ ಅಪಘಾತ, 45 ಮಂದಿ ಸಾವು

ಸೋಫಿಯಾ(ಎಪಿ): ಉತ್ತರ ಮೆಸಡೋನಿಯಾದತ್ತ ಹೊರಟಿದ್ದ ಬಸ್‌ವೊಂದು ಮಂಗಳವಾರ ಅಪಘಾತಕ್ಕೀಗೀಡಾಗಿದ್ದು, ಇದರಲ್ಲಿ 12 ಮಕ್ಕಳು ಸೇರಿದಂತೆ 45 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

ಟರ್ಕಿಯಿಂದ ಪ್ರವಾಸಿಗರನ್ನು ಕರೆದೊಯ್ಯುತ್ತಿದ್ದ ಬಸ್ ಹೆದ್ದಾರಿಯ ತಡೆಗೋಡೆಗೆ ಡಿಕ್ಕಿ ಹೊಡೆದಿದೆ. ಬಳಿಕ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಈ ಘಟನೆಯು ಬಲ್ಗೇರಿಯಾದ ಪಶ್ಚಿಮ ಭಾಗದಲ್ಲಿ ನಡೆದಿದೆ. ಈ ಅವಘಡದಲ್ಲಿ ಗಾಯಗೊಂಡ ಏಳು ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅವರು ಹೇಳಿದರು.

‘ವಿಮಾನ ಹೊಡೆದುರುಳಿಸಿರುವ ಭಾರತದ ವಾದ ಆಧಾರರಹಿತ’

ಇಸ್ಲಾಮಾಬಾದ್ (ಪಿಟಿಐ): 2019ರ ಫೆಬ್ರವರಿಯಲ್ಲಿ ನಡೆದ ವೈಮಾನಿಕ ದಾಳಿಯಲ್ಲಿ ಭಾರತದ ಪೈಲಟ್ ಪಾಕಿಸ್ತಾನದ ಎಫ್–16 ವಿಮಾನವನ್ನು ಹೊಡೆದುರುಳಿಸಿದ್ದಾರೆ ಎಂಬ ಭಾರತದ ನಿಲುವನ್ನು ಪಾಕಿಸ್ತಾನ ಮಂಗಳವಾರ ತಿರಸ್ಕರಿಸಿದೆ. ಇದು ಆಧಾರ ರಹಿತವಾದುದು ಎಂದೂ ಅದು ಹೇಳಿದೆ.

2019ರ ಫೆಬ್ರವರಿ 27 ರಂದು ವೈಮಾನಿಕ ದಾಳಿಯಲ್ಲಿ ವಿಂಗ್ ಕಮಾಂಡರ್ ಆಗಿದ್ದ ಅಭಿನಂದನ್ ವರ್ಧಮಾನ್ (ಈಗ ಗ್ರೂಪ್ ಕ್ಯಾಪ್ಟನ್) ಅವರನ್ನು ಪಾಕಿಸ್ತಾನ ವಶಕ್ಕೆ ಪಡೆಯುವ ಮುನ್ನ ಅವರು ತಮ್ಮ ಮಿಗ್–21 ರಿಂದ ಪಾಕಿಸ್ತಾನದ ಎಫ್–16 ಜೆಟ್ ವಿಮಾನವನ್ನು ಹೊಡೆದುರುಳಿಸಿದ್ದರು.

ಅಭಿನಂದನ್ ಅವರನ್ನು ಮಾರ್ಚ್ 1ರ ಮಧ್ಯರಾತ್ರಿ ಪಾಕಿಸ್ತಾನ ಬಿಡುಗಡೆ ಮಾಡಿತ್ತು. ಕರ್ತವ್ಯ ಪ್ರಜ್ಞೆಯನ್ನು ಮೆರೆದ ಅವರಿಗೆ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಸೋಮವಾರ ವೀರ ಚಕ್ರ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

‘2019ರ ಫೆಬ್ರವರಿಯಲ್ಲಿ ಭಾರತದ ಪೈಲಟ್‌ವೊಬ್ಬರು ಪಾಕಿಸ್ತಾನದ ಎಫ್–16 ಯುದ್ಧ ವಿಮಾನವನ್ನು ಹೊಡೆದುರುಳಿಸಿದ್ದಾರೆ ಎಂಬ ಭಾರತದ ಆಧಾರ ರಹಿತ ವಾದವನ್ನು ಪಾಕಿಸ್ತಾನ ಸ್ಪಷ್ಟವಾಗಿ ತಿರಸ್ಕರಿಸುತ್ತದೆ’ ಎಂದು ವಿದೇಶಾಂಗ ಇಲಾಖೆಯು ಹೇಳಿಕೆಯೊಂದರಲ್ಲಿ ತಿಳಿಸಿದೆ.

‘ಅಂತರರಾಷ್ಟ್ರೀಯ ತಜ್ಞರು ಮತ್ತು ಅಮೆರಿಕ ಅಧಿಕಾರಿಗಳು ಪಾಕಿಸ್ತಾನದ ಎಫ್–16 ಯುದ್ಧ ವಿಮಾನಗಳ ಲೆಕ್ಕವನ್ನು ಪಡೆದ ನಂತರ ಆ ದಿನ ಯಾವುದೇ ಎಫ್–16 ವಿಮಾನವನ್ನು ಹೊಡೆದುರುಳಿಸಿಲ್ಲ ಎಂದು ಈಗಾಗಲೇ ದೃಢಪಡಿಸಿದ್ದಾರೆ’ ಎಂದು ಕಚೇರಿ ಹೇಳಿದೆ. ‘ಭಾರತದ ಹಗೆತನ ಮತ್ತು ಆಕ್ರಮಣಕಾರಿ ನೀತಿಯ ಹೊರತಾಗಿಯೂ ಪೈಲಟ್ ಬಿಡುಗಡೆ ಪಾಕಿಸ್ತಾನದ ಶಾಂತಿ ಬಯಕೆಗೆ ಸಾಕ್ಷಿಯಾಗಿದೆ’ ಎಂದೂ ಅದು ಹೇಳಿದೆ.

ಬಿಎಫ್‌ಸಿಗೆ ಗೆಲುವಿನ ನಿರೀಕ್ಷೆ

ಐಎಸ್‌ಎಲ್ ಫುಟ್‌ಬಾಲ್ ಟೂರ್ನಿ: ಒಡಿಶಾ ಎಫ್‌ಸಿ ಎದುರಿನ ಪಂದ್ಯ ಇಂದು


ಬಿಎಫ್‌ಸಿ ತಂಡದ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಅಭ್ಯಾಸ– ಟ್ವಿಟರ್ ಚಿತ್ರ

ವಾಸ್ಕೊ (ಪಿಟಿಐ): ಜಯದ ಲಯ ಮುಂದುವರಿಸುವ ತವಕದಲ್ಲಿರುವ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ತನ್ನ ಎರಡನೇ ಪಂದ್ಯದಲ್ಲಿ ಬುಧವಾರ ಒಡಿಶಾ ಎಫ್‌ಸಿ ಸವಾಲು ಎದುರಿಸಲಿದೆ.

ಸುನಿಲ್ ಚೆಟ್ರಿ ನೇತೃತ್ವದ ತಂಡವು ಐಎಸ್‌ಎಲ್‌ನಲ್ಲಿ ಎಂಟು ಬಾರಿ ಒಡಿಶಾವನ್ನು ಎದುರಿಸಿದೆ. ಐದರಲ್ಲಿ ಗೆದ್ದು, ಎರಡರಲ್ಲಿ ಸೋತಿದೆ ಮತ್ತು ಒಂದು ಪಂದ್ಯವನ್ನು ಡ್ರಾ ಮಾಡಿಕೊಂಡಿದೆ.

ಪಂದ್ಯ ನಡೆಯುವ ಇಲ್ಲಿಯ ತಿಲಕ್ ಕ್ರೀಡಾಂಗಣವು ಬಿಎಫ್‌ಸಿಗೆ ನೆಚ್ಚಿನ ಅಂಗಣವಾಗಿದೆ.ಬಿಎಫ್‌ಸಿ ತನ್ನ ಮೊದಲ ಪಂದ್ಯದಲ್ಲಿ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡವನ್ನು 4–2ರಿಂದ ಮಣಿಸಿ ಶುಭಾರಂಭ ಮಾಡಿತ್ತು.

‘ನಾವು ನಮ್ಮ ಆಟದ ಮೇಲೆ ಗಮನಹರಿಸುತ್ತೇವೆ. ಹಿಂದಿನ ಪಂದ್ಯದಲ್ಲಿನ ಉತ್ತಮವಾದ ಅಂಶಗಳನ್ನು ತೆಗೆದುಕೊಂಡು, ಈ ಪಂದ್ಯದಲ್ಲಿ ನಮ್ಮ ಸಾಮರ್ಥ್ಯವನ್ನು ಇನ್ನಷ್ಟು ಸುಧಾರಿಸಿಕೊಳ್ಳುತ್ತೇವೆ. ನಮ್ಮ ಬಳಿ ಈಗ ಮೂರು ಪಾಯಿಂಟ್‌ಗಳಿವೆ. ಗೆಲುವಿನ ಸೌಧವನ್ನು ಕಟ್ಟಬೇಕಿದೆ‘ ಎಂದು ಬೆಂಗಳೂರು ಮುಖ್ಯ ಕೋಚ್ ಮಾರ್ಕೊ ಪೆಜೌಲಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ‘ಬೆಂಗಳೂರು ತಂಡದ ಬಳಿ ಉತ್ತಮ ಆಟಗಾರರಿದ್ದಾರೆ. ತಂಡದ ಹೆಸರಿನಲ್ಲಿ ಉತ್ತಮ ದಾಖಲೆಯೂ ಇದೆ. ಇದು ಸವಾಲಿನ ಪಂದ್ಯವಾಗಿದ್ದರೂ ನಾವು ಸಜ್ಜಾಗಿದ್ದೇವೆ‘ ಎಂದು ಒಡಿಶಾ ತಂಡದ ಕೋಚ್ ಕಿಕೊ ರೆಮಿರೆಜ್ ನುಡಿದರು.

ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಹೈದರಾಬಾದ್ ಎದುರು ಚೆನ್ನೈಯಿನ್ ಜಯಭೇರಿ

ಬ್ಯಾಂಬೊಲಿಮ್: ವ್ಲಾಜಿಮಿರ್ ಕೋಮನ್ ಗಳಿಸಿದ ಗೋಲಿನ ಬಲದಿಂದ ಚೆನ್ನೈಯಿನ್ ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿತು.

ಮಂಗಳವಾರ ಇಲ್ಲಿ ನಡೆದ ಪಂದ್ಯದಲ್ಲಿ ಚೆನ್ನೈಯಿನ್ ತಂಡಕ್ಕೆ 1–0ಯಿಂದ ಹೈದರಾಬಾದ್ ಎದುರು ಜಯ ಒಲಿಯಿತು.

ಕೋಮನ್ 66ನೇ ನಿಮಿಷದಲ್ಲಿ ದೊರೆತ ಪೆನಾಲ್ಟಿ ಅವಕಾಶವನ್ನು ಗೋಲಾಗಿಸಿದರು. ಪಂದ್ಯದಲ್ಲಿ ಚೆನ್ನೈಯಿನ್ ತಂಡದ ರಹೀಮ್ ಅಲಿ, ನಾರಾಯಣ್ ದಾಸ್ ಅವರು ಹಳದಿ ಕಾರ್ಡ್ ಪಡೆದರು.

ರ‍್ಯಾಂಕಿಂಗ್: ಮೂರನೇ ಸ್ಥಾನದಲ್ಲಿ ಮಿಥಾಲಿ

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕಿ ಮಿಥಾಲಿ ರಾಜ್ ಅವರು ಏಕದಿನ ಬ್ಯಾಟರ್‌ಗಳ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನವನ್ನು ಉಳಿಸಿಕೊಂಡಿದ್ದಾರೆ.

ಅನುಭವಿ ಜೂಲನ್ ಗೋಸ್ವಾಮಿ ಅವರು ಮಂಗಳವಾರ ಬಿಡುಗಡೆಯಾದ ರ‍್ಯಾಂಕಿಂಗ್‌ನಲ್ಲಿ ಬೌಲರ್‌ಗಳ ವಿಭಾಗದಲ್ಲಿ ಎರಡನೇ ಸ್ಥಾನವನ್ನು ಕಾಯ್ದುಕೊಂಡಿದ್ದಾರೆ.

ಮಿಥಾಲಿ ಅವರ ಬಳಿ ಸದ್ಯ 738 ರೇಟಿಂಗ್ ಪಾಯಿಂಟ್‌ಗಳಿವೆ. ದಕ್ಷಿಣ ಆಫ್ರಿಕಾದ ಲಿಜೆಲಿ ಲೀ (761) ಮತ್ತು ಆಸ್ಟ್ರೇಲಿಯಾದ ಅಲಿಸಾ ಹೀಲಿ (750) ಕ್ರಮವಾಗಿ ಮೊದಲ ಮತ್ತು ಎರಡನೇ ಸ್ಥಾನಗಳಲ್ಲಿದ್ದಾರೆ.

ಭಾರತದ ಇನ್ನೋರ್ವ ಆಟಗಾರ್ತಿ ಸ್ಮೃತಿ ಮಂದಾನ 710 ಪಾಯಿಂಟ್ಸ್‌ನೊಂದಿಗೆ ಆರನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.


ಮಿಥಾಲಿ ರಾಜ್

ಬೌಲರ್ ಜೂಲನ್ ಗೋಸ್ವಾಮಿ ಅವರ ಬಳಿ 727 ಪಾಯಿಂಟ್ಸ್‌ಗಳಿವೆ. ಬೌಲರ್‌ಗಳ ವಿಭಾಗದಲ್ಲಿ ಆಸ್ಟ್ರೇಲಿಯಾದ ಜೆಸ್ ಜೊನಾಸನ್ (760 ಪಾಯಿಂಟ್ಸ್) ಅಗ್ರಸ್ಥಾನದಲ್ಲಿದ್ದಾರೆ.

ಬ್ಯಾಡ್ಮಿಂಟನ್: ಲಕ್ಷ್ಯ, ಕಶ್ಯಪ್‌ಗೆ ಸೋಲು

ಬಾಲಿ (ಪಿಟಿಐ): ವೀರೋಚಿತ ಹೋರಾಟ ತೋರಿದ ಭಾರತದ ಲಕ್ಷ್ಯ ಸೇನ್ ಅವರು ಇಂಡೊನೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನಲ್ಲೇ ಸೋಲು ಅನುಭವಿಸಿದರು. ಪರುಪಳ್ಳಿ ಕಶ್ಯಪ್ ಅವರಿಗೂ ಮೊದಲ ಸುತ್ತಿನ ತಡೆ ದಾಟಲು ಸಾಧ್ಯವಾಗಲಿಲ್ಲ.

ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಹಣಾಹಣಿಯಲ್ಲಿ 21 ವರ್ಷದ ಲಕ್ಷ್ಯ 21-23, 15-21ರಿಂದ ಅಗ್ರಶ್ರೇಯಾಂಕದ ಆಟಗಾರ, ಜಪಾನ್‌ನ ಕೆಂಟೊ ಮೊಮೊಟಾ ಎದುರು ಮಣಿದರು. ಎರಡು ಬಾರಿಯ ವಿಶ್ವ ಚಾಂಪಿಯನ್ ಮೊಮೊಟಾ 53 ನಿಮಿಷಗಳಲ್ಲಿ ಪಂದ್ಯವನ್ನು ತಮ್ಮದಾಗಿಸಿಕೊಂಡರು.

ಮೊದಲ ಸುತ್ತಿನ ಇನ್ನೊಂದು ಸೆಣಸಾಟದಲ್ಲಿ ಪರುಪಳ್ಳಿ ಕಶ್ಯಪ್ 11-21, 14-21ರಿಂದ ಸಿಂಗಪುರದ ಲೋಹ್ ಕೀನ್ ಯೆವ್ ಎದುರು ಎಡವಿದರು.

ಪುರುಷರ ಡಬಲ್ಸ್ ವಿಭಾಗದಲ್ಲಿ ಎಂ.ಆರ್. ಅರ್ಜುನ್– ಧ್ರುವ್ ಕಪಿಲ ಜೋಡಿಯೂ ನಿರಾಸೆ ಅನುಭವಿಸಿದರು. ಮೊದಲ ಸುತ್ತಿನ ಹಣಾಹಣಿಯಲ್ಲಿ ಇವರು 20-22, 13-21ರಿಂದ ಕೊರಿಯಾದ ಸೋಲ್‌ಗಿವ್ ಮತ್ತು ಕಿಮ್ ವೊನ್ಹೊ ಎದುರು ಸೋತರು. ಮಿಶ್ರ ಡಬಲ್ಸ್‌ನಲ್ಲಿ ವೆಂಕಟ್ ಗೌರವ್ ಪ್ರಸಾದ್– ಜೂಹಿ ದೇವಾಂಗನ್ ಜೋಡಿಯು 12-21, 4-21ರಿಂದ ಜರ್ಮನಿಯ ಜೋನ್ಸ್ ರಾಲ್ಫಿ ಜಾನ್ಸನ್– ಲಿಂಡಾ ಎಫ್ಲರ್ ಎದುರು ಸೋಲನುಭವಿಸಿತು.

ಬಿಡಬ್ಲ್ಯುಎಫ್ ಅಥ್ಲೀಟ್‌ಗಳ ಸಮಿತಿ ಚುನಾವಣೆಗೆ ಸಿಂಧು ಸ್ಪರ್ಧೆ

ನವದೆಹಲಿ (ಪಿಟಿಐ): ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಭಾರತದ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ.ಸಿಂಧು ಅವರು ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ಅಥ್ಲೀಟ್‌ಗಳ ಸಮಿತಿಯ ಚುನಾವಣೆಗೆ ಸ್ಪರ್ಧಿಸಲಿದ್ದಾರೆ.

ಸ್ಪೇನ್‌ನಲ್ಲಿ ನಡೆಯುವ ವಿಶ್ವಚಾಂಪಿಯನ್‌ಷಿಪ್ ವೇಳೆ ಡಿಸೆಂಬರ್ 17ರಂದು ಈ ಚುನಾವಣೆ ನಡೆಯಲಿದೆ. ಸದ್ಯ ಇಂಡೊನೇಷ್ಯಾದ ಬಾಲಿಯಲ್ಲಿ ನಡೆಯುತ್ತಿರುವ ಸೂಪರ್ 1000 ಟೂರ್ನಿಯಲ್ಲಿ ಸಿಂಧು ಆಡುತ್ತಿದ್ದಾರೆ.

ಆರು ಸ್ಥಾನಗಳಿಗಾಗಿ ಒಂಬತ್ತು ಮಂದಿ ನಾಮಪತ್ರ ಸಲ್ಲಿಸಿದ್ದು, ಅದರಲ್ಲಿ ಸಿಂಧು ಕೂಡ ಒಬ್ಬರಾಗಿದ್ದಾರೆ. 2017ರಲ್ಲಿ ಮೊದಲ ಬಾರಿಗೆ ಆಯ್ಕೆಯಾಗಿದ್ದ ಸಿಂಧು, ಎರಡನೇ ಬಾರಿ ಚುನಾವಣೆಗೆ ಸ್ಪರ್ಧಿಸಿರುವ ಅಥ್ಲೀಟ್‌ಗಳ ಸಮಿತಿಯ ಏಕೈಕ ಸದಸ್ಯೆಯಾಗಿದ್ದಾರೆ.

ಸ್ನೂಕರ್: ಬಿಎಸ್‌ಎ ‘ಎ’ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಸ್‌ಎ ‘ಎ’ ತಂಡವು ಇಂಡಿಯನ್ ಜಿಮ್‌ಖಾನಾ ‘ಬಿ’ ತಂಡವನ್ನು 2–1ರಿಂದ ಮಣಿಸಿ ಎಂ. ಚೆನಿಯಪ್ಪನ್ ಸ್ಮಾರಕ ಅಂತರ್‌ಕ್ಲಬ್ ಸ್ನೂಕರ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ವಿಜೇತ ತಂಡದ ಶೆಹಜಾನ್ 60-40, 48-62, 70-64ರಿಂದ ಕಿರಣ್ ರಾಜ್ ಎದುರು ಮತ್ತು ಝುಲ್ಫಿ 68-40, 66-56ರಿಂದ ಮೋಹನ್ ಎದುರು ಜಯಿಸಿದರು. ಆದಿಲ್ ಅವರು 34-64, 58-50, 31-66ರಿಂದ ರಿಹಾನಾ ಎದುರು ಸೋತರು.

ಮೈಸೂರು ರೇಸ್

‘ವಾಟ್ ಈಸ್ ದಿಸ್’ ಗೆಲ್ಲುವ ನಿರೀಕ್ಷೆ

ಡಾ. ಈಶ್ವರಿ ಜಿ.ಕೆ.ಬಾಲಕೃಷ್ಣನ್ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ‘ವಾಟ್ ಈಸ್ ದಿಸ್’ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕಮ್ ಅಲೈವ್ 2, ಶಿವಾಲಿಕ್ ಬುಲೆಟ್ 9, ಸೇಂಟ್ ಲೂಸಿಯಾ 7
2ನೇ ರೇಸ್: ಕಪ್ಪಡೋಸಿಯಾ 3, ಅಸ್ತಾರ 2, ವರ್ಜೀನಿಯಾ 7
3ನೇ ರೇಸ್: ಡಿ ಫೈಟರ್ 1, ಶಿವಾಲಿಕ್ ಅಡ್ಮಿರಲ್ 4, ಆರ್ಕ್ 12
4ನೇ ರೇಸ್: ಶೀ ಈಸ್ ಎ ಟೈಗರ್ 7, ಫ್ರಾಸ್ಟೆಡ್ 2, ಚಿಲ್ಲಿ ಬ್ರೀಝ್ 9
5ನೇ ರೇಸ್: ಡಿ ಥರ್ಟೀನ್ ಟ್ವೆಲ್ವ್ 10, ಅಶ್ವ ವಿಕ್ರಾಂತ್ 9, ಗೈಡಿಂಗ್ ಫೋರ್ಸ್ 1
6ನೇ ರೇಸ್: ವಾಟ್ ಈಸ್ ದಿಸ್ 3, ಟ್ರಸ್ಟ್ ಬಾಂಡ್ 4, ಲಕ್ಕಿ ಲೂಸಿಯಾನೊ 2
7ನೇ ರೇಸ್: ಬಯೋಮೆಟ್ರಿಕ್ 6, ಅಶ್ವ ಬ್ರೂನಿ 5, ಕ್ರಿಮ್‌ಸನ್ ಫೈರ್ 1
8ನೇ ರೇಸ್: ಅಬರ್ಲರ್ 1, ಡಿ ಗೋಲ್ಡ್ 9, ಟ್ರೆಮಂಡಸ್ 2

ಉತ್ತಮ ಬೆಟ್: ಕಮ್ ಅಲೈವ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8